ಮಂಗಳವಾರ, ಸೆಪ್ಟೆಂಬರ್ 23, 2025 | ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ವಾಲಿಬಾಲ್‌ನತ್ತ ರಾಹುಲ್

ಕ್ರಿಕೆಟಿಗ ಕೆ.ಎಲ್. ರಾಹುಲ್ ಅವರು ಹೈದರಾಬಾದ್‌ನಲ್ಲಿ ಅಕ್ಟೋಬರ್ 2ರಿಂದ 26ರವರೆಗೆ ನಡೆಯಲಿರುವ ಪ್ರೈಮ್ ವಾಲಿಬಾಲ್ ಲೀಗ್‌ನಲ್ಲಿ ಆಡುವ ಗಾರ್ಡಿಯನ್ಸ್ ತಂಡಕ್ಕೆ ಸಹ ಮಾಲೀಕರಾಗಿದ್ದಾರೆ

‘ರೂಪಂ ದೇಹಿ, ಜಯಂ ದೇಹಿ’

ದುರ್ಗಾ ಪೂಜೆ ಪ್ರಯುಕ್ತ ಕೋಲ್ಕತ್ತದ ವಿಕ್ಟೋರಿಯಾ ಮೆಮೋರಿಯಲ್ ಹಾಲ್‌ನಲ್ಲಿ ಸೋಮವಾರ ನಡೆದ ‘ರೂಪಂ ದೇಹಿ, ಜಯಂ ದೇಹಿ’ ಕಾರ್ಯಕ್ರಮದಲ್ಲಿ ಕಲಾವಿದೆ ದೋನಾ ಗಂಗೂಲಿ ತಂಡದ ಸದಸ್ಯರು ನೃತ್ಯ ಪ್ರದರ್ಶನ ನೀಡಿದರು

ಮಂಗಳೂರಿನಲ್ಲಿ ದಸರಾ ವೈಭವ

ದಸರಾ ಪ್ರಯುಕ್ತ ಮಂಗಳೂರಿನ ಕುದ್ರೋಳಿ ಶ್ರೀ ಗೋಕರ್ಣನಾಥೇಶ್ವರ ದೇಗುಲದ ಆವರಣದಲ್ಲಿ ಸೋಮವಾರ ನಡೆದ ಹುಲಿಕುಣಿತ ಪ್ರದರ್ಶನ ಗಮನ ಸೆಳೆಯಿತು ಚಿತ್ರ :ಫಕ್ರುದ್ದೀನ್ ಎಚ್

ಪ್ರಜಾವಾಣಿ ವಾರ್ತೆ

ಮಂಗಳೂರು: ಇಲ್ಲಿನ ಕುದ್ರೋಳಿ ಗೋಕರ್ಣನಾಥ ದೇವಸ್ಥಾನದಲ್ಲಿ ಶಾರದಾ ದೇವಿ ಹಾಗೂ ನವದುರ್ಗೆಯರ ಪ್ರತಿಷ್ಠಾಪನೆಯೊಂದಿಗೆ 'ಮಂಗಳೂರು ದಸರಾ' ಮಹೋತ್ಸವ ಸೋಮವಾರ ಆರಂಭವಾಯಿತು.

ಮುಗುಳ್ನಗೆ ಸೂಸುವ ಶಾರದಾ ದೇವಿಯ ಮೂರ್ತಿಯನ್ನು ಮಂಗಳ ವಾದ್ಯಗಳೊಂದಿಗೆ ದೇವಾಲಯದ ಪ್ರದಕ್ಷಿಣೆ ಹಾಕಿಸಿ ದರ್ಬಾರ್ ಸಭಾಂಗಣದಲ್ಲಿ ಪ್ರತಿಷ್ಠಾಪನೆ ಮಾಡಲಾಯಿತು.

ಮಹಾಗಣಪತಿ, ಆದಿಶಕ್ತಿ, ಶೈಲಪುತ್ರಿ, ಸಿದ್ಧಿಧಾತ್ರಿ, ಮಹಾಗೌರಿ, ಮಹಾಕಾಳಿ, ಬ್ರಹ್ಮಚಾರಿಣಿ, ಕಾತ್ಯಾಯಿನಿ, ಸ್ಕಂದಮಾತಾ, ಚಂದ್ರಘಂಟಾ, ಕೂಷ್ಮಾಂಡಿನಿ ಮೂರ್ತಿಗಳನ್ನು ಇಲ್ಲಿ ಪ್ರತಿಷ್ಠಾಪಿಸಲಾಗಿದೆ. ದೇವಿ ಮೆರವಣಿಗೆಯಲ್ಲಿ ಹುಲಿವೇಷ ತಂಡದವರು ಹುಲಿ ಕುಣಿತ ಸೇವೆ ಒಪ್ಪಿಸಿದರು.

ಕ್ಷೇತ್ರದ ಅಭಿವೃದ್ಧಿ ರೂವಾರಿ ಬಿ.ಜನಾರ್ದನ ಪೂಜಾರಿ ಉಪಸ್ಥಿತಿಯಲ್ಲಿ ರಾಮಕೃಷ್ಣ ಮಿಷನ್‌ನ ಜಿತಕಾಮಾನಂದಜಿ, ಬ್ರಹ್ಮಕುಮಾರೀಸ್ ಮುಖ್ಯಸ್ಥೆ ವಿಶ್ವೇಶ್ವರಿ ದಸರಾ ಮಹೋತ್ಸವಕ್ಕೆ ಚಾಲನೆ ನೀಡಿದರು.

ದಕ್ಷಿಣ ಕನ್ನಡ ಮೊಗವೀರ ಮಹಾಜನ ಸಂಘದ ಆಡಳಿತಕ್ಕೊಳಪಟ್ಟ ಉಡುಪಿ ಜಿಲ್ಲೆಯ ಉಚ್ಚಿಲ ಮಹಾಲಕ್ಷ್ಮಿ ದೇವಸ್ಥಾನದ ಅದ್ದೂರಿ 'ಉಚ್ಚಿಲ ದಸರಾ'ಕ್ಕೆ ಉಡುಪಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ರೋಹಿಣಿ ಸಿಂಧೂರಿ ಚಾಲನೆ ನೀಡಿದರು. ಉಚ್ಚಿಲ ದಸರಾ ರೂವಾರಿ ಜಿ.ಶಂಕರ್ ಉಪಸ್ಥಿತಿಯಲ್ಲಿ ಶಾರದಾ ದೇವಿ, ನವದುರ್ಗೆಯರ ಪ್ರತಿಷ್ಠಾಪನೆ ನೆರವೇರಿತು.

ಯದುವೀರ್ 11ನೇ ಖಾಸಗಿ ದರ್ಬಾರ್

ಮೈಸೂರು: ಇಲ್ಲಿನ ಅಂಬಾವಿಲಾಸ ಅರಮನೆಯ ದರ್ಬಾರ್ ಅಂಗಳದಲ್ಲಿ ಸೋಮವಾರ ಸಂಸದ ಹಾಗೂ ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು 11ನೇ ಬಾರಿ ಖಾಸಗಿ ದರ್ಬಾರ್ ನಡೆಸಿದರು.

ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ನೇತೃತ್ವದಲ್ಲಿ ಅರಮನೆಯಲ್ಲಿ ನವರಾತ್ರಿಯ ಪೂಜಾ ವಿಧಾನಗಳು ಮುಂಜಾನೆ 5.30ರಿಂದಲೇ ಆರಂಭವಾದವು. 5.30ರಿಂದ 5.45ರವರೆಗೆ ಸಿಂಹಾಸನಕ್ಕೆ ಸಿಂಹದ ಮೂರ್ತಿ ಜೋಡಿಸಲಾಯಿತು.

ನಂತರ ಚಾಮುಂಡಿ ತೊಟ್ಟಿಯಲ್ಲಿ ಯದುವೀರ್ ಅವರಿಗೆ ಹಾಗೂ ವಾಣಿವಿಲಾಸ ದೇವರ ಮನೆಯಲ್ಲಿ ತ್ರಿಷಿಕಾ ಕುಮಾರಿ ದೇವಿ ಒಡೆಯರ್ ಅವರಿಗೆ ಬೆಳಿಗ್ಗೆ 9.55ರಿಂದ 10.15ರಲ್ಲಿ 'ಕಂಕಣ ಧಾರಣೆ' ಮಾಡಲಾಯಿತು.

ಪಟ್ಟದ ಆನೆ 'ಶ್ರೀಕಂಠ', ನಿಶಾನೆ ಆನೆ 'ಏಕಲವ್ಯ', ಪಟ್ಟದ ಕುದುರೆ, ಪಟ್ಟದ ಹಸು, ಪಟ್ಟದ ಒಂಟೆಗೆ ಕೋಡಿ ಸೋಮೇಶ್ವರ ದೇವಾಲಯದಲ್ಲಿ ಪೂಜೆ ಸಲ್ಲಿಸಿ ಆನೆ ಬಾಗಿಲಿಗೆ ಕರೆ ತರಲಾಯಿತು. ನಂತರ ಅವುಗಳಿಗೆ ಸವಾರಿ ತೊಟ್ಟಿಯಲ್ಲಿ ಯದುವೀರ ಬೆಳಿಗ್ಗೆ 11.30ಕ್ಕೆ ಪೂಜೆ ಸಲ್ಲಿಸಿದರು.

ಗಣಪತಿ, ಚಾಮುಂಡೇಶ್ವರಿ, ವಿಷ್ಣು, ಶಿವ, ಅಷ್ಟ ದಿಕ್ಪಾಲಕರ ಮತ್ತು ನವಗ್ರಹ ಪೂಜೆಯನ್ನು ನೆರವೇರಿಸಿದರು. ಕಳಶ ಪೂಜೆ ನಂತರ ಸಿಂಹಾಸನಕ್ಕೆ ಪೂಜೆ ಸಲ್ಲಿಸಲಾಯಿತು. ಸವಾರಿ ತೊಟ್ಟಿಯಿಂದ ಯದುವೀರ್ 'ಬಹುಪರಾಕ್' ಹೇಳಿ ಅವರನ್ನು ಸ್ವಾಗತಿಸಲಾಯಿತು.

ಪರಕಾಲ ಮಠ, ಶೃಂಗೇರಿ ಮಠ, ಚಾಮುಂಡಿಬೆಟ್ಟದ ಚಾಮುಂಡೇಶ್ವರಿ, ನಂಜನಗೂಡು ಶ್ರೀಕಂಠೇಶ್ವರ, ಉತ್ತನಹಳ್ಳಿ ಜ್ವಾಲಾಮುಖಿ ತ್ರಿಪುರಸುಂದರಿ ಹಾಗೂ ಅರಮನೆ ಕೋಟೆಯೊಳಗಿನ ದೇವಾಲಯಗಳು ಸೇರಿದಂತೆ 23 ದೇವಾಲಯಗಳಿಂದ ತಂದಿದ್ದ ತೀರ್ಥವನ್ನು ಅರ್ಚಕರು ಯದುವೀರ್ ಅವರಿಗೆ ಪ್ರೋಕ್ಷಿಸಿದರು.

ಮಧ್ಯಾಹ್ನ 12.42ರಿಂದ 12.58ರ ವರೆಗೆ ಯದುವೀರ್ ಸಿಂಹಾಸನಾರೋಹಣ ಮಾಡಿ ನಮಸ್ಕರಿಸಿದರು. ಸಂಸ್ಥಾನ ಗೀತೆ 'ಕಾಯೌ ಶ್ರೀ ಗೌರಿ' ವಾದ್ಯ ಸಂಗೀತ ನುಡಿಸಲಾಯಿತು.

ಪ್ರಮೋದಾದೇವಿ ಒಡೆಯರ್ ಅವರಿಗೆ ಯದುವೀರ್ ತಲೆಬಾಗಿ ನಮಿಸಿದರು. ಬಳಿಕ ಯದುವೀರ್ ಅವರಿಗೆ ತ್ರಿಷಿಕಾ ಕುಮಾರಿ ಒಡೆಯರ್ ಆರತಿ ಬೆಳಗಿ, ಪಾದಪೂಜೆ ಸಲ್ಲಿಸಿದರು.

ತೊಗಲು ಗೊಂಬೆಯಾಟ... ಕೊಪ್ಪಳದ ಗಡಿಯಾರ ಕಂಬದ ದುರ್ಗಾದೇವಿ ಮಿತ್ರಮಂಡಳಿಯಿಂದ ದಸರಾ ಅಂಗವಾಗಿ ಸೋಮವಾರ ನಡೆದ ಸುರೇಂದ್ರಸ್ವಾಮಿ ರಚಿಸಿರುವ 'ವಂದೇ ಭಾರತ ಕನಸು' ಎಂಬ ತೊಗಲು ಗೊಂಬೆಯಾಟ ಪ್ರದರ್ಶನ ಮನಸೂರೆಗೊಂಡಿತು — ಚಿತ್ರ: ಭರತ್ ಕಂದಕೂರ

'ಬೆಳಕಿನ ದಸರೆ'ಗೆ ಕರಗೋತ್ಸವದ ಮುನ್ನುಡಿ

ಮಡಿಕೇರಿ: 'ಬೆಳಕಿನ ದಸರೆ' ಎಂದೇ ಪ್ರಸಿದ್ಧಿಯಾದ ದಸರಾ ಉತ್ಸವಕ್ಕೆ ಕರಗೋತ್ಸವದ ಮೂಲಕ ಸೋಮವಾರ ರಾತ್ರಿ ಚಾಲನೆ ದೊರಕಿತು.

ನಗರದ ಶಕ್ತಿದೇವತೆಗಳೆನಿಸಿದ ಕೋಟೆ ಮಾರಿಯಮ್ಮ, ಕುಂದುರುಮೊಟ್ಟೆ ಚೌಟಿ ಮಾರಿಯಮ್ಮ, ದಂಡಿನ ಮಾರಿಯಮ್ಮ ಹಾಗೂ ಕಂಚಿಕಾಮಾಕ್ಷಮ್ಮ ಅವರ ಕರಗಗಳನ್ನು ಹೊತ್ತ ಕರಗಧಾರಿಗಳು ನಗರದ ರಾಜಬೀದಿಯಲ್ಲಿ ಹೆಜ್ಜೆ ಹಾಕಿದರು. ರಸ್ತೆಯ ಇಕ್ಕೆಲಗಳಲ್ಲಿ ಸೇರಿದ್ದ ಭಕ್ತ ಸಮೂಹ ಕೈಮುಗಿಯಿತು.

ಮೈಗೆಲ್ಲ ಅರಿಸಿನ ಮೆತ್ತಿಕೊಂಡಿದ್ದ ನಾಲ್ವರು ಕರಗಧಾರಿಗಳ ನರ್ತನಕ್ಕೆ, ಮಂಗಳವಾದ್ಯಗಳ ನಿನಾದಕ್ಕೆ ಸೇರಿದ್ದ ಭಕ್ತ ವೃಂದ ತಲೆದೂಗಿತು. ಎಲ್ಲ ಕರಗಗಳಿಗೂ ಮನೆಮನೆಯವರು ಪೂಜೆ ಸಲ್ಲಿಸಿದರು. ಕೆಲವೆಡೆ ಪುಷ್ಪವೃಷ್ಟಿ ನಡೆಯಿತು.

ಓಲೈಕೆ ರಾಜಕಾರಣ ಬೇಡ: ಸಿದ್ದರಾಮಯ್ಯ

ಮೈಸೂರು: 'ಯಾರನ್ನೋ ಓಲೈಸಿ, ರಾಜಕಾರಣ ಮಾಡಲು ನಾಡಹಬ್ಬವನ್ನು ವಿರೋಧಿಸುವುದು ಸಂವಿಧಾನಕ್ಕೆ, ದೇಶಕ್ಕೆ ಮಾಡುವ ಅಪಚಾರ, ಅಕ್ಷಮ್ಯ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಲ್ಲಿ ಬಿಜೆಪಿ ಮುಖಂಡರ ಕುರಿತು ಅಸಮಾಧಾನ ವ್ಯಕ್ತಪಡಿಸಿದರು.

ದಸರಾ ಉತ್ಸವ ಉದ್ಘಾಟನಾ ಸಮಾರಂಭದಲ್ಲಿ ಎಂದಿಗಿಂತ ಹೆಚ್ಚಿನ ಉತ್ಸಾಹದಲ್ಲಿ ಮಾತನಾಡಿ, ಸಂವಿಧಾನದ ಜಾತ್ಯತೀತ, ಧರ್ಮಾತೀತ ಮೌಲ್ಯ ಪ್ರತಿಪಾದನೆಯನ್ನು ಒತ್ತಿ ಹೇಳಿದರು.

'ರಾಜಕಾರಣ ಮಾಡಲು ಬೇರೆ ಸ್ಥಳ, ಸಂದರ್ಭಗಳಿವೆ. ಗೋಡಾ ಹೈ, ಮೈದಾನ್ ಹೈ. ಚುನಾವಣೆಯಲ್ಲಿ ರಾಜಕಾರಣ ಮಾಡಬೇಕೇ ಹೊರತು, ದಸರೆಯಂಥ ಉತ್ಸವದಲ್ಲಿ ಅಲ್ಲ'. 'ಬಾನು ಮುಷ್ತಾಕ್ ಅವರು ದಸರೆ ಉದ್ಘಾಟಿಸಿದ್ದು ಸರಿಯಾಗಿಯೇ ಇದೆ' ಮತ್ತೊಮ್ಮೆ ಸಮರ್ಥಿಸಿಕೊಂಡರು.

ಬಾನು ಅವರ ಕತೆಗಳ ಅನುವಾದಕಿ ದೀಪಾ ಭಾಸ್ತಿ ಅವರನ್ನೂ ಸ್ಮರಿಸಿದರು. ಜೈ ಭಾರತ್, ಜೈ ಕರ್ನಾಟಕದ ಜೊತೆ ಜೈ ಸಂವಿಧಾನ ಎಂದು ಘೋಷಣೆ ಕೂಗಿದರು.

ಅಘೋಷಿತ ನಿಷೇಧಾಜ್ಞೆ

ಬಾನು ಮುಷ್ತಾಕ್ ಅವರ ಆಯ್ಕೆ ಖಂಡಿಸಿ ಬಿಜೆಪಿ ಹಾಗೂ ಹಿಂದುತ್ವವಾದಿ ಸಂಘಟನೆಯ ನಾಯಕರು ಕಪ್ಪು ಬಾವುಟ ಪ್ರದರ್ಶಿಸುವುದಾಗಿ ಹೇಳಿಕೆ ನೀಡಿದ್ದರಿಂದ, ಚಾಮುಂಡಿ ಬೆಟ್ಟಕ್ಕೆ ಸಂಪರ್ಕ ಕಲ್ಪಿಸುವ ನಗರದ ಎಲ್ಲ ರಸ್ತೆ, ವೃತ್ತಗಳಲ್ಲೂ ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸರನ್ನು ನಿಯೋಜಿಸಲಾಗಿತ್ತು.

ಎಲ್ಲಿಯೂ ಗುಂಪು ಸೇರಲು ಜನರಿಗೆ ಪೊಲೀಸರು ಅವಕಾಶ ನೀಡಲಿಲ್ಲ. ನೂರಾರು ಪೊಲೀಸರು ಬಾನು ಅವರಿಗೆ ರಕ್ಷಣೆ ನೀಡಿ ಬೆಟ್ಟಕ್ಕೆ ಕರೆತಂದರು. ಅವರ ಕುಟುಂಬಸ್ಥರಿಗೆಂದೇ ಪ್ರತ್ಯೇಕ ಬಸ್ ವ್ಯವಸ್ಥೆ

ಮೈಸೂರು ದಸರಾ ಮಹೋತ್ಸವದ 2025ನೇ ಸಾಲಿನ 'ರಾಜ್ಯ ಸಂಗೀತ ವಿದ್ವಾನ್' ಪ್ರಶಸ್ತಿಯನ್ನು ಪಂಡಿತ್ ವೆಂಕಟೇಶ್ ಕುಮಾರ್ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅರಮನೆ ಎದುರು ಸೋಮವಾರ ಪ್ರದಾನ ಮಾಡಿದರು — ಪ್ರಜಾವಾಣಿ ಚಿತ್ರ

ಚಿಟಿಕೆ ಸುದ್ದಿ

ಗಣೇಶ ವಿಗ್ರಹಕ್ಕೆ ಅವಮಾನ: ಬೇಲೂರು ಬಂದ್

ಬೇಲೂರಿನಲ್ಲಿ ಸೋಮವಾರ ಬೆಳಿಗ್ಗೆ ಅಂಗಡಿಗಳು ಬಂದ್ ಆಗಿದ್ದವು

ಬೇಲೂರು (ಹಾಸನ): ವಿನಾಯಕ ಮೂರ್ತಿಗೆ ಅಪಮಾನ ಮಾಡಿದ್ದನ್ನು ಖಂಡಿಸಿ, ಪಟ್ಟಣದಲ್ಲಿ ಸೋಮವಾರ ಅರ್ಧ ದಿನ ಬಂದ್ ಆಚರಿಸಿದ್ದು, ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು.

ಸೋಮವಾರ ಚನ್ನಕೇಶವ ದೇಗುಲದಿಂದ ಜಲ ತಂದು ವಿನಾಯಕ ಮೂರ್ತಿಗೆ ದೇಗುಲದಲ್ಲಿ ಅಭಿಷೇಕ ನಡೆಸಲಾಯಿತು. ಮೂರ್ತಿಯನ್ನು ಶುದ್ಧೀಕರಿಸಿ, ಅಭಿಷೇಕ, ಹೋಮ ಹವನಗಳನ್ನು ನೆರವೇರಿಸಲಾಯಿತು.

ಇದಕ್ಕೂ ಮೊದಲು ಮಾತನಾಡಿದ ಶಾಸಕ ಎಚ್.ಕೆ. ಸುರೇಶ್, 'ಮೂರ್ತಿಗೆ ಚಪ್ಪಲಿ ಇಟ್ಟಿರುವ ಲೀಲಮ್ಮನ ಹಿಂದೆ ಯಾರಿದ್ದಾರೆ ಎಂಬುದನ್ನು ಪತ್ತೆ ಮಾಡುವಂತೆ ಆಗ್ರಹಿಸಿ ಶಾಂತಿಯುತ ಪ್ರತಿಭಟನೆ ನಡೆಸಿದ್ದೇವೆ' ಎಂದರು.

ಮಾನಸಿಕ ಅಸ್ವಸ್ಥೆ: 'ಲೀಲಮ್ಮಗೆ 6 ವರ್ಷಗಳಿಂದ ಮಾನಸಿಕ ಆರೋಗ್ಯ ಸರಿಯಿಲ್ಲ' ಎಂದು ಲೀಲಮ್ಮ ಅವರ ತಾಯಿ ಲಕ್ಷ್ಮಮ್ಮ ತಿಳಿಸಿದ್ದಾರೆ.

ಮುರುಡೇಶ್ವರ: ನೀರಿನಲ್ಲಿ ಮುಳುಗಿ ಬಾಲಕ ಸಾವು

ಭಟ್ಕಳ: ತಾಲ್ಲೂಕಿನ ಮುರುಡೇಶ್ವರದ ಕಡಲತೀರದಲ್ಲಿ ಸೋಮವಾರ ಬೆಂಗಳೂರಿನ ಬಿದರಹಳ್ಳಿ ನಿವಾಸಿ ಕೃತಿಕ್ ಕೆ.ರವಿ ರೆಡ್ಡಿ (8) ಎಂಬ ಬಾಲಕ ಅಲೆಗಳ ಹೊಡೆತಕ್ಕೆ ಸಿಲುಕಿ ನೀರಿನಲ್ಲಿ ಮುಳುಗಿ, ಮೃತಪಟ್ಟಿದ್ದಾನೆ. ನೀರಿನಲ್ಲಿ ಕೊಚ್ಚಿ ಹೋಗುತ್ತಿದ್ದ ವಸಂತಾ ಕೆ. (27) ಎಂಬುವರನ್ನು ಇದೇ ಸಂದರ್ಭದಲ್ಲಿ ರಕ್ಷಿಸಲಾಗಿದೆ.

'ಬೆಂಗಳೂರಿನ ಬಿದರಹಳ್ಳಿಯ ನಿವಾಸಿ ಕೆ.ರವಿ ರೆಡ್ಡಿ ಭಾನುವಾರ ಕುಟುಂಬ ಸಮೇತ ಮುರುಡೇಶ್ವರಕ್ಕೆ ಬಂದಿದ್ದರು. ಕಡಲತೀರದಲ್ಲಿ ಆಟವಾಡಲು ತೆರಳಿದ್ದ ವೇಳೆ ದುರ್ಘಟನೆ ಜರುಗಿದೆ' ಎಂದು ಮುರುಡೇಶ್ವರ ಠಾಣೆ ಪೊಲೀಸರು ತಿಳಿಸಿದ್ದಾರೆ.

ವಿಜಯನಗರ: ಇದೇ 27ಕ್ಕೆ ಜಿಲ್ಲಾ ನ್ಯಾಯಾಲಯ ಆರಂಭ

ಹೊಸಪೇಟೆ: 'ವಿಜಯನಗರ ಜಿಲ್ಲೆ ರಚನೆಯಾಗಿ ನಾಲ್ಕು ವರ್ಷವಾದ ಬಳಿಕ ಜಿಲ್ಲಾ ನ್ಯಾಯಾಲಯ ಮಂಜೂರಾಗಿದೆ' ಎಂದು ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಕೆ.ಪ್ರಹ್ಲಾದ್ ಸೋಮವಾರ ತಿಳಿಸಿದರು.

'ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಸೆಪ್ಟೆಂಬರ್ 27ರಂದು ಕಾರ್ಯಾರಂಭ ಮಾಡಲಿದ್ದು, ಬಳ್ಳಾರಿಯಲ್ಲಿನ 1,800 ಪ್ರಕರಣಗಳು ಇಲ್ಲಿಗೆ ವರ್ಗಾವಣೆಗೊಳ್ಳಲಿವೆ. ಜಿಲ್ಲಾ ನ್ಯಾಯಾಲಯಕ್ಕೆ ಅಗತ್ಯ ಇರುವ 57 ಸಿಬ್ಬಂದಿ ಹೊಂದಿಸಲಾಗಿದೆ' ಎಂದರು.

ಮಳೆ: ಸೇತುವೆಗಳು ಜಲಾವೃತ

ಪ್ರಜಾವಾಣಿ ವಾರ್ತೆ

ಕಲಬುರಗಿ: ಜಿಲ್ಲೆ ಸೇರಿದಂತೆ ಕಲ್ಯಾಣ ಕರ್ನಾಟಕ ಭಾಗದ ಬೀದರ್ ಹಾಗೂ ಯಾದಗಿರಿ ಜಿಲ್ಲೆಯಲ್ಲಿ ಮಳೆ ಅಬ್ಬರ ಮುಂದುವರಿದಿದೆ.

ಕಲಬುರಗಿ ಜಿಲ್ಲೆಯ ಯಡ್ರಾಮಿಯಲ್ಲಿ ಭಾನುವಾರ ರಾತ್ರಿ ಮನೆ ಗೋಡೆ ಕುಸಿದು 17 ವರ್ಷದ ಬಾಲಕಿ ಮೃತಪಟ್ಟಿದ್ದು, ನಾಲ್ವರು ಮಕ್ಕಳು ಗಾಯಗೊಂಡಿದ್ದಾರೆ. ಸಾನಿಯಾ ಸೈಪ್ಪನಸಾಬ್ ಯಲಗಾರ (17) ಮೃತ ಬಾಲಕಿ. ಐವರು ಮಲಗಿದ್ದಾಗಲೇ ರಾತ್ರಿ ಗೋಡೆ ಕುಸಿದಿದೆ.

ಸೋಮವಾರ ಮಳೆ ತುಸು ತಗ್ಗಿದ್ದರೂ, ನಿರಂತರ ಮಳೆಯಿಂದ ನದಿ–ಹಳ್ಳಗಳು ಉಕ್ಕೇರಿ ಹರಿಯುತ್ತಿವೆ. ಹಲವು ಸೇತುವೆಗಳು ಜಲಾವೃತಗೊಂಡಿವೆ.

ಚಿಂಚೋಳಿಯಲ್ಲಿ ಮೂರು ಸೇತುವೆ ಮುಳುಗಿವೆ. ಏಳು ಬ್ರಿಡ್ಜ್ ಕಂ ಬ್ಯಾರೇಜ್ ಮುಳುಗಿ ಕೆಲವು ಗಂಟೆ ಜಲಾವೃತಗೊಂಡು ಬಳಿಕ ಸಂಚಾರಕ್ಕೆ ಮುಕ್ತವಾಗಿವೆ.

ಕಾಳಗಿ ತಾಲ್ಲೂಕಿನಲ್ಲಿ ಬೆಣ್ಣೆತೊರಾ ಜಲಾಶಯ ನೀರು ನದಿ ನದಿಪಾತ್ರ ಗ್ರಾಮಗಳಿಗೆ ಹೊಕ್ಕು ಅವಾಂತರ ಸೃಷ್ಟಿಯಾಗಿದೆ. ಹಳೆಹೆಬ್ಬಾಳ–65, ಕಣಸೂರ–48, ಮಲಘಾಣ–5, ತೆಂಗಳಿ–30, ಕಲಗುರ್ತಿ–10 ಮನೆಗಳಿಗೆ ನೀರು ನುಗ್ಗಿದ್ದು, ಕಾಳಜಿ ಕೇಂದ್ರ ತೆರೆಯಲಾಗಿದೆ.

ಕಲಬುರಗಿ–ಕಾಳಗಿ ಮುಖ್ಯರಸ್ತೆ ನಡುವಣ ಕಣಸೂರ–ಗೋಟೂರ, ಮಲಘಾಣ–ಕಾಳಗಿ ಮತ್ತು ಚಿತ್ತಾಪುರ ಮಾರ್ಗದ ತೆಂಗಳಿ–ತೆಂಗಳಿ ಕ್ರಾಸ್ ರಸ್ತೆ ಸೇತುವೆ ಜಲಾವೃತಗೊಂಡಿವೆ.

ಚಿತ್ತಾಪುರ ತಾಲ್ಲೂಕಿನಲ್ಲಿ ಕಾಗಿಣಾ ಪ್ರವಾಹದಿಂದ ದಂಡೋತಿ, ಮುಡಬೂಳ, ಕದ್ದರಗಿ ಸೇತುವೆ, ಬೆಣ್ಣೆತೊರಾ ಹಳ್ಳದಿಂದ ಮಲಕೂಡ ಹಾಗೂ ಹಳ್ಳದ ಪ್ರವಾಹದಿಂದ ಇವಣಿ ಸೇತುವೆ ಮುಳುಗಿವೆ. ಗುಂಡಗುರ್ತಿ ಪಕ್ಕದಲ್ಲಿ ಹರಿಯುವ ಹಳ್ಳದ ನೀರು ಗ್ರಾಮದ 20ಕ್ಕೂ ಹೆಚ್ಚು ಮನೆಗಳಿಗೆ ನೀರು ನುಗ್ಗಿದೆ. ಸಂತ್ರಸ್ತರಿಗಾಗಿ ಕಾಳಜಿ ಕೇಂದ್ರ ತೆರೆಯಲಾಗಿದೆ.

ಬೀದರ್, ಯಾದಗಿರಿಯಲ್ಲೂ ಬಿರುಸಿನ ಮಳೆಯಾಗಿದೆ.

ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಬೆಳಗುಂಪಾದಲ್ಲಿ ಜಮೀನು ಜಲಾವೃತವಾಗಿದೆ

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	123.54	6,344	6,455
ಹಾರಂಗಿ	2,859	2,857.57	727	1,600
ಕಬಿನಿ	2,284.00	2,282.22	1,390	1,850
ಹೇಮಾವತಿ	2,922	2,919.60	4,775	6,335
ಲಿಂಗನಮಕ್ಕಿ	1,819	1,816.35	3,052	6,646
ಸೂಪಾ (ಮೀ)	564	559.80	2,599.2	3,528.49
ಮಾಣಿ	595	583.95	1,318	657
ತುಂಗಭದ್ರಾ	1,633	1,626.06	10,610	10,303
ಮಲಪ್ರಭಾ	2,079.5	2,079.50	1,494	1,494
ಘಟಪ್ರಭಾ	2175	2,174.71	1,709	1,390
ಭದ್ರಾ *	186	185.4	2,917	4,121
ಆಲಮಟ್ಟಿ (ಮೀ)	519.60	519.58	65,701	70,585
ನಾರಾಯಣಪುರ (ಮೀ)	492.25	492.17	50,000	55,680

* ನೆಲಮಟ್ಟದಿಂದ

ಗ್ರೂಪ್ 'ಡಿ': ಸಾರಿಗೆ ನಿಗಮಗಳಲ್ಲಿ ಉದ್ಯೋಗ ನಿರೀಕ್ಷೆಯಲ್ಲಿದ್ದವರಿಗೆ ಆಘಾತ

ಅನುಕಂಪದ ನೇಮಕಾತಿ ಸ್ಥಗಿತ

• ಕೆ.ಎಂ.ಸತೀಶ್ ಬೆಳ್ಳಕ್ಕಿ

ಗದಗ: ಅನುಕಂಪದ ಆಧಾರದಲ್ಲಿ ಗ್ರೂಪ್ 'ಡಿ' ಹುದ್ದೆಗೆ ಇನ್ನು ನೇಮಕಾತಿ ಮಾಡದಂತೆ ಸಾರಿಗೆ ಇಲಾಖೆ ಕಾರ್ಯದರ್ಶಿ ಸಾರಿಗೆ ನಿಗಮಗಳ ವ್ಯವಸ್ಥಾಪಕ ನಿರ್ದೇಶಕರಿಗೆ ಪತ್ರ ಬರೆದಿದ್ದಾರೆ. ಮೃತ ನೌಕರರ ಕುಟುಂಬದ, ನೌಕರಿ ನಿರೀಕ್ಷೆಯಲ್ಲಿದ್ದ ಅವಲಂಬಿತರಿಗೆ ಇದರಿಂದ ಆಘಾತವಾಗಿದೆ.

'ಸರ್ಕಾರದ ನಿರ್ದೇಶನಗಳಿಗೆ ವ್ಯತಿರಿಕ್ತವಾಗಿ ಸಾರಿಗೆ ನಿಗಮಗಳಲ್ಲಿ ಅನುಕಂಪದ ಆಧಾರದಲ್ಲಿ ಗ್ರೂಪ್ 'ಡಿ' ಹುದ್ದೆಗಳಿಗೆ ನೇಮಕಾತಿ ನಡೆಯುತ್ತಿದೆ' ಎಂಬ ಅಂಶವನ್ನು ಉಲ್ಲೇಖಿಸಿದ್ದಾರೆ.

ಈ ಆದೇಶಾನುಸಾರ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಮುಖ್ಯ ವ್ಯವಸ್ಥಾಪಕರು (ಸಿಬ್ಬಂದಿ) ನಿಗಮ ವ್ಯಾಪ್ತಿಯ ಎಲ್ಲ ವಿಭಾಗೀಯ ನಿಯಂತ್ರಣಾಧಿಕಾರಿಗಳಿಗೆ ಆಗಸ್ಟ್ 7ರಂದು ಪತ್ರ ಬರೆದಿದ್ದಾರೆ.

'ಸಂಸ್ಥೆಯ ವಿಭಾಗ ಮತ್ತು ಪ್ರಾದೇಶಿಕ ಕಾರ್ಯಾಗಾರದಲ್ಲಿ ಅನುಕಂಪದ ಆಧಾರದ ಗ್ರೂಪ್ 'ಡಿ' ಹುದ್ದೆ ನೇಮಕಾತಿ ಕುರಿತು ಮುಖ್ಯ ಕಚೇರಿಗೆ ಯಾವುದೇ ಪ್ರಸ್ತಾವ ಸಲ್ಲಿಸಬಾರದು. ಅನುಕಂಪದ ಹುದ್ದೆಯ ನೇಮಕಾತಿ ಕೋರಿ ಬರುವ ಮೃತರ ಅವಲಂಬಿತರಿಗೆ ಸರ್ಕಾರದ ನಿರ್ದೇಶನ ಕುರಿತು ವಿಭಾಗ ಮಟ್ಟದಲ್ಲೇ ಮಾಹಿತಿ ನೀಡಬೇಕು' ಎಂದಿದ್ದಾರೆ.

'ಈ ಆದೇಶ ಬರುವುದಕ್ಕೂ ಮೂರು ಸಾರಿಗೆ ನಿಗಮಗಳ ವ್ಯಾಪ್ತಿಯಲ್ಲಿ ಕರ್ತವ್ಯದ ವೇಳೆ ನಿಧನರಾಗಿ, ಕಡಿಮೆ ವಿದ್ಯಾರ್ಹತೆಯಿಂದ ಗ್ರೂಪ್ 'ಡಿ' ನೌಕರಿಗೆ ಅವರ ಕುಟುಂಬದವರು ಅರ್ಜಿ ಸಲ್ಲಿಸಿರುವ ನೂರಕ್ಕೂ ಹೆಚ್ಚು ಪ್ರಕರಣಗಳಿವೆ. ಈ ಆದೇಶದಿಂದ ಅವರ ನೌಕರಿಯ ಕನಸು ಕಮರಿದೆ' ಎಂದು ಗದಗ ಜಿಲ್ಲೆ ದಲಿತ ಸಂಘಟನೆಗಳ ಒಕ್ಕೂಟದ ಸಂಚಾಲಕ ಮುತ್ತು ಬಿಳೆಯಲಿ ತಿಳಿಸಿದ್ದಾರೆ.

'ಅನುಕಂಪದ ಆಧಾರದಡಿ ಗ್ರೂಪ್ 'ಡಿ' ನೌಕರಿ ಕೋರಿ ಗದಗ ವಿಭಾಗದಲ್ಲಿ 28 ಮಂದಿ ಅರ್ಜಿ ಸಲ್ಲಿಸಿದ್ದಾರೆ. ಈಗ ನೇಮಕಾತಿ ಪ್ರಕ್ರಿಯೆ ಸ್ಥಗಿತಗೊಂಡಿವೆ' ಎಂದು ಗದಗ ವಿಭಾಗೀಯ ಸಾರಿಗೆ ನಿಯಂತ್ರಣಾಧಿಕಾರಿ ಶಶಿಧರ್ ಚನ್ನಪ್ಪಗೌಡರ ತಿಳಿಸಿದ್ದಾರೆ.

> **ಸರ್ಕಾರ ಆದೇಶವನ್ನು ಮರುಪರಿಶೀಲಿಸಬೇಕು. ಆದೇಶಕ್ಕೂ ಮುನ್ನ ಸಲ್ಲಿಸಿದ ಅರ್ಜಿಗಳನ್ನು ಪರಿಶೀಲಿಸಿ ಅವರಿಗೆ ಅನುಕಂಪದ ಉದ್ಯೋಗ ನೀಡಬೇಕು**
> **ಅನುಕಂಪದ ಆಧಾರದ ಮೇಲೆ ಗ್ರೂಪ್ 'ಡಿ' ನೌಕರಿಯ ಆಕಾಂಕ್ಷಿ**

> **ಅನುಕಂಪದ ಆಧಾರದ ಮೇಲೆ ಗ್ರೂಪ್ 'ಡಿ' ಹುದ್ದೆ ನೇಮಕಾತಿ ಸ್ಥಗಿತಗೊಳಿಸಿರುವ ವಿಷಯ ಆಕಾಂಕ್ಷಿಗಳಿಗೆ ಗೊತ್ತೇ ಇಲ್ಲ. ನೌಕರಿ ನಿರೀಕ್ಷೆಯಲ್ಲೇ ಹಲವರು ಇದ್ದಾರೆ**
> **ಮುತ್ತು ಬಿಳೆಯಲಿ, ಸಂಚಾಲಕ,** ಗದಗ ಜಿಲ್ಲೆ ದಲಿತ ಸಂಘಟನೆಗಳ ಒಕ್ಕೂಟ

'ಆರ್‌ಎಫ್‌ಒ ವರ್ಗಾವಣೆಯಲ್ಲೂ ಭ್ರಷ್ಟಾಚಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಲಯ ಅರಣ್ಯಾಧಿಕಾರಿಗಳ (ಆರ್‌ಎಫ್‌ಒ) ವರ್ಗಾವಣೆಯಲ್ಲಿ ರಾಜಕೀಯ ಒತ್ತಡ, ವೈಯಕ್ತಿಕ ಶಿಫಾರಸು, ಭ್ರಷ್ಟಾಚಾರ ಮತ್ತು ಅಕ್ರಮಗಳು ನಡೆಯುತ್ತಿವೆ ಎಂಬ ದಟ್ಟ ಭಾವನೆ ಅಧಿಕಾರಿಗಳು ಮತ್ತು ಸಾರ್ವಜನಿಕರಲ್ಲಿದೆ. ಇವುಗಳ ನಿಯಂತ್ರಣಕ್ಕೆ ಮತ್ತು ವರ್ಗಾವಣೆಯಲ್ಲಿ ಪಾರದರ್ಶಕತೆ ತರಲು ಆರ್‌ಎಫ್‌ಒ ವರ್ಗಾವಣೆಯನ್ನೂ ಕೌನ್ಸೆಲಿಂಗ್ ನಿರ್ವಹಣಾ ವ್ಯವಸ್ಥೆಗೆ (ಟಿಸಿಎಂಎಸ್) ಒಳಪಡಿಸಬೇಕು' ಎಂದು ಕರ್ನಾಟಕ ರಾಜ್ಯ ವಲಯ ಅರಣ್ಯ ಅಧಿಕಾರಿಗಳ ಸಂಘ ಒತ್ತಾಯಿಸಿದೆ.

ಸಂಘದ ಪದಾಧಿಕಾರಿಗಳು ಅರಣ್ಯ ಸಚಿವ ಈಶ್ವರ ಖಂಡ್ರೆ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ್ದಾರೆ.

ಈಗಾಗಲೇ ಮುಂಚೂಣಿ ಸಿಬ್ಬಂದಿಯ ವರ್ಗಾವಣೆಗೆ ಕೌನ್ಸೆಲಿಂಗ್ ವ್ಯವಸ್ಥೆ ಜಾರಿ ಮಾಡಲಾಗಿದೆ. ಮುಂಚೂಣಿ ಸಿಬ್ಬಂದಿ ಎಂದರೆ, ಡಿಆರ್‌ಎಫ್‌ಒ, ಗಾರ್ಡ್, ವಾಚರ್ಸ್, ಮಾವುತರು–ಕಾವಾಡಿಗಳು. ಇದನ್ನು ಆರ್‌ಎಫ್‌ಒಗಳಿಗೂ ವಿಸ್ತರಿಸಬೇಕು ಎಂದು ಒತ್ತಾಯಿಸಿದ್ದಾರೆ.

'ಇತ್ತೀಚಿನ ವರ್ಷಗಳಲ್ಲಿ ಇತರ ಇಲಾಖೆಗಳಂತೆ ಅರಣ್ಯ ಇಲಾಖೆಯಲ್ಲೂ ನಿರ್ದಿಷ್ಟ ಅರಣ್ಯ ವಲಯಗಳಿಗೆ ಹಣ ಕೊಟ್ಟು ಪೋಸ್ಟಿಂಗ್ ಪಡೆದುಕೊಳ್ಳುವ ಕೆಟ್ಟ ಪರಂಪರೆ ಆರಂಭವಾಗಿದೆ. ಇದಕ್ಕೆ ಕಡಿವಾಣ ಹಾಕಬೇಕು' ಎಂದು ಹೇಳಿದ್ದಾರೆ.

'ಈ ರೀತಿಯ ವರ್ಗಾವಣೆಗಳಿಂದ ದೀರ್ಘಾವಧಿ ಯೋಜನೆಗಳ ಮೇಲೆ ಕೆಟ್ಟ ಪರಿಣಾಮ ಬೀರುತ್ತಿದೆ. ಇಂತಹ ಯೋಜನೆಗಳಿಗೆ ಅಧಿಕಾರಿಯ ನಿರಂತರ ಉಪಸ್ಥಿತಿ ಮತ್ತು ಸ್ಥಳೀಯ ಜ್ಞಾನ ಅಗತ್ಯ' ಎಂದಿದ್ದಾರೆ.

'ಹರಿಯಾಣದಲ್ಲಿ ಅಂಕ–ಆಧಾರಿತ ಆನ್‌ಲೈನ್ ವರ್ಗಾವಣೆ ನೀತಿ ಜಾರಿಯಲ್ಲಿದೆ. ನಮ್ಮ ರಾಜ್ಯದಲ್ಲೂ ಅದನ್ನು ಪರಿಗಣಿಸಬೇಕು' ಎಂದೂ ಸಲಹೆ ನೀಡಿದೆ.

ಆರ್‌ಎಫ್‌ಒಗಳ ಬೇಡಿಕೆಗಳು

- ಕೌನ್ಸೆಲಿಂಗ್ ಮೂಲಕ ವರ್ಗಾವಣೆಗಾಗಿ ಆನ್‌ಲೈನ್ ಪೋರ್ಟಲ್ ಅಭಿವೃದ್ಧಿಪಡಿಸಬೇಕು. ಈಗ ಇರುವ ಟಿಸಿಎಂಎಸ್ ಅನ್ನು ಅಬಕಾರಿ ಇಲಾಖೆಯ ಮಾದರಿಯಲ್ಲಿ ಒಂದು ಸಮಗ್ರ ಆನ್‌ಲೈನ್ ಪೋರ್ಟಲ್ ಆಗಿ ಮೇಲ್ದರ್ಜೆಗೇರಿಸಬೇಕು
- ಸೇವಾ ಹಿರಿತನ, ದುರ್ಗಮ ಮತ್ತು ಅತಿಸೂಕ್ಷ್ಮ ಪ್ರದೇಶಗಳಲ್ಲಿನ ಸೇವೆ, ಕಾರ್ಯಕ್ಷಮತೆ ಮೌಲ್ಯಮಾಪನ, ವಿಶೇಷ ಸಾಧನೆಗಳು, ಪತಿ–ಪತ್ನಿ ಪ್ರಕರಣಗಳು, ಗಂಭೀರ ಅನಾರೋಗ್ಯ ಮತ್ತು ಮಕ್ಕಳ ಶಿಕ್ಷಣದಂತಹ ವಿಷಯಗಳಿಗೆ ನಿರ್ದಿಷ್ಟ ಅಂಕ ನೀಡುವ ಅಂಕ–ಆಧಾರಿತ ಮಾನದಂಡವನ್ನೂ ಅಳವಡಿಸಬೇಕು
- ವರ್ಗಾವಣೆಗೆ ಅರ್ಹರಾದ ಅಧಿಕಾರಿಗಳ ಪಟ್ಟಿ, ಅವರು ಗಳಿಸಿದ ಅಂಕಗಳು ಮತ್ತು ಅಂತಿಮ ವರ್ಗಾವಣೆ ಆದೇಶಗಳನ್ನು ಸಾರ್ವಜನಿಕವಾಗಿ ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕು. ಇದರಿಂದ ಪಾರದರ್ಶಕತೆ ಮತ್ತು ಉತ್ತರದಾಯಿತ್ವವನ್ನು ಖಚಿತಪಡಿಸುತ್ತದೆ

> **ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆಯಲ್ಲಿ ಪಾರದರ್ಶಕವಾಗಿ ಆಡಳಿತ ಮತ್ತು ವರ್ಗಾವಣೆ ನಡೆಯಬೇಕೆಂದು ಡಿಆರ್‌ಎಫ್‌ಒವರೆಗೆ ಕೌನ್ಸೆಲಿಂಗ್ ಜಾರಿಗೆ ತಂದಿದ್ದೇನೆ. ಇದನ್ನು ಆರ್‌ಎಫ್‌ಒವರೆಗೆ ವಿಸ್ತರಿಸಲು ಚಿಂತನೆ ನಡೆದಿದೆ**
> **ಈಶ್ವರ ಬಿ ಖಂಡ್ರೆ,** ಅರಣ್ಯ ಸಚಿವರು

ಪ್ರಧಾನಿ ಮೋದಿ,ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ನಾಯಕರ ಅಭಿನಂದನೆ

ಸರಳೀಕೃತ ಜಿಎಸ್‌ಟಿ: ಬಿಜೆಪಿ ಸಂಭ್ರಮಾಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರ ಸರಳೀಕೃತ ಜಿಎಸ್‌ಟಿ 2.0 ವ್ಯವಸ್ಥೆ ಜಾರಿ ಮಾಡಿರುವುದನ್ನು ಸಂಭ್ರಮಿಸಿ, ಬಿಜೆಪಿ ನಾಯಕರು ಮತ್ತು ಕಾರ್ಯಕರ್ತರು ಸೋಮವಾರ ರಾಜ್ಯದ ವಿವಿಧೆಡೆ ಪಟಾಕಿ ಸಿಡಿಸಿ, ಸಿಹಿ ಹಂಚಿದರು.

ತೆರಿಗೆ ಇಳಿಸಲು ಕಾರಣರಾದ ಪ್ರಧಾನಿ ಮೋದಿ ಮತ್ತು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಬಿಜೆಪಿ ನಾಯಕರು ಅಭಿನಂದಿಸಿದರು.

ಬೆಂಗಳೂರಿನ ಚಿಕ್ಕಪೇಟೆಯಲ್ಲಿ ಸಂಸದ ಪಿ.ಸಿ.ಮೋಹನ್ ನೇತೃತ್ವದಲ್ಲಿ ಸಂಭ್ರಮಾಚರಣೆ ನಡೆಯಿತು. ನಂತರ ಮಳಿಗೆಗಳಿಗೆ ತೆರಳಿ ಸಿಹಿ ವಿತರಿಸಿದರು. ಬಿಜೆಪಿಯ ಬೆಂಗಳೂರು ಕೇಂದ್ರ ಜಿಲ್ಲಾಧ್ಯಕ್ಷ ಸಪ್ತಗಿರಿಗೌಡ ಮತ್ತು ಜಿಲ್ಲಾ ಪದಾಧಿಕಾರಿಗಳು ಭಾಗವಹಿಸಿದ್ದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ನೇತೃತ್ವದಲ್ಲಿ ಶಿವಮೊಗ್ಗದಲ್ಲಿ ಸಂಭ್ರಮಾಚರಣೆ ನಡೆಯಿತು

ಪಕ್ಷದ ಕೇಂದ್ರ ಕಚೇರಿ ಮುಂಭಾಗದಲ್ಲಿ ನಡೆದ ಸಂಭ್ರಮಾಚರಣೆಯಲ್ಲಿ ವಿಧಾನಪರಿಷತ್‌ನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ವಿರೋಧಪಕ್ಷದ ಮುಖ್ಯ ಸಚೇತಕ ಎನ್.ರವಿಕುಮಾರ್ ಮತ್ತು ಇತರರು ಭಾಗವಹಿಸಿದ್ದರು. ಇವರು ಮಲ್ಲೇಶ್ವರದ ಅಂಗಡಿ–ಮಳಿಗೆಗಳಿಗೆ ತೆರಳಿ ಸಿಹಿ ವಿತರಿಸಿದರು.

ಮಂಡ್ಯದಲ್ಲಿ ವಿಧಾನಸಭೆ ವಿರೋಧಪಕ್ಷದ ನಾಯಕ ಆರ್. ಅಶೋಕ ನೇತೃತ್ವದಲ್ಲಿ ಕಾಮನಗುಡಿ ಸರ್ಕಲ್, ಪೇಟೆ ಬೀದಿಯಲ್ಲಿ ಸಂಭ್ರಮಾಚರಣೆ ನಡೆಯಿತು. ಬಿಜೆಪಿ ಮಂಡ್ಯ ಜಿಲ್ಲಾಧ್ಯಕ್ಷ ಡಾ.ಎನ್.ಎಸ್. ಇಂದ್ರೇಶ್, ರೈತ ಮೋರ್ಚಾ ಜಿಲ್ಲಾಧ್ಯಕ್ಷ ಅಶೋಕ್ ಜಯರಾಮ್, ಮುಖಂಡರಾದ ಇಂಡುವಾಳು ಸಚ್ಚಿದಾನಂದ, ಸಿದ್ದರಾಮಯ್ಯ, ಸ್ವಾಮಿಗೌಡ, ಜಿಲ್ಲಾ ವಕ್ತಾರ ಸಿ.ಟಿ ಮಂಜುನಾಥ್ ಹಾಗೂ ಕಾರ್ಯಕರ್ತರು ಇದ್ದರು.

ಶಿವಮೊಗ್ಗದಲ್ಲಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ನೇತೃತ್ವದಲ್ಲಿ ಸಂಭ್ರಮಾಚರಣೆ ನಡೆಯಿತು. ಈ ಸಂದರ್ಭದಲ್ಲಿ ಮಾತನಾಡಿದ ಅವರು, 'ಜಿಎಸ್‌ಟಿ ಸರಳೀಕರಿಸಿ ಜನರಿಗೆ ದಸರಾ ಮತ್ತು ದೀಪಾವಳಿ ಉಡುಗೊರೆ ನೀಡಿದ್ದಾರೆ. ಇದಕ್ಕಾಗಿ ರಾಜ್ಯದ ಜನತೆ ಪರವಾಗಿ ಕೇಂದ್ರ ಸರ್ಕಾರಕ್ಕೆ ಧನ್ಯವಾದ ಸಮರ್ಪಿಸಲು ಸಂಭ್ರಮಾಚರಣೆ ನಡೆಸುತ್ತಿದ್ದೇವೆ' ಎಂದು ಹೇಳಿದರು.

'ಸಿದ್ದರಾಮಯ್ಯ ತೆರಿಗೆ ಇಳಿಸುವುದು ಯಾವಾಗ?'

'ಪ್ರಧಾನಿ ಮೋದಿ ಜಿಎಸ್‌ಟಿ ತೆರಿಗೆ ಇಳಿಸಿ ಜನಸಾಮಾನ್ಯರಿಗೆ ಹಬ್ಬದ ಉಡುಗೊರೆ ನೀಡಿದ್ದಾರೆ. ಆದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯದಲ್ಲಿ ತೆರಿಗೆ ಇಳಿಸುವುದು ಯಾವಾಗ' ಎಂದು ಬಿಜೆಪಿ ಸಂಸದ ಬಸವರಾಜ ಬೊಮ್ಮಾಯಿ ಪ್ರಶ್ನಿಸಿದ್ದಾರೆ.

ಈ ಕುರಿತು 'ಎಕ್ಸ್' ಮಾಡಿರುವ ಅವರು, 'ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಕಳೆದ ಎರಡು ವರ್ಷದಲ್ಲಿ ತೆರಿಗೆ ಹೆಸರಿನಲ್ಲಿ ರಾಜ್ಯದ ಜನರಿಂದ ₹1ಲಕ್ಷ ಕೋಟಿ ವಸೂಲು ಮಾಡಿದೆ. ಅಧಿಕಾರಕ್ಕೆ ಬಂದ ತಕ್ಷಣ ಪೆಟ್ರೋಲ್, ಮೋಟಾರು ವಾಹನ ತೆರಿಗೆ, ಸ್ಟ್ಯಾಂಪ್ ಡ್ಯೂಟಿ, ಅಬಕಾರಿ ತೆರಿಗೆ, ಹಾಲು, ನೀರು, ವಿದ್ಯುತ್ ಹೀಗೆ ಎಲ್ಲದರ ಮೇಲೂ ತೆರಿಗೆ ಹೆಚ್ಚಿಸಿರುವುದರಿಂದ ಜನಸಾಮಾನ್ಯರು ಬಳಕೆ ಮಾಡುವ ವಸ್ತುಗಳು ದುಬಾರಿ ಆಗಿವೆ' ಎಂದಿದ್ದಾರೆ.

ಡಿಕೆಶಿ ಪ್ರಕರಣ: ನ್ಯಾ.ಸೂರ್ಯಕಾಂತ್ ಪೀಠದಲ್ಲಿ ಇತ್ಯರ್ಥಕ್ಕೆ ಆದೇಶ

ಪ್ರಜಾವಾಣಿ ವಾರ್ತೆ

ನವದೆಹಲಿ: ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ಆದಾಯ ಮೀರಿದ ಆಸ್ತಿ ಗಳಿಕೆ ಪ್ರಕರಣದಲ್ಲಿ ಸಿಬಿಐ ಹಾಗೂ ಶಾಸಕ ಬಸನಗೌಡ ಪಾಟೀಲ ಯತ್ನಾಳ ಸಲ್ಲಿಸಿರುವ ವಿಶೇಷ ಮೇಲ್ಮನವಿಯ ಅರ್ಜಿಯನ್ನು ನ್ಯಾಯಮೂರ್ತಿ ಸೂರ್ಯಕಾಂತ್ ನೇತೃತ್ವದ ಪೀಠವು ಇತ್ಯರ್ಥಪಡಿಸಲಿದೆ ಎಂದು ಸುಪ್ರೀಂ ಕೋರ್ಟ್ ಸೋಮವಾರ ತಿಳಿಸಿದೆ.

ಪ್ರಕರಣದ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಮತ್ತು ನ್ಯಾಯಮೂರ್ತಿ ಕೆ. ವಿನೋದ್ ಚಂದ್ರನ್ ಅವರ ಪೀಠವು, 'ಈ ಅರ್ಜಿಯನ್ನು ಈ ಹಿಂದೆ ನ್ಯಾಯಮೂರ್ತಿ ಸೂರ್ಯಕಾಂತ್ ನೇತೃತ್ವದ ಪೀಠ ವಿಚಾರಣೆ ನಡೆಸಿತ್ತು. ನ್ಯಾಯದ ಹಿತದೃಷ್ಟಿಯಿಂದ ಆ ಪೀಠವೇ ಅರ್ಜಿಯ ಇತ್ಯರ್ಥ ಮಾಡಲಿ' ಎಂದು ನಿರ್ದೇಶನ ನೀಡಿತು.

ಶಿವಕುಮಾರ್ ಪರ ವಾದ ಮಂಡಿಸಿದ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ, 'ರಾಜಕೀಯ ದ್ವೇಷಗಳನ್ನು ನ್ಯಾಯಾಲಯಗಳಲ್ಲಿ ಅಲ್ಲ, ಬೇರೆಡೆ ಇತ್ಯರ್ಥಪಡಿಸಿಕೊಳ್ಳಬೇಕು ಎಂದು ಸಿಜೆಐ ಈ ಹಿಂದೆ ಹೇಳಿದ್ದರು' ಎಂದು ಹೇಳಿದರು.

ಈ ಪ್ರಕರಣವನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕು ಎಂದು ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಬೇಕೆಂದು ಯತ್ನಾಳ ಹಾಗೂ ಸಿಬಿಐ ಪರ ವಕೀಲರು ಕೋರಿದರು.

'ಶಾ ಭೇಟಿಯಾಗಲು ತಲೆ ಕೆಟ್ಟಿದೆಯಾ'

'ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿ ಮಾಡಿಲ್ಲ. ಶಾ ಅವರನ್ನು ಭೇಟಿಯಾಗಲು ನನಗೆ ತಲೆ ಕೆಟ್ಟಿದೆಯಾ' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು. ಸೋಮವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿ, 'ಕೆಲವರಿಗೆ ನನ್ನ ನೆನಪಿಸಿಕೊಳ್ಳದಿದ್ದರೆ ನಿದ್ದೆಯೇ ಬರುವುದಿಲ್ಲ' ಎಂದರು.

ಮಂಗಳವಾರ, ಸೆಪ್ಟೆಂಬರ್ 23, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 264 | ಪುಟ 16

prajavani.net prajavani www.prajavani.net

ಕುಸ್ತಿ ರೋಮಾಂಚನ

ಮೈಸೂರಿನ ಡಿ. ದೇವರಾಜ್ ಅರಸು ಅಖಾಡದಲ್ಲಿ ಸೋಮವಾರ ಆರಂಭವಾದ ದಸರಾ ನಾಡಕುಸ್ತಿಯಲ್ಲಿ ವಿಕಾಸ್, ಮಹದೇವಪುರ ಹಾಗೂ ಕಿರಣ್, ದಾವಣಗೆರೆ ಸೆಣಸಿದರು

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಅಗ್ರಸೇನ ಜಯಂತಿ

ರಾಜಸ್ಥಾನದ ಅಜ್ಮೇರ್‌ನಲ್ಲಿ ಮಹಾರಾಜ ಅಗ್ರಸೇನರ ಜನ್ಮ ದಿನಾಚರಣೆ ಅಂಗವಾಗಿ ಸೋಮವಾರ ನಡೆದ ಮೆರವಣಿಗೆಯಲ್ಲಿ ಪಾಲ್ಗೊಂಡ ವೇಷಧಾರಿ

ಸೆನ್ಸೆಕ್ಸ್ 82,159 | ನಿಫ್ಟಿ 25,202 | $/₹ 88.28 | ಚಿನ್ನ (Std. 10g) ₹1,16,600 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,40,500 (ಬೆಂಗಳೂರು)

‘ಅಸ್ತ್ರವಲ್ಲ, ಅಕ್ಷರದಿಂದ ಬದುಕು ಗೆಲ್ಲಿ’

ನಾಡಹಬ್ಬಕ್ಕೆ ವಿಧ್ಯುಕ್ತ ಚಾಲನೆ ನೀಡಿದ ಬಾನು ಮುಷ್ತಾಕ್ ಪ್ರತಿಪಾದನೆ

ದೇಗುಲದಲ್ಲಿ ಬಾನು ಪೂಜೆ

ಉದ್ಘಾಟನೆಗೂ ಮುನ್ನ ಬಾನು ಮುಷ್ತಾಕ್ ಅವರು ಮುಖ್ಯಮಂತ್ರಿ ಹಾಗೂ ಸಚಿವರೊಂದಿಗೆ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿದರು. ಅರ್ಚಕರು ನೀಡಿದ ಮಂಗಳಾರತಿಯನ್ನು ತೆಗೆದುಕೊಂಡರು. ಅವರಿಗೆ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎಂ.ಜೆ.ರೂಪಾ ರೇಷ್ಮೆ ಸೀರೆಯನ್ನು ‘ಬಾಗಿನ’ವಾಗಿ ನೀಡಿ ಸತ್ಕರಿಸಿದರು. ಈ ವೇಳೆ ಬಾನು ಅವರ ಕಣ್ಣಾಲಿಗಳು ತುಂಬಿ ಬಂದು ಭಾವುಕರಾದರು.

● ಕೆ.ನರಸಿಂಹಮೂರ್ತಿ

ಮೈಸೂರು: ‘ನನ್ನ ಬದುಕು ನನಗೆ ಹಲವು ಪಾಠ ಕಲಿಸಿದೆ. ವ್ಯಷ್ಟಿಯಿಂದ ಸಮಷ್ಟಿಯತ್ತ ಸಾಗುವುದೇ ನಿಜವಾದ ದಾರಿ ಎಂಬುದು ಅದರಲ್ಲೊಂದು. ನನ್ನ ಧಾರ್ಮಿಕ ನಂಬಿಕೆ, ಜೀವನದರ್ಶನ ಜೀವಪರವಾಗಿದೆ. ಅಸ್ತ್ರಗಳಿಂದಲ್ಲ, ಅಕ್ಷರಗಳಿಂದ ಬದುಕನ್ನು ಗೆಲ್ಲಬಹುದು, ಹಗೆಗಳಿಂದಲ್ಲ, ಪ್ರೀತಿಯಿಂದ ಬದುಕನ್ನು ಅರಳಿಸಬಹುದು’

–ನಾಡದೇವಿ ಚಾಮುಂಡೇಶ್ವರಿ ಉತ್ಸವಮೂರ್ತಿಗೆ ಸೋಮವಾರ ದೀಪ ಬೆಳಗಿ, ಪುಷ್ಪಾರ್ಪಣೆ ಮಾಡಿ ಉತ್ಸವಕ್ಕೆ ವಿಧ್ಯುಕ್ತವಾಗಿ ಚಾಲನೆ ನೀಡಿದ ಲೇಖಕಿ ಬಾನು ಮುಷ್ತಾಕ್ ಮಾಡಿದ ಪ್ರತಿಪಾದನೆ ಇದು.

‘ಎಲ್ಲರೂ ಒಂದೇ ಗಗನದ ಅಡಿಯ ಪಯಣಿಗರು. ಆಕಾಶ ಯಾರನ್ನೂ ಬೇರ್ಪಡಿಸುವುದಿಲ್ಲ. ಭೂಮಿ ಯಾರನ್ನೂ ಹೊರತಳ್ಳುವುದಿಲ್ಲ. ಆದರೆ ಮನುಷ್ಯರು ಮಾತ್ರ ಗಡಿಗಳನ್ನು ಸೃಷ್ಟಿಸುತ್ತಾರೆ’ ಎಂದು ಹೇಳಿದರು.

▶5

ಮೈಸೂರು ದಸರಾ ಉದ್ಘಾಟನೆಯಲ್ಲಿ ಪಾಲ್ಗೊಂಡಿದ್ದ ಸಾಹಿತಿ ಬಾನು ಮುಷ್ತಾಕ್ ಅವರು ಅರ್ಚಕರಿಂದ ಆರತಿ ಪಡೆದುಕೊಂಡರು. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಚಿವ ಎಚ್‌.ಸಿ ಮಹದೇವಪ್ಪ ಇದ್ದರು — ಪಿಟಿಐ ಚಿತ್ರ

ಸೌಹಾರ್ದ ಸಾರಿದ ದಸರಾ

ಮೈಸೂರು: ಹಿಂದೆಂದೂ ಕಾಣದ ಪೊಲೀಸ್ ಬಿಗಿ ಭದ್ರತೆ, ‘ಅಘೋಷಿತ ನಿಷೇಧಾಜ್ಞೆ’ ನಡುವೆ ಇಲ್ಲಿನ ಚಾಮುಂಡಿಬೆಟ್ಟದಲ್ಲಿ ಸೋಮವಾರ ಉದ್ಘಾಟನೆಗೊಂಡ ನಾಡಹಬ್ಬ ಮೈಸೂರು ದಸರಾ ಉತ್ಸವವು, ರಾಜ್ಯದಲ್ಲಿ ಕೋಮು ಸೌಹಾರ್ದ, ಧಾರ್ಮಿಕ ಸಹಿಷ್ಣುತೆ ಮತ್ತು ಭಾಷಾ ಸಾಮರಸ್ಯದ ಅಗತ್ಯವನ್ನು ಮತ್ತೊಮ್ಮೆ ಸಾರಿ ಹೇಳಿತು. ‘ಜೈ ಹಿಂದ್’, ‘ಜೈ ಕರ್ನಾಟಕ’ ದ ಜೊತೆಗೆ ‘ಜೈ ಸಂವಿಧಾನ’ ಘೋಷಣೆಯೂ ಮೊಳಗಿತು.

ನೂರು ವರ್ಷ ಪೂರೈಸಿದ ಕುವೆಂಪು ಅವರ ನಾಡಗೀತೆಯ ‘ಸರ್ವ ಜನಾಂಗದ ಶಾಂತಿಯ ತೋಟ’ ಸಾಲು ಕಾರ್ಯಕ್ರಮದ ಆರಂಭದಿಂದ ಕೊನೆಯವರೆಗೂ ಅನುರಣಿಸಿತು. ‘ದಸರೆಯು ಎಲ್ಲ ಜಾತಿ, ಧರ್ಮಗಳ ಜನರ ಹಬ್ಬ’ ಎಂಬ ಗಟ್ಟಿ ಸಂದೇಶವನ್ನೂ ಸಾರಿತು. ನವರಾತ್ರಿ ಆಚರಣೆಯ ಮೊದಲ ದಿನದ ಬಣ್ಣವಾದ ಹಳದಿ ಸೀರೆಯುಟ್ಟು, ಮೈಸೂರು ಮಲ್ಲಿಗೆ ಮುಡಿದು ಲೇಖಕಿ ಬಾನು ಮುಷ್ತಾಕ್ ಗಮನ ಸೆಳೆದರು.

ಅಂತರರಾಷ್ಟ್ರೀಯ ಬುಕರ್ ಪ್ರಶಸ್ತಿ ಪುರಸ್ಕೃತರಾದ ಬಳಿಕ ದಸರಾ ಉದ್ಘಾಟಿಸಲು ಅವರನ್ನು ಆಯ್ಕೆ ಮಾಡಿದ ರಾಜ್ಯ ಸರ್ಕಾರದ ನಿರ್ಧಾರವನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿ, ಕನ್ನಡಾಂಬೆ ಕುರಿತು ಅವರ ಹೇಳಿಕೆಯನ್ನು ಆಕ್ಷೇಪಿಸಿ, ‘ಮುಸ್ಲಿಮರಾದ ಅವರು ಉತ್ಸವ ಉದ್ಘಾಟಿಸಬಾರದು’ ಎಂದು ಆಗ್ರಹಿಸಿದ್ದ ಬಿಜೆಪಿ ಮುಖಂಡರಿಗೆ ದಸರಾ ಉದ್ಘಾಟನೆ ವೇದಿಕೆಯಿಂದಲೇ ಸೌಹಾರ್ದ–ಸಹಿಷ್ಣುತೆಯ ಪಾಠ ಮಾಡಿದರು. ‘ಸಂವಿಧಾನದ ಪ್ರಸ್ತಾವನೆ ಓದಿ’ ಎಂದು ಹೇಳಿದ ಸುಪ್ರೀಂ ಕೋರ್ಟ್ ಸೂಚನೆ ಮತ್ತೆ ನೆನಪಾಗುವಂತೆಯೂ ಮಾಡಿದರು.

▶5

ಮೊದಲ ದಿನ ಹಲವು ವಿಘ್ನ, ಕಾಡಿದ ಸರ್ವರ್ ಸಮಸ್ಯೆ

ಕೈಕೊಟ್ಟ ಆ್ಯಪ್, ಸಮೀಕ್ಷೆಗೆ ತೊಡಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಸೋಮವಾರ ಆರಂಭ ಆಗಿದ್ದು, ಪ್ರಕ್ರಿಯೆಗೆ ಮೊದಲ ದಿನವೇ ಸಮಸ್ಯೆಗಳು ಎದುರಾಗಿವೆ. ಸಮೀಕ್ಷೆಗೆ ರೂಪಿಸಿದ್ದ ಆ್ಯಪ್‌ನ ತಾಂತ್ರಿಕ ದೋಷ, ಸಮೀಕ್ಷಕರನ್ನು ತಲುಪದ ಕೈಪಿಡಿ, ಸರ್ವರ್ ಸಮಸ್ಯೆಗಳು ಕಾಡಿವೆ.

ಈ ಸಮಸ್ಯೆಗಳಿಂದಾಗಿ ಬಹುತೇಕ ಜಿಲ್ಲೆಗಳಲ್ಲಿ ಮೊದಲ ದಿನ ಸಮೀಕ್ಷೆಯೇ ಆರಂಭವಾಗಲಿಲ್ಲ. ಕೆಲವೆಡೆ ವಿಳಂಬವಾಗಿ ಆರಂಭವಾಗಿದೆ. ಒಂದೆರಡು ಜಿಲ್ಲೆಗಳಲ್ಲಿ ಮಧ್ಯಾಹ್ನ ಆರಂಭವಾಗಿದ್ದು, ನಿಗದಿಯಂತೆ ಪೂರ್ಣ ಪ್ರಮಾಣದಲ್ಲಿ ನಡೆಯಲಿಲ್ಲ. ಬಹುತೇಕ ಎಲ್ಲ ಜಿಲ್ಲೆಗಳಲ್ಲಿ ಆ್ಯಪ್ ಅಪ್‌ಡೇಟ್ ಆಗದಿರುವುದೇ ಪ್ರಮುಖ ತೊಡಕಾಯಿತು. ಸರ್ವರ್ ಸಮಸ್ಯೆ ಸಮಸ್ಯೆಯನ್ನು ಸಂಕೀರ್ಣಗೊಳಿಸಿತು. ಸಮೀಕ್ಷಕರು ಮಧ್ಯಾಹ್ನದವರೆಗೂ ಅಪ್‌ಡೇಟ್‌ಗಾಗಿ ಕಸರತ್ತು ನಡೆಸಿ ಮನೆಗೆ ಮರಳಿದ್ದಾರೆ.

‘ಕಲ್ಯಾಣ’ದಲ್ಲಿ ಹತ್ತಾರು ಅಡ್ಡಿ (ಕಲಬುರಗಿ): ಕಲ್ಯಾಣ ಕರ್ನಾಟಕದ ಏಳು ಜಿಲ್ಲೆಗಳಲ್ಲಿ ಮೊದಲ ದಿನ ಹತ್ತಾರು ಸಮಸ್ಯೆಗಳು ಎದುರಾದವು. ಬಹುತೇಕ ಕಡೆ ಆ್ಯಪ್ ಇನ್‌ಸ್ಟಾಲೇಷನ್‌ಗೆ ತಾಂತ್ರಿಕ ತೊಡಕು ಕಾಡಿದವು. ಕೆಲವೆಡೆ ಕಿಟ್‌ಗಳು ಸಿಗದೇ ಸಮೀಕ್ಷಕರು ಸಮೀಕ್ಷೆಯಿಂದ ದೂರ ಉಳಿದರು.

▶3A

ಹಿಂದುಳಿದ ವರ್ಗಗಳ ಆಯೋಗದ ವತಿಯಿಂದ ನಡೆಯುತ್ತಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ನಿಯೋಜಿತರಾಗಿರುವ ಸಮೀಕ್ಷಕರು ಕಲಬುರಗಿಯ ಸುಂದರ ನಗರದಲ್ಲಿ ಸೋಮವಾರ ಮನೆ–ಮನೆಗೆ ತೆರಳಿ ಮಾಹಿತಿ ಸಂಗ್ರಹಿಸಿದರು ಪ್ರಜಾವಾಣಿ ಚಿತ್ರ:ತಾಜುದ್ದೀನ್ ಆಜಾದ್

‘ಸಮೀಕ್ಷೆ ಮುಂದೂಡಲು ಸಾಧ್ಯವೇ?’

ಬೆಂಗಳೂರು: ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಪ್ರಶ್ನಿಸಲಾದ ಅರ್ಜಿಗಳನ್ನು ಸೋಮವಾರ ವಿಚಾರಣೆ ನಡೆಸಿದ ಹೈಕೋರ್ಟ್, ‘ಸಮೀಕ್ಷೆಯನ್ನು ಸದ್ಯಕ್ಕೆ ಮುಂದೂಡಲು ಸಾಧ್ಯವೇ’ ಎಂದು ರಾಜ್ಯ ಸರ್ಕಾರವನ್ನು ಪ್ರಶ್ನಿಸಿದೆ.

ಸರ್ಕಾರದ ನಡೆಯನ್ನು ಪ್ರಶ್ನಿಸಿ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಎಸ್. ರಘುನಾಥ್, ಅಖಿಲ ಭಾರತ ವೀರಶೈವ ಮಹಾಸಭೆಯ ಬಿ.ಆರ್.ಉದಯಶಂಕರ್ ಸೇರಿದಂತೆ 9 ಜನರು, ರಾಜ್ಯ ಒಕ್ಕಲಿಗರ ಸಂಘದ ಕಾರ್ಯದರ್ಶಿ ಕೆ.ಎನ್.ಸುಬ್ಬಾರೆಡ್ಡಿ ಸೇರಿದಂತೆ ನಾಲ್ವರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

▶3A

ಚಿನಕುರುಳಿ ಪ್ರಕಾಶ್ ಶೆಟ್ಟಿ

22ರಿಂದಲೇ ಶುಲ್ಕ ನಿಯಮ ಜಾರಿ

ನ್ಯೂಯಾರ್ಕ್/ವಾಷಿಂಗ್ಟನ್ (ಪಿಟಿಐ): 2026ನೇ ಆರ್ಥಿಕ ವರ್ಷದಲ್ಲಿ ವೀಸಾ ಪಡೆಯಲು ಅರ್ಜಿ ಸಲ್ಲಿಸಿರುವವರು ಸೇರಿದಂತೆ ಸೆಪ್ಟೆಂಬರ್ 21ರ ನಂತರ ಎಚ್–1ಬಿ ವೀಸಾಕ್ಕಾಗಿ ಅರ್ಜಿ ಸಲ್ಲಿಸುವವರು 1 ಲಕ್ಷ ಡಾಲರ್ (ಸುಮಾರು ₹88 ಲಕ್ಷ) ಶುಲ್ಕ ಪಾವತಿಸಬೇಕು ಎಂದು ಅಮೆರಿಕ ಸರ್ಕಾರ ತಿಳಿಸಿದೆ.

ಎಚ್–1ಬಿ ವೀಸಾ ಕುರಿತ ಪ್ರಶ್ನಾವಳಿ ಮತ್ತು ಉತ್ತರಗಳಿರುವ ಮಾಹಿತಿಯನ್ನು ಭಾನುವಾರ ಬಿಡುಗಡೆ ಮಾಡಿದ್ದು, ಅದರಲ್ಲಿ ಅಮೆರಿಕ ಉದ್ಯೋಗಿಗಳ ರಕ್ಷಣೆ ನಿಟ್ಟಿನಲ್ಲಿ ಎಚ್–1ಬಿ ವೀಸಾ ಸುಧಾರಣೆ ಮಹತ್ವದ ಮತ್ತು ಆರಂಭಿಕ ಹೆಜ್ಜೆ ಎಂದು ಹೇಳಲಾಗಿದೆ.

ಸೆ.22 ಪ್ರಾರಂಭವಾಗುವ ನಡುರಾತ್ರಿಯಿಂದ ನೂತನ ನಿಯಮವು ಅನ್ವಯವಾಗಲಿದೆ ಎಂದು ಅದು ತಿಳಿಸಿದೆ.

ಎಚ್1 ಬಿ ವೀಸಾದ ಶುಲ್ಕವನ್ನು 1 ಲಕ್ಷ ಡಾಲರ್‌ಗೆ ಹೆಚ್ಚಿಸಿರುವುದು ಹೊಸ ಅರ್ಜಿಗಳಿಗೆ ಮಾತ್ರ ಅನ್ವಯವಾಗಲಿದೆ ಎಂದು ಅಮೆರಿಕ ಪೌರತ್ವ ಮತ್ತು ವಲಸೆ ಸೇವೆ (ಯುಎಸ್‌ಸಿಐಎಸ್) ಏಜೆನ್ಸಿಯು ಶನಿವಾರ ಹೇಳಿಕೆಯಲ್ಲಿ ತಿಳಿಸಿತ್ತು. ಆದರೆ ಯಾವ ದಿನಾಂಕದಿಂದ ನೂತನ ನಿಯಮ ಅನುಷ್ಠಾನಗೊಳ್ಳಲಿದೆ ಎಂದು ಸ್ಪಷ್ಟವಾಗಿ ತಿಳಿಸಿರಲಿಲ್ಲ.

ಪ್ರತಿಕ್ರಿಯೆಗೆ ಚೀನಾ ನಕಾರ

ಬೀಜಿಂಗ್ (ಪಿಟಿಐ): ಎಚ್–1ಬಿ ವೀಸಾ ಪಡೆಯಲು ದುಬಾರಿ ಶುಲ್ಕ ವಿಧಿಸಿರುವ ಅಮೆರಿಕದ ನಡೆಯ ಬಗ್ಗೆ ಪ್ರತಿಕ್ರಿಯಿಸಲು ಚೀನಾ ನಿರಾಕರಿಸಿದೆ. ಆದರೆ, ಇದೇ ಸಂದರ್ಭದಲ್ಲಿ ಜಾಗತಿಕ ವೃತ್ತಿಪರರನ್ನು ಅದು ಆಹ್ವಾನಿಸಿದೆ. ಈ ಮಧ್ಯೆ, ಮುಂದಿನ ತಿಂಗಳಿನಿಂದ ನೂತನ ಉದ್ಯೋಗ ವೀಸಾ (ಕೆ–ವೀಸಾ) ವಿತರಿಸಲು ಅದು ಸಿದ್ಧತೆ ನಡೆಸಿದೆ. ಮಾಧ್ಯಮಗಳ ಪ್ರಶ್ನೆಗೆ ಉತ್ತರಿಸಿದ ಚೀನಾ ವಿದೇಶಾಂಗ ಸಚಿವಾಲಯದ ವಕ್ತಾರ ಗುವೋ ಜ್ಯಾಕೂನ್ ಅವರು ‘ಅಮೆರಿಕದ ವೀಸಾ ನೀತಿ ಬಗ್ಗೆ ಚೀನಾ ಪ್ರತಿಕ್ರಿಸುವುದಿಲ್ಲ’ ಎಂದರು.

ದೇಗುಲದ ಪಾವಿತ್ರ್ಯಕ್ಕೆ ಧಕ್ಕೆ ಎಂಬ ಭಕ್ತರ ವಾದಕ್ಕೆ ನ್ಯಾಯಪೀಠ ತೀವ್ರ ಆಘಾತ

ಜೋಪಡಿ ವಾಸಿಗಳು ಕೆಳಮಟ್ಟದವರೇ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೇವಸ್ಥಾನದ ಪಕ್ಕದಲ್ಲಿ ಕೊಳೆಗೇರಿ ನಿವಾಸಿಗಳ ಪುನರ್ವಸತಿ ಕೇಂದ್ರ ನಿರ್ಮಿಸಲು ಅವಕಾಶ ನೀಡುವುದರಿಂದ ದೇಗುಲದ ಪಾವಿತ್ರ್ಯ ಮತ್ತು ಪ್ರಶಾಂತ ವಾತಾವರಣಕ್ಕೆ ಧಕ್ಕೆ ಆಗುತ್ತದೆ’ ಎಂಬ ಆಕ್ಷೇಪವೊಂದಕ್ಕೆ ಹೈಕೋರ್ಟ್ ತೀವ್ರ ಆಘಾತ ವ್ಯಕ್ತಪಡಿಸಿದೆ.

ಕೊಳೆಗೇರಿ ನಿವಾಸಿಗಳಿಗೆ ಮನೆ ನಿರ್ಮಾಣಕ್ಕಾಗಿ ಜಮೀನು ಸ್ವಾಧೀನಪಡಿಸಿಕೊಳ್ಳುವ ಅಧಿಸೂಚನೆ ರದ್ದುಪಡಿಸುವಂತೆ ಕೋರಿ, ಮಂಡ್ಯದ ಶ್ರೀ ಕಾಳಿಕಾಂಬ ಸೇವಾ ಸಮಿತಿಯ ಮರು ಪರಿಶೀಲನಾ ಅರ್ಜಿ ಹಾಗೂ ಹೊಸಹಳ್ಳಿಯ ಇಕ್ಕಳಕ್ಕಿ ರಾಮಲಿಂಗೇಗೌಡ ಸೇರಿದಂತೆ ಎಂಟು ಜನ ಭಕ್ತರು ಸಲ್ಲಿಸಿದ್ದ ರಿಟ್ ಅರ್ಜಿಗಳನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಸಾರಾಸಗಟಾಗಿ ತಿರಸ್ಕರಿಸಿದೆ.

ದೇವಾಲಯ ಸಮಿತಿಯು ಸ್ವಾಧೀನ ಪ್ರಕ್ರಿಯೆಯನ್ನು ವಿರೋಧಿಸಿಲ್ಲ. ಅಧಿಸೂಚನೆಯನ್ನು ಭಕ್ತರು ಪ್ರಶ್ನಿಸಿದ್ದಾರೆ. ದೇವಸ್ಥಾನ ಸಮಿತಿ ಭಕ್ತರನ್ನು ಮುಂದಿಟ್ಟುಕೊಂಡು ತನ್ನ ಉದ್ದೇಶ ಈಡೇರಿಸಿಕೊಳ್ಳಲು ಬಯಸುತ್ತಿದೆ

ಎಂ.ನಾಗಪ್ರಸನ್ನ, ನ್ಯಾಯಮೂರ್ತಿ

▶5

‘ಅರ್ಜಿದಾರರ ವಾದದ ಹಿಂದಿರುವ ಅರ್ಥವನ್ನು ಗಮನಿಸಿದರೆ ಜೋಪಡಿ ವಾಸಿಗಳು ಕೆಳಮಟ್ಟದ ವ್ಯಕ್ತಿಗಳು, ಭಕ್ತಿ ತೋರಿಸುವ, ಪೂಜಾ ಸ್ಥಳದಲ್ಲಿ ವಾಸಿಸುವ ಹಕ್ಕು ಇಲ್ಲದವರು ಎಂದೇ ಆಗಿದೆ. ಇಂತಹ ಮಾತುಗಳು ಈ ಪ್ರಬುದ್ಧ ಯುಗದಲ್ಲಿ, ಅತ್ಯಂತ ಭೀಕರವಾಗಿ ಕಾಣುತ್ತವೆ. ದೇವಾಲಯ ಸಮಿತಿಯ ಎಲ್ಲ ವಾದಾಂಶಗಳು ಗಾಢವಾದ ನೋವುಂಟು ಮಾಡಿವೆ’ ಎಂದು ನ್ಯಾಯಪೀಠ ವ್ಯಥೆ ವ್ಯಕ್ತಪಡಿಸಿದೆ.

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಗುಡುಗು ಸಹಿತ ಮಳೆ ಆಗಲಿದೆ

ಮೊದಲ ದಿನ 10,642 ಮಂದಿ ದತ್ತಾಂಶ ಸಂಗ್ರಹ

ರಾಜ್ಯದಾದ್ಯಂತ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ನಗರ ಜಿಲ್ಲೆಯಲ್ಲೂ ಆರಂಭ, ಮನೆ–ಮನೆಗೆ ತೆರಳಿ ಮಾಹಿತಿ ಸಂಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಾದ್ಯಂತ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ (ಜಾತಿವಾರು ಸಮೀಕ್ಷೆ) ಸೋಮವಾರ ಆರಂಭವಾಗಿದ್ದು, ಮೊದಲ ದಿನ ಕೇವಲ 10,642 ಮಂದಿಯ ದತ್ತಾಂಶ ಸಂಗ್ರಹಿಸಲಾಗಿದೆ.

ಮಧ್ಯಾಹ್ನ 2 ಗಂಟೆವರೆಗೆ ಕೇವಲ 400 ಕುಟುಂಬಗಳ ಸಮೀಕ್ಷೆಯಷ್ಟೇ ನಡೆದಿತ್ತು. ದಿನದ ಅಂತ್ಯಕ್ಕೆ 2,765 ಕುಟುಂಬಗಳ ಸಮೀಕ್ಷೆ ಪೂರ್ಣಗೊಂಡಿತು. ಮೊದಲ ದಿನ ಹಾವೇರಿ ಜಿಲ್ಲೆಯಲ್ಲಿ 680 ಕುಟುಂಬಗಳ ದತ್ತಾಂಶ ಸಂಗ್ರಹಿಸಲಾಗಿದೆ. 15 ಜಿಲ್ಲೆಗಳಲ್ಲಿ ಸಮೀಕ್ಷೆ ನಡೆದ ಕುಟುಂಬಗಳ ಸಂಖ್ಯೆ 10ಕ್ಕಿಂತಲೂ ಕಡಿಮೆ. ವಿಜಯಪುರ, ಉತ್ತರ ಕನ್ನಡ, ಉಡುಪಿ, ದಾವಣಗೆರೆ ಜಿಲ್ಲೆಗಳಲ್ಲಿ ತಲಾ ಏಳು, ಕೊಪ್ಪಳ, ಬೀದರ್‌ನಲ್ಲಿ ತಲಾ ಆರು, ಬಳ್ಳಾರಿ, ಧಾರವಾಡದಲ್ಲಿ ತಲಾ ಐದು, ಬೆಂಗಳೂರು ಗ್ರಾಮಾಂತರ, ಯಾದಗಿರಿ, ಚಿಕ್ಕಬಳ್ಳಾಪುರದಲ್ಲಿ ತಲಾ ಮೂರು, ವಿಜಯನಗರ, ಕೋಲಾರ, ದಕ್ಷಿಣ ಕನ್ನಡ, ಚಾಮರಾಜನಗರ, ಬೆಳಗಾವಿ ಜಿಲ್ಲೆಗಳಲ್ಲಿ ತಲಾ ಎರಡು ಕುಟುಂಬಗಳ ಸಮೀಕ್ಷೆಯಷ್ಟೇ ನಡೆದಿದೆ. ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಗೆ ಸೇರಿದ ಆನೇಕಲ್ ತಾಲ್ಲೂಕಿನಲ್ಲಿ ಒಂದು ಕುಟುಂಬ, ಮೈಸೂರು ಹಾಗೂ ತುಮಕೂರಿನಲ್ಲಿ ತಲಾ ಒಂದು ಕುಟುಂಬದ ಸಮೀಕ್ಷೆಯಷ್ಟೇ ನಡೆದಿದೆ.

ನಗರ ಜಿಲ್ಲೆಯಲ್ಲಿ ಸಮೀಕ್ಷೆ ಪ್ರಾರಂಭ: ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ನಡೆಸುತ್ತಿರುವ ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆಯನ್ನು ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲೂ ಪ್ರಾರಂಭಿಸಲಾಗಿದೆ ಎಂದು ಜಿಲ್ಲಾಧಿಕಾರಿ ಜಿ.ಜಗದೀಶ ಅವರು ತಿಳಿಸಿದ್ದಾರೆ.

ಬೆಂಗಳೂರು ನಗರ ಜಿಲ್ಲೆಯಲ್ಲಿ ಒಟ್ಟು 12,43,000 ಕುಟುಂಬಗಳ ಸಮೀಕ್ಷೆಯು ಪ್ರಾರಂಭ ಆಗಿದೆ. ಸಮೀಕ್ಷಾದಾರರು/ಗಣತಿದಾರರನ್ನು ಆಯಾ ಬ್ಲಾಕ್‌ಗಳಿಗೆ ಈಗಾಗಲೇ ನಿಯೋಜಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಸಮೀಕ್ಷೆಯ ಮುನ್ನ ಬೆಸ್ಕಾಂ ವಿದ್ಯುತ್ ಮೀಟರ್ ರೀಡರ್‌ಗಳ ಆರ್.ಆರ್.ನಂಬರ್ ಮೂಲಕ ಜಿಯೋ ಟ್ಯಾಗಿಂಗ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗಿದ್ದು, ಮನೆಗಳ ಪಟ್ಟಿಯನ್ನು ಇಡಿಸಿಎಸ್ ಸರ್ವರ್‌ಗಳಲ್ಲಿ ಅಪ್‌ಲೋಡ್ ಮಾಡಲಾಗಿದೆ. ಅದರ ಪ್ರಕಾರವೇ ಮನೆ ಮನೆ ಸಮೀಕ್ಷೆಯೂ ನಡೆದಿದೆ ಎಂದು ಅವರು ಹೇಳಿದ್ದಾರೆ.

‘ಹಳ್ಳಿಕಾರ ಎಂದು ಬರೆಯಿಸಿ’

ರಾಜರಾಜೇಶ್ವರಿ ನಗರ: ರಾಜ್ಯದಲ್ಲಿ ನಡೆಯುತ್ತಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ (ಜಾತಿವಾರು ಸಮೀಕ್ಷೆ) ವೇಳೆ ಕಡ್ಡಾಯವಾಗಿ ‘ಹಳ್ಳಿಕಾರ’ ಎಂದು ಬರೆಯಿಸಬೇಕು ಎಂದು ರಾಜ್ಯ ಹಳ್ಳಿಕಾರ ಸಂಘದ ಉಪಾಧ್ಯಕ್ಷ ಕೆ.ಎಂ. ನಾಗರಾಜ್ ತಿಳಿಸಿದ್ದಾರೆ.

ರಾಜ್ಯ ಹಳ್ಳಿಕಾರ ಸಂಘ, ಆರ್.ಎಂ.ಆರ್ ಫೌಂಡೇಷನ್ ಟ್ರಸ್ಟ್ ಸಹಯೋಗದೊಂದಿಗೆ ಸುಂಕದಕಟ್ಟೆಯಲ್ಲಿ ಹಮ್ಮಿಕೊಂಡಿದ್ದ ಸಭೆಯಲ್ಲಿ ಮಾತನಾಡಿದ ಅವರು, ‘ನಮ್ಮದು ಸಣ್ಣ ಸಮುದಾಯವಾಗಿದೆ. ಪೈಪೋಟಿ ನಡೆಸಿ ಸವಲತ್ತು ಪಡೆಯಲು ಸಾಧ್ಯವಾಗುತ್ತಿಲ್ಲ. ಪ್ರವರ್ಗ 1ಕ್ಕೆ ಸೇರಬೇಕಾಗಿದ್ದು, ಅಪಪ್ರಚಾರಗಳಿಗೆ ಕಿವಿಗೊಡಬಾರದು. ಸಮುದಾಯದ ಮಕ್ಕಳಿಗೆ ಶಿಕ್ಷಣ ಮತ್ತು ಸರ್ಕಾರದ ಸವಲತ್ತು ಪಡೆಯಲು ಇದು ಸಹಕಾರಿಯಾಗುತ್ತದೆ’ ಎಂದರು.

ಪ್ರಧಾನ ಕಾರ್ಯದರ್ಶಿ ಶ್ರೀನಿವಾಸ ಮೂರ್ತಿ, ಖಜಾಂಚಿ ನಾರಾಯಣಪ್ಪ, ಮುಖಂಡರಾದ ಮಹಾಲಿಂಗಯ್ಯ, ರಂಗ-ಶ್ರೀರಂಗಸ್ವಾಮಿ, ಸತ್ಯಮೂರ್ತಿ, ಹಳ್ಳಿಕಾರ ಯುವ ಘಟಕದ ಅಧ್ಯಕ್ಷ ತಿಮ್ಮರಾಜು, ಪ್ರಧಾನ ಕಾರ್ಯದರ್ಶಿ ಜಗದೀಶ್, ನಿರ್ದೇಶಕರಾದ ನಾಗಣ್ಣ, ಪುಟ್ಟೇಗೌಡ, ನರಸಿಂಹೇಗೌಡ, ಕೃಷ್ಣಪ್ಪ, ವೆಂಕಟೇಶ್, ತಿಮ್ಮೇಗೌಡ, ನಾಗರಾಜ್, ನಾರಾಯಣಪ್ಪ, ರಾಜ್ಯ ಮಹಿಳಾ ಘಟಕದ ಅಧ್ಯಕ್ಷೆ ಸತ್ಯವತಿ ಮಾತನಾಡಿದರು.

ಸಮೀಕ್ಷೆ ಮುಂದೂಡಿ: ಖರ್ಗೆಗೆ ಮನವಿ

ಬೆಂಗಳೂರು: ‘ಸರಿಯಾದ ಸಿದ್ಧತೆ ಮಾಡಿಕೊಳ್ಳದೆ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಆರಂಭಿಸಲಾಗಿದೆ. ಹೀಗಾಗಿ, ಮೂರು ತಿಂಗಳ ಅವಧಿಗೆ ಮುಂದೂಡಬೇಕು’ ಎಂದು ಆಗ್ರಹಿಸಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಒಕ್ಕಲಿಗ ಮೀಸಲಾತಿ ಹೋರಾಟ ಸಮಿತಿ ಮನವಿ ಸಲ್ಲಿಸಿದೆ.

ಸದಾಶಿವನಗರದ ನಿವಾಸದಲ್ಲಿ ಖರ್ಗೆ ಅವರನ್ನು ಭೇಟಿ ಮಾಡಿದ ಒಕ್ಕಲಿಗ ನಾಯಕರು, ಸಮೀಕ್ಷೆ ಮುಂದೂಡುವಂತೆ ಆಗ್ರಹಿಸಿದರು. ಸಿಬ್ಬಂದಿಗೆ ಸೂಕ್ತ ತರಬೇತಿ ನೀಡಿಲ್ಲ. ಆ್ಯಪ್‌ನಲ್ಲಿ ಮಾಹಿತಿ ಅಪ್‌ಲೋಡ್ ಆಗುತ್ತಿಲ್ಲ ಎಂದು ದೂರಿದರು.

ಖರ್ಗೆ ಅವರ ಭೇಟಿ ಬಳಿಕ ಮಾತನಾಡಿದ ರಾಜ್ಯ ಒಕ್ಕಲಿಗ ಮೀಸಲಾತಿ ಹೋರಾಟ ಸಮಿತಿ ಪ್ರಧಾನ ಸಂಚಾಲಕ ಅಡಿಟರ್ ನಾಗರಾಜ್ ಯಲಚವಾಡಿ, ‘ಸಮೀಕ್ಷೆ ಮುಂದೂಡುವಂತೆ ಒಕ್ಕಲಿಗ ಸಮುದಾಯದ ಸಭೆಯಲ್ಲೂ ಮನವಿ ಮಾಡಲಾಗಿತ್ತು. ಆ ವಿಚಾರವನ್ನು ಖರ್ಗೆ ಅವರ ಗಮನಕ್ಕೆ ತರಲಾಗಿದೆ’ ಎಂದರು.

ಸುದ್ದಿ 2 ನಿಮಿಷ

ತಾಂತ್ರಿಕ ದೋಷ: ಹಳದಿ ಮಾರ್ಗದ ಮೆಟ್ರೊ ಸಂಚಾರ ವ್ಯತ್ಯಯ

ಬೆಂಗಳೂರು: ತಿಂಗಳ ಹಿಂದೆಯಷ್ಟೇ ಆರಂಭವಾಗಿರುವ ಹಳದಿ ಮಾರ್ಗದಲ್ಲಿ ಸೋಮವಾರ ಮೆಟ್ರೊ ರೈಲು ಸಂಚಾರದ ವೇಳೆ ತಾಂತ್ರಿಕ ದೋಷ ಕಂಡು ಬಂದ ಕಾರಣ ಪ್ರಯಾಣಿಕರು ಪರದಾಡಿದರು.

ಆರ್.ವಿ. ರಸ್ತೆಯಿಂದ ಬೊಮ್ಮಸಂದ್ರವರೆಗಿನ ಮಾರ್ಗದ ಮೆಟ್ರೊ ರೈಲು ಸಂಚಾರ ಸಂಜೆ 7ಕ್ಕೆ ಆರಂಭವಾಗಬೇಕಿತ್ತು. ಆದರೆ, ಆರ್.ವಿ.ರಸ್ತೆ ಮೆಟ್ರೊ ನಿಲ್ದಾಣದಲ್ಲಿ ಏಳು ಗಂಟೆ ಮೂರು ನಿಮಿಷವಾದರೂ ರೈಲು ಸಂಚಾರ ಶುರುವಾಗಲಿಲ್ಲ.

ತಾಂತ್ರಿಕ ದೋಷದಿಂದ ಉಂಟಾದ ಸಮಸ್ಯೆಯಿಂದಾಗಿ ಪ್ರಯಾಣಿಕರು ಮೆಟ್ರೊದಲ್ಲಿಯೇ ಇರಬೇಕಾಯಿತು. ಸಂಚಾರ ವಿಳಂಬವಾಗಿದ್ದರಿಂದ ಕೆಲವರು ಹೊರ ನಡೆದು ಪರ್ಯಾಯ ವ್ಯವಸ್ಥೆ ಮಾಡಿಕೊಂಡರು. ಕೆಲ ಹೊತ್ತಿನ ನಂತರ ಸಂಚಾರ ಪುನರಾರಂಭಗೊಂಡಿತು.

‘ಸಂಜೆ 7ರಿಂದ ರಾತ್ರಿ 9ರವರೆಗೆ ಹಳದಿ ಮಾರ್ಗದಲ್ಲಿ ಮೆಟ್ರೊ ರೈಲು ಸಂಚಾರದಲ್ಲಿ ವ್ಯತ್ಯಯವಾಯಿತು. ರಾತ್ರಿ 9ರ ಹೊತ್ತಿಗೆ ಸಂಚಾರ ಸಹಜ ಸ್ಥಿತಿಗೆ ಮರಳಿತು. ಈ ತೊಂದರೆಗೆ ವಿಷಾದಿಸುತ್ತೇವೆ’ ಎಂದು ಬಿಎಂಆರ್‌ಸಿಎಲ್ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶೌಚಾಲಯವೆಂದು ಕಾಕ್‌ಪಿಟ್ ಪ್ರವೇಶಿಸಿದ ಪ್ರಯಾಣಿಕ

ದೇವನಹಳ್ಳಿ (ಬೆಂಗಳೂರು ಗ್ರಾಮಾಂತರ ಜಿಲ್ಲೆ): ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಸೋಮವಾರ ಬೆಳಿಗ್ಗೆ ವಾರಾಣಸಿಗೆ ಹೊರಟಿದ್ದ ಏರ್ ಇಂಡಿಯಾ ವಿಮಾನದಲ್ಲಿ ಪ್ರಯಾಣಿಕರೊಬ್ಬರು ಶೌಚಾಲಯವೆಂದು ತಪ್ಪಾಗಿ ಭಾವಿಸಿ ಕಾಕ್‌ಪಿಟ್ (ಪೈಲಟ್ ಕ್ಯಾಬಿನ್) ಪ್ರವೇಶಿಸಲು ಯತ್ನಿಸಿದ್ದಾರೆ.

ಬೆಳಿಗ್ಗೆ 8 ಗಂಟೆಗೆ ಬೆಂಗಳೂರಿನಿಂದ ವಾರಾಣಸಿಗೆ ಹೊರಟಿದ್ದ ಏರ್ ಇಂಡಿಯಾ ಎಕ್ಸ್‌ಪ್ರೆಸ್ ವಿಮಾನ IX 1086ರಲ್ಲಿ ಮಾರ್ಗಮಧ್ಯೆ ಈ ಅಚಾತುರ್ಯ ಸಂಭವಿಸಿದೆ. ಇದನ್ನು ಗಮನಿಸಿದ ವಿಮಾನ ಸಿಬ್ಬಂದಿ ಕೂಡಲೇ ಪ್ರಯಾಣಿಕನನ್ನು ಕಾಕ್‌ಪಿಟ್‌ನಿಂದ ಶೌಚಾಲಯಕ್ಕೆ ಕರೆದೊಯ್ದಿದ್ದಾರೆ.

‘ಮೊದಲ ಬಾರಿಗೆ ವಿಮಾನದಲ್ಲಿ ಪ್ರಯಾಣಿಸುತ್ತಿದ್ದ ಕಾರಣ ಮಾಹಿತಿ ಕೊರತೆಯಿಂದ ಪ್ರಯಾಣಿಕ ಕಾಕ್‌ಪಿಟ್ ಬಾಗಿಲನ್ನು ಶೌಚಾಲಯ ಬಾಗಿಲು ಎಂದು ತಪ್ಪಾಗಿ ಭಾವಿಸಿ ತೆರೆಯಲು ಯತ್ನಿಸಿದ್ದಾರೆ. ಇದು ಉದ್ದೇಶಪೂರ್ವಕ ಕೃತ್ಯ ಅಲ್ಲ’ ಎಂದು ಮೂಲಗಳು ತಿಳಿಸಿವೆ.

‘ವಾರಾಣಸಿಗೆ ಹೊರಟಿದ್ದ ವಿಮಾನದಲ್ಲಿ ಪ್ರಯಾಣಿಸುತ್ತಿದ್ದ ವ್ಯಕ್ತಿ ಮೂತ್ರ ವಿಸರ್ಜನೆಗಾಗಿ ಶೌಚಾಲಯ (ಲ್ಯಾವೆಟರಿ) ಹುಡುಕುತ್ತ ಕಾಕ್‌ಪಿಟ್ ಬಳಿ ತೆರಳಿದ ವರದಿ ಲಭ್ಯವಾಗಿದೆ. ಇದು ಭದ್ರತಾ ಲೋಪವಲ್ಲ. ವಿಮಾನ ವಾರಾಣಸಿಯಲ್ಲಿ ಇಳಿದ ನಂತರ ಭದ್ರತಾ ಸಂಸ್ಥೆಗೆ ಘಟನೆಯ ಮಾಹಿತಿ ನೀಡಲಾಗಿದೆ. ತನಿಖೆ ನಡೆಯುತ್ತಿದೆ’ ಎಂದು ಏರ್ ಇಂಡಿಯಾ ಪ್ರಕಟಣೆ ನೀಡಿದೆ.

ನಗರ ಸಾರಿಗೆಗಾಗಿ ‘ಡಬಲ್ ದಿ ಬಸ್’ ಅಭಿಯಾನ

‘ವಿಶ್ವ ಕಾರು ಮುಕ್ತ ದಿನ’ದಂದೇ ದೇಶದಾದ್ಯಂತ ಮೂರು ದಿನಗಳ ಆಂದೋಲನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರಗಳಲ್ಲಿ ಸಂಚಾರ ದಟ್ಟಣೆ, ಪರಿಸರ ಮಾಲಿನ್ಯ ತಗ್ಗಿಸಿ ಸುರಕ್ಷತೆಯಿಂದ ಜನರು ಸಂಚರಿಸಲು ಪೂರಕವಾಗುವಂತೆ ದೇಶದಾದ್ಯಂತ ಆರಂಭವಾಗಿರುವ ಡಬಲ್ ದಿ ಬಸ್ ಎನ್ನುವ ಮೂರು ದಿನದ ಅಭಿಯಾನ ನಗರದಲ್ಲೂ ಶುರುವಾಗಿದೆ.

ಸೋಮವಾರ ‘ವಿಶ್ವ ಕಾರು ಮುಕ್ತ ದಿನ’ವೂ ಹೌದು. ಈ ದಿನವೇ ಶುರುವಾದ ಆಂದೋಲನದಲ್ಲಿ, ಬಸ್‌ಗಳು ಕೇವಲ ಸಾರಿಗೆ ಸಾಧನಗಳಲ್ಲ. ಅವು ಸಮಾನತೆ, ಹವಾಮಾನ ಸುಸ್ಥಿರತೆ ಮತ್ತು ದಟ್ಟಣೆ ಮುಕ್ತವಾಗಿ ನಗರಗಳು ರೂಪುಗೊಳ್ಳಲು ಸಹಕಾರಿಯಾಗಲಿವೆ ಎನ್ನುವ ಅಂಶವನ್ನು ಪ್ರಯಾಣಿಕರಿಗೆ ತಿಳಿಸಿಕೊಡಲಾಯಿತು.

ನಗರದ ಕಮ್ಮನಹಳ್ಳಿ, ಜಲವಾಯು ವಿಹಾರ ಮತ್ತು ಅಗರ ಬಸ್ ನಿಲ್ದಾಣದಲ್ಲಿ ಪ್ರಯಾಣಿಕರು, ನಾಗರಿಕರು ಮತ್ತು ವಿವಿಧ ನಾಗರಿಕ ಸೇವಾ ಸಂಸ್ಥೆಗಳ ಸದಸ್ಯರು ಫಲಕಗಳನ್ನು ಹಿಡಿದು ಡಬಲ್ ದಿ ಬಸ್ ಜಾಗೃತಿ ಮೂಡಿಸಿದರು.

ಅಗರ ಬಸ್ ನಿಲ್ದಾಣ ಬಳಿ ಸೋಮವಾರ ಡಬಲ್ ದಿಬಸ್ ಅಭಿಯಾನ ನಡೆಯಿತು

‘ಬಿಎಂಟಿಸಿಯಲ್ಲಿ ನಿತ್ಯ 42 ಲಕ್ಷಕ್ಕೂ ಹೆಚ್ಚು ಮಂದಿ ಸಂಚರಿಸುತ್ತಾರೆ. ಆದರೆ, ಬಸ್‌ಗಳ ಸಂಖ್ಯೆ ಕಡಿಮೆ ಇದೆ. ಸರ್ಕಾರ ಬಸ್‌ಗಳ ಸಂಖ್ಯೆಯನ್ನು ದ್ವಿಗುಣಗೊಳಿಸಿ ಪ್ರಯಾಣಿಕರಿಗೆ ಸುರಕ್ಷಿತ, ವಿಶ್ವಾಸಾರ್ಹ, ಪರಿಸರ-ಸ್ನೇಹಿ ಸಾರಿಗೆ ವ್ಯವಸ್ಥೆ ಒದಗಿಸಬೇಕು’ ಎಂದು ಅಭಿಯಾನದಲ್ಲಿ ಭಾಗಿಯಾಗಿದ್ದ ಎಚ್‌ಎಸ್‌ಆರ್ ಲೇಔಟ್ ಸಮುದಾಯ ಕಾರ್ಯಪಡೆಯ ಸ್ವಯಂ ಸೇವಕ ಸಚಿನ್ ಪಂಡಿತ್ ಹೇಳಿದರು.

ನೀವೂ ಭಾಗಿಯಾಗಿ

ಹೆಚ್ಚಿನ ವಿವರಗಳ ಜತೆಗೆ ಅಭಿಯಾನದಲ್ಲಿ ಭಾಗಿಯಾಗಲು https://doublethebus.in/ ಬಳಸಬಹುದು.

ಕೇಂದ್ರ ನಗರಾಭಿವೃದ್ಧಿ ಹಾಗೂ ಸಾರಿಗೆ ಸಚಿವಾಲಯ ಸಮೀಕ್ಷೆ ನಡೆಸಿ ನಿಗದಿಪಡಿಸಿರುವ ಮಾನದಂಡದ ಪ್ರಕಾರ ಪ್ರತಿ ನಗರದಲ್ಲಿ 1 ಲಕ್ಷ ಪ್ರಯಾಣಿಕರಿಗೆ ಕನಿಷ್ಠ 60 ನಗರ ಸಾರಿಗೆ ಬಸ್‌ಗಳಾದರೂ ಇರಬೇಕು. ಭಾರತದಲ್ಲಿ ಈ ಮಾನದಂಡದಂತೆ ಯಾವ ನಗರದಲ್ಲೂ ಇಷ್ಟೊಂದು ಬಸ್‌ಗಳೇ ಇಲ್ಲ. ಎಲ್ಲಾ ನಗರಗಳ ಸರಾಸರಿ ಬಸ್ ಸೇವೆಯ ಪ್ರಮಾಣ 12ರಷ್ಟು ಮಾತ್ರ ಇದೆ.

2031ರ ಒಳಗೆ ನಗರ ಸಾರಿಗೆ ಬಸ್‌ಗಳನ್ನು ಎರಡು ಪಟ್ಟು ಹೆಚ್ಚಿಸಬೇಕು ಎನ್ನುವ ಆಶಯದೊಂದಿಗೆ ವಿವಿಧ ಸ್ವಯಂ ಸೇವಾ ಸಂಘಟನೆಗಳು ಡಬಲ್ ದಿ ಬಸ್ ಎನ್ನುವ ಅಭಿಯಾನವನ್ನು ಪ್ರಮುಖ ನಗರಗಳ ಜತೆಗೆ ಸಾಮಾಜಿಕ ಮಾಧ್ಯಮದ ಮೂಲಕವೂ ನಡೆಸಲಾಗುತ್ತಿದೆ.

ಸಚಿವ ಜಮೀರ್ ವಿಚಾರಣೆ ನಡೆಸಿದ ಲೋಕಾಯುಕ್ತ ಪೊಲೀಸರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆದಾಯಕ್ಕಿಂತ ಅಧಿಕ ಆಸ್ತಿ ಹೊಂದಿರುವ ಆರೋಪಕ್ಕೆ ಸಂಬಂಧಿಸಿದಂತೆ ವಸತಿ ಸಚಿವ ಬಿ.ಝಡ್. ಜಮೀರ್ ಅಹಮದ್ ಖಾನ್ ಅವರನ್ನು ಸೋಮವಾರ ಲೋಕಾಯುಕ್ತ ಪೊಲೀಸರು ವಿಚಾರಣೆಗೆ ಒಳಪಡಿಸಿದರು.

ಬೆಳಿಗ್ಗೆ 10.30ಕ್ಕೆ ಡಿವೈಎಸ್‌ಪಿಯಾದ ತನಿಖಾಧಿಕಾರಿ ಸತೀಶ್ ಕುಮಾರ್ ಎದುರು ಕೆಲ ದಾಖಲೆಗಳ ಸಮೇತ ಜಮೀರ್ ವಿಚಾರಣೆಗೆ ಹಾಜರಾಗಿದ್ದರು.

ಸತೀಶ್ ಕುಮಾರ್ ನೇತೃತ್ವದ ತಂಡ ಎರಡು ತಾಸು ಹಲವು ಪ್ರಶ್ನೆಗಳನ್ನು ಕೇಳಿ, ಹೇಳಿಕೆಯನ್ನು ದಾಖಲಿಸಿಕೊಂಡಿತು. ಅಗತ್ಯವಿದ್ದರೆ ಮತ್ತೊಮ್ಮೆ ವಿಚಾರಣೆಗೆ ಕರೆಯಲಾಗುತ್ತದೆ ಎಂದು ತಿಳಿಸಲಾಗಿದೆ ಎಂದು ಲೋಕಾಯುಕ್ತ ಮೂಲಗಳು ತಿಳಿಸಿವೆ. ಜಮೀರ್ ಅಹಮದ್ ಖಾನ್ ಜತೆ ಹಣಕಾಸಿನ ವ್ಯವಹಾರ ನಡೆಸಿರುವುದಕ್ಕೆ ಸಂಬಂಧಿಸಿದಂತೆ ಉದ್ಯಮಿ ಕೆಜಿಎಫ್ ಬಾಬು, ನಟಿ ರಾಧಿಕಾ ಕುಮಾರಸ್ವಾಮಿ ಅವರನ್ನು ಲೋಕಾಯುಕ್ತ ಪೊಲೀಸರು ವಿಚಾರಣೆ ನಡೆಸಿ ಹೇಳಿಕೆ ದಾಖಲಿಸಿಕೊಂಡಿದ್ದರು.

ಜಮೀರ್

ಮತ್ತೊಂದೆಡೆ, ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಸಚಿವ ದಿನೇಶ್ ಗುಂಡೂರಾವ್ ಅವರಿಗೂ ನೋಟಿಸ್ ನೀಡಿ, ವಿಚಾರಣೆಗೆ ಹಾಜರಾಗುವಂತೆ ಲೋಕಾಯುಕ್ತ ಪೊಲೀಸರು ಸೂಚಿಸಿದ್ದಾರೆ.

ಏನಿದು ಪ್ರಕರಣ?: ಐಎಂಎ ಕಂಪನಿಯ ಬಹುಕೋಟಿ ವಂಚನೆ ಪ್ರಕರಣ ಸಂಬಂಧ 2019ರಲ್ಲಿ ಜಾರಿ ನಿರ್ದೇಶನಾಲಯದ (ಇ.ಡಿ.) ಅಧಿಕಾರಿಗಳು ಜಮೀರ್ ಅಹಮದ್ ಖಾನ್ ಮನೆ ಹಾಗೂ ಕಚೇರಿಗಳ ಮೇಲೆ ದಾಳಿ ನಡೆಸಿದ್ದರು.

ಈ ವೇಳೆ ಜಮೀರ್ ಹಲವರೊಂದಿಗೆ ಹಣಕಾಸು ವ್ಯವಹಾರ ನಡೆಸಿರುವುದು ಗೊತ್ತಾಗಿತ್ತು. ಬಳಿಕ ಇ.ಡಿ. ವರದಿ ಆಧರಿಸಿ ಅಂದಿನ ಭ್ರಷ್ಟಾಚಾರ ನಿಗ್ರಹ ದಳವು(ಎಸಿಬಿ) ಜಮೀರ್ ವಿರುದ್ಧ ಅಕ್ರಮ ಆಸ್ತಿ ಸಂಪಾದನೆ ಆರೋಪದಡಿ ಪ್ರಕರಣ ದಾಖಲಿಸಿತ್ತು. ಬಳಿಕ ಎಸಿಬಿ ರದ್ದುಗೊಂಡ ಕಾರಣದಿಂದ ಈ ಪ್ರಕರಣವು ಲೋಕಾಯುಕ್ತಕ್ಕೆ ವರ್ಗಾವಣೆಯಾಗಿತ್ತು.

ಅಂಬರೀಷ್‌ಗೂ ‘ಕರ್ನಾಟಕ ರತ್ನ’ ನೀಡಿ

ಆನೇಕಲ್: ರಾಜ್ಯ ಸರ್ಕಾರ ನಟ ಅಂಬರೀಷ್ ಅವರಿಗೂ ಇದೇ ವರ್ಷ ಕರ್ನಾಟಕ ರತ್ನ ನೀಡಬೇಕು ಎಂದು ಬಿಜೆಪಿ ನಾಯಕಿ, ನಟಿ ತಾರಾ ಅನೂರಾಧ ಒತ್ತಾಯಿಸಿದ್ದಾರೆ.

ಹಲವೆಡೆ ವಿದ್ಯುತ್ ವ್ಯತ್ಯಯ ಇಂದು

ಬೆಂಗಳೂರು: ಕೆಪಿಟಿಸಿಎಲ್ ತುರ್ತು ನಿರ್ವಹಣಾ ಕಾಮಗಾರಿ ಕೈಗೊಂಡಿರುವ ಕಾರಣ ಈ ಕೆಳಕಂಡ ಪ್ರದೇಶಗಳಲ್ಲಿ ಮಂಗಳವಾರ ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ಪ್ರದೇಶಗಳು: ಎ.ಕೆ.ಆಶ್ರಮ ರಸ್ತೆ, ದೇವೇಗೌಡ ರಸ್ತೆ, ಆರ್.ಟಿ.ನಗರ 1ನೇ ಬ್ಲಾಕ್, ತಿಮ್ಮಯ್ಯ ಗಾರ್ಡನ್, ಮೋದಿ ಗಾರ್ಡನ್, ಮಿಲಿಟರಿ ಏರಿಯಾ, ವೀರಣ್ಣಪಾಳ್ಯ, ಲುಂಬಿನಿ ಗಾರ್ಡನ್, ಬಿಡಬ್ಲ್ಯುಎಸ್‌ಎಸ್‌ಬಿ ಶುದ್ಧೀಕರಣ ಘಟಕ, ಮರಿಯಣ್ಣಪಾಳ್ಯ, ಕಾಫಿ ಬೋರ್ಡ್ ಲೇಔಟ್, ಕೆಂಪಾಪುರ, ದಾಸರಹಳ್ಳಿ, ಮಾರುತಿ ಲೇಔಟ್, ಭುವನೇಶ್ವರಿ ನಗರ, ಬಿಇಎಲ್ ಕಾರ್ಪೊರೇಟ್ ಕಚೇರಿ, ಚಾಣಕ್ಯ ಲೇಔಟ್, ನಾಗವಾರ, ಎಂ.ಎಸ್. ರಾಮಯ್ಯ ನಾರ್ತ್ ಸಿಟಿ, ಥಣಿಸಂದ್ರ ಮುಖ್ಯ ರಸ್ತೆ, ಆಶೀರ್ವಾದ ನಗರ, ಅಮರ್ ಜ್ಯೋತಿ ಲೇಔಟ್, ರಾಚೇನಹಳ್ಳಿ ಮುಖ್ಯ ರಸ್ತೆ, ಮೆಸ್ತ್ರಿಪಾಳ್ಯ, ರಾಯಲ್ ಎನ್‌ಕ್ಲೇವ್, ಶ್ರೀರಾಂಪುರ ಗ್ರಾಮ, ವಿಎಚ್‌ಬಿಸಿಎಸ್ ಲೇಔಟ್, ವೀರಣ್ಣಪಾಳ್ಯ, ಜೋಜಪ್ಪ ಲೇಔಟ್, ಗೋವಿಂದಪುರ 17ನೇ ಕ್ರಾಸ್, ವೀರಣ್ಣಪಾಳ್ಯ ಮುಖ್ಯ ರಸ್ತೆ, ಬೈರಪ್ಪ ಲೇಔಟ್ ಮತ್ತು ಸುತ್ತಮುತ್ತಲ ಪ್ರದೇಶಗಳು.

ಶೈಲಜಾಗೆ ‘ಟಿ.ಗಿರಿಜಾ ಸಾಹಿತ್ಯ ದತ್ತಿ ಪ್ರಶಸ್ತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ (ಕಸಾಪ) ನೀಡುವ ‘ಟಿ.ಗಿರಿಜಾ ಸಾಹಿತ್ಯ ದತ್ತಿ ಪ್ರಶಸ್ತಿ’ಗೆ ಜವಾಹರ್‌ಲಾಲ್ ನೆಹರೂ ತಾರಾಲಯದ ನಿವೃತ್ತ ನಿರ್ದೇಶಕರೂ ಆಗಿರುವ ವಿಜ್ಞಾನ ಬರಹಗಾರ್ತಿ ಬಿ.ಎಸ್. ಶೈಲಜಾ ಆಯ್ಕೆಯಾಗಿದ್ದಾರೆ.

ಬಿ.ಎಸ್.ಶೈಲಜಾ

ಕಸಾಪ ಅಧ್ಯಕ್ಷ ಮಹೇಶ ಜೋಶಿ ನೇತೃತ್ವದ ಸಮಿತಿ ಈ ಆಯ್ಕೆ ಮಾಡಿದೆ. ಪ್ರಶಸ್ತಿಯು ₹15 ಸಾವಿರ ನಗದು ಒಳಗೊಂಡಿದೆ. ಗಿರಿಜಾ ಅವರ ಹೆಸರಿನಲ್ಲಿ ಸ್ಥಾಪಿಸಿರುವ ಈ ಪ್ರಶಸ್ತಿಯನ್ನು ಸಾಹಿತ್ಯ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಿದ ಲೇಖಕಿ ಯರಿಗೆ ಪ್ರತಿವರ್ಷ ನೀಡಲಾಗುತ್ತಿದೆ. ಬಿ.ಎಸ್. ಶೈಲಜಾ ಅವರು ಕನ್ನಡದಲ್ಲಿ ವಿಜ್ಞಾನವನ್ನು ಜನಪ್ರಿಯಗೊಳಿಸುವಲ್ಲಿ ಮುಖ್ಯಪಾತ್ರ ವಹಿಸಿದ್ದಾರೆ. ಕನ್ನಡದಲ್ಲಿ 600 ಮತ್ತು ಇಂಗ್ಲಿಷ್‌ನಲ್ಲಿ 200ಕ್ಕೂ ಹೆಚ್ಚು ಲೇಖನ ಬರೆದಿದ್ದು,150 ಸಂಶೋಧನಾ ಪ್ರಬಂಧ ಮಂಡಿಸಿದ್ದಾರೆ. ಕನ್ನಡಕ್ಕೆ ‘ಖಗೋಳ ದರ್ಶನ’ ಬೃಹತ್ ಸಂಪುಟ ನೀಡಿದ್ದಾರೆ.

‘ಪೀಠಕ್ಕೂ, ಟ್ರಸ್ಟಿಗೂ ಸಂಬಂಧ ಇಲ್ಲ’

ಕೂಡಲಸಂಗಮ: ‘ನನ್ನನ್ನು ಉಚ್ಚಾಟಿಸುವ ಅಧಿಕಾರ ಜಗತ್ತಿನಲ್ಲಿ ಯಾರಿಗೂ ಇಲ್ಲ. ಭಕ್ತರ ಹೃದಯದಲ್ಲಿ ಪೀಠ ಕಟ್ಟಿರುವೆ. ಪೀಠಕ್ಕೂ, ಟ್ರಸ್ಟಿಗೂ ಯಾವುದೇ ಸಂಬಂಧ ಇಲ್ಲ’ ಎಂದು ಲಿಂಗಾಯತ ಪಂಚಮಸಾಲಿ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ ಹೇಳಿದರು.

ಕೂಡಲಸಂಗಮದ ಸಂಗಮೇಶ್ವರ ದೇಗುಲ ಆವರಣದಲ್ಲಿ ಸೋಮವಾರ ಖಂಡನಾ ಸಭೆ ಬಳಿಕ ಮಾತನಾಡಿದ ಅವರು, ‘ಧರ್ಮ ಗುರುಗಳನ್ನು ಉಚ್ಚಾಟಿಸುವ ಅಧಿಕಾರ ಇರುವುದು ದೇವರಿಗೆ ಮತ್ತು ಭಕ್ತರಿಗೆ ಮಾತ್ರ. ಉಚ್ಚಾಟನೆ ಏಕಪಕ್ಷೀಯ, ಕಾನೂನು ಬಾಹಿರ’ ಎಂದರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560 020.

ನಂ: ಬೆಂಅಪ್ರಾ/ನಯೋಸ/CLU-132/2413/2025–26 ದಿನಾಂಕ: 22.09.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗುಂ	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಎಂ. ಗೋಪಾಲ್ ರೆಡ್ಡಿ ಮತ್ತು ಶ್ರೀ ಎಂ. ನಾಗರಾಜ್ ರೆಡ್ಡಿ ರವರು ಸಿಂಗನಾಯಕನಹಳ್ಳಿ, ನಂ. 7 ಡ್ರೀಮ್ ಮಿಡಿಯ್ಸು, ಯಲಹಂಕ ತಾಲ್ಲೂಕು, ಬೆಂಗಳೂರು ಉತ್ತರ, ಬೆಂಗಳೂರು–560 064	ಯಲಹಂಕ	ಯಲಹಂಕ	ಸಿಂಗ ನಾಯಕನಹಳ್ಳಿ	85/1	1ಎ–28.02ಗುಂ	ವ್ಯವಸಾಯ	ವಸತಿ
					85/5	1ಎ–28.02ಗುಂ		
					ಒಟ್ಟು	3ಎ–16.04ಗುಂ		

ಷರಾ: ಅರ್ಜಿದಾರರು ಪ್ರಶ್ನಿತ ಜಮೀನುಗಳನ್ನು ವಸತಿ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಮಾಡುವುದರಿಂದ ಸದರಿ ಜಮೀನಿನ ಪರಿಸರದಲ್ಲಿ ವಸತಿ ಬೆಳವಣಿಗೆಗೆ ಅತಿ ಹೆಚ್ಚು ಬೇಡಿಕೆ ಇದ್ದು, ಸದರಿ ಪ್ರದೇಶವನ್ನು ವಸತಿ ಉಪಯೋಗಕ್ಕೆ ಭೂಉಪಯೋಗ ಬದಲಾವಣೆಗೊಂಡ ನಂತರ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಯೋಜನಾಬದ್ಧ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದರಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿಸಿದಂತಾಗುತ್ತದೆ. ಸದರಿ ಪ್ರದೇಶದಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದರಿಂದ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ ಹಾಗೂ ಸಾರ್ವಜನಿಕ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು ‘ವ್ಯವಸಾಯ ವಲಯ’ ದಿಂದ ‘ವಸತಿ’ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ರೈಲ್ವೆ ಸಚಿವಾಲಯ

(ನೈಋತ್ಯ ರೈಲ್ವೆ ನಿರ್ಮಾಣ ಸಂಸ್ಥೆ)

ಅಧಿಸೂಚನೆ

ಬೆಂಗಳೂರು, 11 ಸೆಪ್ಟೆಂಬರ್ 2025

S.O.4155(E)--ರೈಲ್ವೆ ಕಾಯ್ದೆ 1989 (1989ರ 24) ರ ಕಲಂ 20ಇ ರ ಉಪಕಲಂ (1) ರಡಿಯಲ್ಲಿ ನೀಡಲಾದ ಅಧಿಕಾರವನ್ನು ಚಲಾಯಿಸಿ, ವಿಶೇಷ ಭೂಸ್ವಾಧೀನಾಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರ, ತುಮಕೂರು ರವರು ವರದಿಯನ್ನು ಸಲ್ಲಿಸಿರುವಂತೆ, ರೈಲ್ವೆ ಕಾಯ್ದೆ – 1989 ರ ಕಲಂ 20ಎ ರಲ್ಲಿನ ಉಪಕಲಂ (1) ರ ಅಧಿಸೂಚನೆ ಸಂಖ್ಯೆಯ 2698 ದಿನಾಂಕ 16.06.2025 ರಂದೆ ತಯಾರಿಸಿರುವ ಅಧಿಸೂಚನೆಯಲ್ಲಿ ವಿವರಿಸಿರುವಂತೆ ಎಲ್.ಸಿ. 38 ಬಡ್ಡಿಹಳ್ಳಿ ಗೇಟ್ ರಲ್ಲಿ ಸ್ವಾಧೀನಪಡಿಸಿಕೊಳ್ಳಲಾಗುವುದು.

ಯಾವುದೇ ವ್ಯಕ್ತಿಯು ಸದರಿ ಅಧಿಸೂಚನೆಗೆ ಸಂಬಂಧಿಸಿದಂತೆ ರೈಲ್ವೆ ಕಾಯ್ದೆ 1989 ರ ಕಲಂ 20ಎ ರಡಿ ಹೊರಡಿಸಿರುವ ಅಧಿಸೂಚನೆಯನ್ವಯ ಆಕ್ಷೇಪಣೆ ಸಲ್ಲಿಸಲು 30 ದಿನಗಳು ಕಾಲಾವಕಾಶವಿರುತ್ತದೆ. ಯಾವುದೇ ಆಕ್ಷೇಪಣೆಗಳು ಸ್ವೀಕೃತವಾಗಿರುವದಿಲ್ಲ ಹಾಗೂ ದಿನಾಂಕ 25.07.2025 ರಂದು ನಿಗದಿಪಡಿಸಿದ್ದ ವಿಚಾರಣೆಗೆ ಯಾವುದೇ ಭೂಮಾಲೀಕರು ಹಾಜರಾಗಿರುವುದಿಲ್ಲ.

ವಿಶೇಷ ಭೂಸ್ವಾಧಿನಾಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರ, ತುಮಕೂರು–ರಾಯದುರ್ಗ ಹಾಗೂ ತುಮಕೂರು–ದಾವಣಗೆರೆ ರೈಲ್ವೆ ರವರಿಗೆ ಎಲ್.ಸಿ. 38ರ ಬಡ್ಡಿಹಳ್ಳಿ ಗೇಟ್ ಗೆ ಸಂಬಂಧಿಸಿದ ಆಕ್ಷೇಪಣೆಗಳನ್ನು ಲಿಖಿತ ಮೂಲಕವಾಗಲೀ ಅಥವಾ ವಕೀಲರ ಮುಖಾಂತರವಾಗಲೀ ಸಲ್ಲಿಸುವ ಅವಕಾಶವಿದ್ದು, ಸದರಿ ಆಕ್ಷೇಪಣೆಗಳನ್ನು ಸಕ್ಷಮ ಪ್ರಾಧಿಕಾರಿಯು ಅನುಮತಿಸಬಹುದು ಹಾಗೂ ನಿರಾಕರಿಸಬಹುದು.

ಸಕ್ಷಮ ಪ್ರಾಧಿಕಾರವು ರೈಲ್ವೆ ಕಾಯ್ದೆ 1989 ರ ಕಲಂ 20ಡಿ(2) ರಂತೆ ನೀಡಿರುವ ಆದೇಶವು ಅಂತಿಮವಾಗಿರುತ್ತದೆ.

ಈ ಸಂಬಂಧ 20ಇ ಅಧಿಸೂಚನೆ ತಯಾರಿಸಿದ್ದು, ಅಧಿಸೂಚನೆಗೆ ಸಂಬಂಧಿಸಿದ ನಕ್ಷೆ ಹಾಗೂ ಜಮೀನಿನ ವಿವರಗಳನ್ನು ಸಕ್ಷಮ ಪ್ರಾಧಿಕಾರ ಹಾಗೂ ವಿಶೇಷ ಭೂಸ್ವಾಧೀನಾಧಿಕಾರಿ, ತುಮಕೂರು–ರಾಯದುರ್ಗ ಹಾಗೂ ತುಮಕೂರು–ದಾವಣಗೆರೆ ರೈಲ್ವೆ ಯೋಜನೆ, ತುಮಕೂರು ರವರ ಕಾರ್ಯಾಲಯದಲ್ಲಿ ಪರಿಶೀಲಿಸಬಹುದು.

ಅನುಸೂಚಿ

ಲೆವೆಲ್ ಕ್ರಾಸಿಂಗ್ ಸಂಖ್ಯೆ 38 (ಬಡ್ಡಿಹಳ್ಳಿ ಗೇಟ್) ರಲ್ಲಿ ದ್ವಿಪಥ ಮಾರ್ಗದ ಮೇಲ್ಸೇತುವೆ ಹಾಗೂ ಸರ್ವೀಸ್ ರಸ್ತೆ ನಿರ್ಮಾಣಕ್ಕೆ ಸಂಬಂಧಿಸಿದ ಜಮೀನಿನ ವಿವರ ಈ ಕೆಳಕಂಡಂತಿದೆ.

ಜಿಲ್ಲೆ: ತುಮಕೂರು **ಹೋಬಳಿ:** ಕಸಬಾ

ತಾಲ್ಲೂಕು: ತುಮಕೂರು **ಗ್ರಾಮ:** ದೇವರಾಯಪಟ್ಟಣ (ಕ್ಯಾತಸಂದ್ರ ಪ್ರದೇಶ)

ಕ್ರ. ಸಂ.	ಸ. ಸಂ.	ಫಲಾನುಭವಿ	ವಿಸ್ತಾರ (ಎಕರೆಗಳಲ್ಲಿ – ಗುಂಟಾದಲ್ಲಿ) ಒಟ್ಟು (ಎ–ಗುಂ)	ಎ ಖರಾಬ್ (ಎ–ಗುಂ)	ಬಿ ಖರಾಬ್ (ಎ–ಗುಂ)	ಸಮತೋಲನ (ಎ–ಗುಂ)	ಭೂಮಿಯ ವರ್ಗೀಕರಣ
1.	104/2	ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ, ಮಹಾನಿರ್ದೇಶಕರು	0–07	–	–	0–07	ಒಣ
2.	105	ಸರ್ಕಾರ ಭೂಮಿ	0–06	–	0–06	–	ಸರ್ಕಾರ ಭೂಮಿ
3.	107/2	ಕೆ.ಎಸ್. ಶಾಂತಯ್ಯ	0–13	–	0–00 1/4	0–12 3/4	ಒಣ
4.	107/3	ಕೆ.ಎಸ್. ಶಾಂತಯ್ಯ, ಗಂಗಾಂಭಿಕಾ ಕೋಂ ದಿವಂಗತ ಉಮೇಶ್ (ಜಂಟಿ)	0–02	–	–	0–02	ಒಣ
		ಒಟ್ಟು	0–28	–	0–06 1/4	0–21 3/4	–

ನಂ. ಡಬ್ಲ್ಯೂ.271/ಸಿಎನ್/ಬಿಎನ್‌ಸಿ/2025–26/ಲ್ಯಾಂಡ್ ಎಎಸ್‌ಆರ್‌ಪಿ/1727

ಸಹಿ/–
(ಪ್ರದೀಪ್ ಪುರಿ)
ಉಪ ಮುಖ್ಯ ಇಂಜಿನಿಯರ್–3/ನಿರ್ಮಾಣ
ನೈಋತ್ಯ ರೈಲ್ವೆ, ಬೆಂಗಳೂರು ಕಂಟೋನ್ಮೆಂಟ್

PUB/496/AAMO/PRB/SWR/2025-26

ನೈಋತ್ಯ ರೈಲ್ವೆ

ಅರ್ಜಿ ಅಧಿಸೂಚನೆ ಸಂ.: 565/SBTA/09-01/2025

ಭಾರತದ ರಾಷ್ಟ್ರಪತಿಗಳ ಪರವಾಗಿ, ಈ ಕೆಳಗೆ ಸಹಿ ಮಾಡಿರುವವರು, ನೈಋತ್ಯ ರೈಲ್ವೆಯ ಬೆಂಗಳೂರು ವಿಭಾಗದ ಎನ್‌ಎಸ್‌ಜಿ–6 ವರ್ಗದ ರೈಲ್ವೆ ನಿಲ್ದಾಣದಲ್ಲಿ 03 ವರ್ಷಗಳ ಅವಧಿಗೆ ಕಮಿಷನ್ ಆಧಾರದ ಮೇಲೆ ಕಾಯ್ದಿರಿಸದ ಟಿಕೆಟ್ ವ್ಯವಸ್ಥೆ (ಯುಟಿಎಸ್) ಮೂಲಕ ಕಾಯ್ದಿರಿಸದ / ಸಾಮಾನ್ಯ ಟಿಕೆಟ್‌ಗಳನ್ನು ವಿತರಿಸಲು ಸ್ಟೇಷನ್ ಟಿಕೆಟ್ ಬುಕಿಂಗ್ ಏಜೆಂಟ್‌ಗಳ (ಎಸ್‌ಟಿಬಿಎ) ನೇಮಕಾತಿಗಾಗಿ ಮೊಹರು ಮಾಡಿದ ಅರ್ಜಿಗಳನ್ನು ಆಹ್ವಾನಿಸಿದ್ದಾರೆ:

ಕ್ರ.ಸಂ.	ನಿಲ್ದಾಣದ ಹೆಸರು	ಕೋಡ್	ಕ್ರ.ಸಂ.	ನಿಲ್ದಾಣದ ಹೆಸರು	ಕೋಡ್
1	ಬಸಂಪಲ್ಲೆ	ಬಿಎಸ್‌ಪಿಎಲ್	9	ನಾಗಸಮುದ್ರಂ	ಎನ್‌ಜಿಎಂ
2	ದೇವನಹಳ್ಳಿ	ಡಿಹೆಚ್‌ಎಲ್	10	ನಾರಾಯಣಪುರಂ	ಎನ್‌ಆರ್‌ವೈಪಿ
3	ದೇವರಪಲ್ಲಿ	ಡಿಪಿಇ	11	ವಡ್ಡರಹಳ್ಳಿ	ಓಆರ್‌ಹೆಚ್
4	ಡಿ. ಸಮುದವಲ್ಲಿ	ಡಿಎಸ್‌ವಿಎಸ್	12	ಪೆರಿಯನಾಗತುಣ್ಣೆ	ಪಿಆರ್‌ಎನ್‌ಟಿ
5	ಹೆಜ್ಜಾಲ	ಹೆಚ್‌ಜೆಎಲ್	13	ಶಾಂತಿಗ್ರಾಮ	ಸಿಐಜಿಎ
6	ಮಾಕಾಜಿಪಲ್ಲಿ	ಎಂಕೆಜೆ	14	ಸೋಲೂರು	ಎಸ್‌ಓಎಲ್‌ಆರ್
7	ಮಾಕಳೀದುರ್ಗ	ಎಂಕೆಎಲ್	15	ತಿಪ್ಪಸಂದ್ರ	ಟಿಎಸ್‌ಎ
8	ಮಳುಗೂರು	ಎಂಎಲ್‌ಯು			

ಅರ್ಜಿಗಳನ್ನು ಸಲ್ಲಿಸಬೇಕಾದ ದಿನಾಂಕ ಮತ್ತು ಸಮಯ: 23.10.2025 ರಂದು 10:00 ರಿಂದ 15:00 ಗಂಟೆಯವರೆಗೆ
ಅರ್ಜಿಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: 23.10.2025 ರಂದು 15:05 ಗಂಟೆಗೆ

ಹೆಚ್ಚಿನ ಮಾಹಿತಿಗಾಗಿ **www.swr.indianrailways.gov.in** ಗೆ ಲಾಗ್ ಆನ್ ಆಗಿ

PUB/491/AAMO/PRB/SWR/2025-26 ವರಿಷ್ಠ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು, ಬೆಂಗಳೂರು

ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ

South Western Railway - SWR | SWRRLY | SWRAILWAYHQ | sw_railways

ನಂ. ಎ–12023/4/2022–ಒ/ಒ ಡಿಜಿಟಿಆರ್
ಭಾರತ ಸರ್ಕಾರ
ವಾಣಿಜ್ಯ ಇಲಾಖೆ
ವಾಣಿಜ್ಯ ಪರಿಹಾರಗಳ ಮಹಾ ನಿರ್ದೇಶನಾಲಯ

ದಿನಾಂಕ: 23ನೇ ಸೆಪ್ಟಂಬರ್, 2025

“ವಾಣಿಜ್ಯ ಪರಿಹಾರಗಳ ಮಹಾ ನಿರ್ದೇಶನಾಲಯ” ಇವರು ತಮ್ಮ ಕಾನೂನು ಮತ್ತು ಅರ್ಥಶಾಸ್ತ್ರ ವಿಭಾಗಗಳಲ್ಲಿ ಗುತ್ತಿಗೆ ಆಧಾರದ ಮೇರೆಗೆ “ವೈಯಕ್ತಿಕ ಸಮಾಲೋಚಕರು”ಗಳನ್ನು ನಿಯೋಜಿಸಿಕೊಳ್ಳಲು ಅರ್ಜಿಗಳನ್ನು ಆಹ್ವಾನಿಸಿದ್ದಾರೆ. ಆಸಕ್ತಿಯುಳ್ಳ ಅಭ್ಯರ್ಥಿಗಳು ವಿವರಗಳಿಗಾಗಿ https://www.dgtr.gov.in ಪೋರ್ಟಲ್‌ನಲ್ಲಿ ‘ಕರಿಯರ್’ ವಿಭಾಗವನ್ನು ಪರಿಶೀಲಿಸಿರಿ.

CBC 05128/11/0001/2526

ಭಾರತ ಸರ್ಕಾರ
ಬಾಹ್ಯಾಕಾಶ ಇಲಾಖೆ, ಮಾನವ ಬಾಹ್ಯಾಕಾಶ ಹಾರಾಟ ಕೇಂದ್ರ (ಹೆಚ್‌ಎಸ್‌ಎಫ್‌ಸಿ)
ನಿರ್ಮಾಣ ಮತ್ತು ನಿರ್ವಹಣೆ ಸಮೂಹ (ಸಿಎಂಜಿ), ಇಸ್ರೋ ಅತಿಥಿ ಗೃಹದ ಎದುರು, ದೇವನಹಳ್ಳಿ, ಕರ್ನಾಟಕ–562164 ದೂರವಾಣಿ: 080–29916308

ಇ–ಟೆಂಡರ್ ಪ್ರಕಟಣೆ

ಭಾರತದ ರಾಷ್ಟ್ರಪತಿಯವರ ಪರವಾಗಿ, ಈ ಕೆಳಕಂಡ ಕಾಮಗಾರಿಗಳಿಗೆ ಇ–ಟೆಂಡರಿಂಗ್ ವಿಧಾನದ ಮೂಲಕ ಆನ್‌ಲೈನ್ ಐಟಂದರದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ ಸಂ	ಕಾಮಗಾರಿ ಹೆಸರು	ಟೆಂಡರ್ ಗಿಟ್ಟ ಅಂದಾಜು ಮೊತ್ತ	ಪೂರ್ಣಗೊಳ್ಳುವ ಅವಧಿ	ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಅವದಿ	ಬಿಡ್ ಸ್ಪಷ್ಟೀಕರಣ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ	ಇಎಂಡಿ
01	ಹೆಚ್‌ಎಸ್‌ಎಫ್‌ಸಿ (ಮಾರತ್‌ಹಳ್ಳಿ ಮತ್ತು ದೇವನಹಳ್ಳಿ), ಬೆಂಗಳೂರು (ಸಿವಿಲ್ ಕಾಮಗಾರಿಗಳು) ಇಲ್ಲಿನ ವಿವಿಧ ಸಿವಿಲ್ ಕಾಮಗಾರಿಗಳಿಗೆ ಅವಧಿ ಗುತ್ತಿಗೆ **HSFC/CMG/MM/C/155/2025-26, Dt: 22.09.2025**	ರೂ. 20.00 ಲಕ್ಷಗಳು	12 ತಿಂಗಳು	23.09.2025 (11.00 ಗಂಟೆ) ರಿಂದ 05.10.2025 (23.30 ಗಂಟೆ) ವರೆಗೆ	23.09.2025 (11.30 ಗಂಟೆ) ರಿಂದ 06.10.2025 (10.30 ಗಂಟೆ) ವರೆಗೆ	07.10.2025 11.00 ಗಂಟೆ ವರೆಗೆ	07.10.2025 11.30 ಗಂಟೆ	ರೂ. 40,000/–

ಟೆಂಡರ್ ದಸ್ತಾವೇಜುಗಳನ್ನು ಟೆಂಡರ್ ವಿಜಾರ್ಡ್‌ನೊಂದಿಗೆ ನೋಂದಾಯಿಸಿ ಮತ್ತು ಟೆಂಡರ್ ಸಂಸ್ಕರಣಾ ಶುಲ್ಕವನ್ನು ಪಾವತಿಸುವುದರ ಮೂಲಕ ವೆಬ್‌ಸೈಟ್ **www.tenderwizard.com/ISRO** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಮಾರಾಟಗಾರರ ನೋಂದಣಿ ಪ್ರಕ್ರಿಯೆಯನ್ನು ಮೇಲ್ಕಂಡ ವೆಬ್‌ಸೈಟ್‌ನಲ್ಲಿ ಪ್ರದರ್ಶಿಸಲಾಗಿದೆ. ಆಸಕ್ತ ಟೆಂಡರ್‌ದಾರರು ವಿವರವಾದ ಟೆಂಡರ್ ಆಹ್ವಾನ ಪ್ರಕಟಣೆಗಾಗಿ (ಎನ್‌ಐಟಿ) ವೆಬ್‌ಸೈಟ್ **www.isro.gov.in** ನೋಡುವುದು ಹಾಗೂ ಇತರೆ ವಿವರಗಳು ಮತ್ತು ಟೆಂಡರ್ ದಸ್ತಾವೇಜುಗಳ ಖರೀದಿಗೆ ವೆಬ್‌ಸೈಟ್ **www.tenderwizard.com/ISRO** ಗೆ ಭೇಟಿ ನೀಡಿ.

ಸಹಿ/– ಮುಖ್ಯಸ್ಥರು ಸಿಎಂಡಿ, ಸಿಎಂಜಿ, ಹೆಚ್‌ಎಸ್‌ಎಫ್‌ಸಿ

ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ

ಎಸ್.ಎನ್. ಕಾಂಪ್ಲೆಕ್ಸ್, ಮೊದಲನೇ ಮಹಡಿ, ನಗರ ಪೊಲೀಸ್ ಠಾಣೆ ಎದುರು, ‘ಡಿ’ ಕ್ರಾಸ್, ದೊಡ್ಡಬಳ್ಳಾಪುರ- 561203

ಸಂ.: DPA/TP/CLU/32/2025-26 ದಿನಾಂಕ: 22.09.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ‘ವ್ಯವಸಾಯ’ ವಲಯದಿಂದ ‘ಕೈಗಾರಿಕಾ’ ವಲಯಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯ ಜಮೀನಿನ ವಿವರಗಳು ಈ ಕೆಳಕಂಡಂತಿರುತ್ತವೆ. ಈ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳ ಅವಧಿಯೊಳಗೆ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ, ದೊಡ್ಡಬಳ್ಳಾಪುರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ	ವಿಸ್ತೀರ್ಣ (ಎ–ಗು)	ಸರ್ಕಾರದ ಅಧಿಸೂಚನೆಯಂತೆ ಪರಿಗಣಿಸಲಾದ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1.	ಶ್ರೀ ವಿ.ಎಸ್. ಸುರೇಂದರ್ ಬಿನ್ ಲೇಟ್॥ ವಿ.ಎನ್. ಸುಂದರ್	ದೊಡ್ಡಬಳ್ಳಾಪುರ	ಕಸಬಾ	ಮಲ್ಲೋಹಳ್ಳಿ	53/3 ಪೈಕಿ	00–34.50	ವ್ಯವಸಾಯ	ಕೈಗಾರಿಕೆ
2.		ದೊಡ್ಡಬಳ್ಳಾಪುರ	ಕಸಬಾ	ಮಲ್ಲೋಹಳ್ಳಿ	54/2	1–38	ವ್ಯವಸಾಯ	ಕೈಗಾರಿಕೆ
3.		ದೊಡ್ಡಬಳ್ಳಾಪುರ	ಕಸಬಾ	ಮಲ್ಲೋಹಳ್ಳಿ	175/1 ಪೈಕಿ	1–19	ವ್ಯವಸಾಯ	ಕೈಗಾರಿಕೆ
4.		ದೊಡ್ಡಬಳ್ಳಾಪುರ	ಕಸಬಾ	ಮಲ್ಲೋಹಳ್ಳಿ	175/2	0–39	ವ್ಯವಸಾಯ	ಕೈಗಾರಿಕೆ

ಷರಾ: ಪ್ರಶ್ನಿತ ಜಮೀನಿನಲ್ಲಿ ಕೈಗಾರಿಕಾ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಸ್ಥಳೀಯ ಸಾರ್ವಜನಿಕರಿಗೆ ಭವಿಷ್ಯದಲ್ಲಿ ಉದ್ಯೋಗಾವಕಾಶಗಳು ಲಭ್ಯವಾಗುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶದ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಎಂಬುದಾಗಿ ಅರ್ಜಿದಾರರು ಸಾರ್ವಜನಿಕ ಹಿತಾಸಕ್ತಿ ಅಂಶವನ್ನು ತಿಳಿಸುತ್ತಾ ಸದರಿ ಪ್ರದೇಶವನ್ನು ‘ವ್ಯವಸಾಯ’ ವಲಯದಿಂದ ‘ಕೈಗಾರಿಕಾ’ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/–ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು, ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ, ದೊಡ್ಡಬಳ್ಳಾಪುರ.

ಗುಂಡಿಮಯ ರಸ್ತೆ: ನರಕ ದರ್ಶನ

ಹದಗೆಟ್ಟ ರಸ್ತೆಗಳಿಂದ ವಾಹನ ಸವಾರರು ಹೈರಾಣ; ದೂಳಿನ ಮಜ್ಜನ, ಮುಖಗವಸು ಧರಿಸಿ ಓಡಾಡುವ ಜನ

• ಕೆ.ಎಸ್.ಸುನಿಲ್

ಬೆಂಗಳೂರು: ರಸ್ತೆ ತುಂಬಾ ಗುಂಡಿಗಳು ಮತ್ತು ಕೆಸರು, ಕಿತ್ತು ಹೋದ ಡಾಂಬರು, ಆಮೆ ವೇಗದಲ್ಲಿ ಸಂಚರಿಸುವ ವಾಹನಗಳು, ರಸ್ತೆ ಮೇಲೆ ಚರಂಡಿ ನೀರು, ದೂಳಿನ ನಡುವೆ ವ್ಯಾಪಾರ-ವಹಿವಾಟು, ಮುಖಗವಸು ಧರಿಸಿ ಓಡಾಡುವ ಜನರು.

ಇದು ಮಹದೇವಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ರಸ್ತೆಗಳ ಚಿತ್ರಣ.

ಕೆ.ಆರ್.ಪುರ ರೈಲು ನಿಲ್ದಾಣ, ದೊಡ್ಡನೆಕ್ಕುಂದಿ, ಮಾರತ್‌ಹಳ್ಳಿ, ಕಾಡುಬೀಸನಹಳ್ಳಿ ವೃತ್ತ, ಬೆಳ್ಳಂದೂರು ರಸ್ತೆ, ಸರ್ಜಾಪುರ ವೃತ್ತ, ಸರ್ಜಾಪುರ ರಸ್ತೆ, ಗುಂಜೂರು ಪಾಳ್ಯ, ಗುಂಜೂರು, ವರ್ತೂರು, ಬಳಗೆರೆ-ವರ್ತೂರು ರಸ್ತೆ, ಪಣತ್ತೂರು ರೈಲ್ವೆ ಕೆಳಸೇತುವೆ, ಪಣತ್ತೂರು ಮುಖ್ಯ ರಸ್ತೆಯಲ್ಲಿ ಸಾಗಿದರೆ ಗುಂಡಿಗಳ ದರ್ಶನವಾಗುತ್ತದೆ.

ಒಂದು ಅಡಿಯಷ್ಟು ಆಳದ ಗುಂಡಿಗಳು ಇವೆ. ಮಳೆಗಾಲಕ್ಕೂ ಮುನ್ನ ಸಣ್ಣದಾಗಿದ್ದ ಗುಂಡಿಗಳು ಈಗ ಹೊಂಡಗಳಾಗಿ ಮಾರ್ಪಟ್ಟಿವೆ. ದಟ್ಟಣೆ, ದೂಳಿನ ಜತೆಗೆ ಬಿಸಿಲು ವಾಹನ ಸವಾರರನ್ನು ಅಕ್ಷರಶಃ ಹೈರಾಣಾಗಿಸುತ್ತಿದೆ. ದಟ್ಟಣೆ ನಿವಾರಿಸಲು ಸಂಚಾರ ಪೊಲೀಸರು ಹರಸಹಾಸ ಪಡುತ್ತಿದ್ದಾರೆ.

ಶಿಕ್ಷಣ ಸಂಸ್ಥೆಗಳು, ವಾಣಿಜ್ಯ ಸಂಕೀರ್ಣಗಳು, ಆಸ್ಪತ್ರೆಗಳು, ವಿಲ್ಲಾಗಳು ಐಟಿ-ಬಿಟಿಗೆ ಹೆಸರಾಗಿರುವ ಮಹದೇವಪುರ ಕ್ಷೇತ್ರ, ಈಗ ದೊಡ್ಡ ಗುಂಡಿಗಳಿಂದಾಗಿ ಅಪಖ್ಯಾತಿ ಪಡೆಯುತ್ತಿದೆ. ನಿತ್ಯ ಲಕ್ಷಾಂತರ ಜನರು ಸಂಚರಿಸುವ ರಸ್ತೆಗಳು ವಿಪರೀತ ಹದಗೆಟ್ಟಿದ್ದು, ವಾಹನ ಚಲಾಯಿಸುವುದು ಸವಾಲಾಗಿದೆ. ಮಳೆ ಬಂದರೆ ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸುತ್ತದೆ.

ರಸ್ತೆ ಗುಂಡಿಗಳ ಬಗ್ಗೆ ಬ್ಲ್ಯಾಕ್‌ಬಕ್ ಸಂಸ್ಥಾಪಕ ರಾಜೇಶ್ ಯಬಾಜಿ ಅವರು ಧ್ವನಿ ಎತ್ತಿದ ಬಳಿಕ ಇಲ್ಲಿನ ರಸ್ತೆಗಳು ಗಮನ ಸೆಳೆದಿವೆ. ನಿರ್ವಹಣೆಯ ಕೊರತೆಯಿಂದ ಹೆಜ್ಜೆಗೊಂದು ಗುಂಡಿಗಳಿದ್ದು, ಸಂಚರಿಸುವಾಗ ಸ್ವಲ್ಪ ಎಡವಿದರೂ ಕೈ, ಕಾಲು ಮುರಿಯುವುದು ಖಚಿತ. ಡಾಂಬರು ಕಿತ್ತು ಜಲ್ಲಿ, ಕಲ್ಲುಗಳು ಮೇಲೆ ಬಂದಿವೆ. ಸದ್ಯ ಮಳೆ ನಿಂತಿರುವುದರಿಂದ ರಸ್ತೆ ತುಂಬಾ ದೂಳು ಆವರಿಸಿದೆ. ಈ ಭಾಗದ ರಸ್ತೆಗಳಲ್ಲಿ ಹತ್ತು ನಿಮಿಷಗಳ ಪ್ರಯಾಣಕ್ಕೆ ಅಂದಾಜು 20 ರಿಂದ 30 ನಿಮಿಷ ಹಿಡಿಯುತ್ತಿದೆ. ಜಂಕ್ಷನ್‌ಗಳನ್ನು ದಾಟಿ, ಸಾಗುವುದು, ವಾಹನ ಸವಾರರಿಗೆ ಸವಾಲಾಗಿದೆ.

ಪಣತ್ತೂರು ಮುಖ್ಯ ರಸ್ತೆಯ ಸ್ಥಿತಿ ಶೋಚನೀಯವಾಗಿದೆ. ಡಾಂಬರು ರಸ್ತೆಗಳು ಅಸ್ಥಿಪಂಜರದಂತಾಗಿವೆ. ಗುಂಡಿಗಳ ನಡುವೆ ರಸ್ತೆ ಹುಡುಕುವಂತಾಗಿದೆ. ಒಂದು ಗುಂಡಿ ತಪ್ಪಿಸಿ ಮುಂದೆ ಸಾಗುವಷ್ಟರಲ್ಲಿ ಮತ್ತೊಂದು ಗುಂಡಿ ಎದುರಾಗುವುದರಿಂದ ವಾಹನ ಸವಾರರು ಬಿದ್ದು ಗಾಯಗೊಳ್ಳುತ್ತಿದ್ದಾರೆ. ವರ್ತೂರು, ಸರ್ಜಾಪುರ ರಸ್ತೆಗಳ ಮೂಲಕವೂ ಸಾವಿರಾರು ಐ.ಟಿ ಉದ್ಯೋಗಿಗಳು ಇಲ್ಲಿಗೆ ಬರುತ್ತಾರೆ. ರಸ್ತೆಗಳಲ್ಲಿ ಬಿದ್ದಿರುವ ಗುಂಡಿಗಳಿಂದಾಗಿ ಇಲ್ಲಿನ ಸಂಚಾರ ನರಕವಾಗಿ ಪರಿವರ್ತನೆಗೊಂಡಿದೆ. ಮಳೆ ಬಂದಾಗ ರಸ್ತೆ ಯಾವುದು? ಗುಂಡಿ ಯಾವುದು? ಎಂದು ಗೊತ್ತಾಗದಷ್ಟು ನೀರು ತುಂಬಿರುತ್ತದೆ.



ಈ ಮಧ್ಯೆ, ಜಲಮಂಡಳಿ, ಕೆಪಿಟಿಸಿಎಲ್, ಬೆಸ್ಕಾಂ ಮತ್ತು ಇತರೆ ಖಾಸಗಿ ಸಂಸ್ಥೆಗಳು ಆಪ್ಟಿಕಲ್ ಫೈಬರ್ ಕೇಬಲ್ ಹಾಕಲು ರಸ್ತೆಯನ್ನು ಅಗೆದಿವೆ. ಈ ರಸ್ತೆಗಳು, ದೊಡ್ಡ ಅಪಾರ್ಟ್‌ಮೆಂಟ್ ಸಮುಚ್ಚಯ ಮತ್ತು ಹಲವು ಶಾಲೆಗಳಿಗೆ ಸಂಪರ್ಕ ಕಲ್ಪಿಸುತ್ತವೆ.

ಅಧಿಕಾರಿಗಳ ವರ್ತನೆಗೆ ಬೇಸರ: ‘ಕಾಲಮಿತಿಯಲ್ಲಿ ರಸ್ತೆಗಳನ್ನು ದುರಸ್ತಿಗೊಳಿಸಬೇಕಿದ್ದ ಪಾಲಿಕೆ, ಇದಕ್ಕೂ ತಮಗೂ ಸಂಬಂಧವಿಲ್ಲದಂತೆ ವರ್ತಿಸುತ್ತಿದೆ. ದ್ವಿಚಕ್ರ ವಾಹನ ಸವಾರರ ಬೆನ್ನು ಮೂಳೆ ಮುರಿಯಲಿ, ಗುಂಡಿಗಳಲ್ಲಿ ಬಿದ್ದು ಪ್ರಾಣವನ್ನೇ ಕಳೆದುಕೊಳ್ಳಲಿ, ಅದಕ್ಕೂ ತನಗೂ ಸಂಬಂಧವೇ ಇಲ್ಲವೆಂಬಂತೆ ಅಧಿಕಾರಿಗಳು ವರ್ತಿಸುತ್ತಿದ್ದಾರೆ. ಸಂಪರ್ಕ ಕಲ್ಪಿಸುವ ರಸ್ತೆಗಳು ಗುಂಡಿಗಳಿಂದ ಕೂಡಿದ್ದು, ನಿವಾಸಿಗಳು, ವಾಹನ ಸವಾರರಿಗೆ ದೂಳಿನ ಮಜ್ಜನವಾಗುತ್ತಿದೆ. ಇದರಿಂದ ಆರೋಗ್ಯದ ಮೇಲೂ ಪರಿಣಾಮ ಬೀರುತ್ತಿದೆ. ಗುಂಡಿ ಬಿದ್ದ ರಸ್ತೆಗಳಲ್ಲಿ ಸಂಚರಿಸಲು ಯಾವ ಪುರುಷಾರ್ಥಕ್ಕಾಗಿ ತೆರಿಗೆ ಪಾವತಿಸಬೇಕು? ’ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದರು.

‘ಗುಂಡಿಗಳಿಂದಾಗಿ ಶಾಲೆಗೆ ಮಕ್ಕಳನ್ನು ಕರೆದೊಯ್ಯುವ ಬಸ್ ಚಾಲಕರು ತೀವ್ರ ಸಮಸ್ಯೆ ಎದುರಿಸುತ್ತಿದ್ದಾರೆ. ಕೆಲ ದಿನಗಳ ಹಿಂದೆ ಬಳಗೆರೆ- ಪಣತ್ತೂರು ರಸ್ತೆಯಲ್ಲಿ ಸಾಗುವಾಗ ಬೆಳಿಗ್ಗೆ ಹಾಗೂ ಮಧ್ಯಾಹ್ನ ಬಸ್ ಚಕ್ರಗಳು ಗುಂಡಿ ಹಾಗೂ ಕೆಸರಿನಲ್ಲಿ ಸಿಲುಕಿಕೊಂಡಿದ್ದವು. ಬಸ್ ಮೇಲಕ್ಕೆ ಎತ್ತಲು ಸಾಹಸ ಮಾಡಬೇಕಾಯಿತು. ಕಳೆದ ವಾರವೂ ಶಾಲೆಯ ಬಸ್, ರಸ್ತೆಯಲ್ಲಿ ಗುಂಡಿಯಿಂದಾಗಿ ವಾಲಿತ್ತು’ ಎಂದು ಚಾಲಕ ರವೀಶ್ ಗೋಳು ತೋಡಿಕೊಂಡರು.

ಕೆಸರಿನ ರಸ್ತೆಯಲ್ಲಿ ಸವಾರರ ಪರದಾಟ: ಮಾರತ್‌ಹಳ್ಳಿ, ಕಾಡುಬೀಸನಹಳ್ಳಿ ರಸ್ತೆಗಳು ಹದಗೆಟ್ಟಿವೆ. ಕೆಸರು ತುಂಬಿದ ರಸ್ತೆಯಲ್ಲಿ ವಾಹನಗಳು ಸಂಚರಿಸಲು ಪರದಾಡುತ್ತಿದ್ದ ದೃಶ್ಯ ಕಂಡು ಬಂತು. ಅದೇ ರೀತಿ ವರ್ತೂರು-ಗುಂಜೂರು ರಸ್ತೆಯಲ್ಲಿಯೂ ವಾಹನ ಸಂಚಾರ ನರಕಯಾತನೆಯಾಗಿದೆ. ಪೆಟ್ರೋಲ್ ಬಂಕ್ ಮತ್ತು ಪೊಲೀಸ್ ಠಾಣೆ ನಡುವಿನ ರಸ್ತೆ ಬಹುತೇಕ ವಾಹನ ನಿಲುಗಡೆ ಸ್ಥಳವಾಗಿ ಬದಲಾಗುತ್ತಿರುವ ಕಾರಣ ಸಂಚಾರಕ್ಕೆ ತೊಂದರೆಯಾಗಿದೆ. ಒಂದು ಭಾಗದಲ್ಲಿ ಕಾಮಗಾರಿ ನಡೆಯುತ್ತಿದ್ದು, ಮತ್ತೊಂದು ಭಾಗ ಹಾಗೆಯೇ ಉಳಿದಿದೆ.

‘ಮನೆ ಬಿಟ್ಟು ಕಚೇರಿ ತಲುಪಲು ದಟ್ಟಣೆ ಮತ್ತು ಮಳೆ ಸಂದರ್ಭದಲ್ಲಿ ಎರಡು ತಾಸು ಸಾಕಾಗುತ್ತಿಲ್ಲ. ಈ ರಸ್ತೆಯಲ್ಲಿ ಸಂಚರಿಸುವುದರಿಂದ ಬೆನ್ನು ನೋವು ಬರುತ್ತದೆ. ಬುಧವಾರ ಮತ್ತು ಗುರುವಾರ ವಿಪರೀತ ದಟ್ಟಣೆ. ಸಂಬಂಧಪಟ್ಟವರಿಗೆ ಹಲವು ಬಾರಿ ಮನವಿ ಮಾಡಿದರೂ ರಸ್ತೆ ದುರಸ್ತಿ ಮಾಡಿಲ್ಲ’ ಎಂದು ಸರ್ಜಾಪುರದ ಟೆಕಿ ಹರ್ಷ ವಿನಾಯಕ ಹೇಳಿದರು.

ಬೆಳ್ಳಂದೂರಿನಂತೆ ಪ್ರಮುಖ ಸಂಪರ್ಕದ ಜಾಲ ಹೊಂದಿರುವ ಕನ್ನೆಲ್ಲಿ ರಸ್ತೆ, ವರ್ತೂರು ರಸ್ತೆ, ಬೋಗನಹಳ್ಳಿ ರಸ್ತೆಗಳು ಸಂಪೂರ್ಣ ಹದಗೆಟ್ಟಿವೆ. ಕೆಲವೆಡೆ ರಸ್ತೆಗಳಿಗೆ ಚರಂಡಿ ವ್ಯವಸ್ಥೆಯೇ ಇಲ್ಲ. ಗುಂಜೂರು ಪಾಳ್ಯದ 100 ಅಡಿ ರಸ್ತೆಯಲ್ಲಿ ಸಾಗಿದರೆ ಗುಂಡಿಗಳ ಜತೆಗೆ ಚರಂಡಿ ನೀರು ಹರಿಯುವುದು ಕಾಣಬಹುದು. ಜನರು ಮೂಗು ಮುಚ್ಚಿಕೊಂಡು ಓಡಾಡುತ್ತಿದ್ದಾರೆ.

ಪಣತ್ತೂರು ರೈಲ್ವೆ ಕೆಳಸೇತುವೆಯ ರಸ್ತೆ ಹದಗೆಟ್ಟಿರುವುದು ಚಿತ್ರಗಳು: ಕಿಶೋರ್ ಕುಮಾರ್ ಬೋಳಾರ್

‘ಹೆಚ್ಚಿನ ಅನುದಾನ ಅಗತ್ಯ’

ಕ್ಷೇತ್ರದಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚಲು ಹೆಚ್ಚಿನ ಅನುದಾನದ ಅಗತ್ಯವಿದೆ. ಸರ್ಕಾರ ನೀಡಿದ ₹25 ಕೋಟಿ ಅನುದಾನ ಯಾವುದಕ್ಕೂ ಸಾಲದು. ಮಹದೇವಪುರದಲ್ಲಿ ದಟ್ಟಣೆ ಮತ್ತು ಹಾಳಾಗಿರುವ ರಸ್ತೆಗಳಿಂದ ಸಮಸ್ಯೆಗಳಾಗಿವೆ. ಅಧಿಕಾರಿಗಳ ಗಮನಕ್ಕೆ ತಂದು ಬಗೆಹರಿಸಲು ಪ್ರಯತ್ನಿಸುತ್ತಿದ್ದೇನೆ. ರಸ್ತೆ ದುರಸ್ತಿಗೆ ಕ್ರಮ ಕೈಗೊಳ್ಳಲಾಗುವುದು.

ಮಂಜುಳಾ ಲಿಂಬಾವಳಿ,
ಶಾಸಕಿ, ಮಹದೇವಪುರ ವಿಧಾನಸಭಾ ಕ್ಷೇತ್ರ

ಗುಂಡಿ ಬಿದ್ದಿರುವ ಗುಂಜೂರು ರಸ್ತೆಯಲ್ಲಿ ವಾಹನ ಸಂಚಾರ

ನಾಗರಿಕರ ಅಭಿಪ್ರಾಯ

ಕಾಂಕ್ರೀಟ್ ರಸ್ತೆ ನಿರ್ಮಿಸಿ

ಮೂರು ವರ್ಷದಿಂದ ಈ ರಸ್ತೆ ಹಾಳಾಗಿದ್ದರೂ ಕೇಳುವವರು ಯಾರೂ ಇಲ್ಲ. ಶಾಶ್ವತವಾದ ಕಾಂಕ್ರೀಟ್ ರಸ್ತೆಗಳನ್ನು ನಿರ್ಮಿಸಿದರೆ ಪ್ರತಿ ವರ್ಷವೂ ಗುಂಡಿ ಮುಚ್ಚುವುದಕ್ಕೆ ಹಣ ವ್ಯಯಿಸುವುದು ತಪ್ಪುತ್ತದೆ. ಮುಚ್ಚಿದ ಗುಂಡಿಗಳು ಸ್ವಲ್ಪ ದಿನಗಳಲ್ಲೇ ಮತ್ತೆ ಬಾಯ್ತೆರೆಯುತ್ತವೆ. ಅದರ ಅಕ್ಕಪಕ್ಕದಲ್ಲೂ ಗುಂಡಿಗಳು ಬೀಳುತ್ತವೆ. ಮಳೆಗೆ ರಸ್ತೆಗಳು ಹೊಂಡಮಯವಾಗುತ್ತಿವೆ.

ಗಿರೀಶ್, ಕಾರು ಚಾಲಕ, ಬಳಗೆರೆ

ಹಳ್ಳಿಗಳ ರಸ್ತೆಯೇ ಚೆಂದ

ಇದನ್ನು ಯಾರಾದರೂ ರಸ್ತೆ ಎನ್ನುತ್ತಾರೆಯೇ? ಪಶ್ಚಿಮ ಬಂಗಾಳದಿಂದ ಬಂದು ಬೆಂಗಳೂರಿನಲ್ಲಿ ಉದ್ಯೋಗ ಮಾಡುತ್ತಿದ್ದೇನೆ. ನಮ್ಮ ಹಳ್ಳಿಯ ರಸ್ತೆಗಳು ಎಷ್ಟೋ ಚೆನ್ನಾಗಿವೆ. ಅರ್ಧ ಗಂಟೆಯಲ್ಲಿ ಕಚೇರಿಗೆ ಹೋಗುತ್ತಿದ್ದೆ. ಆದರೆ, ಈಗ ಗುಂಡಿ ಬಿದ್ದಿರುವ ಕಾರಣ ಎರಡು ತಾಸು ಬೇಕಾಗಿದೆ. ಮಳೆ ಬಂದಾಗೆಲ್ಲ ಗುಂಡಿಗಳಲ್ಲಿ ನೀರು ನಿಂತು ಓಡಾಡಲು ಆಗುವುದಿಲ್ಲ. ಕಂಪನಿಗಳು ಇಲ್ಲಿಂದ ಹೊರ ರಾಜ್ಯಕ್ಕೆ ಹೋಗುತ್ತವೆ.

ಗೌರವ, ಸಾಫ್ಟ್‌ವೇರ್ ಉದ್ಯೋಗಿ, ಪಣತ್ತೂರು

ರಸ್ತೆ ಕಾಣದಷ್ಟು ದೂಳು

ಕಚ್ಚಾ ರಸ್ತೆಯಾಗಿ ಮಾರ್ಪಟ್ಟಿರುವುದರಿಂದ ವಿಪರೀತ ದೂಳು ಏಳುತ್ತದೆ. ದೊಡ್ಡ ವಾಹನಗಳು ಸಂಚರಿಸುತ್ತಿದ್ದರೆ ಹಿಂದಿನವರೆಗೆ ರಸ್ತೆ ಕಾಣದಷ್ಟು ದೂಳು ಆವರಿಸಿಕೊಳ್ಳುತ್ತದೆ. ರಸ್ತೆ ಅಕ್ಕಪಕ್ಕ ಅಂಗಡಿ-ಮಳಿಗೆಗಳು, ವ್ಯಾಪಾರಿಗಳು ಹಾಗೂ ನಿವಾಸಿಗಳ ಗೋಳು ಹೇಳತೀರದು. ಮೊದಲು ರಸ್ತೆ ದುರಸ್ತಿಪಡಿಸಲು ಕ್ರಮ ಕೈಗೊಳ್ಳಬೇಕು.

ಭಾಗವತ್, ವ್ಯಾಪಾರಿ

ಹೊಂಡದಲ್ಲಿ ಸಿಲುಕಿದ ವಾಹನಗಳು

ನಾಲ್ಕು ವರ್ಷದಿಂದ ಈ ರಸ್ತೆ ಹಾಳಾಗಿದೆ. ವಿಪರೀತ ದೂಳು ಹಾಗೂ ಗುಂಡಿಗಳು ಬಿದ್ದಿವೆ. ಪಕ್ಕದಲ್ಲಿರುವ ಚರಂಡಿ ನೀರು ರಸ್ತೆ ಮೇಲೆ ಹರಿಯುತ್ತದೆ. ಗಲೀಜು ನೀರು ಹರಿದು ಹೋಗಲು ವ್ಯವಸ್ಥೆ ಇಲ್ಲ. ಹೊಂಡಗಳಲ್ಲಿ ವಾಹನಗಳು ಸಿಲುಕಿಕೊಳ್ಳುತ್ತಿವೆ. ಕೆಲವರು ಬಿದ್ದು ಗಾಯಗೊಂಡಿರುವ ಉದಾಹರಣೆಯೂ ಇದೆ. ದೂಳು ವಿಪರೀತವಾಗಿ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದೆ.

ಸೈಯದ್ ಪಾಷಾ, ಚಿಕನ್ ವ್ಯಾಪಾರಿ, ಗುಂಜೂರು ಪಾಳ್ಯ

ಬಳಗೆರೆ ರಸ್ತೆಯಲ್ಲಿ ಗುಂಡಿ ಬಿದ್ದಿರುವುದು

ರಸ್ತೆ ಗುಂಡಿ ಕಂಡರೆ ಫೋಟೊ ಕಳುಹಿಸಿ

ನಾಗರಿಕರು ತಾವು ವಾಸಿಸುವ ಹಾಗೂ ಸಂಚರಿಸುವ ರಸ್ತೆಗಳಲ್ಲಿ ಗುಂಡಿ ಕಂಡರೆ ಅದರ ಚಿತ್ರ ಸಹಿತ ಮಾಹಿತಿಯನ್ನು ‘ಪ್ರಜಾವಾಣಿ’ಗೆ ಕಳುಹಿಸಿಕೊಡಬಹುದು. ನಿಮ್ಮ ಹೆಸರು ಹಾಗೂ ವಿಳಾಸವಿರಲಿ.

ವಾಟ್ಸ್‌ಆ್ಯಪ್
9606038256

ಬಳಗೆರೆ ರಸ್ತೆಯ ಒಂದು ಭಾಗದಲ್ಲಿ ಕಾಮಗಾರಿ ನಡೆಯುತ್ತಿದೆ (ಎಡಚಿತ್ರ). ಪಣತ್ತೂರು ಸರ್ಕಲ್ ಬಳಿ ಪಾದಚಾರಿ ಮಾರ್ಗವನ್ನು ಬ್ಯಾರಿಕೇಡ್‌ನಿಂದ ಮುಚ್ಚಲಾಗಿದೆ

‘ಗುಂಡಿ ಮುಚ್ಚದ ಗುತ್ತಿಗೆದಾರರ ಟೆಂಡರ್ ರದ್ದು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆ ಗುಂಡಿಗಳನ್ನು ಮುಚ್ಚದ ಗುತ್ತಿಗೆದಾರರ ಟೆಂಡರ್ ರದ್ದುಗೊಳಿಸಲಾಗುವುದು ಎಂದು ಕೇಂದ್ರ ನಗರ ಪಾಲಿಕೆಯ ಆಯುಕ್ತ ರಾಜೇಂದ್ರ ಚೋಳನ್ ಎಚ್ಚರಿಕೆ ನೀಡಿದರು.

ಕೇಂದ್ರ ನಗರ ಪಾಲಿಕೆಯ ಎಂಜಿನಿಯರ್‌ಗಳು, ಗುತ್ತಿಗೆದಾರರ ಜತೆ ಸೋಮವಾರ ನಡೆದ ಸಭೆಯಲ್ಲಿ ಮಾತನಾಡಿದ ಅವರು, ‘ನಗರದ ರಸ್ತೆಗಳಲ್ಲಿ ಬಿದ್ದಿರುವ ಗುಂಡಿಗಳನ್ನು ಮುಚ್ಚುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಟ್ಟುನಿಟ್ಟಿನ ಆದೇಶ ನೀಡಿದ್ದಾರೆ. ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಗುತ್ತಿಗೆದಾರರು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಬೇಕು ಎಂದು ಎಚ್ಚರಿಕೆ ನೀಡಿದರು.

ಬಿ-ಸ್ಮೈಲ್‌ನಿಂದ ರೇಸ್‌ಕೋರ್ಸ್ ರಸ್ತೆ, ಕಬ್ಬನ್ ರಸ್ತೆ ಹಾಗೂ ಇತರೆ ಪ್ರಮುಖ ರಸ್ತೆಗಳಲ್ಲಿ ವೈಟ್ ಟಾಪಿಂಗ್ ಕಾಮಗಾರಿ ಕೈಗೊಳ್ಳಲಾಗಿದೆ. ಅದೇ ರೀತಿ ಗುಂಡಿ ಮುಚ್ಚುವ ಕೆಲಸವನ್ನು ತುರ್ತಾಗಿ ಮಾಡಬೇಕು. ಮುಂದಿನ ಮೂರು ದಿನದೊಳಗೆ ಗುಂಡಿ ಮುಚ್ಚುವ ಕೆಲಸ ಮುಗಿಸಬೇಕು. ಇಲ್ಲದಿದ್ದರೆ ಗುತ್ತಿಗೆದಾರರ ಟೆಂಡರ್ ರದ್ದುಪಡಿಸಿ, ಪಾಲಿಕೆ ವತಿಯಿಂದ ಗುಂಡಿ ಮುಚ್ಚುವ ಕಾಮಗಾರಿ ಕೈಗೊಂಡು, ಇದರ ವೆಚ್ಚವನ್ನು ಗುತ್ತಿಗೆದಾರರಿಂದ ವಸೂಲು ಮಾಡಬೇಕು ಎಂದು ಮುಖ್ಯ ಎಂಜಿನಿಯರ್‌ಗೆ ಸೂಚಿಸಿದರು.

ಪಾಲಿಕೆ ಎಂಜಿನಿಯರ್‌ಗಳು ಅವರ ವಿಭಾಗದ ವಾರ್ಡ್‌ಗಳ ರಸ್ತೆಯಲ್ಲಿರುವ ಗುಂಡಿಗಳು, ಪ್ಯಾಚ್‌ವರ್ಕ್, ಜಲಮಂಡಳಿ ಸೇರಿದಂತೆ ಇತರೆ ಇಲಾಖೆ ಕಾಮಗಾರಿಗಳಿಗೆ ಅಗೆದಿರುವ ಪಟ್ಟಿಯನ್ನು ನೀಡುವಂತೆ ಸೂಚಿಸಿದರು. ಈ ಪಟ್ಟಿಗಳ ಆಧಾರದ ಮೇಲೆ ಎಲ್ಲ ರಸ್ತೆ ಗುಂಡಿಗಳನ್ನು ಮುಚ್ಚಬೇಕು. ಇಲ್ಲದಿದ್ದರೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು ಎಂದರು.

ಕಳೆದ ಎರಡು ದಿನಗಳಲ್ಲಿ ಕೇಂದ್ರ ನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಒಟ್ಟು 3,182 ಚದರ ಮೀಟರ್ ವಿಸ್ತೀರ್ಣದ ಪ್ಯಾಚ್‌ವರ್ಕ್ ಹಾಗೂ 228 ರಸ್ತೆ ಗುಂಡಿಗಳನ್ನು ಮುಚ್ಚಲಾಗಿದೆ ಎಂದರು.

ಅಧಿಕಾರಿಗಳಿಗೆ ಪಶ್ಚಿಮ ನಗರ ಪಾಲಿಕೆಯ ಆಯುಕ್ತ ಕೆ.ವಿ. ರಾಜೇಂದ್ರ ಸೂಚನೆ

‘ರಸ್ತೆ ಗುಂಡಿ ಮುಚ್ಚಿ ಸುಗಮ ಸಂಚಾರಕ್ಕೆ ಆದ್ಯತೆ ನೀಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಶ್ಚಿಮ ನಗರ ಪಾಲಿಕೆಯ ಆಯುಕ್ತ ಕೆ.ವಿ. ರಾಜೇಂದ್ರ ಅವರು ಗೋವಿಂದರಾಜ ನಗರ ವಿಧಾನಸಭಾ ಕ್ಷೇತ್ರದ ಮೂಡಲಪಾಳ್ಯ ವಾರ್ಡ್‌ನ ವಿವಿಧ ಸ್ಥಳಗಳಿಗೆ ಸೋಮವಾರ ಭೇಟಿ ನೀಡಿ ಪರಿಶೀಲಿಸಿದರು.

ವಾರ್ಡ್ ರಸ್ತೆ ಪರಿಶೀಲಿಸಿದ ಆಯುಕ್ತರು, ‘ರಸ್ತೆ ಗುಂಡಿಗಳನ್ನು ತ್ವರಿತವಾಗಿ ಮುಚ್ಚಿ ವಾಹನ ಸವಾರರಿಗೆ ಹಾಗೂ ಸಾರ್ವಜನಿಕರ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು. ಪಾದಚಾರಿ ಮಾರ್ಗದ ಸ್ವಚ್ಛತೆಗೆ ಆದ್ಯತೆ ನೀಡಬೇಕು. ಒತ್ತುವರಿಯಾದ ಪಾದಚಾರಿ ಮಾರ್ಗವನ್ನು ಗುರುತಿಸಿ, ತೆರವುಗೊಳಿಸಬೇಕು. ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

‘ವಾರ್ಡ್ ವ್ಯಾಪ್ತಿಯಲ್ಲಿ ನೀರು ನಿಂತು ನಾಗರಿಕರಿಗೆ ಯಾವುದೇ ರೀತಿಯ ಸಮಸ್ಯೆಗಳಾಗದಂತೆ, ಅಂತಹ ಸ್ಥಳಗಳನ್ನು ಗುರುತಿಸಿ ತಾತ್ಕಾಲಿಕವಾಗಿ ಕ್ರಮ ಕೈಗೊಂಡು, ಶಾಶ್ವತ ಪರಿಹಾರಕ್ಕಾಗಿ ಯೋಜನೆ ರೂಪಿಸುವಂತೆ ಅಧಿಕಾರಿಗಳಿಗೆ ತಿಳಿಸಿದರು.

ಮೂಡಲಪಾಳ್ಯ ಆರೋಗ್ಯ ಕೇಂದ್ರದಲ್ಲಿ ಕೆ.ವಿ. ರಾಜೇಂದ್ರ ಅವರು ಪರಿಶೀಲನೆ ನಡೆಸಿದರು

ನಂತರ ಮೂಡಲಪಾಳ್ಯದ ನಗರ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿದ ರಾಜೇಂದ್ರ ಅವರು ‘ಆಸ್ಪತ್ರೆಯ ಸ್ವಚ್ಛತೆ, ವೈದ್ಯಕೀಯ ಉಪಕರಣಗಳ ಲಭ್ಯತೆ, ಸಾರ್ವಜನಿಕರಿಗೆ ನೀಡುವ ಸೇವೆಯ ಗುಣಮಟ್ಟವನ್ನು ಪರಿಶೀಲಿಸಿದರು. ಅಲ್ಲದೆ, ಅಗತ್ಯ ಸೌಲಭ್ಯಗಳ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಿದರು.

ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ಕುರಿತು ಕಾರ್ಯಾಗಾರ: ಪಶ್ಚಿಮ ನಗರ ಪಾಲಿಕೆಗೆ ಸಂಬಂಧಿಸಿದಂತೆ ಹಿಂದುಳಿದ ವರ್ಗಗಳ ಆಯೋಗ ನಡೆಸುವ ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆ ನಡೆಸುವ ಮಾಸ್ಟರ್ ಟ್ರೈನರ್‌ಗಳಿಗೆ ಮಲ್ಲೇಶ್ವರದ ಐಪಿಪಿ ಸಭಾಂಗಣದಲ್ಲಿ ರಾಜೇಂದ್ರ ಅವರ ಅಧ್ಯಕ್ಷತೆಯಲ್ಲಿ ಕಾರ್ಯಾಗಾರ ನಡೆಯಿತು.

‘ರಸ್ತೆ ಅಭಿವೃದ್ಧಿ ಕಾಮಗಾರಿ ಪರಿಶೀಲನೆ’

ಬೆಂಗಳೂರು: ಉತ್ತರ ನಗರ ಪಾಲಿಕೆಯ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ಅವರು ಸೋಮವಾರ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಪರಿಶೀಲಿಸಿದರು.

ನಾಗವಾರದಿಂದ ಥಣಿಸಂದ್ರ ಮಾರ್ಗವಾಗಿ ಬಳ್ಳಾರಿ ಮುಖ್ಯರಸ್ತೆ ಬೆಳ್ಳಹಳ್ಳಿ ಮೂಲಕ ಬಾಗಲೂರು ಮುಖ್ಯರಸ್ತೆಯಲ್ಲಿರುವ ರೇವಾ ಸರ್ಕಲ್‌ವರೆಗಿನ 9.7 ಕಿ.ಮೀ ರಸ್ತೆ ಹಾಗೂ ಬಾಗಲೂರು ಮುಖ್ಯರಸ್ತೆಯ ರೇವಾ ಸರ್ಕಲ್‌ನಿಂದ ರಾಷ್ಟ್ರೀಯ ಹೆದ್ದಾರಿ-7 (ಬಾಗಲೂರು ಕ್ರಾಸ್‌ನವರೆಗೆ) ಸುಮಾರು 2.5 ಕಿ.ಮೀ ಹಾಗೂ ಕೋಗಿಲು ಗ್ರಾಮದಿಂದ ಅಗ್ರಹಾರ ಸಂಪಿಗೆಹಳ್ಳಿ ಮಾರ್ಗವಾಗಿ ಎಂಸಿಇಸಿಎಚ್‌ಎಸ್ ಬಡಾವಣೆಗೆ ಸಂಪರ್ಕ ಕಲ್ಪಿಸುವ 3.5 ಕಿ.ಮೀ ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಪರಿಶೀಲಿಸಿದರು. ಈ ಭಾಗದಲ್ಲಿ ಒತ್ತುವರಿಯಾದ ಪಾದಚಾರಿ ಮಾರ್ಗವನ್ನು ತೆರವುಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಥಣಿಸಂದ್ರದ ಪೌರಕಾರ್ಮಿಕರ ಮಸ್ಟರಿಂಗ್ ಸ್ಥಳಕ್ಕೆ ಭೇಟಿ ನೀಡಿದ ಸುನೀಲ್ ಅವರು ಪೌರಕಾರ್ಮಿಕರ ಹಾಜರಾತಿ ಪುಸ್ತಕ ಪರಿಶೀಲಿಸಿದರು. ಬಯೋಮೆಟ್ರಿಕ್ ಯಂತ್ರದಲ್ಲಿ 13 ಮಂದಿ ಗೈರುಹಾಜರಾಗಿರುವುದನ್ನು ಗಮನಿಸಿದರು. ಆದರೆ, ಹಾಜರಾತಿ ಪುಸ್ತಕದಲ್ಲಿ ಮೂವರ ಹೆಸರು ಮಾತ್ರ ಗೈರುಹಾಜರಿ ಎಂದು ದಾಖಲಾಗಿರುವುದು ಪತ್ತೆಯಾಗಿದೆ. ಪೌರಕಾರ್ಮಿಕರು ನಿಗದಿತ ಸಮಯದಲ್ಲಿ ಮಸ್ಟರಿಂಗ್ ಪ್ರಕ್ರಿಯೆ ಪೂರ್ಣಗೊಳಿಸಬೇಕು, ಹಾಜರಾತಿ ದಾಖಲೆಗಳನ್ನು ಸರಿಯಾಗಿ ನಿರ್ವಹಿಸಬೇಕು ಎಂದು ಮೇಲ್ವಿಚಾರಕರಿಗೆ ಸೂಚಿಸಿದರು.

ಸ್ವಚ್ಛತೆಗೆ ಆದ್ಯತೆ ನೀಡಿ: ಸೂಚನೆ

ಬೆಂಗಳೂರು ದಕ್ಷಿಣ ನಗರ ಪಾಲಿಕೆಯ ಆಯುಕ್ತ ಕೆ.ಎನ್. ರಮೇಶ್ ಅವರು ಸೋಮವಾರ ಬನಶಂಕರಿ ದೇವಸ್ಥಾನ ಹಾಗೂ ಸಾರಕ್ಕಿ ಮಾರುಕಟ್ಟೆ ಸುತ್ತ ಮುತ್ತಲಿನ ಪ್ರದೇಶಗಳಿಗೆ ಭೇಟಿ ನೀಡಿ, ಪರಿಶೀಲಿಸಿದರು.

ಬನಶಂಕರಿ ದೇವಸ್ಥಾನದ ಹಾಗೂ ಸಾರಕ್ಕಿ ಮಾರುಕಟ್ಟೆಯ ಅಕ್ಕ-ಪಕ್ಕದ ಪ್ರದೇಶಗಳಲ್ಲಿ ಬ್ಲಾಕ್ ಸ್ಪಾಟ್‌ಗಳನ್ನು ಗುರುತಿಸಿ, ಸ್ವಚ್ಛತೆಗೆ ಆದ್ಯತೆ ನೀಡಬೇಕು. ಬನಶಂಕರಿ ದೇವಸ್ಥಾನದಿಂದ ಸಾರಕ್ಕಿ ಮಾರುಕಟ್ಟೆವರೆಗಿನ ಪಾದಚಾರಿ ಮಾರ್ಗ ಒತ್ತುವರಿಯಾಗಿದ್ದು, ಕೂಡಲೇ ತೆರವುಗೊಳಿಸಬೇಕು. ಪಾಲಿಕೆಯ ವತಿಯಿಂದ ನೀಡಿರುವ ಬೀದಿ ಬದಿ ವ್ಯಾಪಾರಿ ಗಳ ಗುರುತಿನ ಚೀಟಿ ಹೊಂದಿಲ್ಲದವರನ್ನು ಆ ಪ್ರದೇಶದಿಂದ ತೆರವುಗೊಳಿಸಬೇಕು ಎಂದು ಸೂಚಿಸಿದರು.

ಪೂರ್ವ ನಗರ ಪಾಲಿಕೆ ಆಯುಕ್ತ ಡಿ.ಎಸ್. ರಮೇಶ್ ಸೂಚನೆ

ಹದಗೆಟ್ಟ ರಸ್ತೆ ದುರಸ್ತಿಗೆ 15 ದಿನ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಣತ್ತೂರು, ಬಳಗೆರೆ, ವಿಬ್ ಗಯಾರ್ ಶಾಲೆ, ಗೇರ್ ಸ್ಕೂಲ್, ಜಯಂತಿನಗರ ಹಾಗೂ ಅರಕೆರೆಗೆ ಸಂಪರ್ಕ ಕಲ್ಪಿಸುವ ರಸ್ತೆಗಳನ್ನು ಕೂಡಲೇ ದುರಸ್ತಿಗೊಳಿಸಬೇಕು. ರಾಷ್ಟ್ರ ಮಟ್ಟದಲ್ಲಿ ಮುಜುಗರ ಅನುಭವಿಸುವಂತಾಗಿದ್ದು, ರಸ್ತೆ ಗುಂಡಿಗಳನ್ನು ಮುಚ್ಚಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 15 ದಿನಗಳ ಗಡುವು ನೀಡಿದ್ದಾರೆ ಎಂದು ಪೂರ್ವ ನಗರ ಪಾಲಿಕೆ ಆಯುಕ್ತ ಡಿ.ಎಸ್. ರಮೇಶ್ ತಿಳಿಸಿದರು.

ಬೆಂಗಳೂರು ಪೂರ್ವ ನಗರ ಪಾಲಿಕೆ ವ್ಯಾಪ್ತಿಯ ಎಲ್ಲಾ ಎಂಜಿನಿಯರ್‌ಗಳು, ಬೆಸ್ಕಾಂ, ಕೆಪಿಟಿಸಿಎಲ್, ಬೆಂಗಳೂರು ಜಲಮಂಡಳಿ, ಗೇಲ್, ರೈಲ್ವೆ ಹಾಗೂ ಪೊಲೀಸ್ ಇಲಾಖೆಯ ಅಧಿಕಾರಿಗಳೊಂದಿಗೆ ಸೋಮವಾರ ನಡೆದ ಸಮನ್ವಯ ಸಭೆಯಲ್ಲಿ ಅವರು ಮಾತನಾಡಿದರು.

ಕಾಡುಬೀಸನಹಳ್ಳಿ ಆರ್ಚ್‌ನಿಂದ ಪಣತ್ತೂರು ರೈಲ್ವೆ ಕೆಳಸೇತುವೆವರೆಗೆ ಒಂದು ಕಿ.ಮೀ. ರಸ್ತೆಯಲ್ಲಿ ಜಲಮಂಡಳಿಯು ಒಳ ಚರಂಡಿ ಕೊಳವೆಗಳನ್ನು ಜೋಡಿಸುವ ಕಾಮಗಾರಿ ಕೈಗೊಂಡಿದ್ದು, ಮನೆಗಳಿಗೆ ನಲ್ಲಿ ಸಂಪರ್ಕ ಕಲ್ಪಿಸುವ ಕಾರ್ಯ ಬಾಕಿ ಇದೆ. ಹಾಗಾಗಿ ಎರಡು ದಿನಗಳಲ್ಲಿ ರಸ್ತೆ ಸೇರಿ ಎಲ್ಲ ದುರಸ್ತಿ ಕೆಲಸಗಳನ್ನು ಪೂರ್ಣಗೊಳಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಬಳಗೆರೆ ರಸ್ತೆ: ಬಳಗೆರೆ ರಸ್ತೆಯಲ್ಲಿ ಕೆಪಿಟಿಸಿಎಲ್ ವತಿಯಿಂದ ನಾಲ್ಕು ಕಿ.ಮೀ. ರಸ್ತೆ ಅಗೆದು ಹಾಗೆಯೇ ಬಿಡಲಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಒಂದು ವಾರದಲ್ಲಿಯೇ ಈ ರಸ್ತೆಯನ್ನು ಸರಿಪಡಿಸಬೇಕು ಎಂದರು.

ವಿಬ್ ಗಯಾರ್ ಶಾಲೆ ರಸ್ತೆ: 1.5 ಕಿ.ಮೀ ಉದ್ದದ ರಸ್ತೆಯಲ್ಲಿ ಜಲಮಂಡಳಿಯಿಂದ ಕೊಳವೆ ಜೋಡಿಸುವ ಕಾಮಗಾರಿ ಪೂರ್ಣಗೊಂಡಿದೆ. ಅಗೆದಿರುವ ರಸ್ತೆಯನ್ನು ಎರಡು ದಿನಗಳಲ್ಲಿ ದುರಸ್ತಿಗೊಳಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಗೇರ್ ಸ್ಕೂಲ್ ರಸ್ತೆ: ಗೇರ್ ಸ್ಕೂಲ್ ರಸ್ತೆಯಲ್ಲಿ 4.5 ಕಿ.ಮೀ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. 1.5 ಕಿ.ಮೀ ಉದ್ದದ ರಸ್ತೆಯ ಕಾಮಗಾರಿಯನ್ನು ಮೂರು ದಿನಗಳಲ್ಲಿ ಪೂರ್ಣಗೊಳಿಸಬೇಕು.

ಅಗರ ಕೆರೆ ರಸ್ತೆ: ಅಗರ ಕೆರೆಯ ರಸ್ತೆಯಲ್ಲಿ ಒಳಚರಂಡಿ ಕೊಳವೆ ಅಳವಡಿಸುವ ಕಾರ್ಯ ನಡೆಯುತ್ತಿದ್ದು, ಜಲಮಂಡಳಿ ಹಾಗೂ ನಗರ ಪಾಲಿಕೆ ರಸ್ತೆ ಮತ್ತು ಮೂಲಸೌಕರ್ಯ ವಿಭಾಗದ ಅಧಿಕಾರಿಗಳಿಗೆ ಕೂಡಲೇ ರಸ್ತೆ ದುರಸ್ತಿ ಕಾಮಗಾರಿಯನ್ನು ಪೂರ್ಣಗೊಳಿಸುವಂತೆ ನಿರ್ದೇಶಿಸಿದರು.

ಪೊಲೀಸ್ ಇಲಾಖೆಯ ಸಂಚಾರ ವಿಭಾಗ ಬಿಡುಗಡೆಗೊಳಿಸಿರುವ ಅಸ್ತ್ರಂ ಆ್ಯಪ್‌ನಲ್ಲಿ ಹಾಗೂ ಫಿಕ್ಸ್ ಮೈ ಸ್ಟ್ರೀಟ್ ಆ್ಯಪ್‌ನಲ್ಲಿ ರಸ್ತೆ ಗುಂಡಿ ಮುಚ್ಚುವ ದೂರುಗಳಿಗೆ ಸ್ಪಂದಿಸಬೇಕು. ಆ ಗುಂಡಿಗಳನ್ನು ಮುಚ್ಚುವ ಕೆಲಸ ಮಾಡಬೇಕು.

‘ನೋಡಲ್ ಅಧಿಕಾರಿಗಳಿಗೆ ಜವಾಬ್ದಾರಿ’

ಪೂರ್ವ ನಗರ ಪಾಲಿಕೆಯಲ್ಲಿ ಎಂಟು ಎಂಜಿನಿಯರಿಂಗ್ ವಿಭಾಗಗಳಿದ್ದು, ಇನ್ನು ಮುಂದೆ ಕಾರ್ಯಪಾಲಕ ಎಂಜಿನಿಯರ್‌ಗಳೇ ವಿಭಾಗ ಮಟ್ಟದ ನೋಡಲ್ ಅಧಿಕಾರಿಗಳಾಗಿ ಕಾರ್ಯನಿರ್ವಹಿಸಬೇಕು ಎಂದು ಡಿ.ಎಸ್. ರಮೇಶ್ ಸೂಚಿಸಿದರು.

‘ಕೆಪಿಟಿಸಿಎಲ್, ಬೆಂಗಳೂರು ಜಲಮಂಡಳಿ, ಗೇಲ್, ರೈಲ್ವೆ ಹಾಗೂ ಪೊಲೀಸ್ ಇಲಾಖೆಗಳಲ್ಲೂ ನಗರ ಪಾಲಿಕೆ ವಿಭಾಗವಾರು ಕಾರ್ಯಪಾಲಕ ಎಂಜಿನಿಯರ್ ಹಾಗೂ ಎಸಿಪಿ ಮಟ್ಟದ ಅಧಿಕಾರಿಗಳನ್ನು ನೋಡಲ್ ಅಧಿಕಾರಿಗಳನ್ನಾಗಿ ನೇಮಕ ಮಾಡಿಕೊಂಡು ಜವಾಬ್ದಾರಿ ವಹಿಸಿ, ರಸ್ತೆ ಕಾಮಗಾರಿ, ಪಾದಚಾರಿ ಒತ್ತುವರಿ ತೆರವು ಕಾರ್ಯಾಚರಣೆ, ಅನಧಿಕೃತ ಕಟ್ಟಡಗಳ ತೆರವು ಕಾರ್ಯಾಚರಣೆಯಲ್ಲಿ ನಗರ ಪಾಲಿಕೆಯೊಂದಿಗೆ ಸಂಬಂಧಪಟ್ಟ ವಿವಿಧ ಇಲಾಖೆಗಳು ಸಮನ್ವಯ ಸಾಧಿಸಿ ಕಾರ್ಯನಿರ್ವಹಿಸಬೇಕು ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದರು.

‘ಬಿಲ್ ಪಾವತಿ ಇ.ಇ. ಹೊಣೆ’

ಬೆಂಗಳೂರು: ‘ಲೋಕೋಪಯೋಗಿ ಇಲಾಖೆಯ ಯಾವ ವಿಭಾಗದ ಅಡಿಯಲ್ಲಿ ಗುತ್ತಿಗೆದಾರರು ಕಾಮಗಾರಿಗಳನ್ನು ಕೈಗೊಂಡಿರುತ್ತಾರೆಯೋ, ಆ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್‌ಗಳಿಗೆ ಬಿಲ್‌ಗಳು ಹೋಗುತ್ತವೆ. ಮುಖ್ಯ ಎಂಜನಿಯರ್‌ಗೆ ಹೋಗುವುದಿಲ್ಲ’ ಎಂದು ಉತ್ತರ ಕರ್ನಾಟಕ ಸಿವಿಲ್ ಗುತ್ತಿಗೆದಾರರ ಸಂಘ ಹೇಳಿದೆ.

ಹಿಂದಿನ ಬಿಜೆಪಿ ನೇತೃತ್ವದ ಸರ್ಕಾರದ ಅವಧಿಯಲ್ಲಿ ಕರ್ನಾಟಕ ಗುತ್ತಿಗೆದಾರರ ಸಂಘ ಮಾಡಿದ್ದ ಶೇ 40ರಷ್ಟು ಲಂಚ ಆರೋಪ ಕುರಿತು ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಆಯೋಗದ ವರದಿ ಪಾಲನೆಯಾಗದ ಕುರಿತು ‘ಪ್ರಜಾವಾಣಿ’ಯಲ್ಲಿ ಸೆ. 16ರಂದು ಪ್ರಕಟವಾಗಿತ್ತು. ಈ ಕುರಿತು ಸಂಘದ ಅಧ್ಯಕ್ಷ ಸುಭಾಸ ಬಿ. ಪಾಟೀಲ ತಮ್ಮ ಹೇಳಿಕೆ ನೀಡಿದ್ದಾರೆ.

‘ಈಗಿನ ಕೆ-ಶಿಪ್ ಪ್ರಧಾನ ಎಂಜಿನಿಯರ್ ಆಗಿರುವ ಎಸ್.ಎಫ್. ಪಾಟೀಲರು, ಲೋಕೋಪಯೋಗಿ ಇಲಾಖೆ ಧಾರವಾಡ ಉತ್ತರ ವಲಯದ ಮುಖ್ಯ ಎಂಜಿನಿಯರ್ ಆಗಿದ್ದಾಗ ಲಂಚಕ್ಕೆ ಬೇಡಿಕೆ ಇಟ್ಟಿದ್ದರು ಎಂದು ಹೇಳಲಾಗಿದೆ. ಈ ಆರೋಪದಲ್ಲಿ ಸತ್ಯವಿಲ್ಲ ಎಂದು ಆಯೋಗದ ವರದಿ ತಿಳಿಸಿದೆ’ ಎಂದರು.

In association with

ಇ.ಡಿ ವಿಚಾರಣೆಗೆ ರಾಬಿನ್ ಹಾಜರು

ನವದೆಹಲಿ (ಪಿಟಿಐ): ಆನ್‌ಲೈನ್ ಬೆಟ್ಟಿಂಗ್ ನಂಟಿನ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ, ಮಾಜಿ ಕ್ರಿಕೆಟಿಗ ರಾಬಿನ್ ಉತ್ತಪ್ಪ ಅವರು ವಿಚಾರಣೆಗಾಗಿ ಜಾರಿ ನಿರ್ದೇಶನಾಲಯದ (ಇ.ಡಿ) ಮುಂದೆ ಹಾಜರಾದರು.

ಇ.ಡಿ ಕಚೇರಿಗೆ ಸೋಮವಾರ ಬೆಳಿಗ್ಗೆ 11 ಗಂಟೆ ವೇಳೆಗೆ ರಾಬಿನ್ ಅವರು ವಿಚಾರಣೆಗಾಗಿ ಬಂದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

1xಬೆಟ್ ಆ್ಯಪ್‌ಗೆ ಸಂಬಂಧಿಸಿದ ಪ್ರಕರಣದಲ್ಲಿ ಅವರನ್ನು ಪ್ರಶ್ನಿಸಿದ ಇ.ಡಿ.ಯು, ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿ ಅವರ ಹೇಳಿಕೆಯನ್ನು ದಾಖಲಿಸಿಕೊಂಡಿದೆ ಎಂದಿದ್ದಾರೆ.

ಈ ತನಿಖೆಯ ಭಾಗವಾಗಿ ಕೆಲವು ವಾರಗಳಿಂದ ಮಾಜಿ ಕ್ರಿಕೆಟಿಗರಾದ ಸುರೇಶ್ ರೈನಾ, ಶಿಖರ್ ಧವನ್ ಹಾಗೂ ಟಿಎಂಸಿ ಮಾಜಿ ಸಂಸದೆ, ನಟಿ ಮಿಮಿ ಚಕ್ರವರ್ತಿ, ಬಂಗಾಳಿ ನಟ ಅಂಕುಶ್ ಹಜ್ರಾ ಅವರನ್ನು ಇ.ಡಿ ವಿಚಾರಣೆಗೊಳಪಡಿಸಿದೆ. ಮಾಜಿ ಕ್ರಿಕೆಟಿಗ ಯುವರಾಜ್ ಸಿಂಗ್ ಹಾಗೂ ನಟ ಸೋನು ಸೂದ್ ಅವರಿಗೂ ಕ್ರಮವಾಗಿ ಮಂಗಳವಾರ, ಬುಧವಾರ ವಿಚಾರಣೆಗೆ ಹಾಜರಾಗುವಂತೆ ಸಮನ್ಸ್ ನೀಡಿದೆ.

‘ಈಶಾನ್ಯ ರಾಜ್ಯಗಳ ಕಡೆಗಣಿಸಿದ ‘ಕೈ’

ಅರುಣಾಚಲ ಪ್ರದೇಶ: ₹5,100 ಕೋಟಿ ಮೊತ್ತದ ಯೋಜನೆಗಳಿಗೆ ಪ್ರಧಾನಿ ಚಾಲನೆ

ಇಟಾನಗರ (ಪಿಟಿಐ): ಕಷ್ಟಕರವಾದ ಅಭಿವೃದ್ಧಿ ಯೋಜನೆಗಳನ್ನು ಕೈಬಿಡುವುದು ಕಾಂಗ್ರೆಸ್‌ನ ‘ಹುಟ್ಟು ಗುಣ’ವಾಗಿದ್ದು, ಇದು ಈಶಾನ್ಯದ ರಾಜ್ಯಗಳಿಗೆ ಭಾರಿ ಹಾನಿ ಉಂಟುಮಾಡಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಸೋಮವಾರ ಆರೋಪಿಸಿದರು.

ಅರುಣಾಚಲ ಪ್ರದೇಶದ ಇಟಾ ನಗರದಲ್ಲಿ ₹5,100 ಕೋಟಿ ಮೊತ್ತದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿದ ಬಳಿಕ ರ‍್ಯಾಲಿಯಲ್ಲಿ ಮಾತನಾಡಿದ ಅವರು, ‘ಜಿಎಸ್‌ಟಿ ದರಗಳಲ್ಲಿನ ಪರಿಷ್ಕರಣೆಯು ನವರಾತ್ರಿ ಸಮಯದಲ್ಲಿ ಜನರಿಗೆ ‘ಡಬಲ್ ಸಂಭ್ರಮ’ ತಂದಿದೆ’ ಎಂದು ಹೇಳಿದರು.

‘ದೆಹಲಿಯಲ್ಲಿ ಕುಳಿತು ಈಶಾನ್ಯ ಭಾರತವನ್ನು ಅಭಿವೃದ್ಧಿಪಡಿಸಲು ಸಾಧ್ಯವಿಲ್ಲ ಎಂಬುದು ನನಗೆ ತಿಳಿದಿತ್ತು. ಆದ್ದರಿಂದಲೇ ಸಚಿವರು ಮತ್ತು ಅಧಿಕಾರಿಗಳನ್ನು ಈ ಪ್ರದೇಶಕ್ಕೆ ಹೆಚ್ಚಾಗಿ ಕಳುಹಿಸಿದ್ದೇನೆ. ನಾನೇ ಸ್ವತಃ ಈ ಭಾಗಕ್ಕೆ 70ಕ್ಕೂ ಹೆಚ್ಚು ಬಾರಿ ಬಂದಿದ್ದೇನೆ’ ಎಂದರು.

> ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ಜನರ ಮೇಲೆ ಭಾರಿ ತೆರಿಗೆಯ ಹೊರೆ ಹೇರಿತ್ತು. ಆದರೆ ನಮ್ಮ ಸರ್ಕಾರ ತೆರಿಗೆಗಳನ್ನು ಕ್ರಮೇಣ ಕಡಿಮೆ ಮಾಡಿ, ಜನರ ಹೊರೆ ಇಳಿಸಿದೆ
>
> **ನರೇಂದ್ರ ಮೋದಿ,** ಪ್ರಧಾನಿ

‘ಕಳೆದ ವಾರ ಮಿಜೋರಾಂ, ಮಣಿಪುರ ಮತ್ತು ಅಸ್ಸಾಂಗೆ ಭೇಟಿ ನೀಡಿದ್ದೆ. ದೆಹಲಿ ಇನ್ನು ಮುಂದೆ ನಿಮ್ಮಿಂದ ದೂರವಿರುವುದಿಲ್ಲ. ನಾವು ದೆಹಲಿಯನ್ನು ನಿಮ್ಮ ಮನೆ ಬಾಗಿಲಿಗೆ ತಂದಿದ್ದೇವೆ’ ಎಂದು ಹೇಳಿದರು.

‘ಮಾಡಲು ಕಷ್ಟಕರ ಎನಿಸುವ ಅಭಿವೃದ್ಧಿ ಕಾರ್ಯಗಳನ್ನು ಎಂದಿಗೂ ಕೈಗೆತ್ತಿಕೊಳ್ಳದಿರುವುದು ಕಾಂಗ್ರೆಸ್‌ನ ಒಂದು ಸಹಜ ಗುಣವಾಗಿದೆ. ಅಂತಹ ಅಭಿವೃದ್ಧಿ ಕೆಲಸಗಳನ್ನು ಆ ಪಕ್ಷದವರು ತ್ಯಜಿಸುತ್ತಾರೆ. ಕಾಂಗ್ರೆಸ್‌ನ ಈ ಹವ್ಯಾಸವು ಅರುಣಾಚಲ ಪ್ರದೇಶ ಒಳಗೊಂಡಂತೆ ಇಡೀ ಈಶಾನ್ಯಕ್ಕೆ ಗಮನಾರ್ಹ ಹಾನಿ ಉಂಟುಮಾಡಿದೆ’ ಎಂದು ಟೀಕಿಸಿದರು.

‘ಗುಡ್ಡಗಾಡು ಮತ್ತು ಅರಣ್ಯ ಪ್ರದೇಶ ಗಳಲ್ಲಿ ಅಭಿವೃದ್ಧಿ ಕಾರ್ಯಗಳು ಸವಾಲಿನದ್ದಾಗಿರುತ್ತವೆ. ಕಾಂಗ್ರೆಸ್ ಪಕ್ಷವು ಆ ಪ್ರದೇಶಗಳನ್ನು ಹಿಂದುಳಿದ ಪ್ರದೇಶ ಗಳೆಂದು ಘೋಷಿಸಿ ಮರೆತು ಬಿಡುತ್ತದೆ’ ಎಂದು ಅವರು ಆರೋಪಿಸಿದರು.

ಅರುಣಾಚಲ ಪ್ರದೇಶದ ಮುಖ್ಯಮಂತ್ರಿ ಪೆಮಾ ಖಂಡು ಅವರು ಪ್ರಧಾನಿ ಮೋದಿ ಅವರನ್ನು ಸನ್ಮಾನಿಸಿದರು —ಪಿಟಿಐ ಚಿತ್ರ

ಚುನಾವಣಾ ಪ್ರಚಾರ: ಟೀಕೆ

ಪ್ರಧಾನಿ ಹೇಳಿಕೆಗೆ ಕಾಂಗ್ರೆಸ್ ತಿರುಗೇಟು ನೀಡಿದ್ದು, ‘ಸರ್ಕಾರದ ಅಧಿಕೃತ ಕಾರ್ಯಕ್ರಮವನ್ನು ಬಿಜೆಪಿಯು ಚುನಾವಣಾ ಪ್ರಚಾರದ ಕಾರ್ಯಕ್ರಮವಾಗಿ ಪರಿವರ್ತಿಸಿದೆ’ ಎಂದು ಟೀಕಿಸಿದೆ.

‘ನಿರುದ್ಯೋಗ, ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರದ ಸಮಸ್ಯೆಗಳು, ಪ್ರವಾಹ ನಿಯಂತ್ರಣ, ವಿಪತ್ತು ನಿರ್ವಹಣೆ ಹಾಗೂ ಚೀನಾದ ಆಕ್ರಮಣ ಸೇರಿದಂತೆ ಅರುಣಾಚಲ ಪ್ರದೇಶ ಎದುರಿಸುತ್ತಿರುವ ಪ್ರಮುಖ ಸಮಸ್ಯೆಗಳನ್ನು ಪ್ರಧಾನಿ ಸಂಪೂರ್ಣವಾಗಿ ನಿರ್ಲಕ್ಷಿಸಿದ್ದಾರೆ’ ಎಂದು ಅರುಣಾಚಲ ಪ್ರದೇಶ ಕಾಂಗ್ರೆಸ್ ಸಮಿತಿ ದೂರಿದೆ.

‘ಹೆಚ್ಚಿನ ಜನರನ್ನು ಸೇರಿಸುವ ಉದ್ದೇಶದಿಂದ ಸಾವಿರಾರು ದಿನಗೂಲಿ ನೌಕರರನ್ನು ರ‍್ಯಾಲಿಗೆ ಕರೆತರಲಾಗಿದೆ’ ಎಂದು ಹೇಳಿದೆ.

ಸುದ್ದಿ 2 ನಿಮಿಷ

‘ಬೋಧನೆಗೆ ಅಡ್ಡಿಯಾಗದಿರಲು ಸಮೀಕ್ಷೆಗೆ ದಸರಾ ರಜೆ ಬಳಕೆ’

ಬೆಂಗಳೂರು: ‘ಶಾಲಾ ಅವಧಿಯಲ್ಲಿ ಬೋಧನೆಗೆ ಅಡ್ಡಿಯಾಗಬಾರದು ಎಂಬ ಕಾರಣಕ್ಕೆ ಜಾತಿವಾರು ಸಮೀಕ್ಷೆಗೆ ದಸರಾ ರಜೆಯನ್ನು ಬಳಸಿಕೊಂಡಿದ್ದೇವೆ. ರಜೆ ಮುಗಿದ ತಕ್ಷಣ ಶಾಲೆಗಳು ಪುನರಾರಂಭವಾಗಲಿವೆ’ ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಶಿಕ್ಷಕರಿಗೆ ದಸರಾ ಹಬ್ಬ ಮಾಡಲು ಅವಕಾಶ ಕೊಡದೇ ಸಮೀಕ್ಷೆ ಮಾಡಿಸಲಾಗುತ್ತಿದೆ ಎಂದು ಬಿಜೆಪಿ ಆರೋಪ ಮಾಡಿದೆ. ಬಿಜೆಪಿ ಅವಧಿಯಲ್ಲೂ ಶಿಕ್ಷಕರ ಮೇಲೆ ಅನ್ಯ ಕಾರ್ಯಗಳ ಭಾರ ಇತ್ತು. ಕೇಂದ್ರ ಸರ್ಕಾರ ನಡೆಸುವ ಗಣತಿಯನ್ನು ಅವರು ಯಾರ ಬಳಿ ಮಾಡಿಸುತ್ತಾರೆ? ಶಿಕ್ಷಕರನ್ನು ಬಳಸದ ಹೊರತು ಬೇರೆ ಪರ್ಯಾಯ ವ್ಯವಸ್ಥೆ ಎಲ್ಲಿದೆ’ ಎಂದು ಪ್ರಶ್ನಿಸಿದರು.

‘ಜನರ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗತಿ ಅರಿಯಲು ಸಮೀಕ್ಷೆ ಅನಿವಾರ್ಯ. ಸಮೀಕ್ಷೆಯಲ್ಲಿ ಭಾಗವಹಿಸಲು ಶಿಕ್ಷಕರು ಹಾಗೂ ಶಿಕ್ಷಕರ ಸಂಘಟನೆಗಳ ಜತೆ ಮಾತನಾಡಿ ಮನವರಿಕೆ ಮಾಡಿಕೊಟ್ಟಿದ್ದೇವೆ. ಶಿಕ್ಷಕರೂ ಸಹಕಾರ ನೀಡುತ್ತಿದ್ದಾರೆ. ಜನರೂ ಸಹ ಮನೆಗಳ ಬಳಿಗೆ ಬರುವ ಶಿಕ್ಷಕರಿಗೆ ಸಂಪೂರ್ಣ ಸಹಕಾರ ನೀಡಬೇಕು’ ಎಂದು ಕೋರಿದರು.

‘ದಸರಾ ರಜೆ ವಿಸ್ತರಣೆ ಪ್ರಸ್ತಾಪ ಇಲ್ಲ. ರಜೆ ಮುಗಿಯುತ್ತಿದ್ದಂತೆ ಶಾಲೆಗಳು ಆರಂಭವಾಗುತ್ತವೆ. ಸಮೀಕ್ಷೆಯಲ್ಲಿ ಭಾಗವಹಿಸುವ ಶಿಕ್ಷಕರಿಗೆ ಪರ್ಯಾಯ ರಜೆ ನೀಡುವ ಕುರಿತು ಚರ್ಚಿಸಲಾಗುವುದು. ನಂತರ ನಿರ್ಧಾರ ತೆಗೆದುಕೊಳ್ಳಲಾಗುವುದು’ ಎಂದು ಹೇಳಿದರು.

ಜಾತಿ ಹೆಸರಲ್ಲಿ ರ‍್ಯಾಲಿಗೆ ನಿಷೇಧ

ಲಖನೌ (ಪಿಟಿಐ): ಪೊಲೀಸ್ ದಾಖಲೆಗಳು ಮತ್ತು ಸಾರ್ವಜನಿಕ ಸೂಚನೆಗಳಲ್ಲಿ ಮಾಡಿರುವ ಎಲ್ಲಾ ರೀತಿಯ ಜಾತಿ ಉಲ್ಲೇಖಗಳನ್ನು ತಕ್ಷಣವೇ ತೆಗೆದುಹಾಕಲು ಉತ್ತರ ಪ್ರದೇಶ ಸರ್ಕಾರ ಆದೇಶಿಸಿದೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ಜಾತಿ ಆಧಾರಿತ ತಾರತಮ್ಯ ತೊಡೆದುಹಾಕುವ ಉದ್ದೇಶವನ್ನು ಹೊಂದಿರುವ ಅಲಹಾಬಾದ್ ಹೈಕೋರ್ಟ್‌ನ ತೀರ್ಪಿಗೆ ಅನುಸಾರ ಈ ಆದೇಶ ಹೊರಡಿಸಲಾಗಿದೆ. ಜಾತಿ ಆಧಾರಿತ ರ‍್ಯಾಲಿಗಳು ಮತ್ತು ರಾಜಕೀಯ ಉದ್ದೇಶಗಳನ್ನು ಹೊಂದಿರುವ ಸಾರ್ವಜನಿಕ ಕಾರ್ಯಕ್ರಮಗಳನ್ನು ರಾಜ್ಯದಾದ್ಯಂತ ನಿಷೇಧಿಸಲಾಗಿದೆ. ಜಾತಿಯ ಕುರಿತು ಹೊಗಳುವ ಅಥವಾ ದ್ವೇಷವನ್ನು ಉತ್ತೇಜಿಸುವ ಸಾಮಾಜಿಕ ಮಾಧ್ಯಮ ಪೋಸ್ಟ್‌ಗಳ ಮೇಲೂ ನಿಗಾ ಇಡಲಾಗುವುದು ಎಂದಿದೆ.

ಅಧಿಕೃತ ಆದೇಶದ ಪ್ರಕಾರ ಇನ್ನು ಮುಂದೆ ಪೊಲೀಸ್ ನೋಂದಣಿ, ಪ್ರಕರಣದ ವರದಿ, ಬಂಧನಕ್ಕೆ ಸಂಬಂಧಿಸಿದ ದಾಖಲೆಗಳಲ್ಲಿ ಆರೋಪಿಗಳ ಜಾತಿಯನ್ನು ಉಲ್ಲೇಖಿಸಬಾರದು ಅಥವಾ ಪೊಲೀಸ್ ಠಾಣೆಯ ಸೂಚನಾ ಫಲಕಗಳಲ್ಲಿ ಪ್ರದರ್ಶಿಸಬಾರದು ಎಂದು ಮುಖ್ಯ ಕಾರ್ಯದರ್ಶಿ ದೀಪಕ್ ಕುಮಾರ್ ಸೂಚನೆ ನೀಡಿದ್ದಾರೆ.

‘ಅಲಹಾಬಾದ್ ಹೈಕೋರ್ಟ್ ಸೆಪ್ಟೆಂಬರ್ 16ರಂದು ನೀಡಿದ ತೀರ್ಪಿಗೆ ಅನುಗುಣವಾಗಿ ಪೊಲೀಸ್ ಇಲಾಖೆ ಮತ್ತು ಎಲ್ಲ ಜಿಲ್ಲಾಡಳಿತ ಗಳಿಗೆ ಈ ನಿರ್ದೇಶನ ನೀಡಲಾಗಿದ್ದು, ತಕ್ಷಣವೇ ಜಾರಿಗೆ ಬರುತ್ತದೆ’ ಎಂದು ತಿಳಿಸಿದ್ದಾರೆ. ಈ ಆದೇಶದ ಪರಿಣಾಮಕಾರಿ ಜಾರಿಯನ್ನು ಖಚಿತಪಡಿಸಿಕೊಳ್ಳಲು ಮತ್ತು ಹೊಸ ನಿಯಮಗಳ ಬಗ್ಗೆ ಜಾಗೃತಿ ಮೂಡಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ತರಬೇತಿ ನೀಡುವಂತೆಯೂ ತಿಳಿಸಲಾಗಿದೆ.

ಡಿಜಿಟಲ್ ಅರೆಸ್ಟ್: ₹23 ಕೋಟಿ ವಂಚನೆ

ನವದೆಹಲಿ (ಪಿಟಿಐ): ದೆಹಲಿಯ ಮಾಜಿ ಬ್ಯಾಂಕರ್ ಒಬ್ಬರನ್ನು ‘ಡಿಜಿಟಲ್ ಅರೆಸ್ಟ್’ ಹೆಸರಿನಲ್ಲಿ ಒಂದು ತಿಂಗಳು ಡಿಜಿಟಲ್ ಕಣ್ಗಾವಲಿನಲ್ಲಿ ಇರಿಸಿಕೊಂಡಿದ್ದ ಸೈಬರ್ ವಂಚಕರು ₹23 ಕೋಟಿ ದೋಚಿದ್ದಾರೆ.

‘ಮಾದಕವಸ್ತು ಕಳ್ಳಸಾಗಣೆ, ಭಯೋತ್ಪಾದಕರಿಗೆ ಧನಸಹಾಯ ಹಾಗೂ ಪುಲ್ವಾಮಾ ಭಯೋತ್ಪಾದಕ ದಾಳಿಯಲ್ಲಿ ಭಾಗಿಯಾದವರಿಂದ ನಿಮ್ಮ ಆಧಾರ್ ಕಾರ್ಡ್ ಬಳಕೆಯಾಗಿದೆ’ ಎಂದು ಸೈಬರ್ ಆರೋಪಿಯು ನಿವೃತ್ತ ಅಧಿಕಾರಿಗೆ ತಿಳಿಸಿ, ತನಿಖೆಗೊಳಪಡಿಸಿದ್ದಾನೆ.

ತನಿಖೆಯ ಹೆಸರಿನಲ್ಲಿ ಒಂದು ತಿಂಗಳು ‘ಡಿಜಿಟಲ್ ಅರೆಸ್ಟ್’ ಹೆಸರಿನಲ್ಲಿ ಗೃಹಬಂಧನದಲ್ಲಿಟ್ಟು, ಹಂತ ಹಂತವಾಗಿ ಅವರ ಖಾತೆಗಳಿಂದ ತನ್ನ ಬೇರೆ ಬೇರೆ ಖಾತೆಗೆ ಬೃಹತ್ ಮೊತ್ತವನ್ನು ವಂಚಕನು ವರ್ಗಾಯಿಸಿಕೊಂಡಿದ್ದಾನೆ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಮುಂಬೈನ ಪೊಲೀಸ್ ಅಧಿಕಾರಿ ಎಂದು ಆಗಸ್ಟ್ 4ರಂದು ಕರೆ ಮಾಡಿದ್ದ ಸೈಬರ್ ವಂಚಕನು, ಮಾದಕವಸ್ತು ಕಳ್ಳಸಾಗಣೆ ದಂಧೆ ಹೆಸರಿನಲ್ಲಿ ನಿವೃತ್ತ ಅಧಿಕಾರಿಯನ್ನು ಹೆದರಿಸಿದ್ದ. ನಂತರ ಜಾರಿ ನಿರ್ದೇಶನಾಲಯ (ಇ.ಡಿ) ಹಾಗೂ ಸಿಬಿಐ ಅಧಿಕಾರಿಗಳ ಸೋಗಿನಲ್ಲಿ ವಂಚಕರು ಬ್ಯಾಂಕರ್‌ನನ್ನು ಸಂಪರ್ಕಿಸಿದ್ದಾರೆ. ಈ ವಿಷಯ ಬಹಿರಂಗವಾದರೆ ಭೀಕರ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಸೆ. 4ರವರೆಗೂ ಕಿರುಕುಳ ನೀಡಿದ್ದಾರೆ. ಹಂತ ಹಂತವಾಗಿ ವಿವಿಧ ಖಾತೆಗಳಿಗೆ ಹಣ ಹಾಕಿಸಿಕೊಂಡಿದ್ದಾರೆ.

ವಂಚನೆಗೆ ಒಳಗಾಗಿರುವುದು ಅರಿವಾಗುತ್ತಿದ್ದಂತೆ, ಸೆ.19ರಂದು ನಿವೃತ್ತ ಬ್ಯಾಂಕರ್ ಎನ್‌ಸಿಆರ್‌ಪಿ ಪೋರ್ಟಲ್‌ನಲ್ಲಿ ದೂರು ದಾಖಲಿಸಿದರು.

ಎಫ್‌ಐಆರ್ ದಾಖಲಿಸಿಕೊಂಡ ಐಎಫ್‌ಎಸ್‌ಒ ಘಟಕವು, ವಂಚಕರ ವಿವಿಧ ಬ್ಯಾಂಕ್ ಖಾತೆಗಳಲ್ಲಿದ್ದ ₹12.11 ಕೋಟಿ ರೂಪಾಯಿಗಳನ್ನು ಸ್ಥಗಿತಗೊಳಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ತನಿಖೆಯ ಜಾಡು ತಪ್ಪಿಸಲಿಕ್ಕಾಗಿಯೇ ವಂಚಕರು ದೇಶದ ವಿವಿಧ ಭಾಗಗಳಲ್ಲಿ ಹಣವನ್ನು ನಗದೀಕರಿಸಿಕೊಂಡಿದ್ದಾರೆ. ಹಲವು ತಂಡಗಳು ಕಾರ್ಯಾಚರಣೆಯಲ್ಲಿ ಭಾಗಿಯಾಗಿವೆ ಎಂದಿದ್ದಾರೆ.

‘ಒಕ್ಕಲಿಗ ಉಪಜಾತಿಯನ್ನೂ ಬರೆಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಾಮಾಜಿಕ–ಶೈಕ್ಷಣಿಕ(ಜಾತಿವಾರು) ಸಮೀಕ್ಷೆ ವೇಳೆ ಜಾತಿ ಕಾಲಂನಲ್ಲಿ ಒಕ್ಕಲಿಗ ಹಾಗೂ ಉಪ ಜಾತಿ ಕಾಲಂನಲ್ಲಿ ತಮ್ಮ ಉಪ ಜಾತಿಯನ್ನು ನಮೂದಿಸಬೇಕು’ ಎಂದು ಒಕ್ಕಲಿಗ ಧರ್ಮ ಮಹಾಸಭಾದ ಸಂಸ್ಥಾಪಕ ಸಿದ್ಧರಾಮ ಸ್ವಾಮೀಜಿ ಹೇಳಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಜಾತಿಯ ಕಾಲಂನಲ್ಲಿ ಒಕ್ಕಲಿಗ ಹಾಗೂ ಉಪ ಜಾತಿಯ ಕಾಲಂನಲ್ಲಿ ಉಪ ಜಾತಿಗಳನ್ನು ಬರೆಯಿಸಿದರೆ ಒಕ್ಕಲಿಗರ ಜನಸಂಖ್ಯೆ ಕಡಿಮೆ ಆಗುತ್ತದೆ ಎಂಬ ಸುಳ್ಳು ಸುದ್ದಿ ಹಬ್ಬಿಸುತ್ತಿದ್ದಾರೆ. ಇದರಿಂದ ಯಾವುದೇ ರೀತಿಯ ಸಮಸ್ಯೆ ಆಗುವುದಿಲ್ಲ. ಉಪ ಜಾತಿಯ ಕಾಲಂನಲ್ಲಿ ತಮ್ಮನ್ನು ಗುರುತಿಸಿಕೊಳ್ಳುವುದರಿಂದ ಒಕ್ಕಲಿಗ ಸಮುದಾಯದಲ್ಲಿ ಇರುವ ಉಪ ಜಾತಿಗಳ ನಿಖರ ಜನಸಂಖ್ಯೆ ಗೊತ್ತಾಗಲಿದೆ’ ಎಂದು ತಿಳಿಸಿದರು.

‘ಸಮೀಕ್ಷೆಯ ಸಂದರ್ಭದಲ್ಲಿ ಉಪ ಜಾತಿಯನ್ನು ಬರೆಯಿಸದೇ ಹೋದರೆ ನಮ್ಮ ಮುಂದಿನ ಪೀಳಿಗೆಗಳು ತಮ್ಮ ಮೂಲ ಜಾತಿಯನ್ನು ಮರೆತು ಬಿಡುತ್ತವೆ. ಸರ್ಕಾರಿ ದಾಖಲೆಗಳಲ್ಲಿ ಗಂಗಟಕಾರ್, ಮರಸು, ದಾಸ, ಹಳ್ಳಿಕಾರ್ ಹೀಗೆ ಅನೇಕ ಉಪಜಾತಿಗಳು ಕಣ್ಮರೆಯಾಗುವ ಸಾಧ್ಯತೆ ಇದೆ. ಉಪ ಜಾತಿಗಳನ್ನು ಗುರುತಿಸಲು ಪ್ರತ್ಯೇಕ ಸಮೀಕ್ಷೆಯನ್ನು ನಡೆಸುವುದಿಲ್ಲ. ಹಾಗಾಗಿ ಒಕ್ಕಲಿಗ ಸಮುದಾಯವರು ಎಚ್ಚೆತ್ತುಕೊಂಡು ತಮ್ಮ ಉಪ ಜಾತಿಗಳನ್ನು ಸಮೀಕ್ಷೆಯ ವೇಳೆ ಬರೆಯಿಸಬೇಕು’ ಎಂದ ಕರೆ ನೀಡಿದರು.

‘ವಹ್ನಿಕುಲ ಕ್ಷತ್ರಿಯರು ಎಂದೇ ನಮೂದಿಸಿ’

‘ಸಾಮಾಜಿಕ–ಶೈಕ್ಷಣಿಕ ಸಮೀಕ್ಷೆ ವೇಳೆ ಜಾತಿ ಕಾಲಂನಲ್ಲಿ ವಹ್ನಿಕುಲ ಕ್ಷತ್ರಿಯರು ಎಂದೇ ಸ್ಪಷ್ಟವಾಗಿ ನಮೂದಿಸಬೇಕು ಎಂದು ವಹ್ನಿಕುಲ ಕ್ಷತ್ರಿಯರ ಗುರುಪೀಠ ತಿಳಿಸಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಆದಿಶಕ್ತಿ ಮಹಾಸಂಸ್ಥಾನ ಮಠ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಕೆ. ಲಕ್ಷ್ಮಣ, ‘ಸಮೀಕ್ಷೆ ನಡೆಯುವ ವೇಳೆ ‘ವಹ್ನಿಕುಲ ಕ್ಷತ್ರಿಯ’ ಜಾತಿ ಜತೆಗೆ ಉಪ ಜಾತಿಗಳಾದ ಧರ್ಮರಾಜು ಕಾಪು, ಗೌಂಡರ್, ಪಡಿಯಾಜಿ, ಪಳ್ಳಿ, ಸೇರಿ ಸಂಬಂಧಪಟ್ಟ ಉಪಜಾತಿಗಳನ್ನು ಬರೆಯಿಸಬೇಕು. ಇದರಿಂದ ಸಮುದಾಯದ ಜನಸಂಖ್ಯೆ ಮತ್ತು ಸಾಮಾಜಿಕ ಸ್ಥಾನಮಾನದ ಬಗ್ಗೆ ತಿಳಿಯಲು ಸಾಧ್ಯವಾಗಲಿದೆ’ ಎಂದರು.

ವಿಶ್ರಾಂತ ಕುಲಪತಿ ಕೆ. ಆರ್. ವೇಣುಗೋಪಾಲ್, ‘ಸಮೀಕ್ಷೆ ಕೇವಲ ಅಂಕಿ - ಅಂಶಗಳ ಸಂಗ್ರಹವಲ್ಲ, ಬದಲಾಗಿ ಸಮುದಾಯದ ಭವಿಷ್ಯ ಮತ್ತು ರಾಜಕೀಯ ಪ್ರಾತಿನಿಧ್ಯ ನಿರ್ಧರಿಸುವ ನಿರ್ಣಾಯಕ ಹೆಜ್ಜೆಯಾಗಿದೆ. ಇದರಲ್ಲಿ ಎಲ್ಲರೂ ಸಕ್ರಿಯವಾಗಿ ಪಾಲ್ಗೊಳ್ಳಬೇಕು’ ಎಂದರು.

‘ಶಿವಾರ್ಚಕ’ ಎಂದೇ ನಮೂದಿಸಿ

ಸಮೀಕ್ಷೆ ವೇಳೆ ಧರ್ಮದ ಕಾಲಂನಲ್ಲಿ ಹಿಂದೂ ಹಾಗೂ ಜಾತಿಯ ಕಾಲಂನಲ್ಲಿ ‘ಶಿವಾರ್ಚಕ’ ಎಂದೇ ನಮೂದಿಸಬೇಕು ಎಂದು ಬೆಂಗಳೂರು ಶಿವಾರ್ಚಕ ಕ್ಷೇಮಾಭಿವೃದ್ಧಿ ಟ್ರಸ್ಟ್ ತಿಳಿಸಿದೆ.

ಜಾತಿ ಕಾಲಂನ ಕ್ರಮ ಸಂಖ್ಯೆ ಎ–1320 ಅಡಿಯಲ್ಲಿ ಶಿವಾರ್ಚಕ ಎಂದೇ ಬರೆಯಿಸಬೇಕು. ಇದರಿಂದ ಸಮುದಾಯದ ನಿಖರ ಜನಸಂಖ್ಯೆ ತಿಳಿಯಲಿದೆ. ಇದು ಮುಂದಿನ ದಿನಗಳಲ್ಲಿ ಸರ್ಕಾರದ ಸೌಲಭ್ಯಗಳನ್ನು ಪಡೆದುಕೊಳ್ಳಲು ಅನುಕೂಲವಾಗುತ್ತದೆ. ಸಮುದಾಯದವರು ಯಾವುದೇ ಗೊಂದಲಕ್ಕೆ ಒಳಗಾಗಬಾರದು ಎಂದು ಟ್ರಸ್ಟ್‌ನ ಅಧ್ಯಕ್ಷ ಪುಟ್ಟಬಸಪ್ಪ, ಪ್ರಧಾನ ಕಾರ್ಯದರ್ಶಿ ಸಿ. ಗೋಪಾಲ್ ಹಾಗೂ ಖಜಾಂಚಿ ಮಹೇಶ್ ಅವರು ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಏರ್ ಇಂಡಿಯಾ ಅಪಘಾತದ ವರದಿ: ‘ಸುಪ್ರೀಂ’ ಕಿಡಿ

ನವದೆಹಲಿ (ಪಿಟಿಐ): ಅಹಮದಾಬಾದ್‌ನಲ್ಲಿ ಜೂನ್ 12ರಂದು ಸಂಭವಿಸಿದ್ದ ಏರ್ ಇಂಡಿಯಾ ವಿಮಾನ ಅಪಘಾತದ ಕುರಿತ ಪ್ರಾಥಮಿಕ ತನಿಖೆಯ ವರದಿಯ ಆಯ್ದ ಭಾಗವನ್ನು ಬಿಡುಗಡೆ ಮಾಡಿರುವುದನ್ನು ‘ದುರದೃಷ್ಟಕರ ಮತ್ತು ಬೇಜವಾಬ್ದಾರಿತನ’ ಎಂದು ಸುಪ್ರೀಂ ಕೋರ್ಟ್ ಸೋಮವಾರ ಖಂಡಿಸಿದೆ.

ಪೈಲಟ್‌ಗಳ ಲೋಪದಿಂದಾಗಿ ವಿಮಾನ ಅಪಘಾತ ನಡೆದಿದೆ ಎಂದು ವಿವರಿಸುವ ವರದಿಯ ಈ ಆಯ್ದ ಭಾಗಗಳು ಮಾಧ್ಯಮಗಳು ನಿರೂಪಣೆ ರಚಿಸಲು ದಾರಿ ಮಾಡಿಕೊಡುತ್ತದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಎನ್. ಕೋಟೀಶ್ವರ್ ಸಿಂಗ್ ಅವರ ಪೀಠವು, ‘ವಿಚಾರಣೆ ಪೂರ್ಣಗೊಳ್ಳುವವರೆಗೆ ಈ ರೀತಿಯ ವರದಿಗಳು ಸಂಪೂರ್ಣವಾಗಿ ಗೋಪ್ಯವಾಗಿರಬೇಕು. ನಾವು ಅಂತಿಮ ವರದಿಗಾಗಿ ಕಾಯಬೇಕು. ಇದರಲ್ಲಿ ಅಪಘಾತದಲ್ಲಿ ಮೃತಪಟ್ಟವರ ಗೌಪ್ಯತೆ ಮತ್ತು ಘನತೆಯ ಅಂಶವೂ ಒಳಗೊಂಡಿತ್ತು’ ಎಂದು ಹೇಳಿದೆ.

ಜುಲೈ 12ರಂದು ಬಿಡುಗಡೆಯಾದ ವಿಮಾನ ಅಪಘಾತ ತನಿಖಾ ಬ್ಯೂರೊ (ಎಎಐಬಿ) ಪ್ರಾಥಮಿಕ ವರದಿಯ ಕೆಲವು ಅಂಶಗಳನ್ನು ಪೀಠವು ಟಿಪ್ಪಣಿ ಮಾಡಿಕೊಂಡಿದ್ದು, ಮಾಧ್ಯಮ ನಿರೂಪಣೆಗೆ ಕಾರಣವಾದ ವರದಿಗಳಲ್ಲಿ ‘ತುಂಡು ಮತ್ತು ಆಯ್ದ’ ಭಾಗಗಳನ್ನು ಪ್ರಕಟಿಸಿದ್ದು ಬೇಜವಾಬ್ದಾರಿತನ ಎಂದು ಟೀಕಿಸಿದೆ.

ಸೇಫ್ಟೀ ಮ್ಯಾಟರ್ಸ್ ಫೌಂಡೇಷನ್ ಎಂಬ ಎನ್‌ಜಿಒ ಪರವಾಗಿ ಹಾಜರಾದ ಹಿರಿಯ ವಕೀಲ ಪ್ರಶಾಂತ್ ಭೂಷಣ್ ಅವರು, ‘ಅಪಘಾತ ನಡೆದ ನಂತರ ರಚಿಸಲಾದ ತನಿಖಾ ಸಮಿತಿಯಲ್ಲಿ ಮೂವರು ಸದಸ್ಯರು ವಾಯುಯಾನ ನಿಯಂತ್ರಕದವರೇ ಇದ್ದು, ವರದಿಯಲ್ಲಿ ಹಿತಾಸಕ್ತಿ ಸಂಘರ್ಷದ ಸಮಸ್ಯೆ ಇರುತ್ತದೆ’ ಎಂದು ಆರೋಪಿಸಿದ್ದಾರೆ.

ಗಾಯಕ ಜುಬೀನ್: ಮತ್ತೆ ಮರಣೋತ್ತರ ಪರೀಕ್ಷೆ

ಗುವಾಹಟಿ (ಪಿಟಿಐ): ಜನಪ್ರಿಯ ಗಾಯಕ ಜುಬೀನ್ ಗರ್ಗ್ ಅವರ ಮರಣೋತ್ತರ ಪರೀಕ್ಷೆಯನ್ನು ಮತ್ತೊಮ್ಮೆ ಮಂಗಳವಾರ ಬೆಳಿಗ್ಗೆ ನಡೆಸಲಾಗುವುದು ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮ ಅವರು ಹೇಳಿದ್ದಾರೆ.

ಗರ್ಗ್ ಅವರು ಸೆ.19ರಂದು ಸಿಂಗಪುರದಲ್ಲಿ ಸ್ಕೂಬಾ ಡೈವಿಂಗ್ ಮಾಡುತ್ತಿದ್ದ ವೇಳೆ ಮೃತಪಟ್ಟಿದ್ದರು. ಅವರ ಮರಣೋತ್ತರ ಪರೀಕ್ಷೆಯನ್ನು ಅಲ್ಲಿಯೇ ನಡೆಸಿ ಬಳಿಕ ಮೃತದೇಹವನ್ನು ಭಾರತಕ್ಕೆ ತರಲಾಗಿತ್ತು. ಗುವಾಹಟಿ ವೈದ್ಯಕೀಯ ಕಾಲೇಜಿನಲ್ಲಿ ಮತ್ತೆ ಮರಣೋತ್ತರ ಪರೀಕ್ಷೆ ನಡೆಯಲಿದೆ. ‘ಮರು ಮರಣೋತ್ತರ ಪರೀಕ್ಷೆಗೆ ಸಾರ್ವಜನಿಕರು ಬೇಡಿಕೆ ಇಟ್ಟಿರಲಿಲ್ಲ. ಆದರೆ ಕೆಲವರ ಒತ್ತಾಯದ ಮೇರೆಗೆ ಜುಬೀನ್ ಅವರ ಪತ್ನಿಯ ಅನುಮತಿಯೊಂದಿಗೆ ಮರುಪರೀಕ್ಷೆ ನಡೆಸಲಾಗುತ್ತಿದೆ’ ಎಂದು ಹಿಮಂತ ಅವರು ಹೇಳಿದ್ದಾರೆ.

ನಟಿ ಜಾಕ್ವೆಲಿನ್ ಅರ್ಜಿ ವಜಾ



ನವದೆಹಲಿ (ಪಿಟಿಐ): ವಂಚನೆ ಆರೋಪ ಎದುರಿಸುತ್ತಿರುವ ಸುಕೇಶ್ ಚಂದ್ರಶೇಖರ್ ಆರೋಪಿಯಾಗಿರುವ ₹200 ಕೋಟಿ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಇಸಿಐಆರ್ ರದ್ದುಗೊಳಿಸುವಂತೆ ನಟಿ ಜಾಕ್ವೆಲಿನ್ ಫರ್ನಾಂಡಿಸ್ ಸಲ್ಲಿಸಿದ್ದ ಮನವಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ದೆಹಲಿ ಹೈಕೋರ್ಟ್ ನೀಡಿದ ಆದೇಶದಲ್ಲಿ ಹಸ್ತಕ್ಷೇಪ ಮಾಡಲು ಸುಪ್ರೀಂ ಕೋರ್ಟ್ ಸೋಮವಾರ ನಿರಾಕರಿಸಿದೆ.

‘ಈ ಹಂತದಲ್ಲಿ ನಾವು ಹಸ್ತಕ್ಷೇಪ ಮಾಡುವುದಿಲ್ಲ’ ಎಂದು ಪೀಠವು ಫರ್ನಾಂಡಿಸ್ ಪರ ವಕೀಲರಿಗೆ ತಿಳಿಸಿದೆ.

‘ಸಮೀಕ್ಷೆ ಮುಂದೂಡಲು ಸಾಧ್ಯವೇ?’

ಒಂದನೇ ಪುಟದಿಂದ...

ವಿಚಾರಣೆ ವೇಳೆ ಎಲ್ಲ ಅರ್ಜಿದಾರರ ಪರ ಹಾಜರಿದ್ದ ಪದಾಂಕಿತ ಹಿರಿಯ ವಕೀಲರಾದ ಪ್ರಭುಲಿಂಗ ಕೆ.ನಾವದಗಿ, ಅಶೋಕ ಹಾರನಹಳ್ಳಿ, ಜಯಕುಮಾರ್ ಎಸ್.ಪಾಟೀಲ್, ವಿವೇಕ್ ರೆಡ್ಡಿ, ಎಸ್.ಶ್ರೀರಂಗ ಮತ್ತು ಎಸ್.ಎಂ.ಚಂದ್ರಶೇಖರ್ ಅವರ ವಾದವನ್ನು ಪೀಠ ಆಲಿಸಿತು.

‘ಅರ್ಜಿದಾರರ ವಾದದಲ್ಲಿ ಹುರುಳಿರುವಂತಿದೆ. ಅವರು ತಮ್ಮ ಅಭಿಪ್ರಾಯವನ್ನು ಲಿಖಿತ ರೂಪದಲ್ಲಿ ಸಲ್ಲಿಸಲಿ’ ಎಂದು ಸೂಚಿಸಿತು.

ಅರ್ಜಿದಾರರ ಪರ ವಕೀಲರು, ‘ಇದು ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ಅಲ್ಲ. ಆ ಹೆಸರಲ್ಲಿ ನಡೆಸುತ್ತಿರುವ ಜಾತಿಗಣತಿ. ಜನಗಣತಿ ನಡೆಸುವುದು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಒಳಪಟ್ಟ ವಿಚಾರ. ಸಮೀಕ್ಷೆಯ ಹೆಸರಿನಲ್ಲಿ ಸರ್ಕಾರದ ರಾಜಕೀಯ ದುರುದ್ದೇಶ ಅಡಗಿದೆ’ ಎಂದು ಆಕ್ಷೇಪಿಸಿದರು. ‘ಜಾತಿಗಣತಿ ಅಂಕಿ ಅಂಶಗಳನ್ನು ಜಿಯೋ ಟ್ಯಾಗಿಂಗ್ ಮೂಲಕ ಆಧಾರ್ ಕಾರ್ಡ್‌ಗೆ ಲಿಂಕ್ ಮಾಡಲಾಗುತ್ತಿದೆ. ಇದು ಆಧಾರ್ ಕಾಯ್ದೆಗೆ ವಿರುದ್ಧವಾಗಿದೆ’ ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ, ರಾಜ್ಯ ಸರ್ಕಾರದ ಪರ ವಿಡಿಯೊ ಕಾನ್ಫರೆನ್ಸ್ ಮುಖಾಂತರ ಹಾಜರಾಗಿದ್ದ ಪದಾಂಕಿತ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ, ‘₹425 ಕೋಟಿ ವೆಚ್ಚ ಮಾಡಿ ಈ ಸಮೀಕ್ಷೆ ನಡೆಸಲಾಗುತ್ತಿದೆ. ಇದರಲ್ಲಿ ಶಿಕ್ಷಕರು, ಆಶಾ ಕಾರ್ಯಕರ್ತೆಯರು ಪಾಲ್ಗೊಳ್ಳುತ್ತಿದ್ದಾರೆ. ಸರ್ಕಾರದ ಕಲ್ಯಾಣ ಕಾರ್ಯಕ್ರಮ ಜಾರಿಗೆ ಅಂಕಿಅಂಶ ಸಂಗ್ರಹಿಸಲಾಗುತ್ತಿದ್ದು, ರಾಜ್ಯ ಸರ್ಕಾರಕ್ಕೆ ಅಧಿಕಾರವಿದೆ’ ಎಂದರು.

> ಈಗ ಸಮೀಕ್ಷೆ ನಡೆಸಲು ಅವಕಾಶ ನೀಡಿದರೆ ಅಂಕಿಅಂಶ ಸಂಗ್ರಹವಾಗುತ್ತದೆ. ಮಧ್ಯಂತರ ತಡೆ ಬಗ್ಗೆ ವಾದ ಆಲಿಸುವುದಕ್ಕಿಂತ ಅಂತಿಮ ವಿಚಾರಣೆ ನಡೆಸುವುದೇ ಸೂಕ್ತ
>
> **ವಿಭು ಬಖ್ರು,** ಮುಖ್ಯ ನ್ಯಾಯಮೂರ್ತಿ, ಹೈಕೋರ್ಟ್

‘ಸರ್ಕಾರ ಜನಗಣತಿ ಮಾಡುತ್ತಿಲ್ಲ. ಕೇವಲ ಸಮೀಕ್ಷೆ ನಡೆಸುತ್ತಿದೆ. ಇಂತಹ ಪ್ರಕರಣದಲ್ಲಿ ಹಿಂದೆ ಮಧ್ಯಂತರ ತಡೆ ನೀಡಿಲ್ಲ. ಹೀಗಾಗಿ, ತಡೆ ನೀಡಬಾರದು’ ಎಂದು ಕೋರಿದರು.

‘ಮಧ್ಯಪ್ರವೇಶಿಸಲ್ಲ ಎಂಬ ವಿಶ್ವಾಸವಿದೆ’

‘ಸಮೀಕ್ಷೆ ಮುಂದೂಡುವ ಪ್ರಶ್ನೆ ಇಲ್ಲ. ನಮ್ಮದು ಸಾಂವಿಧಾನಿಕ ಸಂಸ್ಥೆ. ಯಾರೂ ಒತ್ತಡ ಹಾಕಲು ಸಾಧ್ಯವಿಲ್ಲ’ ಎಂದು ಹೇಳುವ ಮೂಲಕ ಸಮೀಕ್ಷೆ ಮುಂದೂಡಿಕೆ ವದಂತಿಯನ್ನು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಮಧುಸೂದನ್ ಆರ್. ನಾಯ್ಕ್ ತಳ್ಳಿ ಸೋಮವಾರ ಹಾಕಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಸಮೀಕ್ಷೆಯ ವಿಚಾರದಲ್ಲಿ ಕೋರ್ಟ್ ಮಧ್ಯ ಪ್ರವೇಶಿಸುವುದಿಲ್ಲ ಎಂಬ ವಿಶ್ವಾಸವಿದೆ’ ಎಂದರು.

‘ಸಮೀಕ್ಷೆ ಮುಂದೂಡಲು ಕೋರಿ ಕೆಲವರು ರಿಟ್ ಅರ್ಜಿ ಸಲ್ಲಿಸಿದ್ದಾರೆ. ಆಯೋಗವನ್ನು ಪ್ರತಿವಾದಿಯಾಗಿ ಮಾಡಲಾಗಿದೆ. ದೂರುದಾರರು ಮಧ್ಯಂತರ ಆದೇಶಕ್ಕಾಗಿ ಮನವಿ ಮಾಡಿದ್ದಾರೆ. ನಾವು ಸಮೀಕ್ಷೆಯಲ್ಲಿ ಹೊಸ ಜಾತಿ ಸೇರಿಸಿಲ್ಲ. ಜಾತಿ ಬಗ್ಗೆ ಪ್ರಾಮುಖ್ಯತೆ ಕೂಡ ನೀಡಿಲ್ಲ. ಹೀಗಾಗಿ ಕೋರ್ಟ್ ಮಧ್ಯಪ್ರವೇಶಿಸುವುದಿಲ್ಲ ಎಂದು ಭಾವಿಸಿದ್ದೇವೆ’ ಎಂದರು.

ಸಮೀಕ್ಷೆ ಬಗ್ಗೆ ತಪ್ಪುಕಲ್ಪನೆ: ‘ನಾವು ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆ ಮಾಡುತ್ತಿದ್ದೇವೆ. ನಾವು ಜಾತಿ ಗಣತಿ ಮಾಡುತ್ತಿಲ್ಲ. ಕೇಂದ್ರ ಸರ್ಕಾರದ ಗಣತಿ ಇರುವುದರಿಂದ ಕೆಲವರು ನಾವು ಜಾತಿಗಣತಿ ಮಾಡುತ್ತಿದ್ದೇವೆ ಎಂದು ತಪ್ಪು ಕಲ್ಪನೆ ಮೂಡಿಸುತ್ತಿದ್ದಾರೆ. ಇದು ರಾಜಕೀಯ ವಿರೋಧ ಇರಬಹುದು ಅಥವಾ ತಪ್ಪುಕಲ್ಪನೆಯಿಂದ ಕೂಡಿರಬಹುದು’ ಎಂದರು.

ಇಂದು ಮಧ್ಯಾಹ್ನ ಆದೇಶ

‘ಸಮೀಕ್ಷೆಗೆ ತಡೆ ಕೋರಿರುವ ಮಧ್ಯಂತರ ಮನವಿ ಕುರಿತು ಸೆ.23ರ (ಮಂಗಳವಾರ) ಮಧ್ಯಾಹ್ನ ಕೂಲಂಕಷ ವಿಚಾರಣೆ ನಡೆಸಿ ಆದೇಶಿಸಲಾಗುವುದು’ ಎಂದು ಹೇಳಿದ ನ್ಯಾಯಪೀಠ, ವಿಚಾರಣೆ ಮುಂದೂಡಿತು.

‘ಎಸ್‌.ಸಿ ಕ್ರಿಶ್ಚಿಯನ್ ಪದವನ್ನೂ ತೆಗೆಯಿರಿ’

ಚಿತ್ರದುರ್ಗ: ‘ಪ್ರಬಲ ಜಾತಿಗಳ ಜೊತೆಗಿದ್ದ ಕ್ರಿಶ್ಚಿಯನ್ ಪದ ತೆಗೆದು ಪರಿಶಿಷ್ಟ ಜಾತಿಗಳ ಜೊತೆಗೆ ಹಾಗೆಯೇ ಉಳಿಸಿರುವುದು ಸರಿಯಲ್ಲ. ಪರಿಶಿಷ್ಟ ಜಾತಿ ಜೊತೆಗಿರುವ ಕ್ರಿಶ್ಚಿಯನ್ ಪದವನ್ನೂ ತೆಗೆಯಬೇಕು’ ಎಂದು ಕೆಪಿಸಿಸಿ ಉಪಾಧ್ಯಕ್ಷ ಎಚ್.ಆಂಜನೇಯ ಒತ್ತಾಯಿಸಿದರು.

‘ಈಗ 33 ಸಮುದಾಯಗಳ ಜೊತೆಗಿನ ಕ್ರಿಶ್ಚಿಯನ್ ಪದ ತೆಗೆದು ಸಮೀಕ್ಷೆ ಆರಂಭಿಸಲಾಗಿದೆ. ಮಾದಿಗ ಕ್ರಿಶ್ಚಿಯನ್, ಛಲವಾದಿ ಕ್ರಿಶ್ಚಿಯನ್ ಎಂದು ಪರಿಶಿಷ್ಟ ಜಾತಿಗಳನ್ನು ಗುರುತಿಸುವುದು ಸರಿಯಲ್ಲ’ ಎಂದು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ನಾಗಮೋಹನ ದಾಸ್ ಆಯೋಗ ನಡೆಸಿದ್ದ ಗಣತಿಯಲ್ಲಿ ಧರ್ಮ ಕಾಲಂ ಇರಲಿಲ್ಲ. ಈಗ ಧರ್ಮ ಕಾಲಂ ಸೇರಿಸಿರುವುದೇ ತಪ್ಪು. ಮೀಸಲಾತಿ ಜಾತಿ ಆಧಾರಿತವಾಗಿದ್ದು, ಧರ್ಮ ಕೇಳುವ ಅಗತ್ಯವೇ ಇರಲಿಲ್ಲ. ಒಂದು ವೇಳೆ ಎಸ್‌.ಸಿ ಸಮುದಾಯಗಳ ಜನರು ಮತಾಂತರಗೊಂಡಿದ್ದರೆ ಅವರು ಆ ಧರ್ಮದ ಹೆಸರನ್ನೇ ಬರೆಸಲಿ’ ಎಂದರು.

ಕೈಕೊಟ್ಟ ಆ್ಯಪ್, ಸಮೀಕ್ಷೆಗೆ ತೊಡಕು

ಒಂದನೇ ಪುಟದಿಂದ...

ಕಲಬುರಗಿಯ ಕಾಳಗಿ ತಾಲ್ಲೂಕು, ಯಾದಗಿರಿ ಜಿಲ್ಲೆಯ ಹುಣಸಗಿ, ರಾಯಚೂರಿನ ಸಿರವಾರದಲ್ಲಿ ಸಮೀಕ್ಷೆ ಕಿಟ್ ವಿಳಂಬವಾಗಿ ತಲುಪಿ ಸೋಮವಾರ ಸಮೀಕ್ಷೆ ನಡೆಯಲಿಲ್ಲ. ಕೆಲವೆಡೆ ಸಮೀಕ್ಷಕರಿಗೆ ಒಟಿಪಿ ಸಮಸ್ಯೆ ಕಾಡಿತು..

ಕೊಪ್ಪಳ ಗ್ರಾಮೀಣ, ಕುಷ್ಟಗಿ, ಯಲಬುರ್ಗಾ, ಗಂಗಾವತಿ, ಕಾರಟಗಿ ತಾಲ್ಲೂಕುಗಳಲ್ಲಿ ಒಟಿಪಿ ಮತ್ತು ಸರ್ವರ್ ಸಮಸ್ಯೆ ಕಾಡಿತು. ಕೈಪಿಡಿಯೇ ಬಂದಿಲ್ಲ, ಬೀದರ್ ಜಿಲ್ಲೆಯಲ್ಲಿ ಸಮೀಕ್ಷೆ ಮಧ್ಯಾಹ್ನ 3 ಗಂಟೆ ಬಳಿಕ ಆರಂಭಗೊಂಡಿತು. ಹಲವೆಡೆ ಮಳೆಯಿಂದ ತೊಡಕಾಯಿತು.

ಸಿಬ್ಬಂದಿ ಕೊರತೆ

(ಹುಬ್ಬಳ್ಳಿ): ಧಾರವಾಡ, ಉತ್ತರ ಕನ್ನಡ, ಬೆಳಗಾವಿ ಸೇರಿ ಕಲ್ಯಾಣ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಸಮೀಕ್ಷೆಗೆ ನೆಟ್‌ವರ್ಕ್, ಸಿಬ್ಬಂದಿ ಕೊರತೆ ಎದುರಾಯಿತು.

ಧಾರವಾಡ ಜಿಲ್ಲೆಯ ಹುಬ್ಬಳ್ಳಿ, ಕುಂದುಗೋಳ, ನವಲಗುಂದ, ಕಲಘಟಗಿ, ನವಲಗುಂದ, ಅಣ್ಣಿಗೇರಿ ತಾಲ್ಲೂಕುಗಳಲ್ಲಿ ‘ಆ್ಯಪ್’ ತೆರೆದುಕೊಳ್ಳಲಿಲ್ಲ. ‘ಒಟಿಪಿ’, ‘ನೆಟ್‌ವರ್ಕ್’ ಸಮಸ್ಯೆ ಎದುರಾಯಿತು. ಅಳ್ನಾವರ ತಾಲ್ಲೂಕಿನಲ್ಲಿ ಸಮೀಕ್ಷಕರು ಹಂಚಿಕೆ ಸಮಸ್ಯೆಯಾಗಿತ್ತು.

‘ಕೆಲ ಹಳೆಯ ಮೊಬೈಲ್ ಫೋನ್‌ಗಳಲ್ಲಿ ‘ಆ್ಯಪ್’ ಸರಿಯಾಗಿ ಕಾರ್ಯನಿರ್ವಹಿಸಿಲ್ಲ. ಸಮಸ್ಯೆ ಪರಿಹರಿಸಲು ಸಿಬ್ಬಂದಿ ಕ್ರಮ ವಹಿಸಿದ್ದಾರೆ’ ಎಂದು ಹಿಂದುಳಿದ ವರ್ಗಗಳ ಅಭಿವೃದ್ಧಿ ಇಲಾಖೆ ಜಿಲ್ಲಾ ಅಧಿಕಾರಿ ಸಿ.ಭಾನುಮತಿ ತಿಳಿಸಿದರು.

‘ಆ್ಯಪ್‌ನ ಸಮಸ್ಯೆ ಬಗೆಹರಿದ ನಂತರ ಹುಬ್ಬಳ್ಳಿ ತಾಲ್ಲೂಕಿನಲ್ಲಿ ಸಮೀಕ್ಷಕರು ಮನೆಮನೆಗೆ ತೆರಳಿ ಮಾಹಿತಿ ಸಂಗ್ರಹಿಸುವರು’ ಎಂದು ತಹಶೀಲ್ದಾರ್ ಮಹೇಶ ಗಸ್ತೆ ಹೇಳಿದರು.

ಕರ್ತವ್ಯದಿಂದ ದೂರ ಉಳಿದ ಶಿಕ್ಷಕರು

ಉಡುಪಿ ಜಿಲ್ಲೆಯಲ್ಲಿ ಶಿಕ್ಷಕರು ಸಮೀಕ್ಷೆಯ ಮೊದಲ ದಿನ ಕಾರ್ಯ ನಿರ್ವಹಿಸಲಿಲ್ಲ.

‘ಗಂಭೀರ ಆರೋಗ್ಯ ಸಮಸ್ಯೆ ಇರುವ ಮತ್ತು 59 ವರ್ಷ ಮೀರಿದ ಶಿಕ್ಷಕರನ್ನು, ಗರ್ಭಿಣಿ ಶಿಕ್ಷಕಿಯರನ್ನು ಗಣತಿ ಕಾರ್ಯದ ಕರ್ತವ್ಯದಿಂದ ಹೊರಗಿಡಬೇಕು ಎಂದು ನಾವು ಜಿಲ್ಲಾಡಳಿತಕ್ಕೆ ಮನವಿ ಮಾಡಿದ್ದೆವು. ಸ್ಪಂದಿಸದ ಕಾರಣ ಪಾಲ್ಗೊಂಡಿಲ್ಲ’ ಎಂದು ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಉಡುಪಿ ಜಿಲ್ಲಾ ಘಟಕದ ಅಧ್ಯಕ್ಷ ಕೆ. ದಿನಕರ ಶೆಟ್ಟಿ ಅಂಪಾರು ತಿಳಿಸಿದರು.

‘ತಾಂತ್ರಿಕ ಸಮಸ್ಯೆ ಪರಿಹರಿಸಿದ್ದು, ಮಧ್ಯಾಹ್ನದ ನಂತರ ಸುಸೂತ್ರವಾಗಿ ನಡೆದಿದೆ’ ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಅಬೀದ್ ಗದ್ಯಾಳ ತಿಳಿಸಿದರು.

ಅರಣ್ಯ, ಗುಡ್ಡಗಾಡು ಪ್ರದೇಶದಿಂದ ಕೂಡಿರುವ ಉತ್ತರ ಕನ್ನಡ ಜಿಲ್ಲೆಯಲ್ಲಿ ಸಮೀಕ್ಷೆಗೆ ಶಿಕ್ಷಕರ ನಿಯೋಜನೆಯಲ್ಲಿ ಗೊಂದಲಗಳಾದವು. ಶಿಕ್ಷಕರ ಶಾಲೆ ವ್ಯಾಪ್ತಿ ಬಿಟ್ಟು ದೂರದ ಪ್ರದೇಶಕ್ಕೆ ನಿಯೋಜಿಸಿರುವುದು ಶಿಕ್ಷಕರ ಅಸಮಾಧಾನಕ್ಕೆ ಕಾರಣವಾಯಿತು.

ವಿಜಯನಗರ ಜಿಲ್ಲೆಯ ಹರಪನಹಳ್ಳಿ ಮತ್ತು ಹಗರಿಬೊಮ್ಮನಹಳ್ಳಿ ತಾಲ್ಲೂಕುಗಳಲ್ಲಿ ಮಾತ್ರ ಸಕಾಲಕ್ಕೆ ಸಮೀಕ್ಷೆ ಆರಂಭವಾಯಿತು. ಕೂಡ್ಲಿಗಿಯಲ್ಲಿ ಆ್ಯಪ್ ಸಮಸ್ಯೆ ಇದ್ದರೆ, ಕೊಟ್ಟೂರಿನಲ್ಲಿ ಸರ್ವರ್ ಸಮಸ್ಯೆ ಕಾಡಿತು. ಬಳ್ಳಾರಿ ನಗರದಲ್ಲಿ ಸಮೀಕ್ಷೆ ಸುಗಮವಾಗಿತ್ತು.

‘ದಾರಿ ತೋರದ’ ಆ್ಯಪ್

(ದಾವಣಗೆರೆ): ಸಮೀಕ್ಷೆಗೆ ರೂಪಿಸಿದ್ದ ಆ್ಯಪ್‌ನಲ್ಲಿನ ತಾಂತ್ರಿಕ ಸಮಸ್ಯೆಯಿಂದ ಗಣತಿ ಕಾರ್ಯಕ್ಕೆ ಮೊದಲ ದಿನವೇ ತೊಡಕುಂಟಾಯಿತು. ಬಹುತೇಕ ಸಮೀಕ್ಷಕರು ನಿಯೋಜಿತ ಬ್ಲಾಕ್‌ಗಳಿಗೆ ಹಾಜರಾಗಲು ಸಾಧ್ಯವಾಗಲಿಲ್ಲ.

ಆ್ಯಪ್ ಅಪ್ಡೇಟ್‌ಗೆ ಕಾಯುತ್ತ ಕುಳಿತ ಸಮೀಕ್ಷಕರು ಮಧ್ಯಾಹ್ನದ ಬಳಿಕ ಸಮೀಕ್ಷೆ ಕಾರ್ಯದಿಂದ ವಿಮುಖರಾದರು. ಮನೆ–ಮನೆಗೆ ತೆರಳಿದವರಿಗೆ ಒಟಿಪಿ ಸಮಸ್ಯೆ ಕಾಡಿತು. ಕೆಲವೆಡೆ ಮಧ್ಯಾಹ್ನ ಕಳೆದರೂ ಸಮೀಕ್ಷಕರಿಗೆ ಕಿಟ್ ಸಿಗಲಿಲ್ಲ. ಚಿತ್ರದುರ್ಗ ಜಿಲ್ಲೆಯಲ್ಲಿ ಆ್ಯಪ್‌ನಲ್ಲಿ ಸ್ಥಳದ ಗುರುತು ತಪ್ಪಾಗಿ ತೋರಿ ಗೊಂದಲ ಮೂಡಿತು.

ಕರಾವಳಿಯಲ್ಲಿ ಆಮೆಗತಿ

(ಮಂಗಳೂರು): ದಕ್ಷಿಣ ಕನ್ನಡ, ಉಡುಪಿ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಆ್ಯಪ್ ಕೈಕೊಟ್ಟು, ಆಮೆಗತಿಯಲ್ಲಿ ಸಮೀಕ್ಷೆ ಕಾರ್ಯ ನಡೆಯಿತು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸೋಮವಾರ ಕ್ಷೇತ್ರ ಕಾರ್ಯ ನಡೆಯಲಿಲ್ಲ. ‘ತಾಂತ್ರಿಕ ಸಮಸ್ಯೆ ಇತ್ತು. ಮಂಗಳವಾರದಿಂದ ಎಲ್ಲವೂ ಸಮರ್ಪಕವಾಗಿ ನಡೆಯುವ ಭರವಸೆ ಇದೆ’ ಎಂದು ದಕ್ಷಿಣ ಕನ್ನಡ ಹೆಚ್ಚುವರಿ ಜಿಲ್ಲಾಧಿಕಾರಿ ಕೆ. ರಾಜು ಪ್ರತಿಕ್ರಿಯಿಸಿದರು.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಹಲವೆಡೆ ಮನೆ–ಮನೆ ಸರ್ವೆ ಆರಂಭವಾಗಿಲ್ಲ. ಕಡೂರಿನಲ್ಲಿ ಆ್ಯಪ್ ಓಪನ್ ಆಗಿಲ್ಲ ಎಂದು ತಹಶೀಲ್ದಾರರು ಮಾಹಿತಿ ನೀಡಿದರು.

‘ಎಲ್ಲೆಡೆ ಸಮೀಕ್ಷೆಗೆ ಚಾಲನೆ ನೀಡಲಾಗಿದ್ದು, ಒಟಿಪಿ ಸಮಸ್ಯೆಗಳು ಅಲ್ಲಲ್ಲಿ ಕಾಣಿಸಿಕೊಂಡಿವೆ. ತಾಂತ್ರಿಕ ತಂಡ ಸರಿಪಡಿಸಿದೆ’ ಎಂದು ಚಿಕ್ಕಮಗಳೂರು ಡಿ.ಸಿ ಮೀನಾ ನಾಗರಾಜ್ ತಿಳಿಸಿದರು.

ಮೈಸೂರು ಭಾಗದಲ್ಲಿ ವಿಘ್ನ

ಮೈಸೂರು ಭಾಗದ ಜಿಲ್ಲೆಗಳಲ್ಲಿ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸಮೀಕ್ಷೆಯ ಮೊದಲ ದಿನವಾದ ಸೋಮವಾರವೇ ಹಲವು ವಿಘ್ನಗಳು ಎದುರಾಗಿ, ಕೆಲವೇ ಮನೆಗಳ ಸಮೀಕ್ಷೆಯಷ್ಟೇ ನಡೆಯಿತು. ಹಾಸನದಲ್ಲಿ ಆ್ಯಪ್ ಡೌನ್‌ಲೋಡ್ ಮಾಡಿಕೊಳ್ಳಲಷ್ಟೇ ಸಾಧ್ಯವಾಗಿದ್ದು, ಅಲ್ಲಿ ಮಂಗಳವಾರದಿಂದ ಶುರುವಾಗಲಿದೆ.

ಚಾಮರಾಜನಗರ ಜಿಲ್ಲೆಯಲ್ಲಿ ವಿಳಂಬವಾದ ಕಾರಣ ಸಮೀಕ್ಷಕರು ಸಮೀಕ್ಷೆ ನಡೆಸದೇ ಮನೆಯ ಕಡೆಗೆ ಹೆಜ್ಜೆ ಹಾಕಿದರು ಎಂಬ ದೂರುಗಳು ಕೇಳಿಬಂದವು.

ಆರಂಭವಾಗದ ಸಮೀಕ್ಷೆ

(ತುಮಕೂರು): ಆ್ಯಪ್‌ನಲ್ಲಿ ಆಗಿರುವ ಬದಲಾವಣೆ, ಸರ್ವರ್ ಸಮಸ್ಯೆಯಿಂದಾಗಿ ತುಮಕೂರು ಜಿಲ್ಲೆಯಲ್ಲಿ ಸಮೀಕ್ಷೆ ಆರಂಭವಾಗಲಿಲ್ಲ.

‘ಹೊಸ ಆ್ಯಪ್ ಆ್ಯಪ್ ಬಿಡುಗಡೆಯಾದ ನಂತರ ಸಮೀಕ್ಷೆ ಆರಂಭವಾಗಲಿದೆ. ಬದಲಾದ ಆ್ಯಪ್ ಕೊಟ್ಟ ನಂತರ ಜಾತಿ ಸಮೀಕ್ಷೆ ಪ್ರಾರಂಭಿಸಲಾಗುವುದು’ ಎಂದು ತುಮಕೂರು ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಕೃಷ್ಣಪ್ಪ ತಿಳಿಸಿದರು.

ಕೋಲಾರ ಜಿಲ್ಲೆಯಲ್ಲಿ ಸಮೀಕ್ಷೆಗೆ ಆರಂಭದಲ್ಲೇ ತಾಂತ್ರಿಕ ಅಡಚಣೆ ಉಂಟಾಯಿತು. ಬೆಳಗ್ಗೆ ಆ್ಯಪ್‌ನಲ್ಲಿ ಮಾಹಿತಿ ನಮೂದಿಸಲು ಸಾಧ್ಯವಾಗಲಿಲ್ಲ.

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಮೊದಲ ದಿನ ಮಧ್ಯಾಹ್ನದ ನಂತರ ಸಮೀಕ್ಷೆ ಕಾರ್ಯ ಶುರುವಾಯಿತು. ಜಿಲ್ಲೆಯಲ್ಲಿ 3,20,800 ಕುಟುಂಬಗಳನ್ನು ಜಿಯೊ ಟ್ಯಾಗ್ ಮಾಡಲಾಗಿದೆ.

ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ (ರಾಮನಗರ) ಸಮೀಕ್ಷೆ ಮಾಡಬೇಕಾದ ಬ್ಲಾಕ್ ಕುರಿತು ಗಣತಿದಾರರಲ್ಲೇ ಗೊಂದಲ ಇತ್ತು. ಕೈಪಿಡಿ ತಲುಪಿಲ್ಲ ಎಂಬ ದೂರುಗಳು ಕೇಳಿ ಬಂದವು.

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಸಮೀಕ್ಷೆ ಆರಂಭವಾಯಿತು. ದೇವನಹಳ್ಳಿಯಲ್ಲಿ ತಹಶೀಲ್ದಾರ್ ಹಾಗೂ ಸಿಬ್ಬಂದಿ ಮಾಹಿತಿ ಪಡೆದು ಮೊಬೈಲ್ ಆ್ಯಪ್‌ನಲ್ಲಿ ದಾಖಲಿಸಿದರು.

ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ ಬೆಳಗಾವಿ

ಕಾರ್ಯನಿರ್ವಾಹಕ ಅಭಿಯಂತರರು,

ಪಂಚಾಯತ ರಾಜ ಇಂಜಿನೀಯರಿಂಗ್ ವಿಭಾಗ ಚಿಕ್ಕೋಡಿ

E-mail:preckdee@gmail.com ಕಚೇರಿ ದೂರವಾಣಿ/ಫ್ಯಾಕ್ಸ್ ಸಂಖ್ಯೆ: 08338–272131

ಕ್ರ.ಸಂ:ಕಾನಿಅ/ಪಂರಾಇಂ/ಚಿವಿ/ಡಿಬಿ/ಕೆಪಿಪಿಪಿ/2025–26/4281 ದಿನಾಂಕ: 20.09.2025

(ಕೆಪಿಪಿಪಿ ಅಲ್ಪಾವಧಿ ಟೆಂಡರ ಪ್ರಕಟಣೆ)

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಪಂಚಾಯತ್ ರಾಜ್ ಇಂಜನೀಯರಿಂಗ್ ವಿಭಾಗ ಚಿಕ್ಕೋಡಿ ಇವರು **KW-1, KW-2, KW-3, KW-4 (Standard Tender Document)** ನಿಬಂಧನೆಗೊಳಪಟ್ಟಂತೆ ಪಂಚಾಯತ ರಾಜ್ ಇಂಜನೀಯರಿಂಗ್ ಇಲಾಖೆಯಲ್ಲಿ ಸಿವ್ಹಿಲ್ ನೋಂದಾಯಿತ ಹಾಗೂ ಇ–ಗುತ್ತಿಗೆ ಕುರಿತು ಕೆಪಿಪಿಪಿ ಇವರಿಂದ ನೋಂದಾಯಿಸಿದ ಅರ್ಹ ಗುತ್ತಿಗೆದಾರರಿಂದ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ ವಿವಿಧ ಯೋಜನೆ ಅಡಿಯಲ್ಲಿಯ ಕಾಮಗಾರಿಗಳಿಗೆ ಐಟಂವಾರು ಟರ್ನಕೀ ಆಧಾರದ ಮೇಲೆ ಇ–ಟೆಂಡರ ಆಹ್ವಾನಿಸಲಾಗಿದೆ.

1)	Last date of request for issue of blank e-bid document through e-procurement Date: Other works	20.09.2025 to 30.09.2025
2)	Bid Closing & Submission Date	30.09.2025 at 04.00 pm
3)	Financial Bid Opening Date:	03.10.2025 at 11.00 am
4)	Pre-Bid Meeting Date: (KW-3 & 4 Works Only)	29.09.2025 at 05.00 pm
5)	Technical Bid Opening Date: (KW-3 & 4 Works Only)	03.10.2025 at 11.00 am
6)	Financial Bid Opening Date : (KW-3 & 4 Works only)	06.10.2025 at 11.00am

General Works Indent No's	16416, 15451, 15399, 15403, 15402, 15401, 15906, 15917, 17435, 17487, 17490 17141, 17140, 16582, 17556, 17554, 7992, 18305, 13584, 13891, 17522, 16857
SC Works Indent No's	18038, 17139, 16409, 17484
ST Works Indent No's	16389
Category 1 Works Indent No's	17850, 17843
Category 2 A Works Indent No's	15897, 15915, 18454, 17142

RDPR/2024-25/IND8882, 3rd Call

ಕಾಮಗಾರಿಗಳ ವಿವರ, ಷರತ್ತು ನಿಬಂಧನೆಗಳಿಗಾಗಿ ಈ ಕಚೇರಿಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಹಾಗೂ ವೆಬ್ ಸೈಟ್ https://kppp.karnataka.giv.in/ ಸಂಪರ್ಕಿಸಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು
ಪಂ ರಾಜ್.ಇಂ. ವಿಭಾಗ, ಚಿಕ್ಕೋಡಿ

DIPR/BGM/RO NO.1076/2025-26

ಪ್ರಜಾವಾಣಿ ನವವರ್ಣ

ಹಸಿರು ಬಣ್ಣದ ದಿರಿಸನ್ನು ಧರಿಸಿ ತೆಗೆಸಿಕೊಂಡ ಭಾವಚಿತ್ರಗಳನ್ನು ಇಂದು, ಮಂಗಳವಾರ ಮಧ್ಯಾಹ್ನ 2 ಗಂಟೆಯೊಳಗೆ ಕಳುಹಿಸಿ. ಹೆಸರು, ವಿಳಾಸವೂ ಇರಲಿ...

7338018541

ನಳಿನಾ ಮತ್ತು ಸ್ನೇಹಿತರು, ನಾಗರಭಾವಿ

ಭಾರತಿ ಭೂಷಣ್ ಮತ್ತು ಸ್ನೇಹಿತರು, ಜೆಪಿ ನಗರ

ಜಯಲಕ್ಷ್ಮಿ ಮತ್ತು ಸ್ನೇಹಿತರು, ಬೆಂಗಳೂರು

ವಿಜಯಾ ಕಾಲೇಜು ಶಿಕ್ಷಕರು, ತುಮಕೂರು

ಎನ್ ರಾಮು ಮತ್ತು ಕುಟುಂಬ, ಬೆಂಗಳೂರು

ಉಷಾ & ರೇಖಾ

ರಾಮ್ ರೆಸಿಡೆನ್ಸಿ, ಉರ್ವಾ

ಸುವರ್ಣ ತಂಡ, ಭಂಟ್ವಾಳ

ಅರ್ಚನಾ ಮತ್ತು ಸ್ನೇಹಿತರು, ಉತ್ತರಹಳ್ಳಿ

ಮಂಜುಳಾ ಮತ್ತು ಸ್ನೇಹಿತರು, ಬೆಂಗಳೂರು

ಪಲ್ಲವಿ ಮತ್ತು ರಮ್ಯಾ, ಬೆಂಗಳೂರು

ಸಂಧ್ಯಾ ಮತ್ತು ಸವಿತಾ, ಕುವೆಂಪು ನಗರ

ಶ್ರೀಯೋಗ ಧಾಮ ಯೋಗಿನಿಗಳು, ಬೆಂಗಳೂರು

ಆಶಾ ಮತ್ತು ಸ್ನೇಹಿತರು, ತಿಪಟೂರು

ನಿರ್ಮಲಾ & ಸ್ನೇಹಿತರು, ಬೆಂಗಳೂರು

ರೇಖಾ ಮತ್ತು ಗೀತಾ, ಮೈಸೂರು

SS ಕುಟುಂಬ – ಬೆಂಗಳೂರು

ರಜನಿ ಮತ್ತು ಸ್ನೇಹಿತರು, ಚೈತನ್ಯ ನಗರ

ಇಂದಿನ ಬಣ್ಣ - ಹಸಿರು

ಪ್ರೇಮಾ ಮತ್ತು ಸ್ನೇಹಿತರು, ಬೆಂಗಳೂರು

ಶಾಂಸೂನ್ ತಮಿನ್, ಬೆಂಗಳೂರು

ಲೀಲಾ ಮತ್ತು ಸ್ನೇಹಿತರು, ಬೆಂಗಳೂರು

ದೇವಕಿ ಮತ್ತು ಸ್ನೇಹಿತರು, ಬೆಂಗಳೂರು

ಶೇಷಾದ್ರಿಪುರಂ ಕಾಲೇಜು ಶಿಕ್ಷಕರು, ತುಮಕೂರು

ವಿದ್ಯುತ್ ಮಂಡಳಿ – ಮೈಸೂರು

ಹೈಟೆಕ್ ಶಾಲಾ ಶಿಕ್ಷಕರು– ಮಹದೇವಪುರ

ಪೂರ್ಣಿಮಾ ಮತ್ತು ಕುಟುಂಬ, ಬೆಂಗಳೂರು

ಶ್ರೀ ಸಾಯಿಬಾಬಾ ಸ್ತ್ರೀಶಕ್ತಿ, ಯಾದಗಿರಿ

ಎಸ್ ರಾಧಾಕೃಷ್ಣನ್ ಎಜುಕೇಶನ್ ಅಕಾಡೆಮಿ, ಆನೇಕಲ್

ವಿದ್ದು ಮತ್ತು ಸ್ನೇಹಿತರು, ಬೆಂಗಳೂರು

ಕೆಎಚ್‌ಬಿ: ಡ್ಯುಪ್ಲೆಕ್ಸ್ ಮನೆಗಳ ನಿರ್ಮಾಣ

ಹೆಚ್ಚಿದ ಬೇಡಿಕೆ: ಸೂರ್ಯನಗರ, ರಾಯಸಂದ್ರದಲ್ಲಿ ಬಡಾವಣೆ ಅಭಿವೃದ್ಧಿ

• ಎ.ಎಂ.ಸುರೇಶ

ಬೆಂಗಳೂರು: ಮಧ್ಯಮ ವರ್ಗದ ಜನರಿಂದ ಮನೆಗಳಿಗೆ ಹೆಚ್ಚಿನ ಬೇಡಿಕೆ ಬರುತ್ತಿದ್ದು ರಾಯಸಂದ್ರ ಮತ್ತು ಸೂರ್ಯನಗರದಲ್ಲಿ ಡ್ಯುಪ್ಲೆಕ್ಸ್ ಮನೆಗಳನ್ನು ನಿರ್ಮಿಸಲು ಕರ್ನಾಟಕ ಗೃಹ ಮಂಡಳಿ ಮುಂದಾಗಿದೆ.

ಕನಕಪುರ ತಾಲ್ಲೂಕು ರಾಯಸಂದ್ರ ಗ್ರಾಮದಲ್ಲಿ ಅಭಿವೃದ್ಧಿಪಡಿಸಿರುವ ಕುವೆಂಪು ಬಡಾವಣೆಯಲ್ಲಿ ಕಡಿಮೆ ಆದಾಯ ಗುಂಪು (ಎಲ್‌ಐಜಿ) ಮತ್ತು ಮಧ್ಯಮ ಆದಾಯ ಗುಂಪಿನವರಿಗೆ (ಎಂಐಜಿ) ಡ್ಯುಪ್ಲೆಕ್ಸ್ ಮನೆಗಳನ್ನು ನಿರ್ಮಿಸುವ ಕಾರ್ಯ ಸದ್ಯದಲ್ಲೇ ಆರಂಭವಾಗಲಿದೆ.

ಈಗಾಗಲೇ ಭೂಸ್ವಾಧೀನ ಕಾರ್ಯ ಪೂರ್ಣಗೊಂಡು, ಬಡಾವಣೆ ನಿರ್ಮಾಣವಾಗಿದೆ. ಸಾರ್ವಜನಿಕರಿಂದಲೂ ಮನೆಗಳಿಗೆ ಬೇಡಿಕೆ ಬಂದಿದ್ದು, ಒಂದೂವರೆಯಿಂದ ಎರಡು ವರ್ಷದ ಒಳಗೆ ಡ್ಯುಪ್ಲೆಕ್ಸ್ ಮನೆಗಳ ನಿರ್ಮಾಣ ಕಾರ್ಯ ಪೂರ್ಣಗೊಳ್ಳಲಿದೆ ಎಂದು ಮಂಡಳಿಯ ಹಿರಿಯ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಗೃಹಮಂಡಳಿ, ಬಿಡಿಎ ನಿರ್ಮಿಸುವ ಮನೆಗಳ ಬಗ್ಗೆ ಜನರಲ್ಲಿ ಇರುವ ನಕಾರಾತ್ಮಕ ಭಾವನೆ ಹೋಗಬೇಕು, ಖಾಸಗಿಯವರಿಗೆ ಪೈಪೋಟಿ ನೀಡಬೇಕು ಎಂಬ ಉದ್ದೇಶದಿಂದ ಎಲ್ಲ ರೀತಿಯ ಸೌಕರ್ಯಗಳನ್ನು ಒಳಗೊಂಡ ಸುಸಜ್ಜಿತವಾದ ಮನೆಗಳನ್ನು ನಿರ್ಮಿಸಲಾಗುತ್ತದೆ ಎಂದು ಅವರು ವಿವರಿಸಿದರು.

ಎಲ್‌ಐಜಿ ಗುಂಪಿನ ನಿವೇಶನದ ವಿಸ್ತೀರ್ಣ 30X40. ಈ ಜಾಗದಲ್ಲಿ 3ಬಿಎಚ್‌ಕೆ ಮನೆಗಳನ್ನು ನಿರ್ಮಿಸಲಾಗುತ್ತದೆ. ಇದರ ಮೌಲ್ಯ ₹80 ಲಕ್ಷ. ಎಂಐಜಿ ಗುಂಪಿನ ವಿಸ್ತೀರ್ಣ 30X50. ಈ ಜಾಗದಲ್ಲಿ 3 ಬಿಎಚ್‌ಕೆ ಮನೆಗಳನ್ನು ನಿರ್ಮಿಸಲಾಗುತ್ತದೆ. ಇದರ ಮೌಲ್ಯ ₹95 ಲಕ್ಷ. ಎರಡೂ ಗುಂಪಿನವರಿಗೆ 3 ಬಿಎಚ್‌ಕೆ ಮನೆಗಳನ್ನು ನಿರ್ಮಿಸಿಕೊಡಲಾಗುತ್ತದೆ. ಆದರೆ, ವಿಸ್ತೀರ್ಣ ಮತ್ತು ಮೌಲ್ಯದಲ್ಲಿ ವ್ಯತ್ಯಾಸವಿರುತ್ತದೆ.

ಸೂರ್ಯನಗರ: ಸೂರ್ಯನಗರದಲ್ಲೂ ಇದೇ ರೀತಿ ಡ್ಯುಪ್ಲೆಕ್ಸ್ ಮನೆಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ. ಬೇಡಿಕೆ ಸಮೀಕ್ಷೆಗೆ ಸದ್ಯದಲ್ಲೇ ಅರ್ಜಿಗಳನ್ನು ಆಹ್ವಾನಿಸಲಾಗುತ್ತದೆ. ಆ ಬಳಿಕ ನಿರ್ಮಾಣ ಕಾರ್ಯ ಶುರುವಾಗಲಿದೆ. ಅಲ್ಲಿ ಗೃಹಮಂಡಳಿಗೆ ಸೇರಿದ ಸಾಕಷ್ಟು ಜಾಗ ಲಭ್ಯವಿದೆ ಎಂದು ತಿಳಿಸಿದರು.

ಮುಖ್ಯಾಂಶಗಳು

- ಅಪಾರ್ಟ್‌ಮೆಂಟ್, ಡ್ಯುಪ್ಲೆಕ್ಸ್‌ಗಳಿಗೆ ಹೆಚ್ಚಿನ ಬೇಡಿಕೆ
- ಸೂರ್ಯನಗರದಲ್ಲಿ 100 ಡ್ಯುಪ್ಲೆಕ್ಸ್ ಮನೆಗಳ ನಿರ್ಮಾಣಕ್ಕೆ ಪ್ರಸ್ತಾವ
- ಸಂಪುಟ ಒಪ್ಪಿಗೆ ಬಳಿಕ ಸ್ಟೇಡಿಯಂ ಶಂಕುಸ್ಥಾಪನೆ

ಡ್ಯುಪ್ಲೆಕ್ಸ್ ಮನೆಗಳ ನೀಲನಕ್ಷೆ

ರೈತರ ಪಾಲಿನ ನಿವೇಶನ ಹಂಚಿಕೆ 25ಕ್ಕೆ

ಸೂರ್ಯನಗರ ನಾಲ್ಕನೇ ಹಂತದಲ್ಲಿ ರೈತರ ಪಾಲಿನ ಶೇ 50ರಷ್ಟು ನಿವೇಶನಗಳನ್ನು ಈ ತಿಂಗಳ 25ರಂದು ಹಂಚಿಕೆ ಮಾಡಲಾಗುತ್ತದೆ. ಇನ್ನುಳಿದ ಶೇ 50 ರಷ್ಟು ನಿವೇಶನಗಳನ್ನು ನಾಗರಿಕರಿಗೆ ಲಾಟರಿ ಮೂಲಕ ಹಂಚಿಕೆ ಮಾಡಲಾಗುತ್ತದೆ. 1200 ಎಕರೆ ಪ್ರದೇಶದಲ್ಲಿ ಬಡಾವಣೆ ಅಭಿವೃದ್ಧಿಪಡಿಸಿದ್ದು ನಾಗರಿಕರಿಗೆ ಸುಮಾರು ನಾಲ್ಕು ಸಾವಿರ ನಿವೇಶನಗಳು ಲಭ್ಯವಾಗಲಿವೆ. ಇವುಗಳ ಹಂಚಿಕೆ ಹಾಗೂ ಅಂತರರಾಷ್ಟ್ರೀಯ ಸ್ಟೇಡಿಯಂ ನಿರ್ಮಾಣಕ್ಕೆ ಶಂಕುಸ್ಥಾಪನೆಯನ್ನು ಒಟ್ಟಿಗೆ ಮಾಡಲು ಮಂಡಳಿಯು ಉದ್ದೇಶಿಸಿದೆ.

ನಾಲ್ಕನೇ ಹಂತದಲ್ಲಿ ನಿವೇಶನ ಕೋರಿ 17 ಸಾವಿರಕ್ಕೂ ಅಧಿಕ ಮಂದಿ ಅರ್ಜಿ ಸಲ್ಲಿಸಿದ್ದಾರೆ. ಆದರೆ, ಸದ್ಯಕ್ಕೆ ನಾಲ್ಕು ಸಾವಿರ ನಿವೇಶನಗಳು ಲಭ್ಯವಿದ್ದು ಚದರ ಅಡಿಗೆ ₹2,200 ದರ ನಿಗದಿಪಡಿಸಲಾಗಿದೆ. ಆರ್ಥಿಕವಾಗಿ ಹಿಂದುಳಿದವರಿಗೆ ಶೇ 50ರಷ್ಟು ರಿಯಾಯಿತಿ ನೀಡಲಾಗುತ್ತದೆ.

ಸದ್ಯದಲ್ಲೇ ಸಂಪುಟ ಒಪ್ಪಿಗೆ

ಸೂರ್ಯನಗರದಲ್ಲಿ ಅಂತರರಾಷ್ಟ್ರೀಯ ಮಟ್ಟದ ಸ್ಟೇಡಿಯಂ ನಿರ್ಮಾಣಕ್ಕೆ ಗೃಹ ಮಂಡಳಿಯು ವಸತಿ ಇಲಾಖೆಗೆ ಪ್ರಸ್ತಾವ ಸಲ್ಲಿಸಿದ್ದು, 15 ದಿನಗಳಲ್ಲಿ ಸಚಿವ ಸಂಪುಟ ಒಪ್ಪಿಗೆ ನೀಡುವ ನಿರೀಕ್ಷೆ ಇದೆ.

ಸಂಪುಟದ ಒಪ್ಪಿಗೆ ದೊರೆತ ನಂತರ ಶಂಕುಸ್ಥಾಪನೆ ನೆರವೇರಿಸಲಾಗುತ್ತದೆ. ನಿರ್ಮಾಣದ ಹೊಣೆಯನ್ನು ಅಂತರರಾಷ್ಟ್ರೀಯ ಮಟ್ಟದ ಸಂಸ್ಥೆಗೆ ನೀಡಿ, 2–3 ವರ್ಷಗಳಲ್ಲಿ ಪೂರ್ಣಗೊಳಿಸುವ ಉದ್ದೇಶವಿದೆ ಎಂದು ಮಂಡಳಿಯ ಹಿರಿಯ ಅಧಿಕಾರಿಯೊಬ್ಬರು ವಿವರಿಸಿದರು.

ಚಿಟಿಕೆ ಸುದ್ದಿ

600 ಶುಶ್ರೂಷಕ ಅಧಿಕಾರಿಗಳ ಹುದ್ದೆ ಭರ್ತಿಗೆ ಆದೇಶ

ಬೆಂಗಳೂರು: ಆರೋಗ್ಯ ಇಲಾಖೆಯಡಿ ಮಂಜೂರಾಗಿ ಖಾಲಿ ಇರುವ 600 ಶುಶ್ರೂಷಾಧಿಕಾರಿಗಳ ಹುದ್ದೆ ಭರ್ತಿಗೆ ಆದೇಶ ಹೊರಡಿಸಲಾಗಿದೆ.

ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ರಾಜ್ಯ ಸರ್ಕಾರ ಅನುಮತಿ ನೀಡಿದೆ.

ಇಲಾಖೆಯಲ್ಲಿ ನೇರ ನೇಮಕಾತಿ ಮೂಲಕ ಶುಶ್ರೂಷಾಧಿಕಾರಿಗಳ ಹುದ್ದೆ ಭರ್ತಿಯಾದ ಬಳಿಕ, 600 ಶುಶ್ರೂಷಾಧಿಕಾರಿಗಳ ಗುತ್ತಿಗೆ ಸೇವೆಯನ್ನು ರದ್ದುಗೊಳಿಸಬೇಕು ಎಂದು ತಿಳಿಸಲಾಗಿದೆ.

'ಮಿಷನ್ ಕ್ಲೀನ್ ಏರ್‌ಪೋರ್ಟ್ ರಸ್ತೆ'

ಬೆಂಗಳೂರು: ಬೆಂಗಳೂರು ಉತ್ತರ ನಗರ ಪಾಲಿಕೆ ವ್ಯಾಪ್ತಿಯ, ಮೇಖ್ರಿ ಸರ್ಕಲ್‌ನಿಂದ ಯಲಹಂಕ ಏರ್ ಫೋರ್ಸ್ ಸ್ಟೇಷನ್‌ವರೆಗೆ 34 ಕಿಲೋಮೀಟರ್ ಮಾರ್ಗದ ಏರ್‌ಪೋರ್ಟ್ ರಸ್ತೆಯಲ್ಲಿ ಭಾನುವಾರ ಬೃಹತ್ ಸ್ವಚ್ಛತಾ ಅಭಿಯಾನ ಮಾಡಲಾಯಿತು.

'ಮಿಷನ್ ಕ್ಲೀನ್ ಏರ್‌ಪೋರ್ಟ್ ರಸ್ತೆ' ಹೆಸರಿನಲ್ಲಿ ಈ ಅಭಿಯಾನ ಹಮ್ಮಿಕೊಳ್ಳಲಾಗಿತ್ತು.

ಸುದ್ದಿ 2 ನಿಮಿಷ

ಸರ್ಕಾರಿ ಅಧಿಕಾರಿಗಳ ಸೋಗಿನಲ್ಲಿ ₹1.50 ಕೋಟಿ ದರೋಡೆ

ಬೆಂಗಳೂರು: ಸರ್ಕಾರಿ ಅಧಿಕಾರಿಗಳ ಸೋಗಿನಲ್ಲಿ ಉಪನ್ಯಾಸಕರೊಬ್ಬರ ಮನೆಗೆ ನುಗ್ಗಿ ₹1.50 ಕೋಟಿ ನಗದು ಹಾಗೂ 50 ಗ್ರಾಂ ಆಭರಣ ದರೋಡೆ ನಡೆಸಲಾಗಿದ್ದು, ಯಲಹಂಕ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಉಪನ್ಯಾಸಕ ಗಿರಿರಾಜು ಅವರ ಮನೆಯಲ್ಲಿ ದರೋಡೆ ನಡೆದಿದ್ದು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ನಕಲಿ ನೋಂದಣಿ ಸಂಖ್ಯೆ ಅಳವಡಿಸಿಕೊಂಡು ಕಾರಿನಲ್ಲಿ ಬಂದಿದ್ದ ದರೋಡೆಕೋರರು, ಉಪನ್ಯಾಸಕರ ಮನೆಗೆ ನುಗ್ಗಿದ್ದರು. ಬಿಳಿ ಬಣ್ಣದ ಶರ್ಟ್ ಧರಿಸಿದ್ದ ಆರೋಪಿಗಳು, ಸರ್ಕಾರಿ ಅಧಿಕಾರಿಗಳೆಂದು ಹೇಳಿಕೊಂಡಿದ್ದರು ಎಂದು ಮೂಲಗಳು ತಿಳಿಸಿವೆ.

'ಮನೆಯಲ್ಲಿದ್ದವರ ಮೊಬೈಲ್ ಕಸಿದುಕೊಂಡಿದ್ದ ದರೋಡೆಕೋರರು, ಎಲ್ಲರನ್ನೂ ಪ್ರತ್ಯೇಕ ಕೋಣೆಯಲ್ಲಿ ಕೂಡಿ ಹಾಕಿದ್ದರು. ಬಳಿಕ ಇಡೀ ಮನೆಯಲ್ಲಿ ಶೋಧ ನಡೆಸಿದ್ದರು. ಬ್ಯಾಗ್‌ವೊಂದರಲ್ಲಿ ₹1.50 ಕೋಟಿ ನಗದು ಇತ್ತು. ಅದನ್ನು ದರೋಡೆ ಮಾಡಿಕೊಂಡು ಪರಾರಿ ಆಗಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಗಿರಿರಾಜು ಅವರು ಜಮೀನು ಖರೀದಿಗೆಂದು ಮನೆಯಲ್ಲಿ ನಗದು ಇಟ್ಟುಕೊಂಡಿದ್ದರು ಎಂದು ಹೇಳಲಾಗಿದೆ.

'ದರೋಡೆಕೋರರು ಬಂದಿರುವ ಮಾರ್ಗದಲ್ಲಿ ಅಳವಡಿಸಲಾಗಿರುವ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾದ ದೃಶ್ಯಾವಳಿ ಪರಿಶೀಲನೆ ನಡೆಸಲಾಗುತ್ತಿದೆ. ಬಂದ ಕಾರಿನಲ್ಲೇ ಆರೋಪಿಗಳು ವಾಪಸ್ ಪರಾರಿ ಆಗಿದ್ದಾರೆ. ಆರೋಪಿಗಳ ಸುಳಿವು ಸಿಕ್ಕಿದ್ದು ಶೀಘ್ರದಲ್ಲೇ ಬಂಧಿಸಲಾಗುವುದು' ಎಂದು ಪೊಲೀಸರು ಹೇಳಿದರು.

₹40 ಕೋಟಿ ಮೌಲ್ಯದ ಭೂಮಿ ವಶ

ಬೆಂಗಳೂರು: ಬೆಂಗಳೂರು ಉಪನಗರ ಕಾರಿಡಾರ್–2 ನಿರ್ಮಾಣಕ್ಕಾಗಿ ಭೂಸ್ವಾಧೀನದ ವೇಳೆ ರೈಲ್ವೆ ಮಾರ್ಗದ ಪಕ್ಕದಲ್ಲಿದ್ದ ₹40 ಕೋಟಿ ಮೌಲ್ಯದ ಭೂಮಿ ಒತ್ತುವರಿಯಾಗಿರುವುದು ಗೊತ್ತಾಗಿದ್ದು, ಸುಮಾರು 20 ಗುಂಟೆ ಜಮೀನನ್ನು ವಶಕ್ಕೆ ಪಡೆಯಲಾಗಿದೆ.

ಬೆಂಗಳೂರು ಉತ್ತರ ತಾಲ್ಲೂಕು ಮ್ಯಾಕಲ ಚನ್ನೇನಹಳ್ಳಿ ಗ್ರಾಮ ಹಾಗೂ ಯಲಹಂಕ ಪೀಣ್ಯ ಪ್ಲಾಂಟೇಶನ್‌ಗೆ ಸೇರಿಕೊಂಡ ಗಡಿ ಮಧ್ಯದಲ್ಲಿ ರೈಲ್ವೆ ಮಾರ್ಗವಿದೆ. ಇದಕ್ಕೆ ಹೊಂದಿಕೊಂಡ 500 ಮೀಟರ್ ಖರಾಬು ಜಮೀನು ಒತ್ತುವರಿಯಾಗಿರುವುದು ಭೂಸ್ವಾಧೀನದ ವೇಳೆ ಪತ್ತೆಯಾಯಿತು.

ಈ ಭೂಮಿಯನ್ನು ಬಾಗಮಾನೆ ಡೆವಲಪರ್ಸ್‌ನವರು ಒತ್ತುವರಿ ಮಾಡಿರುವುದು ಪರಿಶೀಲನೆ ವೇಳೆ ತಿಳಿಯಿತು. ಇದು ರೈಲ್ವೆ ರಸ್ತೆಗೆ ಸೇರಿದ ಜಮೀನಾಗಿದೆ ಎಂದು ಬೆಂಗಳೂರು ಉತ್ತರ ಹಾಗೂ ಯಲಹಂಕ ತಾಲ್ಲೂಕು ಭೂ ದಾಖಲೆಗಳ ಸಹಾಯಕ ನಿರ್ದೇಶಕರು ದೃಢಪಡಿಸಿದರು.

ಬಾಗಮಾನೆ ಡೆವಲಪರ್ಸ್ ಪ್ರತಿನಿಧಿಗಳಿಗೆ ಒತ್ತುವರಿ ಬಗ್ಗೆ ತಿಳಿವಳಿಕೆ ನೀಡಿ, ಭೂಮಿಯನ್ನು ವಶಪಡಿಸಿಕೊಂಡು ಉಪನಗರ ಕಾರಿಡಾರ್ ಯೋಜನೆ ಕೆ ರೈಡ್‌ಗೆ ಹಸ್ತಾಂತರಿಸಲಾಯಿತು ಎಂದು ಪ್ರಕಟಣೆ ತಿಳಿಸಿದೆ.

ಸುಂಕದಕಟ್ಟೆ ಬಸ್‌ನಿಲ್ದಾಣದ ಬಳಿ ಕೃತ್ಯ ಎಸಗಿ ಆರೋಪಿ ಪರಾರಿ

11 ಬಾರಿ ಇರಿದು ಪತ್ನಿ ಕೊಂದ ಪತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೌಟುಂಬಿಕ ವಿಚಾರಕ್ಕೆ ಪುತ್ರಿಯ ಎದುರೇ ಎರಡನೇ ಪತ್ನಿಗೆ ಚಾಕುವಿನಿಂದ ಇರಿದು ಕೊಲೆ ಮಾಡಿ ಪತಿ ಪರಾರಿಯಾಗಿರುವ ಘಟನೆ ಸುಂಕದಕಟ್ಟೆ ಬಸ್‌ನಿಲ್ದಾಣದ ಬಳಿ ಸೋಮವಾರ ಬೆಳಿಗ್ಗೆ ನಡೆದಿದೆ.

ಕೆಬ್ಬೆಹಳ್ಳದ ನಿವಾಸಿ ರೇಖಾ(32) ಕೊಲೆಯಾದ ಮಹಿಳೆ.

ಕೃತ್ಯ ಎಸಗಿದ ಆರೋಪಿ, ರೇಖಾ ಅವರ ಪತಿ ಲೋಹಿತಾಶ್ವ(35) ಎಂಬಾತ ಪರಾರಿಯಾಗಿದ್ದು, ಪತ್ತೆ ಕಾರ್ಯ ನಡೆಯುತ್ತಿದೆ ಎಂದು ಪೊಲೀಸರು ಹೇಳಿದರು. 11 ಬಾರಿ ಇರಿದು ಕೊಲೆ ಮಾಡಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಹಾಸನ ಜಿಲ್ಲೆ, ಚನ್ನರಾಯಪಟ್ಟಣದ ರೇಖಾ ಅವರು ಕೌಟುಂಬಿಕ ಕಾರಣಕ್ಕೆ ಮೊದಲ ಪತಿಯಿಂದ ವಿಚ್ಛೇದನ ಪಡೆದುಕೊಂಡಿದ್ದರು. ಇಬ್ಬರು ಹೆಣ್ಣು ಮಕ್ಕಳ ಜತೆಗೆ ಚನ್ನೇನಹಳ್ಳಿಯಲ್ಲಿ ನೆಲಸಿದ್ದರು. ಟೆಲಿಕಾಲ್ ಸೆಂಟರ್‌ನಲ್ಲಿ ಕೆಲಸ ಮಾಡುತ್ತಿದ್ದರು. ತುಮಕೂರು ಜಿಲ್ಲೆ ಶಿರಾ ತಾಲ್ಲೂಕಿನ ಲೋಹಿತಾಶ್ವನಿಗೂ ಮದುವೆಯಾಗಿತ್ತು. ಆತ ಸಹ ಕೌಟುಂಬಿಕ ಕಾರಣಕ್ಕೆ ಪತ್ನಿ, ಮಕ್ಕಳಿಂದ ದೂರವಾಗಿ ಪ್ರತ್ಯೇಕವಾಗಿ ನೆಲಸಿದ್ದ. ಈ ನಡುವೆ ಸ್ನೇಹಿತರ ಮೂಲಕ ಪರಿಚಯವಾದ ರೇಖಾ ಜತೆಗೆ ಸ್ನೇಹ ಬೆಳೆಸಿದ್ದ. ಒಂದೂವರೆ ವರ್ಷದಿಂದ ಇಬ್ಬರೂ ಆತ್ಮೀಯವಾಗಿದ್ದರು. ಮೂರು ತಿಂಗಳ ಹಿಂದೆ ರೇಖಾ ಹಾಗೂ ಲೋಹಿತಾಶ್ವ ಅವರು ಮದುವೆಯಾಗಿದ್ದರು. ಕೆಬ್ಬೆಹಳ್ಳದ ಬಾಡಿಗೆ ಮನೆಯಲ್ಲಿ ರೇಖಾ, ಅವರ ಪುತ್ರಿಯ ಜತೆಗೆ ಲೋಹಿತಾಶ್ವ ವಾಸವಾಗಿದ್ದ. ರೇಖಾ ಅವರು ಕಿರಿಯ ಪುತ್ರಿಯನ್ನು ತನ್ನ ಪೋಷಕರ ಮನೆಯಲ್ಲಿ ಇರಿಸಿದ್ದರು' ಎಂದು ಪೊಲೀಸರು ಹೇಳಿದರು.

'ಮದುವೆಯಾದ ಬಳಿಕ ರೇಖಾ ಅವರು ಪತಿ ಕಂಪನಿಯಲ್ಲೇ ಕೆಲಸಕ್ಕೆ ಸೇರಿಕೊಂಡಿದ್ದರು. ಕೌಟುಂಬಿಕ ಕಾರಣಕ್ಕೆ ಇಬ್ಬರೂ ಪ್ರತಿನಿತ್ಯ ಗಲಾಟೆ ಮಾಡಿಕೊಳ್ಳುತ್ತಿದ್ದರು. ಸೋಮವಾರ ಮುಂಜಾನೆಯೂ ದಂಪತಿ ನಡುವೆ ಗಲಾಟೆ ಆಗಿತ್ತು. ಸೋಮವಾರ ಬೆಳಿಗ್ಗೆ 11 ಗಂಟೆ ಸುಮಾರಿಗೆ ರೇಖಾ ಅವರು 13 ವರ್ಷದ ಮಗಳ ಜತೆಗೆ ಸುಂಕದಕಟ್ಟೆ ಬಸ್ ನಿಲ್ದಾಣದಲ್ಲಿ ನಿಂತಿದ್ದರು. ಆಗ ಸ್ಥಳಕ್ಕೆ ಬಂದಿದ್ದ ಆರೋಪಿ, ಅಲ್ಲೂ ಜಗಳ ಮಾಡಿದ್ದ. ಸ್ಥಳದಲ್ಲಿದ್ದ ಪುತ್ರಿ ಜಗಳ ಬಿಡಿಸಲು ಮುಂದಾಗಿದ್ದಳು. ಆರೋಪಿ ತನ್ನ ಬಳಿಯಿದ್ದ ಚಾಕುವಿನಿಂದ ರೇಖಾ ಅವರ ಹೊಟ್ಟೆ ಹಾಗೂ ಎದೆಯ ಭಾಗಕ್ಕೆ 11 ಬಾರಿ ಇರಿದು ಕೊಲೆ ಮಾಡಿ ಪರಾರಿಯಾಗಿದ್ದಾನೆ' ಎಂದು ಪೊಲೀಸರು ಹೇಳಿದರು.

ಸ್ಥಳೀಯರು ಆರೋಪಿಯನ್ನು ಹಿಡಿಯಲು ಪ್ರಯತ್ನಿಸಿದ್ದರು. ಅವರಿಗೆ ಚಾಕು ತೋರಿಸಿ ಪರಾರಿಯಾಗಿದ್ದಾನೆ ಎಂದು ಹೇಳಿದರು.

ರೇಖಾ ಜತೆಗೆ ಒಂದೂವರೆ ವರ್ಷದ ಆತ್ಮೀಯತೆ ಹೊಂದಿದ್ದ ಲೋಹಿತಾಶ್ವ, ಮೂರು ತಿಂಗಳ ಹಿಂದೆ ಅವರೊಂದಿಗೆ ಮದುವೆಯಾಗಿದ್ದ. ಪತ್ನಿ ಮೇಲೆ ಅನುಮಾನ ವ್ಯಕ್ತಪಡಿಸಿ ನಿತ್ಯ ಜಗಳ ಮಾಡುತ್ತಿದ್ದ. ಅದೇ ಕಾರಣಕ್ಕೆ ಕೃತ್ಯ ನಡೆದಿರುವ ಸಾಧ್ಯತೆಯಿದೆ ಎಂದು ತನಿಖೆಯಿಂದ ಗೊತ್ತಾಗಿದೆ ಎಂದು ಪೊಲೀಸರು ಹೇಳಿದರು. ಕಾಮಾಕ್ಷಿಪಾಳ್ಯ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆಘಾತಕ್ಕೆ ಒಳಗಾದ ಪುತ್ರಿ

ಘಟನೆಯಿಂದ ರೇಖಾ ಅವರ ಪುತ್ರಿ ಆಘಾತಕ್ಕೆ ಒಳಗಾಗಿದ್ದಾಳೆ. ಆಕೆಯನ್ನು ಆಪ್ತ ಸಮಾಲೋಚನೆಗೆ ಒಳಪಡಿಸಲಾಗಿದೆ. ಪುತ್ರಿ ಚೇತರಿಸಿಕೊಂಡ ಬಳಿಕ ಹೇಳಿಕೆ ದಾಖಲಿಸಿಕೊಳ್ಳಲಾಗುವುದು. ಹೇಳಿಕೆ ಆಧರಿಸಿ ಮುಂದಿನ ತನಿಖೆ ನಡೆಸಲಾಗುವುದು ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿ

ಬಾರ್‌ನಲ್ಲಿ ಗಲಾಟೆ: ಕೊಲೆಗೆ ಯತ್ನ

ಬೆಂಗಳೂರು: ಆಟೊ ಚಾಲಕನಿಗೆ ಬಿಯರ್ ಬಾಟಲಿ ಮತ್ತು ಚಾಕುವಿನಿಂದ ಹಲ್ಲೆ ನಡೆಸಿ ಕೊಲೆಗೆ ಯತ್ನಿಸಲಾಗಿದ್ದು, ಈ ಸಂಬಂಧ ಪೀಣ್ಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಾಗಸಂದ್ರದ ತಿಪ್ಪೇನಹಳ್ಳಿ ನಿವಾಸಿ ಶಶಿಕುಮಾರ್(32) ಹಲ್ಲೆಗೆ ಒಳಗಾದವರು. ಕೃತ್ಯ ಎಸಗಿದ ಶಿವು ಅಲಿಯಾಸ್ ಜನರೇಟರ್(26) ಎಂಬಾತನ ಬಂಧಿಸಲಾಗಿದೆ. ಪ್ರಕರಣದಲ್ಲಿ ತಲೆಮರೆಸಿಕೊಂಡಿರುವ ಭರತ್ ಅಲಿಯಾಸ್ ಲ್ಯಾಪ್ಸ್ ಸೇರಿ ಇಬ್ಬರು ಆರೋಪಿಗಳಿಗಾಗಿ ಶೋಧ ಕಾರ್ಯ ನಡೆಯುತ್ತಿದೆ ಎಂದು ಪೊಲೀಸರು ಹೇಳಿದರು.

ಶಶಿಕುಮಾರ್ ಅವರು ಆಟೊ ಚಾಲಕರಾಗಿದ್ದಾರೆ. ಅವರ ಪತ್ನಿ ದೀಪಿಕಾ ಅವರು ಕರ್ನಾಟಕ ಪರೀಕ್ಷಾ ಪ್ರಾಧಿಕಾರದಲ್ಲಿ ಗುತ್ತಿಗೆ ಆಧಾರದಲ್ಲಿ ಟೆಲಿಕಾಲರ್ ಆಗಿ ಕೆಲಸ ಮಾಡುತ್ತಿದ್ದಾರೆ. ಮಕ್ಕಳ ಜತೆಗೆ ದಂಪತಿ ತಿಪ್ಪೇನಹಳ್ಳಿಯಲ್ಲಿ ವಾಸವಾಗಿದ್ದಾರೆ.

ಸೆ.21ರಂದು ರಾತ್ರಿ ಸಂಬಂಧಿ ನೆಲಗೆದರನಹಳ್ಳಿಯಲ್ಲಿರುವ ಮೂರ್ತಿ ಅವರ ಮನೆಗೆ ಪಿತೃಪಕ್ಷದ ಊಟಕ್ಕೆಂದು ಬೈಕ್‌ನಲ್ಲಿ ಶಶಿಕುಮಾರ್ ತೆರಳುತ್ತಿದ್ದರು. ಮಾರ್ಗ ಮಧ್ಯೆ ಶಿವಪುರದ ವೈನ್ಸ್ ಸ್ಟೋರ್‌ನಲ್ಲಿ ಮದ್ಯ ಸೇವಿಸಲು ಹೋಗಿದ್ದರು. ಅದೇ ವೈನ್ಸ್ ಸ್ಟೋರ್‌ನಲ್ಲಿ ಆರೋಪಿಗಳಾದ ಭರತ್, ಶಿವು ಹಾಗೂ ಮತ್ತೊಬ್ಬ ಆರೋಪಿ ಮದ್ಯ ಸೇವಿಸುತ್ತಿದ್ದರು. ಶಶಿಕುಮಾರ್ ಅವರು ಆರೋಪಿಗಳತ್ತ ನೋಡಿದ್ದರು. ಆಗ ಕೋಪಗೊಂಡ ಆರೋಪಿಗಳು, 'ಯಾಕೆ ನಮ್ಮನ್ನೇ ಗುರಾಯಿಸುತ್ತಿದ್ದೀಯಾ' ಎಂದು ಪ್ರಶ್ನಿಸಿ ಜಗಳ ತೆಗೆದಿದ್ದರು. ಬಳಿಕ, ಸ್ಥಳೀಯರು ಜಗಳ ಬಿಡಿಸಿದ್ದರು. ಶಶಿಕುಮಾರ್‌ಗೆ ಬಿಯರ್ ಬಾಟಲಿಯಿಂದ ಹೊಡೆದು ಕೊಲೆಗೆ ಯತ್ನಿಸಿದ್ದರು ಎಂದು ದೂರು ನೀಡಲಾಗಿದೆ.

ಬೈಕ್‌ಗೆ ಲಾರಿ ಡಿಕ್ಕಿ: ಖಾಸಗಿ ಕಂಪನಿ ಉದ್ಯೋಗಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಂದಿನಿಲೇಔಟ್‌ನ ಕಂಠೀರವ ಸ್ಟುಡಿಯೊ ರಸ್ತೆಯಲ್ಲಿರುವ ರವಿತೇಜ ಪೆಟ್ರೋಲ್ ಬಂಕ್ ಬಳಿ ಸೋಮವಾರ ಬೆಳಿಗ್ಗೆ ಸಂಭವಿಸಿದ ಅಪಘಾತದಲ್ಲಿ ಖಾಸಗಿ ಕಂಪನಿ ಉದ್ಯೋಗಿ ಕಲ್ಪನಾ(38) ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಕಲ್ಪನಾ

'ಪ್ರಜಾವಾಣಿ'ಯ ಕಲಾವಿದ ಶಶಿಕಿರಣ್ ದೇಸಾಯಿ ಅವರ ಪತ್ನಿ ಕಲ್ಪನಾ ಅವರು ಪೀಣ್ಯದ ಆದರ್ಶ್ ಎಲೆಕ್ಟ್ರಾನಿಕ್ಸ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಮಹಾಲಕ್ಷ್ಮಿ ಲೇಔಟ್‌ನಲ್ಲಿ ನೆಲಸಿದ್ದರು.

ನಾಲ್ಕು ವರ್ಷದ ಪುತ್ರಿಯನ್ನು ಸೋಮವಾರ ಬೆಳಿಗ್ಗೆ ಶಾಲೆಗೆ ಕಳುಹಿಸಿ, ಕಲ್ಪನಾ ಅವರು ಕೆಲಸಕ್ಕೆ ಹೊರಟಿದ್ದರು. ಮಾರ್ಗ ಮಧ್ಯೆ ಬಸ್‌ನಿಂದ ಇಳಿದು ಸಹೋದ್ಯೋಗಿಯ ಜತೆಗೆ ದ್ವಿಚಕ್ರ ವಾಹನದಲ್ಲಿ ಕಚೇರಿಯತ್ತ ತೆರಳುತ್ತಿದ್ದರು. ರವಿತೇಜ ಪೆಟ್ರೋಲ್ ಬಂಕ್ ಬಳಿ, ಹಿಂದಿನಿಂದ ವೇಗವಾಗಿ ಬಂದ ಲಾರಿ, ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದಿದೆ. ಕಲ್ಪನಾ ಅವರ ಹೊಟ್ಟೆ ಹಾಗೂ ತಲೆಯ ಭಾಗಕ್ಕೆ ಗಂಭೀರವಾದ ಪೆಟ್ಟು ಬಿದ್ದು, ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಸವಾರನ ಕಾಲು ಹಾಗೂ ಬೆನ್ನಿನ ಭಾಗಕ್ಕೆ ಗಾಯವಾಗಿದ್ದು, ಕಣ್ವ ಶ್ರೀ ಸಾಯಿ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪೊಲೀಸರು ಹೇಳಿದರು.

ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ, ಮೃತದೇಹವನ್ನು ಕುಟುಂಬಸ್ಥರಿಗೆ ಹಸ್ತಾಂತರ ಮಾಡಲಾಗಿದೆ.

ಹಾಸನದ ಆಲೂರು ತಾಲ್ಲೂಕಿನ ಮಂಚೇನಹಳ್ಳಿ ಗ್ರಾಮದಲ್ಲಿ ಮಂಗಳವಾರ ಬೆಳಿಗ್ಗೆ ಅಂತ್ಯಸಂಸ್ಕಾರ ನೆರವೇರಿಸಲಾಗುವುದು ಎಂದು ಕುಟುಂಬ ತಿಳಿಸಿದೆ.

ಚಾಲಕ ವಶ: ಲಾರಿಯನ್ನು ಸ್ಥಳದಲ್ಲೇ ಬಿಟ್ಟು ಪರಾರಿಯಾಗಿದ್ದ ಚಾಲಕನನ್ನು ಸಂಜೆ ವೇಳೆಗೆ ಪತ್ತೆಹಚ್ಚಿ ವಶಕ್ಕೆ ಪಡೆಯಲಾಗಿದೆ ಎಂದು ಮೂಲಗಳು ತಿಳಿಸಿವೆ. ರಾಜಾಜಿನಗರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರೆಡ್ಡಿ ವಿರುದ್ಧ ಮೊಕದ್ದಮೆ: 29ಕ್ಕೆ ಸೆಂಥಿಲ್ ಹೇಳಿಕೆ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಧರ್ಮಸ್ಥಳಕ್ಕೆ ಕಳಂಕ ತರುವ ಪಿತೂರಿಯ ಹಿಂದಿನ ರೂವಾರಿ ಸಸಿಕಾಂತ್ ಸೆಂಥಿಲ್' ಎಂದು ಆರೋಪಿಸಿದ್ದ ಗಂಗಾವತಿ ಶಾಸಕ ಜನಾರ್ದನ ರೆಡ್ಡಿ ವಿರುದ್ಧ ತಮಿಳುನಾಡಿನ ತಿರುವಳ್ಳೂರು ಸಂಸದ ಸಸಿಕಾಂತ್ ಸೆಂಥಿಲ್ ದಾಖಲಿಸಿರುವ ಕ್ರಿಮಿನಲ್ ಮಾನನಷ್ಟ ಮೊಕದ್ದಮೆಯನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ವಿಚಾರಣೆಗೆ ಅಂಗೀಕರಿಸಿದೆ.

ಈ ಸಂಬಂಧ ದೂರುದಾರ ಸಸಿಕಾಂತ್ ಸೆಂಥಿಲ್ ಅವರ ಸ್ವಯಂ ಹೇಳಿಕೆ ದಾಖಲಿಸಲು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ನ್ಯಾಯಾಧೀಶ ಕೆ.ಎನ್.ಶಿವಕುಮಾರ್ ವಿಚಾರಣೆಯನ್ನು ಇದೇ 29ಕ್ಕೆ ನಿಗದಿಪಡಿಸಿದ್ದಾರೆ.

ಖಾಸಗಿ ದೂರು: 'ಜಿ. ಜನಾರ್ದನ ರೆಡ್ಡಿ ದುರುದ್ದೇಶದಿಂದ ಸುಳ್ಳು ಆರೋಪ ಮಾಡಿದ್ದಾರೆ. ನಾನು ಈ ಹಿಂದೆ ಬಳ್ಳಾರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಜನಾರ್ದನ ರೆಡ್ಡಿ ಶಾಸಕರಾಗಿದ್ದರು. ರೆಡ್ಡಿ ಎಸಗಿದ್ದ ಅಕ್ರಮಗಳಿಗೆ ಸಂಬಂಧಿಸಿದಂತೆ ಸಿಇಸಿ ಮತ್ತು ಸಿಬಿಐಗೆ ನೆರವು ನೀಡಿದ್ದೆ. ಹಲವು ಅಕ್ರಮಗಳನ್ನು ಬಯಲು ಮಾಡಿದ್ದೆ. ಇದರಿಂದ, ಜನಾರ್ದನ ರೆಡ್ಡಿ ದ್ವೇಷ ಸಾಧಿಸುತ್ತಿದ್ದರು' ಎಂದು ಸೆಂಥಿಲ್ ದೂರಿದ್ದಾರೆ.

ನಗರದಲ್ಲಿ ಇಂದು

10ನೇ ರಾಷ್ಟ್ರೀಯ ಆಯುರ್ವೇದ ದಿನ ಮತ್ತು 'ಆಯುಷ್ ಮಾನ್' ಅನಾವರಣ: ಮುಖ್ಯ ಅತಿಥಿಗಳು: ಡಾ.ಡಿ. ನಾಗರಾಜ, ಡಾ.ಬಿ.ಎನ್. ಗಂಗಾಧರ, ಅಧ್ಯಕ್ಷತೆ: ಪ್ರತಿಮಾಮೂರ್ತಿ, ಆಯೋಜನೆ ಹಾಗೂ ಸ್ಥಳ: ಎಂ.ವಿ. ಗೋವಿಂದಸ್ವಾಮಿ ಬಿಲ್ಡಿಂಗ್, ನಿಮ್ಹಾನ್ಸ್, ಬೆಳಿಗ್ಗೆ 10.30

ಬಿ.ಆರ್. ಅಂಬೇಡ್ಕರ್ ಅವರ 'ರೂಪಾಯಿಯ ಸಮಸ್ಯೆ: ಅದರ ಮೂಲ ಮತ್ತು ಪರಿಹಾರಗಳು' ಪುಸ್ತಕದ ಶತಮಾನೋತ್ಸವದ ಪ್ರಯುಕ್ತ 'ಭಾರತದಲ್ಲಿ ಅಂಬೇಡ್ಕರ್ ಅರ್ಥಶಾಸ್ತ್ರದ ಪ್ರಭಾವ' ವಿಷಯದ ಬಗ್ಗೆ ವಿಚಾರಸಂಕಿರಣ: ಉದ್ಘಾಟನೆ: ಪ್ರಮೋದ್ ಕುಮಾರ್, ಕಾರ್ಯಾಗಾರದ ಬಗ್ಗೆ ಪರಿಚಯ: ಕೃಷ್ಣ ರಾಜ್, ಮುಖ್ಯ ಅತಿಥಿ: ಅಬ್ದುಲ್ ಅಜೀಜ್, ಅಧ್ಯಕ್ಷತೆ: ಅಶೋಕ್ ದಳವಾಯಿ, ಆಯೋಜನೆ: ಡಾ.ಬಿ.ಆರ್. ಅಂಬೇಡ್ಕರ್ ಸಂಶೋಧನೆ, ತರಬೇತಿ ಹಾಗೂ ವಿಸ್ತರಣಾ ಕೇಂದ್ರ, ಸ್ಥಳ: ಮಹಾತ್ಮಗಾಂಧಿ ಸಭಾಂಗಣ, ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಸಂಸ್ಥೆ (ಐಸೆಕ್), ನಾಗರಬಾವಿ, ಬೆಳಿಗ್ಗೆ 10.30

'ನಲ್ಲತಂಗ' ಮತ್ತು 'ಸಾಸುವೆ ಚೆನ್ನಮ್ಮ' ನಾಟಕ ಪ್ರದರ್ಶನ: ಚಾಲನೆ: ಸಿ. ಬಸವಲಿಂಗಯ್ಯ, ಪ್ರಾಸ್ತಾವಿಕ: ಎಂ.ಎನ್. ವೆಂಕಟೇಶ್, ಅಧ್ಯಕ್ಷತೆ: ಹಿ.ಚಿ. ಬೋರಲಿಂಗಯ್ಯ, ಆಯೋಜನೆ: ವೇಮಗಲ್ ನಾರಾಯಣಸ್ವಾಮಿ ಸಾಂಸ್ಕೃತಿಕ ಮತ್ತು ಸೇವಾ ಪ್ರತಿಷ್ಠಾನ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಮಧ್ಯಾಹ್ನ 3ರಿಂದ

42ನೇ ಅಂತರ ವಿಭಾಗ ನಾಟಕ ಸ್ಪರ್ಧೆ: 'ಸಂಕ್ರಾಂತಿ' ನಾಟಕ ಪ್ರದರ್ಶನ: ನಿರ್ದೇಶನ: ಸಂತೋಷ್ ಹೆಬ್ಬಾಳ ಹಿರೇಮಠ, ಆಯೋಜನೆ: ಕನ್ನಡ ಸಾಹಿತ್ಯ ಕೂಟ, ಸ್ಥಳ: ರಾಷ್ಟ್ರಕವಿ ಕುವೆಂಪು ಕಲಾಕ್ಷೇತ್ರ, ಜಾಲಹಳ್ಳಿ, ಸಂಜೆ 6

ಕಪ್ಪಣ್ಣ ಅಂಗಳ ದಶಮಾನೋತ್ಸವ: 'ಜೀಟಿಗೆ' ಚಲನಚಿತ್ರ ಪ್ರದರ್ಶನ, ಸ್ಥಳ: ಕಪ್ಪಣ್ಣ ಅಂಗಳ, ಐದನೇ ಮುಖ್ಯರಸ್ತೆ, ಐಟಿಐ ಕಾಲೊನಿ, ಜೆ.ಪಿ. ನಗರ ಮೊದಲ ಹಂತ, ಸಂಜೆ 6.30

'ಸುಯೋಧನ' ಪೌರಾಣಿಕ ನಾಟಕ ಪ್ರದರ್ಶನ: ನಿರ್ದೇಶನ: ಶಿವು ಹೊನ್ನಿಗನಹಳ್ಳಿ, ತಂಡ: ಬಿಂಕ ಬಿನ್ನಾಣರು ರಂಗ ತಂಡ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6.30

ನವರಾತ್ರಿ ವಿಶೇಷ

ನವರಾತ್ರಿ ಮಹೋತ್ಸವದ ಅಂಗವಾಗಿ 'ಧಾತು' ಗೊಂಬೆಗಳ ಪ್ರದರ್ಶನ: ಆಯೋಜನೆ: ಧಾತು ಕ್ರಿಯೇಟಿವ್, ಸ್ಥಳ: ಮಂಡಲ ಕಲ್ಚರಲ್ ಸೆಂಟರ್, ಕನಕಪುರ ರಸ್ತೆ, ಬೆಳಿಗ್ಗೆ 10.30

ನವರಾತ್ರಿ ಉತ್ಸವ: ದಸರಾ ಗೊಂಬೆಗಳ ಪ್ರದರ್ಶನ, ಆಯೋಜನೆ ಮತ್ತು ಸ್ಥಳ: ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 11ರಿಂದ

ವಚನ ದಸರಾ: ವಚನ ಗಾಯನ: ಸುಶೀಲಮ್ಮ ಮತ್ತು ತಂಡ, ರಮಾಮಣಿ ಮತ್ತು ತಂಡ, ಅತಿಥಿಗಳು: ಕೆ.ಎಂ. ಚಂದ್ರಶೇಖರಯ್ಯ, ಬಸವರಾಜು ಓ.ಎಂ., ಅಧ್ಯಕ್ಷತೆ: ಎಸ್. ಪಿನಾಕಪಾಣಿ, ಆಯೋಜನೆ: ವಚನಜ್ಯೋತಿ ಬಳಗ, ಸ್ಥಳ: ಬಸವ ಬೆಳಕು, # 533, 7ನೇ ಮುಖ್ಯರಸ್ತೆ, ದೊಡ್ಡಬಸ್ತಿ ಮುಖ್ಯರಸ್ತೆ, ಕಲ್ಯಾಣ ಗೃಹನಿರ್ಮಾಣ ಸಹಕಾರ ಸಂಘ ಬಡಾವಣೆ, ಸಂಜೆ 5

ದಸರಾ ರಂಗೋತ್ಸವ: ಉದ್ಘಾಟನೆ: ಎಸ್.ಟಿ. ಸೋಮಶೇಖರ್, ಅಧ್ಯಕ್ಷತೆ: ಪಟೇಲ್ ಬಿ.ಎಂ. ಗಂಗರಾಜು, ರಂಗ ಗೌರವ: ಎಂ. ವಿಜಯಕುಮಾರ್, ತೋಟದಮನೆ ಗಿರೀಶ್ ವಿ., ನಾಟಕ ಪ್ರದರ್ಶನ: ಗಣಪತಿ ಗೌಡ ನಿರ್ದೇಶನದ '36 ಅಲ್ಲ 63', ಯು. ಗೋವಿಂದೇಗೌಡ ನಿರ್ದೇಶನದ 'ವಿಕಟ ವಿಲಾಸ', ಆಯೋಜನೆ: ನಾಟ್ಯ ಸರಸ್ವತಿ ಶಾಂತಲಾ ಕನ್ನಡ ಕಲಾ ಸಂಘ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ.ರಸ್ತೆ, ಸಂಜೆ 5.30

ಯುವ ದಸರಾ: ರಂಗ ನಮನ: ಜಿ. ಜಯಶ್ರೀ, ಪ್ರವೀಣ್ ಡಿ. ರಾವ್, ಆಯೋಜನೆ: ಯುವಕ ಸಂಘ, ಸ್ಥಳ: ಯುವಪಥ, ನಾಲ್ಕನೇ ಬ್ಲಾಕ್, ಜಯನಗರ, ಸಂಜೆ 5.45

ದೇವಿಗೆ ಹಯಗ್ರೀವ ಅಲಂಕಾರ: ಆಯೋಜನೆ ಮತ್ತು ಸ್ಥಳ: ಯಲ್ಲಮ್ಮ ದೇವಿ ದೇವಾಲಯ, ದೇಶದಪೇಟೆ ರಸ್ತೆ, ಯಲಹಂಕ, ಸಂಜೆ 6

ದೇವಿಗೆ ಅಲಂಕಾರ: ಅರಿಸಿನ–ಕುಂಕುಮ, ಭಜನೆ: ನಿತ್ಯಾ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ದುರ್ಗಾ ಮಹೇಶ್ವರಮ್ಮ ದೇವಾಲಯ, ಕೆ.ಆರ್. ಪುರ, ಸಂಜೆ 6

ತ್ರಿಮೂರ್ತಿ ದೇವಸ್ಥಾನದಲ್ಲಿ ಅರಿಸಿನ–ಕುಂಕುಮ ಅಲಂಕಾರ: ಆಯೋಜನೆ ಹಾಗೂ ಸ್ಥಳ: ಶಿವಬಾಲಯೋಗಿ ಮಹಾರಾಜ್ ಟ್ರಸ್ಟ್, ಜೆ.ಪಿ.ನಗರ 3ನೇ ಹಂತ, ಸಂಜೆ 6

ದೇವಿಯರಿಗೆ ವಿಶೇಷ ಅಲಂಕಾರ: ಆಯೋಜನೆ ಮತ್ತು ಸ್ಥಳ: ದೇವಿ ಸಲ್ಲಾಪುರಮ್ಮ, ದೇವಿ ರೇಣುಕಾಯಲ್ಲಮ್ಮ ದೇವಸ್ಥಾನ, ಮಾರೇನಹಳ್ಳಿ ಗ್ರಾಮ, ಜೆ.ಪಿ. ನಗರ, ಸಂಜೆ 6.30

ದೇವಿಗೆ ಅಲಂಕಾರ: ಬೆಣ್ಣೆ, ದೇವರನಾಮ ಮತ್ತು ಭಜನೆ: ಸ್ಫೂರ್ತಿ ಮಹಿಳಾ ಮಂಡಳಿ, ಆಯೋಜನೆ ಮತ್ತು ಸ್ಥಳ: ವರಸಿದ್ಧಿ ವಿನಾಯಕ ದೇವಾಲಯ, ಕೆನರಾ ಬ್ಯಾಂಕ್ ಕಾಲೊನಿ, ನಾಗರಬಾವಿ ರಸ್ತೆ, ಸಂಜೆ 6.30

ದೇವಿಗೆ ಅಲಂಕಾರ: ಮಹೇಶ್ವರಿ, ಗಾಯನ: ಶೃಂಗಾರ ಲಹರಿ ಸಂಗೀತ ಶಾಲೆ ವಿದ್ಯಾರ್ಥಿಗಳು, ಆಯೋಜನೆ ಮತ್ತು ಸ್ಥಳ: ಸರ್ಕಲ್ ಮಾರಮ್ಮ ದೇವಸ್ಥಾನ, ಮಲ್ಲೇಶ್ವರ, ಸಂಜೆ 6.30

ನವರಾತ್ರಿ ದಸರಾ ಉತ್ಸವ: ಭರತನಾಟ್ಯ ಪ್ರದರ್ಶನ: ಶಾಂತಲಾ ತಂಡ, ಗಾಯನ: ಅಂಬಿಕಾ ಶಾಸ್ತ್ರಿ, ಆಯೋಜನೆ ಮತ್ತು ಸ್ಥಳ: ಶಾಂತಲಾ ಆರ್ಟ್ಸ್ ಟ್ರಸ್ಟ್, ಯಶವಂತಪುರ, ಸಂಜೆ 6.30

ದೇವಿಗೆ ಅಲಂಕಾರ: ಬಳೆ ಕುಂಕುಮ, ಆಯೋಜನೆ ಮತ್ತು ಸ್ಥಳ: ದೊಡ್ಡಮ್ಮ ದೇವಿ ಅಭಿವೃದ್ಧಿ ಸಮಿತಿ, ಚಿಕ್ಕದೇವಸಂದ್ರ, ಕೆ.ಆರ್.ಪುರ, ಸಂಜೆ 7.30

ಹೃದಯಾಘಾತ: ಜಯದೇವ ಹೃದ್ರೋಗ ಸಂಸ್ಥೆ ವೈದ್ಯರಿಂದ ಎಚ್‌ಐವಿ ಸೋಂಕಿತೆಗೆ ಯಶಸ್ವಿ ಶಸ್ತ್ರಚಿಕಿತ್ಸೆ

ಲಿಂಗತ್ವ ಅಲ್ಪಸಂಖ್ಯಾತೆ ಹೃದಯಕ್ಕೆ ಮಿಡಿದ 'ಜಯದೇವ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೃದಯಾಘಾತಕ್ಕೆ ಒಳಗಾಗಿದ್ದ ತಮಿಳುನಾಡಿನ 45 ವರ್ಷದ ಎಚ್‌ಐವಿ ಸೋಂಕಿತ ಲಿಂಗತ್ವ ಅಲ್ಪಸಂಖ್ಯಾತೆಗೆ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ವೈದ್ಯರು ಯಶಸ್ವಿಯಾಗಿ ಶಸ್ತ್ರಚಿಕಿತ್ಸೆ ನಡೆಸಿ, ಮೂರು ಸ್ಟೆಂಟ್‌ಗಳನ್ನು ಅಳವಡಿಸಿದ್ದಾರೆ.

ಶಸ್ತ್ರಚಿಕಿತ್ಸೆಗೆ ಒಳಗಾದ ಲಿಂಗತ್ವ ಅಲ್ಪಸಂಖ್ಯಾತೆ ಮಧುರೈನವರಾಗಿದ್ದು, ಆರು ವರ್ಷಗಳಿಂದ ಬೆಂಗಳೂರಿನಲ್ಲಿ ನೆಲಸಿದ್ದಾರೆ. ಹೃದಯಾಘಾತಕ್ಕೆ ಒಳಗಾದ ಅವರನ್ನು ನಗರದ ಖಾಸಗಿ ಆಸ್ಪತ್ರೆಗೆ ಸಹಾಯಕರು ಕರೆದೊಯ್ದಿದ್ದರು. ಎಚ್‌ಐವಿ ಸೋಂಕಿತರೂ ಆಗಿದ್ದ ಕಾರಣ ಅವರನ್ನು ದಾಖಲಿಸಿಕೊಳ್ಳಲು ಆಸ್ಪತ್ರೆಯವರು ನಿರಾಕರಿಸಿದ್ದರಿಂದ, ಜಯದೇವ ಆಸ್ಪತ್ರೆಗೆ ಭೇಟಿ ನೀಡಿದ್ದರು. ಡಾ.ಎಚ್.ಎಸ್. ನಟರಾಜ್ ಶೆಟ್ಟಿ ನೇತೃತ್ವದಲ್ಲಿ ವೈದ್ಯರ ತಂಡ ಲಿಂಗತ್ವ ಅಲ್ಪಸಂಖ್ಯಾತೆಗೆ ಶಸ್ತ್ರಚಿಕಿತ್ಸೆ ನಡೆಸಿದ್ದು, ಅವರು ಐದು ದಿನಗಳ ಅವಧಿಯಲ್ಲಿ ಚೇತರಿಸಿಕೊಂಡಿದ್ದಾರೆ. ಆಸ್ಪತ್ರೆಯಿಂದ ಸೋಮವಾರ ತೆರಳಿದರು.

'ಸಂಸ್ಥೆಯ ನಿರ್ದೇಶಕ ಡಾ.ಬಿ. ದಿನೇಶ್ ಅವರ ಮಾರ್ಗದರ್ಶನದಲ್ಲಿ ಈ ಶಸ್ತ್ರಚಿಕಿತ್ಸೆ ನಡೆಸಲಾಗಿದೆ. ಮೂರು ಸ್ಟೆಂಟ್‌ಗಳನ್ನು ಅಳವಡಿಸಿದ ಪರಿಣಾಮ ಅವರು ಬದುಕುಳಿದಿದ್ದು, ಪುನರ್ಜನ್ಮ ದೊರೆತಂತಾಗಿದೆ. ಆಸ್ಪತ್ರೆಯ ಚಿಕಿತ್ಸಾ ವೆಚ್ಚ ₹ 2.5 ಲಕ್ಷವಾಗಿದ್ದು, ಬಡವರೆಂಬ ಕಾರಣಕ್ಕೆ ಸಂಪೂರ್ಣ ಉಚಿತವಾಗಿ ಚಿಕಿತ್ಸೆ ಒದಗಿಸಲಾಗಿದೆ. ಅವರ ಬಳಿ ಹಣ ಹಾಗೂ ಯಾವುದೇ ವೈಯಕ್ತಿಕ ದಾಖಲಾತಿ ಇರಲಿಲ್ಲ' ಎಂದು ಡಾ.ಎಚ್.ಎಸ್. ನಟರಾಜ್ ಶೆಟ್ಟಿ ತಿಳಿಸಿದರು.

'ಅವರಿಗೆ ಎದೆನೋವು ಇದ್ದಿದ್ದರಿಂದ ಆಸ್ಪತ್ರೆಗೆ ಭೇಟಿ ನೀಡಿದ ಕೂಡಲೇ ಇಸಿಜಿ, ರಕ್ತ ಪರೀಕ್ಷೆ ಮಾಡಲಾಯಿತು. ಆಂಜಿಯೋಗ್ರಾಮ್ ಮಾಡಿದಾಗ, ಹೃದಯದ ನಾಳಗಳಲ್ಲಿ ಸಂಕೀರ್ಣ ಬ್ಲಾಕೇಜ್ ಇರುವುದು ದೃಢಪಟ್ಟಿತು. ಬ್ಲಾಕೇಜ್ ತೆರೆಯುವ ವೇಳೆ ಹೃದಯ ಸ್ತಂಭನಕ್ಕೆ ಒಳಗಾಗಿದ್ದರು. ಸಿಪಿಆರ್ ನಡೆಸಿ, ಅವರು ಚೇತರಿಸಿಕೊಳ್ಳಲು ಮೂರು ಸ್ಟೆಂಟ್ ಅಳವಡಿಸಲಾಯಿತು. ಈಗ ಚೇತರಿಸಿಕೊಂಡಿದ್ದಾರೆ' ಎಂದರು.

'ಲಿಂಗತ್ವ ಅಲ್ಪಸಂಖ್ಯಾತರಾಗುವ ಜತೆಗೆ ಎಚ್‌ಐವಿ ಸೋಂಕಿತರೂ ಆಗಿದ್ದರಿಂದ ಈ ಪ್ರಕರಣದಲ್ಲಿ ಶಸ್ತ್ರಚಿಕಿತ್ಸೆ ಸವಾಲಾಗಿತ್ತು. 15 ವರ್ಷಗಳ ಅನುಭವದಲ್ಲಿ ಸಾವಿರಾರು ಶಸ್ತ್ರಚಿಕಿತ್ಸೆ ನಡೆಸಿದ್ದು, ಈ ಪ್ರಕರಣದ ನಿರ್ವಹಣೆ ಸುಲಭವಾಗಿರಲಿಲ್ಲ' ಎಂದು ಹೇಳಿದರು.

ಇದೇ ವೇಳೆ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದ ಲಿಂಗತ್ವ ಅಲ್ಪಸಂಖ್ಯಾತೆ ಹಾಗೂ ಅವರ ಸಹಾಯಕರು ವೈದ್ಯರ ಸೇವೆ ಬಗ್ಗೆ ಸಂತಸ ವ್ಯಕ್ತಪಡಿಸಿ, ನಿರ್ದೇಶಕ ಡಾ.ಬಿ. ದಿನೇಶ್ ಹಾಗೂ ಡಾ.ಎಚ್.ಎಸ್. ನಟರಾಜ್ ಶೆಟ್ಟಿ ಅವರನ್ನು ಗೌರವಿಸಿದರು.

ಶಸ್ತ್ರಚಿಕಿತ್ಸೆ ನಡೆಸಿದ ವೈದ್ಯರ ತಂಡವು ಡಾ.ಶ್ರೀಧರ್, ಡಾ.ರಾಹುಲ್ ಪಾಟೀಲ, ಡಾ.ಚೇತನ್ ಕುಮಾರ್, ಡಾ.ನಟೇಶ್, ಡಾ.ರಾಜೇಂದ್ರನ್ , ಡಾ.ಸಂತೋಷ್ ಜಾಧವ್ ಅವರನ್ನು ಒಳಗೊಂಡಿದೆ.

ಡಾ.ಬಿ. ದಿನೇಶ್ ಹಾಗೂ ಡಾ.ಎಚ್.ಎಸ್. ನಟರಾಜ್ ಶೆಟ್ಟಿ ಅವರನ್ನು ಶಸ್ತ್ರಚಿಕಿತ್ಸೆಗೆ ಒಳಗಾದ ಲಿಂಗತ್ವ ಅಲ್ಪಸಂಖ್ಯಾತೆ ಸಹಾಯಕರು ಗೌರವಿಸಿದರು

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUSINESS

Business to Business

Business

PROPERTY COLLATERALS/ Joint Developments/ Take overs) R/E Buying Selling School/ Colleges/ Hospitals. Hot Drinks Factory (GOA). Dr. Swamy, Vamshadhara Projects/ Services- 93422247637.

RENTAL PROPERTIES

Accommodation Available

Commercial

RENT: BANK_SPACE, 3000`Sqft. Ready_Strong Room &`Facilities. #14,Flower_Garden, Oppsite`BHEL Factory Mysore Road. Call:Landlord Vinod: 9845243132.

PERSONAL

Change of Name

CHANGE OF NAME
I, HEMANTH KUMAR M, residing at No. 172, Ojili Meadows Flat No. B1, 2nd Floor, Seppings Road, Shivajinagar, Bangalore - 560001 have changed my name to J M BHALAJEEKAANTH vide affidavit dated 22-09-2025 sworn before notary Y.R.Chandrashekar, Bangalore. Henceforth I shall be called as J M BHALAJEEKAANTH only

CHANGE OF NAME
I, MOHAN G, residing at No. 172, Ojili Meadows Flat No. B1, 2nd Floor, Seppings Road, Shivajinagar, Bangalore - 560001 have changed my name to R.G.MOHAN KRISHNA vide affidavit dated 22-09-2025 sworn before notary Y.R.Chandrashekar, Bangalore. Henceforth I shall be called as R.G.MOHAN KRISHNA only

CHANGE OF NAME
I, DHELEEPAN G V, DHELEEPAN VAITHIAPPAN & DHELEEPAN GOVINDAN VAITHIAPPAN, S/o Vaithiappan Govindan, residing at plot no. 61, Annai Anjugam Street, Suban Nagar 3rd Part, Old Pallavaram, Kancheepuram, Tamilnadu- 600117, declare that the above names pertain to me only. Henceforth I shall be called as DHELEEPAN GOVINDAN VAITHIAPPAN vide affidavit 20.09.2025 before notary S.Subashini, Bengaluru

CHANGE OF NAME
I, SAMEER KHAN, residing at No. 17/1, 1st Cross, 3rd Main Road, Behind Adi Kabir Ashram, Mothi Nagar, R.T. Nagar Post, Bengaluru-560032 have changed my name to SAMEER SHARIEFF vide affidavit Certificate No. IN-KA47860043073938X, dated 22.09.2025 before notary A. Idinabba, Law/LCL/292/21, Bengaluru.

ಹೆಸರು ಬದಲಾವಣೆ
ವಿಜಯಮ್ಮ ಎಂಬ ನಾನು ನಂ.17, 17ನೇ ಕ್ರಾಸ್, 7ನೇ ಮೈನ್, ಹೋಮ್ ನೀಡ್ಸ್ ಹತ್ತಿರ, ಬಿ.ಟಿ.ಎಂ. 2ನೇ ಹಂತ, ಬನ್ನೇರುಘಟ್ಟ ರೋಡ್, ಬೆಂಗಳೂರು ದಕ್ಷಿಣ, ಬೆಂಗಳೂರು – 560076, ಇಲ್ಲಿ ವಾಸಿಸುತ್ತಿದ್ದು, ದಿನಾಂಕ: 22/09/2025 ರ ಪ್ರಮಾಣ ಪತ್ರದ ಪ್ರಕಾರ ನನ್ನ ಹೆಸರನ್ನು ವಿಜಯ ರಾಜಗೋಪಾಲ್ ಎಂದು ನೋಟರಿಯವರಾದ ಎ. ಗಿರಾರ್ಡ್ ರವರ ಮುಂದೆ ಪ್ರಮಾಣೀಕರಿಸಿದ್ದೇನೆ. ಇನ್ನು ಮುಂದೆ ನನ್ನ ಹೆಸರು ವಿಜಯ ರಾಜಗೋಪಾಲ್ ಎಂದು ಕರೆಯಲಾಗುವುದು.

CHANGE OF NAME
I, KUMAR, Residing at No. 242, Sri Shivaruda Swamy Mata, Peenya, Bengaluru North, Bengaluru - 560058, have changed my minor daughter's name from ELAKYA. K to ILAKKIYA. K vide affidavit dated 22.9.2025 before notary B. Prasanna, Bengaluru. Henceforth she shall be known as ILAKKIYA.K only.

I, RANI W/O H R Krishna Prasad born on 01/01/1971 residing at 2171, Karthikeya, 4th Cross, E Block, Nethaji Circle, Dattagalli 3rd Stage, Mysuru, have changed my name to VEDA G S vide affidavit dated 29-Mar-2024 at Mysuru.

ANNOUNCEMENT
I, Anoop Babu S/o Babu Aged 30 Yrs, R/at Room No 502, SA Gardenia, No.1, 6th Cross, New Gurappanapalya, BTM 1st Stage, Bengaluru-560029. declare that in my daughter's Birth certificate wrongly mentioned as Nilda Anoop, instead of her correct Name NILDA KRANTI, vide affidavit dated 16.09.2025 before notary S.Samuel Solomon, Bengaluru. Henceforth she shall be called as NILDA KRANTI.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ಪ್ರಜಾವಾಣಿ ನವವರ್ಣ

ಹಸಿರು ಬಣ್ಣದ ದಿರಿಸನ್ನು ಧರಿಸಿ ತೆಗೆಸಿಕೊಂಡ ಭಾವಚಿತ್ರಗಳನ್ನು ಇಂದು, ಮಂಗಳವಾರ ಮಧ್ಯಾಹ್ನ 2 ಗಂಟೆಯೊಳಗೆ ಕಳುಹಿಸಿ. ಹೆಸರು, ವಿಳಾಸವೂ ಇರಲಿ...

7338018541

ವಿದ್ಯಾ & ಗೆಳತಿಯರು, ಗಾಂಧಿಬಜಾರ್

ಬಿಂದು, ಚೈತ್ರ, ರೇಷ್ಮಾ, ಬೆಂಗಳೂರು

ಮಧು, ಹೇಮಾ, ರಂಜಿತಾ, ಬಸವೇಶ್ವರ ನಗರ

ನಳಿನಾ & ಗೆಳತಿಯರು, ನಾಗರಭಾವಿ

ಪದ್ಮಾವತಿ & ಗೆಳತಿಯರು, ಕಾಡುಗೋಡಿ

ಶೋಭಾ & ಗೆಳತಿಯರು, ಬೆಂಗಳೂರು

ಸುರೇಖಾ & ಸವಿತಾ, ನಾಗರಭಾವಿ

ರೂಪ & ಸೌಮ್ಯ, ಬೆಂಗಳೂರು

ಸಖಿ ಗೆಳೆಯರ ಬಳಗ, ಜ್ಞಾನಭಾರತಿ ನಗರ

ಇಂಚರ ಮ್ಯೂಸಿಕ್ ಸ್ಕೂಲ್, ವಿಜಯನಗರ

ಮನೋರಮಾ & ಗೆಳತಿಯರು, ಬೆಂಗಳೂರು

ಪಾರ್ವತಿ, ಬೆಂಗಳೂರು

ಆಶಾ & ಗೆಳತಿಯರು, ಚಿತ್ರದುರ್ಗ

ಪ್ರತೀಕ್ಷಾ & ಚೈತನ್ಯ, ಮೂಡಲಪಾಳ್ಯ

ಪೋಷಿಕಾ, ಬೆಂಗಳೂರು

ಶಿಲ್ಪ & ಗೆಳತಿಯರು, ಸಿ ಇ ಎಕ್ಸ್ ಲೇಔಟ್

ಆಚಾರ್ಯ ಪಾಲಿಟೆಕ್ನಿಕ್, ಬೆಂಗಳೂರು

ಭಾರತಿ & ಗೆಳತಿಯರು, ಬೆಂಗಳೂರು

ದೀಪಾ & ಗೆಳತಿಯರು, ನಿಸರ್ಗ ಲೇಔಟ್

ಇಂದಿನ ಬಣ್ಣ - ಹಸಿರು

ದೇವಿ ಭಜನಾ ಮಂಡಳಿ – ಲಗ್ಗೆರೆ

ಕೆಎಲ್ಇ ಶಾಲೆ, ನಾಗರಭಾವಿ

ಕಾರ್ಮಿಕ ಆಯುಕ್ತರ ಕಚೇರಿ – ಬೆಂಗಳೂರು

ನಾಗಮ್ಮ & ಗೆಳತಿಯರು, ಬೆಂಗಳೂರು

ರಶ್ಮಿ & ಗೆಳತಿಯರು, ಬೆಂಗಳೂರು

ವೈಶಾಲಿ & ಗೆಳತಿಯರು, ಬಸವೇಶ್ವರ ನಗರ

ನಂದಿನಿ & ಗೆಳತಿಯರು, ಬೆಂಗಳೂರು

ವೀಣಾ & ಗೆಳತಿಯರು, ಜೆಪಿ ನಗರ

ಶ್ರೀನಿಧಿ ಎಜುಕೇಶನ್ ಸೊಸೈಟಿ, ಬೆಂಗಳೂರು

ಸರಸ್ವತಿ & ಗೆಳತಿಯರು – ಬೆಂಗಳೂರು

ಶ್ರೀ ಯೋಗ ಕೇಂದ್ರ – BTM ಲೇಔಟ್

ಕೂದಲಿನ ಆರೋಗ್ಯಕ್ಕೆ ಬೇಡ ಕತ್ತರಿ

• ಡಾ. ವಿಜಯಲಕ್ಷ್ಮಿ ಪಿ.

ಕಪ್ಪು, ಕೆಂಚು, ಹೊಂಬಣ್ಣ - ಇವು ಕೂದಲಿನ ಸಹಜವಾದ ಬಣ್ಣಗಳೇ. ದೃಢವಾದ, ಮೃದುವಾದ, ದಟ್ಟವಾದ, ನೀಳವಾದ ಕೂದಲು ಕೆಲವರಿಗಿದ್ದರೆ, ಗುಂಗುರು ಕೂದಲಿನ ಸೌಂದರ್ಯವೇ ಬೇರೆ. ಇವೆಲ್ಲವೂ ಕೂದಲಿನ ಸ್ವಭಾವಗಳೇ. ಕೂದಲಿನ ಸ್ವಭಾವಗಳು ಸಾಧಾರಣವಾಗಿ ವಂಶವಾಹಿಗಳ ಮೇಲೆ ಅವಲಂಬಿಸಿರುತ್ತವೆ. ಸಹಜವಾದ ಕೂದಲಿನ ಸ್ವಭಾವವನ್ನು ಬದಲಿಸುವುದು ಸಾಧ್ಯವಿಲ್ಲ. ರಾಸಾಯನಿಕಗಳನ್ನು ಬಳಸಿ ಮತ್ತು ಕೆಲವು ಕೇಶವಿನ್ಯಾಸದ ಸಾಧನಗಳಿಂದ ಕೂದಲಿನ ಸಹಜ ಸ್ವಭಾವಗಳು ವ್ಯತ್ಯಾಸವಾಗುವಂತೆ ಮಾಡಿದರೂ ಅದು ಅಲ್ಪಕಾಲಕ್ಕಷ್ಟೇ ಉಪಯುಕ್ತ. ರಾಸಾಯನಿಕಗಳ ಉಪಯೋಗ ಕೂದಲಿನ ಮತ್ತು ತಲೆಯ ಚರ್ಮದ ಆರೋಗ್ಯದ ಮೇಲೆ ಪರಿಣಾಮವನ್ನು ಬೀರುತ್ತದೆ. ಕೂದಲು ಉದುರುವಿಕೆ, ಹೊಟ್ಟು, ತಲೆಯಲ್ಲಿ ಸೋರಿಯಾಸಿಸ್ ಮೊದಲಾದ ರೋಗಗಳಿಗೂ ಕಾರಣವಾಗುತ್ತದೆ. ಹಾಗಾಗಿ ರಾಸಾಯನಿಕಗಳನ್ನು ಕೂದಲಿಗೆ ಬಳಸುವ ಮುನ್ನ ಸಾಕಷ್ಟು ಎಚ್ಚರಿಕೆಯನ್ನು ವಹಿಸಬೇಕು.

ಕೂದಲು ಉದುರುವಿಕೆ: ಮನುಷ್ಯನ ಜೀವನದಲ್ಲಿ ಬಾಲ್ಯ, ಯೌವನ, ವಾರ್ಧಕ್ಯಗಳು ಇರುವಂತೆ ಕೂದಲುಗಳಿಗೂ ಬೆಳೆಯುವ ಕಾಲ, ಸ್ವಸ್ಥವಾಗಿರುವ ಕಾಲ, ಹಣ್ಣಾಗಿ ಉದುರುವ ಕಾಲಗಳಿರುತ್ತವೆ. ಆದ್ದರಿಂದ ಎಷ್ಟೇ ಗಮನ ವಹಿಸಿದರೂ ತಲೆ ಬಾಚಿದಾಗ ನಿತ್ಯವೂ ನಾಲ್ಕಾರು ಕೂದಲುಗಳು ಉದುರುವುದು ಸಾಮಾನ್ಯ; ಆದರೆ ಅದು ಅತಿಯಾದರೆ ರೋಗವಾಗಬಹುದು. ಇದಕ್ಕೆ ಆನುವಂಶಿಕತೆ ಒಂದು ಕಾರಣವಾದರೆ, ಪೌಷ್ಟಿಕಾಂಶಗಳ ಕೊರತೆ ಕೂಡ ಮುಖ್ಯ ಕಾರಣವಾಗುತ್ತದೆ. ಥೈರಾಯ್ಡ್ ಗ್ರಂಥಿಯ ಸ್ರವಿಸುವಿಕೆಯ ವ್ಯತ್ಯಾಸ, ಇತರೆ ರೋಗಗಳೂ ಕೂದಲು ಉದುರುವಿಕೆ ಅಥವಾ ಬೋಳುತಲೆಗೆ ಕಾರಣವಾಗುತ್ತದೆ. ಕೂದಲಿಗೆ ಮಾಡುವ ಆರೈಕೆಯ ಮೂಲಕ, ಮತ್ತು ನಾವು ಸೇವಿಸುವ ಆಹಾರದ ಮೂಲಕ ಕೂದಲಿಗೆ ಪೌಷ್ಟಿಕಾಂಶಗಳು ಪೂರೈಕೆಯಾಗುತ್ತವೆ. ಆಹಾರದ್ರವ್ಯಗಳ ಸಂಸ್ಕಾರ ವ್ಯತ್ಯಾಸದಿಂದ ಅಥವಾ ವಿರುದ್ಧಾಹಾರಗಳ ಸೇವನೆಯಿಂದ ಕೂದಲಿನ ಆರೋಗ್ಯ ಹಾಳಾಗಬಹುದು. ಬಿಸಿಲಿನಲ್ಲಿ ಅತಿಯಾಗಿ ಕೆಲಸ ಮಾಡುವುದು, ಅತಿಯಾದ ತಿರುಗಾಟ, ಸುದೀರ್ಘಕಾಲ ಸಕಾಲದಲ್ಲಿ ಸುಖವಾಗಿ ನಿದ್ರೆ ಮಾಡದಿರುವುದು ಸಹ ಕೂದಲು ಉದುರುವಿಕೆಗೆ ಕಾರಣವಾಗುತ್ತವೆ. ಆದ್ದರಿಂದ ಕೂದಲು ಸೊಂಪಾಗಿ ಬೆಳೆಯಲು ಎಣ್ಣೆ ಹಚ್ಚುವುದರ ಜೊತೆಗೆ ದೈಹಿಕ ಆರೋಗ್ಯ ರಕ್ಷಣೆಯೂ ಮುಖ್ಯವಾಗುತ್ತದೆ. ಭೃಂಗರಾಜ, ನೆಲ್ಲಿಕಾಯಿ, ಒಂದೆಲಗ, ಕರಿಬೇವಿನ ಸೊಪ್ಪು ಇವುಗಳನ್ನು ಹಾಕಿ ಕುದಿಸಿ ತಯಾರಿಸಿರುವ ಎಣ್ಣೆಯನ್ನು ನಿತ್ಯವೂ ತಲೆಗೆ ಹಚ್ಚುವುದರಿಂದ ತಲೆಕೂದಲು ಉದುರುವುದು ಕಡಿಮೆಯಾಗುತ್ತದೆ.

ಬಾಲನೆರೆ, ಅಥವಾ ಕೂದಲು ಕೆಂಚು ಅಥವಾ ಬಿಳಿಬಣ್ಣಕ್ಕೆ ತಿರುಗುವುದು: ಕರಿದ ಪದಾರ್ಥಗಳು, ವಿಪರೀತ ಖಾರ, ಮದ್ಯ ಅಥವಾ ಕ್ಷಾರೀಯ ಪಾನೀಯಗಳ ನಿರಂತರ ಸೇವನೆ, ಅತಿಯಾದ ಉಪವಾಸ, ಅಕಾಲ ಭೋಜನ, ಅಮ್ಲಪಿತ್ತಕ್ಕೆ ಕಾರಣವಾಗುವಂತಹ ಆಹಾರಗಳ ಸೇವನೆ – ಇವು ಬಾಲನೆರೆ ಅಥವಾ ಬಿಳಿಕೂದಲಿಗೆ ಕಾರಣಗಳಾಗುತ್ತವೆ. ತಲೆಗೆ ಸ್ನಾನ ಮಾಡುವ ನೀರಿನಲ್ಲಿ ಕ್ಷಾರೀಯಾಂಶ, ಕ್ಲೋರಿನ್ ಅಂಶ ಹೆಚ್ಚಿದ್ದರೆ ಇವುಗಳ ನಿರಂತರ ಉಪಯೋಗದಿಂದಲೂ ನೆರೆಕೂದಲು ಬರುವ ಸಾಧ್ಯತೆ ಇರುತ್ತದೆ. ಅತಿಯಾದ ಸಿಟ್ಟು, ದ್ವೇಷ ಮುಂತಾದ ಮನೋವಿಕೃತಿಗಳೂ ನೆರೆಗೂದಲಿಗೆ ಕಾರಣವಾಗುತ್ತವೆ. ಪಿತ್ತ ಹೆಚ್ಚಾಗುವ ಆಹಾರಗಳ ನಿರಂತರ ಸೇವನೆಯನ್ನು ತ್ಯಜಿಸುವುದಿಂದ, ಮನಸ್ಸನ್ನು ಶಾಂತವಾಗಿಟ್ಟುಕೊಳ್ಳುವುದರಿಂದ ಬಾಲನೆರೆಯನ್ನು ತಡೆಯಬಹುದು. ಮೆಹಂದಿ, ಮೆಂತ್ಯ, ಭೃಂಗರಾಜ, ನೆಲ್ಲಿಕಾಯಿ ಇವುಗಳಿಂದ ತಯಾರಿಸಿದ ಎಣ್ಣೆಯನ್ನು ತಲೆಗೆ ಹಚ್ಚುವುದರಿಂದಲೂ, ಈ ದ್ರವ್ಯಗಳನ್ನು ಸುಟ್ಟು ಬಂದ ಮಸಿಗೆ ಕೊಬ್ಬರಿ ಎಣ್ಣೆ ಅಥವಾ ಎಳ್ಳೆಣ್ಣೆ ಬೆರೆಸಿ ವಾರಕ್ಕೊಮ್ಮೆ ತಲೆಗೆ ಹಚ್ಚಿ ಸ್ನಾನ ಮಾಡುವುದರಿಂದಲೂ ನೆರೆಕೂದಲನ್ನು ಹೋಗಲಾಡಿಸಬಹುದು.

ತಲೆಹೊಟ್ಟು: ತಲೆಯ ಚರ್ಮದಲ್ಲಿ ಜಿಡ್ಡಿನ ಅಂಶ ಕಡಿಮೆಯಾಗಿ ಒಣಗುವುದರಿಂದ ತಲೆಯಲ್ಲಿ ನವೆ, ಹೊಟ್ಟು ಉತ್ಪತ್ತಿಯಾಗುತ್ತವೆ, ಕೂದಲು ಒರಟಾಗುತ್ತದೆ. ಕೂದಲಿಗೆ ಅತಿಯಾದ ರಾಸಾಯನಿಕಗಳ ಬಳಕೆ, ಎಣ್ಣೆಯನ್ನು ಹಚ್ಚದೇ ಇರುವುದು, ವಾಯುಮಾಲಿನ್ಯದ ಪ್ರದೇಶದಲ್ಲಿ ನಿರಂತರ ಕೆಲಸಮಾಡುವುದು, ಅತಿಯಾದ ಆತಂಕ–ದುಃಖಗಳೂ ಕೂದಲು–ತಲೆಯ ಚರ್ಮವನ್ನು ಒಣಗಿಸುತ್ತವೆ. ತುಪ್ಪ ಅಥವಾ ಬೆಣ್ಣೆ ಅಥವಾ ಮೊಟ್ಟೆ ಮತ್ತು ಮಾಂಸಾಹಾರಗಳನ್ನು ಹಿತಮಿತವಾಗಿ ಸೇವಿಸುವುದರಿಂದ ತಲೆಹೊಟ್ಟು ಕಡಿಮೆಯಾಗುತ್ತದೆ. ಮೆಂತ್ಯವನ್ನು ನೆನೆಸಿ, ರುಬ್ಬಿ ತಲೆಗೆ ಹಚ್ಚಿ ಸುಮಾರು ಮುಕ್ಕಾಲು ಗಂಟೆಯ ನಂತರ ಸ್ನಾನ ಮಾಡುವುದರಿಂದಲೂ ತಲೆಯ ಹೊಟ್ಟನ್ನು ಹೋಗಲಾಡಿಸಬಹುದು, ಲೋಳೆಸರ, ದಾಸವಾಳದ ಎಲೆ ಮತ್ತು ಹೂವಿನ ಲೋಳೆ, ಬೆಂಡೆಕಾಯಿ, ಮೊಟ್ಟೆಯ ಬಿಳಿಯ ಭಾಗ – ಇವುಗಳನ್ನು ಬೆರೆಸಿ ತಲೆಗೆ ಹಚ್ಚಿ ಸುಮಾರು ಮುಕ್ಕಾಲು ಗಂಟೆಯ ನಂತರ ಸ್ನಾನ ಮಾಡುವುದರಿಂದಲೂ ತಲೆಯ ಹೊಟ್ಟನ್ನು ಕಡಿಮೆ ಮಾಡಬಹುದು. ತಲೆಹೊಟ್ಟಿಗೆ ಸರಿಯಾಗಿ ಆರೈಕೆ ಮಾಡದಿದ್ದರೆ ಅದು ಚರ್ಮರೋಗವಾಗಿ ಬದಲಾಗಬಹುದು. ತಲೆಯಲ್ಲಿ ಹುಣ್ಣು, ನವೆ, ನೀರು ಸೋರುವುದು, ಹೇನು ಮೊದಲಾದ ತೊಂದರೆಗಳು ಉತ್ಪತ್ತಿಯಾಗುತ್ತವೆ. ಇಂತಹ ಸಂದರ್ಭಗಳಲ್ಲಿ ವೈದ್ಯರ ಸಲಹೆಯಂತೆ ಚಿಕಿತ್ಸೆ ತೆಗೆದುಕೊಳ್ಳಬೇಕು.

ಇಂದ್ರಲುಪ್ತ: ತಲೆಯಲ್ಲಿ ಕೆಲವು ಭಾಗದ ಕೂದಲುಗಳು ಗುಂಪು ಗುಂಪಾಗಿ ಉದುರುವುದು, ನವೆ ಆಗುವುದನ್ನು ‘ಇಂದ್ರಲುಪ್ತ’ ರೋಗ (ಅಲೋಪೇಷಿಯಾ) ಎನ್ನುತ್ತಾರೆ. ಫಂಗಸ್ ಮುಂತಾದ ಸೋಂಕಿನಿಂದ ಇಂದ್ರಲುಪ್ತ ರೋಗವು ಉತ್ಪತ್ತಿಯಾಗುತ್ತದೆ ಎನ್ನುತ್ತಾರೆ ಆಧುನಿಕ ವೈದ್ಯರು. ಅತಿಯಾದ ಕಫಕರ ಆಹಾರಗಳ ಸೇವನೆ, ಅತಿಯಾದ ತಂಪಿನ ವಾತಾವರಣದಲ್ಲಿರುವಿಕೆ, ಒದ್ದೆಯ ತಲೆಯಲ್ಲಿ ತಂಪಾದ ಗಾಳಿಯಲ್ಲಿ ಅಥವಾ ಮಳೆಯಲ್ಲಿ ನೆನೆಯುವುದು, ಹೀಗೆ ಕಫವಾತಗಳ ನಿರಂತರ ಪ್ರಕೋಪದಿಂದ ಇಂದ್ರಲುಪ್ತ ರೋಗ ಉತ್ಪತ್ತಿಯಾಗುತ್ತದೆ. ಇದಕ್ಕೆ ವೈದ್ಯರ ಸಲಹೆಯ ಮೇರೆಗೆ ಚಿಕಿತ್ಸೆಯನ್ನು ಪಡೆಯಬೇಕು.

ಜಗಳದಲ್ಲಿದೆ ಪ್ರೀತಿಯ ರುಚಿ

• ರಮ್ಯಾ ಶ್ರೀಹರಿ

ಪ್ರೀತಿ ಹುಟ್ಟಿದಾಗಲೇ ಜಗಳವೂ ಹುಟ್ಟಿತೇನೋ? ಪ್ರೀತಿ ಶುರುವಾದಾಗ ‘ನಾವು ಒಬ್ಬರನ್ನೊಬ್ಬರು ಅಷ್ಟು ಪ್ರೀತಿಸುತ್ತೇವೆ; ಅದು ಹೇಗೆ ನಾವು ಜಗಳವಾಡಲು ಸಾಧ್ಯ’ ಎಂದೂ, ಭಿನ್ನಾಭಿಪ್ರಾಯಗಳು ಜಾಸ್ತಿಯಾದಾಗ ‘ಇಷ್ಟೊಂದು ವೈಮನಸ್ಯವಿರುವ ನಾವು ಹೇಗೆ ಒಬ್ಬರನ್ನೊಬ್ಬರು ಪ್ರೀತಿಸಲು ಸಾಧ್ಯ’ ಎಂದೂ ಅನಿಸುತ್ತಿರುತ್ತದೆ. ಆಳವಾದ ಪ್ರೀತಿ ಮತ್ತು ಯಾವುದೇ ದುರುದ್ದೇಶಗಳಿರದ ಶುದ್ಧ ಅಂತಃಕರಣದಿಂದಲೇ ಪ್ರಕಟಗೊಳ್ಳುವ ಜಗಳ ಎರಡೂ ನಮಗೆ ತಿಳಿಯದಂತೆ ಒಂದು ಬಗೆಯ ಸಂವಾದ ಮಾಡುತ್ತಿರುತ್ತವೇನೋ?

ಪ್ರೀತಿ ಆಳವಾದಷ್ಟು ಜಗಳಗಳೂ ಜಾಸ್ತಿಯಾಗುವುದು, ಜಗಳ ಜಾಸ್ತಿಯಾದಷ್ಟು ಪ್ರೀತಿ ಉತ್ಕಟವಾಗುತ್ತಾ ಹೋಗುವುದು – ಒಮ್ಮೆಯಾದರೂ ಎಲ್ಲರ ಅನುಭವಕ್ಕೆ ಬಂದಿರುತ್ತದೆ. ಸ್ನೇಹ-ಪ್ರೇಮಸಂಬಂಧಗಳಲ್ಲಿ, ದಾಂಪತ್ಯದಲ್ಲಿ ಉಂಟಾಗುವ ಜಗಳಕ್ಕೇನೋ ಹೆದರುತ್ತೇವೆ ನಿಜ. ಆದರೆ ಉತ್ಕಟಗೊಳ್ಳುತ್ತಾ ಹೋಗುವ ಪ್ರೀತಿಗೂ ಹೆದರುತ್ತೇವಾ?

ಹೌದು, ಪ್ರೀತಿಗೂ ಪ್ರೀತಿಯ ಅಭಿವ್ಯಕ್ತಿಗೂ ನಾವು ಹೆದರುವುದು ಸುಳ್ಳಲ್ಲ. ಹಾಗಿಲ್ಲದಿದ್ದರೆ ಅದೆಷ್ಟೋ ಜನರಿಗೆ ‘ನಾನು ನಿನ್ನನ್ನು ಪ್ರೀತಿಸುತ್ತೇನೆ’ ಎಂದು ಹೇಳಲು ಅಥವಾ ಹೇಳಿಸಿಕೊಳ್ಳಲು ಅಷ್ಟೊಂದು ಭಯವಾಗುವುದಾದರೂ ಏಕೆ?

ಯಾರಾದರೂ ನಮ್ಮನ್ನು ತುಂಬಾ ಹಚ್ಚಿಕೊಳ್ಳತೊಡಗಿದರೆ ಅಥವಾ ನಾವೇ ಇನ್ನೊಬ್ಬರಿಗೆ ಆತ್ಮೀಯವಾಗಲು ಹಂಬಲಿಸುವಾಗ ‘ಇಷ್ಟೊಂದು ಅಟ್ಯಾಚ್ಮೆಂಟ್ ಬೇಕಾ?’ ಎಂದು ಒಂದು ಕ್ಷಣ ಚಿಂತಿತರಾಗುತ್ತೇವೆ. ಏಕೆಂದರೆ ನಮ್ಮ ಒಳಮನಸ್ಸಿಗೆ ಗೊತ್ತು, ಪ್ರೀತಿ ಇಂದೋ ನಾಳೆಯೋ ನೋವನ್ನು ಕೊಟ್ಟೇಕೊಡುತ್ತದೆಂದು!

ನಮ್ಮ ಸುಖ-ಸಂತೋಷ ನಾವು ಪ್ರೀತಿಸುವವರ ಮೇಲೆ ಅವಲಂಬಿತವಾಗಿರುವಾಗ ನಾವು ಹೇಗೆ ಸ್ವತಂತ್ರರು? ನಾವು ಪ್ರೀತಿಸುವವರು ನಮ್ಮ ಪ್ರೀತಿಯನ್ನು ತಿರಸ್ಕರಿಸಬಹುದು, ಕಾರಣಾಂತರಗಳಿಂದ ನಾವಿಬ್ಬರೂ ದೂರವಾಗಬಹುದು, ನಮ್ಮ ನಡುವೆ ಕೆಡವಲಾರದ ಗೋಡೆಯೊಂದು ಏಳಬಹುದು, ಕಾಲಕ್ರಮೇಣ ಪ್ರೀತಿ ಮಾಸಿಹೋಗಿ ಕರ್ತವ್ಯವಷ್ಟೇ ಉಳಿಯಬಹುದು; ಇವೆಲ್ಲಾ ಏನೂ ಆಗದಿದ್ದರೂ ಕಡೆಗೆ ಸಾವು ಎನ್ನುವುದಂತೂ ಇದ್ದೇ ಇದೆಯಲ್ಲ, ಪ್ರೀತಿಸುವ ಎರಡು ಜೀವಗಳನ್ನು ದೂರ ಮಾಡಲು?

ಪ್ರೀತಿಗೆ ಹೆದರಲು ಇವಿಷ್ಟೇ ಕಾರಣಗಳಾಗಿದ್ದರೆ ಹೇಗೋ ಸುಧಾರಿಸಬಹುದಿತ್ತು, ಇದಕ್ಕಿಂತಲೂ ತೀಕ್ಷ್ಣ ನೋವೊಂದಿದೆ. ನಾವು ಇನ್ನೊಂದು ವ್ಯಕ್ತಿಯನ್ನು ಆಳವಾಗಿ ಪ್ರೀತಿಸುತ್ತಾ ನಮ್ಮನ್ನೇ ನಾವು ಕಳೆದುಕೊಳ್ಳುವ ಸಾಧ್ಯತೆಯಿದೆ. ತುಂಬಾ ಪ್ರೀತಿಸುವ ಸಂಬಂಧವನ್ನು ನಿರ್ವಹಿಸುವುದು ಸುಲಭವಲ್ಲ. ಯಾರಿಗೂ ಸಿಗದ, ನನ್ನ ನಿರೀಕ್ಷೆಗೂ ಮೀರಿದ ಪ್ರೀತಿ ನನಗೆ ಸಿಕ್ಕಿದಾಗ ‘ನಾನು ಇದಕ್ಕೆಲ್ಲಾ ಅರ್ಹಳೇ?’ ಎನ್ನುವ ಪ್ರಶ್ನೆ ಒಂದು ಕಡೆಯಾದರೆ, ಇಂಥ ಅಪರೂಪದ ಬೆಲೆಕಟ್ಟಲಾಗದ ಪ್ರೀತಿಯನ್ನು ನಾನು ಹೇಗೋ ಕಳೆದುಕೊಂಡುಬಿಟ್ಟರೆ?’ ಎಂಬ ಆತಂಕ ಇನ್ನೊಂದು ಕಡೆ.

ನನ್ನ ಇಡೀ ಜೀವನ, ಜೀವನದ ಅರ್ಥ, ಆನಂದ, ಸಾರ್ಥಕತೆ – ಎಲ್ಲವೂ ನನ್ನನ್ನು ಪ್ರೀತಿಸುವ ವ್ಯಕ್ತಿಯ ಮೇಲೆ ಅವಲಂಬಿತವಾಗಿದ್ದರೆ ನನ್ನನ್ನು ಅದೆಷ್ಟು ಕಳವಳಗೊಳಿಸಬಹುದಲ್ಲವೇ?

ನಾವು ಆಳವಾಗಿ ಪ್ರೀತಿಸಲು ತೊಡಗಿದಾಗ, ಅಷ್ಟೊಂದು ಪ್ರೀತಿಸುವವರು ನಮಗೆ ದೊರೆತಾಗ ನಮ್ಮ ಜೀವನದಲ್ಲಿ ನಮ್ಮನ್ನು ಪ್ರೀತಿಸುವವರಿಗಿರುವ ಪ್ರಾಮುಖ್ಯಕ್ಕಿಂತ ನಮ್ಮ ಜೀವನದಲ್ಲಿ ನಮಗಿರುವ ಪ್ರಾಮುಖ್ಯ ಹೆಚ್ಚಿರಬೇಕು; ಪ್ರೀತಿಯಲ್ಲಿ ನನ್ನನ್ನೇ ನಾನು ಕಳೆದುಕೊಳ್ಳಬಾರದು, ಪ್ರೀತಿಯನ್ನು ಕಳೆದುಕೊಂಡರೂ ನನ್ನನ್ನು ನಾನೇ ಕಳೆದುಕೊಳ್ಳದಷ್ಟು ಬೆಳೆಯಬೇಕು ಎನ್ನುವ ಅರಿವಿರಬೇಕು. ಅಂದರೆ ನಮ್ಮನ್ನು ಪ್ರೀತಿಸುವವರಿಗಿಂತಲೂ ಮಿಗಿಲಾದುದನ್ನು ನಮ್ಮೊಳಗೇ ನಾವೇ ಕಂಡುಕೊಳ್ಳಬೇಕಾಗುತ್ತದೆ; ಇದರ ಅರ್ಥ ನಾವು ಆಂತರಿಕವಾಗಿ ವಿಸ್ತಾರಗೊಳ್ಳುತ್ತಾ, ಆಧ್ಯಾತ್ಮಿಕವಾಗಿ ವಿಕಾಸಹೊಂದುತ್ತಾ, ನಮ್ಮ ಸ್ವ-ಮೌಲ್ಯವನ್ನು ಒಂದು ಉನ್ನತ ಮಟ್ಟದಲ್ಲಿ ಸಾಕ್ಷಾತ್ಕರಿಸಿಕೊಳ್ಳುವುದು ಎಂದು.



ಶುದ್ಧ, ಸುಂದರ, ಪರಿಪೂರ್ಣ ಪ್ರೀತಿ ಮನುಷ್ಯನಿಗೆ ಬಲು ಕಷ್ಟ; ಇದ್ದಾಗ ಕಳೆದುಕೊಳ್ಳುವ ಆತಂಕ, ಕಳೆದುಕೊಂಡಾಗ ಕಡುದುಃಖ; ಆ ಆತಂಕದಿಂದಲೂ ಈ ದುಃಖದಿಂದಲೂ ಪಾರಾಗಬೇಕಾದರೆ ಆತ್ಮೋನ್ನತಿಯನ್ನು, ಭಾವನಾತ್ಮಕ ಪ್ರೌಢಿಮೆಯನ್ನು ಮೈಗೂಡಿಸಿಕೊಳ್ಳುವ ಕಷ್ಟದ ಹಾದಿಯನ್ನು ಸವೆಸಬೇಕು. ಅಂದರೆ ಪಕ್ವ ಪ್ರೀತಿ ಪ್ರೀತಿಸುತ್ತಿರುವ ಇಬ್ಬರನ್ನೂ ಭಾವನಾತ್ಮಕ, ಆಧ್ಯಾತ್ಮಿಕ ಬೆಳವಣಿಗೆಗೆ ಪ್ರೇರೇಪಿಸುತ್ತಿರುತ್ತದೆ. ಯಾವಾಗ ಅಂತಹ ಬೆಳವಣಿಗೆ ಸಾಧ್ಯವಾಗದೇ ಇಬ್ಬರೂ ನಿಂತಲ್ಲೇ ನಿಂತಿರುತ್ತಾರೋ ಆಗ ಒಂದು ಬಗೆಯ ಸ್ಥಗಿತತೆ (deadlock/gridlock) ಅಥವಾ ಬಿಕ್ಕಟ್ಟು (crisis) ಉಂಟಾಗುತ್ತದೆ. ಜಗಳ ಎನ್ನುವುದು ಈ ಬಿಕ್ಕಟ್ಟನ್ನು ಪರಿಹರಿಸಿಕೊಂಡು ಪ್ರೀತಿಯನ್ನು ಮತ್ತೂ ಆಳವಾಗಿ ಕಂಡುಕೊಳ್ಳುವ, ಪ್ರೇಮವನ್ನು ಆಸ್ವಾದಿಸಲು ಅನುವು ಮಾಡಿಕೊಡುವ ಹಾದಿಯಾಗಿರುವಾಗ ಜಗಳವೆಂದರೆ ಭಯವೇಕೆ?

ಒಂದು ಉದಾಹರಣೆಯ ಮೂಲಕ ಇದನ್ನು ನೋಡುವುದಾದರೆ, ತನ್ನೆಲ್ಲಾ ಅಭದ್ರತೆ, ಆತಂಕಗಳನ್ನು ಸಂಗಾತಿಯೇ ನಿವಾರಿಸಬೇಕು. ತನಗೆ ಸಮಾಧಾನವಾಗುವಂತೆ ಸದಾ ಸ್ಪಂದಿಸುತ್ತಿರಬೇಕು ಎಂದು ಬಯಸುವ ಅವಳ ನಡೆಯಿಂದ ಅವನು ಭಾವನಾತ್ಮಕವಾಗಿ ದಣಿದಿರುತ್ತಾನೆ, ಅವಳ ಬೇಡಿಕೆಗಳಿಂದ ಕಂಗಾಲಾಗಿ ಅವಳಿಂದ ದೂರಸರಿಯುತ್ತಾನೆ. ತಾನು ನಿರೀಕ್ಷಿಸಿದಂತೆ ಅವನ ನಡೆ-ನುಡಿಯಿಲ್ಲವೆಂದು ಅವಳೂ, ತನ್ನ ಅಸಹಾಯಕತೆಯನ್ನು ಅವಳು ಅರ್ಥಮಾಡಿಕೊಳ್ಳುತ್ತಿಲ್ಲವೆಂದು ಅವನೂ ಜಗಳಕ್ಕಿಳಿಯುತ್ತಾರೆ. ಇದರಿಂದ ಪಾರಾಗುವ ಸಲುವಾಗಿ ಆಡುವ ಜಗಳದಿಂದ ಇಬ್ಬರೂ ತಮ್ಮ ಆಂತರಿಕ ವಿಕಾಸ ಹೇಗಿರಬೇಕು ಎಂದು ಕಂಡುಕೊಂಡಾಗ ಅವರ ಜಗಳ ಸಾರ್ಥಕವಾಗಿ ಪ್ರೀತಿಯ ಪಯಣದಲ್ಲಿ ಮತ್ತೊಂದು ಪ್ರಮುಖ ಮೈಲಿಗಲ್ಲನ್ನು ದಾಟುತ್ತಾರೆ. ಅಂತಹ ಸಹಜ, ‘ಪ್ರಾಮಾಣಿಕ’ ಆದ ಜಗಳದಲ್ಲಿ ತೊಡಗಿದಾಗ ಮರೆಯಲೇಬಾರದ ಕೆಲವು ವಿಚಾರಗಳು ಇಲ್ಲಿವೆ:

- ಜಗಳದಲ್ಲಿ ಪರಸ್ಪರ ದೋಷಾರೋಪಣೆಗಿಂತ ಒದಗಿರುವ ಬಿಕ್ಕಟ್ಟನ್ನು ಪರಿಹರಿಸಿಕೊಳ್ಳುವ ನಿಟ್ಟಿನಲ್ಲಿ ಪ್ರಯತ್ನವಿರಲಿ. ಅದಕ್ಕೆ ಸಂಗಾತಿಯ ಬಗೆಗೆ ಸಹಾನುಭೂತಿ ಅತ್ಯಗತ್ಯ.
- ನಮ್ಮ ಭಾವನೆಗಳನ್ನು, ನಿರೀಕ್ಷೆಗಳನ್ನು, ಸಂಕಟವನ್ನು ಎದುರಿಗಿರುವವರ ಮುಂದೆ ತೆರೆದಿಟ್ಟುಕೊಂಡಾಗ ನಾವು ಅಸಹಾಯಕರಂತೆ, ದುರ್ಬಲರಂತೆ ಕಾಣಬಹುದು. ಎದುರಿನವರು ನಮ್ಮನ್ನು ಭಾವನಾತ್ಮಕವಾಗಿ ನುಚ್ಚುನೂರು ಮಾಡಬಹುದಾಗಿದ್ದರೂ ಅಂತರ್ಯವನ್ನು ಸಂಪೂರ್ಣವಾಗಿ ತೆರೆದಿಡುವುದರಿಂದ (vulnerability) ಪ್ರೀತಿ ಬೆಳೆಯುತ್ತದೆ.
- ‘ನೀನಿಲ್ಲದಿದ್ದರೂ ನನ್ನ ಬದುಕು ನಡೆಯುತ್ತದೆ’ ಎನ್ನುವುದು ಭಾವನಾತ್ಮಕ ಸ್ವಾತಂತ್ರವಲ್ಲ, ಅದು ಪ್ರೀತಿಯ ಹಂಬಲವನ್ನು ಹತ್ತಿಕ್ಕಿ ಸುಳ್ಳುಗಟ್ಟಿತನದಿಂದ ತನಗೆ ತಾನೇ ಮೋಸಮಾಡಿಕೊಳ್ಳುವುದು. ‘ಪ್ರೀತಿಯ ಹಂಬಲವಿತ್ತು, ದೊರೆಯಲಿಲ್ಲ, ದುಃಖವಿದೆ ಆದರೂ ನೀಗಿಕೊಂಡು ಬದುಕುವ ಜೀವನಪ್ರೀತಿ ಮೈಗೂಡಿಸಿಕೊಳ್ಳುವೆ’ ಎನ್ನುವುದು ಭಾವನಾತ್ಮಕ ಸ್ವಾಯತ್ತತೆ.
- ಎದುರಿಗಿರುವ ವ್ಯಕ್ತಿ ‘ನಿನ್ನಿಂದ ನನಗೆ ನೋವಾಗಿದೆ’ ಎಂದು ಹೇಳಿದಾಗ ಅದಕ್ಕೆ ತಾರ್ಕಿಕ ಉತ್ತರ, ವಿವರಣೆ, ಸಮಜಾಯಿಷಿ ಕೊಡುವುದು, ನೋವನ್ನು ಪ್ರಶ್ನಿಸುವುದು ಮಾಡದೆ ಆ ನೋವಿಗೆ ಸ್ಪಂದಿಸುವುದು ಜಗಳದಲ್ಲಿ ಪ್ರೀತಿಯ ನಡೆ.
- ಕೋಪಕ್ಕೆ ನಾವು ಸಾಧಾರಣವಾಗಿ ಹೇಳಿಕೊಳ್ಳಲು ಹಿಂಜರಿಯುವ ಮಾತುಗಳನ್ನು ಹೊರಹಾಕಿಸುವ ಶಕ್ತಿಯಿದೆ. ಅದು ಬಾಂಧವ್ಯದ ದಿಕ್ಕನ್ನೇ ಬದಲಾಯಿಸುತ್ತದೆ. ಕೋಪವನ್ನು ವಿವೇಚನೆಯಿಂದ ಬಳಸಲು ಅಭ್ಯಾಸ ಬೇಕು.
- ‘ನಾನು ಹೇಳಿದಂತೆ ಕೇಳಿದರೆ ಸರಿ ಇಲ್ಲದಿದ್ದರೆ ಪರಿಣಾಮ ಎದುರಿಸುವೆ’ ಎಂಬ ಬೆದರಿಕೆಗಳು, ಎದುರಿಗಿರುವವರಲ್ಲಿ ಸ್ವ-ಮರುಕದ ಮೂಲಕ ತಪ್ಪಿತಸ್ಥ ಭಾವನೆಯುಂಟುಮಾಡುವುದು ಮುಂತಾದವು ಇನ್ನೊಬ್ಬರನ್ನು ನಮ್ಮ ತಾಳಕ್ಕೆ ತಕ್ಕಂತೆ ಕುಣಿಸಲು ಉಪಯೋಗಿಸುವ ದುರುದ್ದೇಶಪೂರಿತ ವಿಷಮಯ ತಂತ್ರ; ಇಂತಹ ಜಗಳ ಅನರ್ಥಕ್ಕೆ ದಾರಿ.

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಸಮಾಜವಿಜ್ಞಾನ

ಅಧ್ಯಾಯ – 3 ಭಾರತದಲ್ಲಿ ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು

ಒಂದು ವಾಕ್ಯದಲ್ಲಿ ಉತ್ತರಿಸಿ

18) ಯಾವ ಬ್ರಿಟಿಷ್ ವ್ಯಕ್ತಿಯು 1792ರಲ್ಲಿ ಬನಾರಸ್ಸಿನಲ್ಲಿ ಸಂಸ್ಕೃತ ಕಾಲೇಜನ್ನು ಪ್ರಾರಂಭಿಸಿದನು?

ಉತ್ತರ:– ಜೊನಾಥನ್ ಡಂಕನ್

19) ಸಾರ್ವಜನಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ನೇಮಕವಾದ ಸಮಿತಿಗೂ ಅಧ್ಯಕ್ಷನನ್ನಾಗಿ ಯಾರನ್ನು ನೇಮಕ ಮಾಡಲಾಯಿತು.?

ಉತ್ತರ:– ಮೆಕಾಲೆ

20) ಯಾವ ಆಯೋಗದ ಶಿಫಾರಸ್ಸುಗಳ ಆಧಾರದ ಮೇಲೆ ಅಂದಿನ ಗವರ್ನರ್ ಜನರಲ್ ಆದ ಲಾರ್ಡ್ ಡಾಲ್‌ಹೌಸಿಯು ಕಲ್ಕತ್ತಾ, ಬಾಂಬೆ ಮತ್ತು ಮದರಾಸುಗಳಲ್ಲಿ ನೂತನ ವಿಶ್ವವಿದ್ಯಾನಿಲಯಗಳನ್ನು 1857ರಲ್ಲಿ ಸ್ಥಾಪಿಸಿದನು ?

ಉತ್ತರ:– ಸರ್ ಚಾರ್ಲ್ಸ್ ವುಡ್ಸ್ ಆಯೋಗ

ವಿವರವಾಗಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

1) ಬ್ರಿಟಿಷ್ ಕಾಲದಲ್ಲಿ ಆದ ನ್ಯಾಯಾಂಗ ಸುಧಾರಣೆಯನ್ನು ಬರೆಯಿರಿ

ಉತ್ತರ:– ಮೊಘಲರಿಂದ ಬ್ರಿಟಿಷರಿಗೆ ಹಂತಹಂತವಾಗಿ ಅಧಿಕಾರ ಹಸ್ತಾಂತರದ ಸಂಕ್ರಮಣ ಕಾಲದಲ್ಲಿ ಹೊಸ ನ್ಯಾಯಂಗ ವ್ಯವಸ್ಥೆಯು ಭಾರತದಲ್ಲಿ ಬೇರು ಬಿಡಲು ಆರಂಭಿಸಿತು. 1764ರ ಬಕ್ಸಾರ್ ಕದನದ ನಂತರ ಮೊಘಲ್ ಚಕ್ರವರ್ತಿ ಎರಡನೇ ಷಾ ಅಲಂನು ದಿವಾನಿ ಹಕ್ಕೆಂಬ ಕಂದಾಯ ವಸೂಲಾತಿ ಹಕ್ಕನ್ನು ಬ್ರಿಟಿಷರಿಗೆ ನೀಡಿದನು. ಬಂಗಾಳದ ಪ್ರಾಂತ್ಯದಲ್ಲಿ ದ್ವಿ ಆಡಳಿತ ಜಾರಿಗೆ ಬಂದಿತು. ಇದನ್ನು ದ್ವಿ ಸರ್ಕಾರ ಎಂತಲೂ ಕರೆಯುತ್ತಾರೆ. ಇದರ ಪ್ರಕಾರ ಕಂದಾಯ ವಸೂಲಾತಿ, ನಾಗರಿಕ ಮತ್ತು ಅಪರಾಧ ನ್ಯಾಯ ನಿರ್ವಹಣಾ ವ್ಯವಸ್ಥೆಯನ್ನು ಭಾರತೀಯ ಅಧಿಕಾರಿಗಳಿಗೆ ನೀಡಲಾಯಿತು. ವಸೂಲಾದ ಕಂದಾಯದ ನಿರ್ವಹಣಾ ಆಡಳಿತವನ್ನು ಬ್ರಿಟಿಷರು ತಮ್ಮ ಬಳಿಯೇ ಇಟ್ಟುಕೊಂಡರು. ಕ್ರಮೇಣ ಬ್ರಿಟಿಷರು ಹೆಚ್ಚು ಕೇಂದ್ರೀಕೃತ ನ್ಯಾಯಾಂಗ ಪದ್ಧತಿಯನ್ನು ಜಾರಿಗೆ ತರಬೇಕೆಂದು ನಿರ್ಧರಿಸಿದರು. ಈ ಹೆಜ್ಜೆಯಿಂದ ಬ್ರಿಟಿಷರು ಮೊಘಲರ ಅಧಿಕಾರವನ್ನು ಹಿಂದಕ್ಕೆ ಸರಿಸಿ ತಾವೇ ಸಾರ್ವಭೌಮರಾಗತೊಡಗಿದರು. ಇದನ್ನು ಹೊಸ ನ್ಯಾಯಾಂಗ ವ್ಯವಸ್ಥೆಯನ್ನು ಜಾರಿಗೆ ತರುವುದರ ಮೂಲಕ ಸಾಧಿಸಿದರು. 1772ರಲ್ಲಿ ಗೌವರ್ನರ್ ಆಗಿ ಅಧಿಕಾರ ವಹಿಸಿಕೊಂಡ ವಾರನ್ ಹೇಸ್ಟಿಂಗ್ಸ್‌ನು ಜಾರಿಗೆ ತಂದ ಹೊಸ ಯೋಜನೆಯ ಪ್ರಕಾರ ಪ್ರತಿ ಜಿಲ್ಲೆಯು ಎರಡು ಬಗೆಯ ನ್ಯಾಯಾಲಯಗಳನ್ನು ಹೊಂದಿರಬೇಕಿತ್ತು. ಅವುಗಳೆಂದರೆ ; ‘ದಿವಾನಿ ಅದಾಲತ್’ ಎಂಬ ನಾಗರಿಕ ನ್ಯಾಯಾಲಯಗಳು ಮತ್ತು ‘ಫೌಜದಾರಿ ಅದಾಲತ್’ ಎಂಬ ಅಪರಾಧ ನ್ಯಾಯಾಲಯಗಳು. ಇಲ್ಲಿ ನಾಗರಿಕ ನ್ಯಾಯದಾನದ ಸಂದರ್ಭದಲ್ಲಿ ಹಿಂದೂಗಳಿಗೆ ಹಿಂದೂ ಶಾಸ್ತ್ರಗ್ರಂಥಗಳ ಪ್ರಕಾರ ಮತ್ತು ಮುಸ್ಲಿಮರಿಗೆ ಷರಿಯತ್ ಕಾನೂನುಗಳ ಪ್ರಕಾರ ನ್ಯಾಯದಾನ ನೀಡಲಾಗುತ್ತಿತ್ತು. ಅಪರಾಧ ಪ್ರಕರಣಗಳಿಗೆ ಬಂದಾಗ ಎಲ್ಲರಿಗೂ ಇಸ್ಲಾಂ ಕಾನೂನುಗಳ ಅನುಸಾರ ವಿಚಾರಣೆ ನಡೆಸಲಾಗುತ್ತಿತ್ತು. ಕ್ರಮೇಣ ಬ್ರಿಟಿಷ್ ಕಾನೂನುಗಳನ್ನು ಜಾರಿಗೊಳಿಸುವ ಮೂಲಕ ಅಪರಾಧ ಕಾನೂನುಗಳಲ್ಲಿ ಬದಲಾವಣೆ ತರಲಾಯಿತು. ನಾಗರಿಕ ನ್ಯಾಯಾಲಯಗಳು ಯೂರೋಪಿನ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದವು. ಅಪರಾಧ ನ್ಯಾಯಾಲಯಗಳು ‘ಕಾಜಿ’ಗಳ ಅಧೀನದಲ್ಲಿದ್ದರೂ ಯುರೋಪಿಯನ್ನರ ಮೇಲ್ವಿಚಾರಣೆಯಲ್ಲಿಯೇ ಕಾರ್ಯನಿರ್ವಹಿಸಬೇಕಾಗಿತ್ತು

2) ಬ್ರಿಟಿಷ್ ಕಾಲದಲ್ಲಿ ಪೊಲೀಸ್ ವ್ಯವಸ್ಥೆಯಲ್ಲಿ ಆದ ಬದಲಾವಣೆಗಳ ಕುರಿತು ಬರೆಯಿರಿ

ಉತ್ತರ:– ಆಂತರಿಕ ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವ ಜವಾಬ್ದಾರಿಯನ್ನು ಹೊತ್ತಿರುವ ವರ್ಗವೆ ಪೊಲೀಸರು. ಲಾರ್ಡ್ ಕಾರ್ನ್‌ವಾಲೀಸನು ಪ್ರಥಮತಃ ವ್ಯವಸ್ಥಿತವಾದ ಪೊಲೀಸ್ ವಿಭಾಗವನ್ನು ಅಸ್ತಿತ್ವಕ್ಕೆ ತಂದನು. ಇವನು ‘ಸೂಪರಿಟೆಂಡೆಂಟ್ ಆಫ್ ಪೊಲೀಸ್’ (SP) ಎನ್ನುವ ಹೊಸ ಹುದ್ದೆಯನ್ನು ಸೃಷ್ಟಿಸಿದನು.

1793ರಲ್ಲಿ ಪ್ರತಿ ಜಿಲ್ಲೆಯನ್ನು ‘ಠಾಣೆ’ಗಳನ್ನಾಗಿ ವಿಭಜಿಸಿ ಪ್ರತಿ ಠಾಣೆಯನ್ನು ‘ಕೊತ್ವಾಲ’ರ ಅಧೀನದಲ್ಲೂ, ಹಳ್ಳಿಗಳು ‘ಚೌಕಿದಾರ’ರ ಅಧೀನದಲ್ಲೂ ಇರುವಂತೆ ಮಾಡಿದನು. ಕೊತ್ವಾಲರುಗಳು ಹಳ್ಳಿಗಳ ಮಟ್ಟದಲ್ಲಿ ಕಳ್ಳತನ, ಅಪರಾಧಗಳು, ದರೋಡೆಗಳ ನಿಯಂತ್ರಣದ ಜವಾಬ್ದಾರಿಯನ್ನು ಹೊತ್ತಿದ್ದರು. 1770ರ ದಶಕದಲ್ಲಿ ಭೀಕರ ಕ್ಷಾಮಭೀತಿಯಿಂದ ಕಾನೂನು ಸುವ್ಯವಸ್ಥೆಯ ಸಮಸ್ಯೆ ವಿಷಮಗೊಳ್ಳತೊಡಗಿತು. ಇದರ ಪರಿಣಾಮವಾಗಿ ಇಡೀ ಪೊಲೀಸ್ ವ್ಯವಸ್ಥೆಯನ್ನು ಬ್ರಿಟಿಷ್ ಅಧಿಕಾರಿಗಳ ಅಧೀನಕ್ಕೊಳಪಡಿಸಲಾಯಿತು. 1781ರಲ್ಲಿ ಬ್ರಿಟಿಷ್ ಮ್ಯಾಜಿಸ್ಟ್ರೇಟ್‌ಗಳನ್ನು ನೇಮಕ ಮಾಡುವ ಪದ್ಧತಿ ಜಾರಿಗೊಂಡಿತು. ಪೊಲೀಸ್ ಅಧಿಕಾರಿಗಳು ಮ್ಯಾಜಿಸ್ಟ್ರೇಟ್‌ಗಳ ಅಧೀನಕ್ಕೊಳಪಟ್ಟರು. ಪೊಲೀಸ್ ವ್ಯವಸ್ಥೆಯು ನಿರಂತರ ಬದಲಾವಣೆಗೆ ಒಳಗಾಯಿತು. 1861ರಲ್ಲಿ ‘ಪೊಲೀಸ್ ಕಾಯ್ದೆ’ಯನ್ನು ಜಾರಿಗೊಳಿಸಲಾಯಿತು. ಈ ಕಾಯ್ದೆಯೆ ಕಾನೂನು ಮತ್ತು ಸುವ್ಯವಸ್ಥೆ ಆಡಳಿತಕ್ಕೆ ಮುಖ್ಯ ಅಡಿಪಾಯವಾಯಿತು. ಆದರೆ ಅಧಿಕಾರಿಗಳ ನೇಮಕಾತಿಯಲ್ಲಿ ಭಾರತೀಯರಿಗೆ ಅವಕಾಶವಿರಲಿಲ್ಲ. 1902ರ ಪೊಲೀಸ್ ಕಮಿಷನ್ ಕಾಯ್ದೆಯು ವಿದ್ಯಾರ್ಹತೆಯನ್ನು ಪಡೆದವರನ್ನು ಅಧಿಕಾರಿ ಹುದ್ದೆಗೆ ನೇಮಿಸುವ ಅವಕಾಶವನ್ನು ಕಲ್ಪಿಸಿತು. ಇಷ್ಟಾದರೂ ಭಾರತೀಯರ ಬಗೆಗೆ ಇದ್ದ ತಾರತಮ್ಯ ಕಡಿಮೆಯಾಗಲಿಲ್ಲ.

3) ಬ್ರಿಟಿಷ್ ಕಾಲದ ಸೈನಿಕ ವ್ಯವಸ್ಥೆಯ ಬಗ್ಗೆ ಬರೆಯಿರಿ.

ಉತ್ತರ: ಬ್ರಿಟಿಷರ ಕಾಲದ ಆಡಳಿತ ವ್ಯವಸ್ಥೆಯಲ್ಲಿ ಸೈನ್ಯವು ಆಧಾರ ಸ್ತಂಭವಾಗಿತ್ತು. ಭಾರತೀಯರನ್ನೇ ಸೈನ್ಯದಲ್ಲಿ ಸೇರಿಸಿಕೊಂಡು ಅವರ ನೆರವಿನಿಂದಲೇ ಭಾರತವನ್ನು ತಮ್ಮ ಅಧೀನಕ್ಕೆ ತೆಗೆದುಕೊಂಡರು. ಸೈನ್ಯದ ಶಕ್ತಿಯನ್ನು ಬಳಸಿಕೊಂಡು ಭಾರತದ ಒಳಗಡೆಯ ತಮ್ಮ ವಿರೋಧ ಶಕ್ತಿಗಳಿಂದ ತಮ್ಮ ಸಾಮ್ರಾಜ್ಯವನ್ನು ರಕ್ಷಿಸಿಕೊಂಡರು. ಅಧಿಕಾರಿಗಳು ಬ್ರಿಟಿಷರೇ ಆಗಿದ್ದರು. ಭಾರತೀಯರಿಗೆ ಲಭಿಸುತ್ತಿದ್ದ ಅತ್ಯುನ್ನತ ಹುದ್ದೆಯೆಂದರೆ ಸುಬೇದಾರ್ ಸ್ಥಾನ. ಬಹುತೇಕ ಭಾರತೀಯ ಸೈನಿಕರು ಕೂಲಿ ಸೈನಿಕರಾಗಿದ್ದರು. 1857ರ ಘಟನೆಯ ನಂತರ ಪೀಲ್ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಿ ಶಿಫಾರಸ್ಸುಗಳನ್ನು ಪಡೆಯಿತು. ಈ ಶಿಫಾರಸ್ಸು ಆಧಾರದ ಮೇಲೆ ಸೈನಿಕ ವ್ಯವಸ್ಥೆಯನ್ನು ಮರುವಿನ್ಯಾಸಗೊಳಿಸಿತು

4) ಜಮೀನ್ದಾರಿ ಪದ್ದತಿ ಬಗ್ಗೆ ಬರೆಯಿರಿ

ಉತ್ತರ:– ವಾರ್ಷಿಕವಾಗಿ ನಿರ್ದಿಷ್ಟ ಕಂದಾಯದ ಹಣವನ್ನು ಪಡೆಯಲು ಲಾರ್ಡ್ ಕಾರ್ನ್‌ವಾಲೀಸನು 1793ರಲ್ಲಿ ಬಂಗಾಳ ಮತ್ತು ಬಿಹಾರ ಪ್ರಾಂತ್ಯಗಳಲ್ಲಿ ಹೊಸ ಕಂದಾಯ ಪದ್ಧತಿಯನ್ನು ಜಾರಿಗೊಳಿಸಿದನು. ಇದನ್ನು ಖಾಯಂ ಜಮೀನ್ದಾರಿ ಪದ್ಧತಿ ಎಂದು ಕರೆಯಲಾಯಿತು. ಈ ಪದ್ಧತಿಯಲ್ಲಿ ಜಮೀನ್ದಾರನು ಭೂಮಾಲೀಕನಾದನು. ಈ ಹೊಸ ಯೋಜನೆಯ ಪ್ರಕಾರ ಜಮೀನ್ದಾರನು ಪ್ರತಿವರ್ಷವೂ ನಿರ್ದಿಷ್ಟ ದಿನಕ್ಕೆ ಮೊದಲೇ ಅವನು ಒಪ್ಪಿಕೊಂಡಿದ್ದ ಕಂದಾಯದ ಮೊತ್ತವನ್ನು ಸರಕಾರಕ್ಕೆ ಸಲ್ಲಿಸಬೇಕಿತ್ತು. ಭೂಮಾಲೀಕನಿಗೆ ಈ ಪದ್ಧತಿಯಿಂದ ಹೆಚ್ಚಿನ ಲಾಭವಾಯಿತು.

(ಮುಂದುವರಿಯುವುದು)

MATHS

DIFFERENTIABILITY

9. Differentiate w.r.t. x:

i) $\frac{1}{3}\sqrt{\sec^2 x-1}$ ii) $\log\left[\tan\left(\frac{\pi}{4}+\frac{x}{2}\right)\right]$

iii) $\sin(e^x\log x)$ iv) $\frac{e^x+\log x}{\sin(3x)}$

i) Soln :– $\frac{d}{dx}\frac{1}{3}\sqrt{\sec^2 x-1}=\frac{d}{dx}\frac{1}{3}\sqrt{\tan^2 x}$

$$\Rightarrow \frac{d}{dx}\frac{1}{3}|\tan x| \Rightarrow \frac{1}{3}\frac{d}{dx}|\tan x|$$

$$\Rightarrow \frac{1}{3}\frac{\tan x}{|\tan x|}\left\{\frac{d}{dx}\tan x\right\}$$

$$\left\{\because \frac{d}{dx}|f(x)|=\frac{f(x)}{|f(x)|}.f'(x)\right\}$$

$$\Rightarrow \frac{\tan x}{3|\tan x|}(\sec^2 x)$$

ii) Soln :– $\frac{d}{dx}\log\left[\tan\left(\frac{\pi}{4}+\frac{x}{2}\right)\right]$

$$=\frac{1}{\tan\left(\frac{\pi}{4}+\frac{x}{2}\right)}.\frac{d}{dx}\tan\left(\frac{\pi}{4}+\frac{x}{2}\right)$$

$$\Rightarrow \frac{1}{\tan\left(\frac{\pi}{4}+\frac{x}{2}\right)}.\sec^2\left(\frac{\pi}{4}+\frac{x}{2}\right).\frac{d}{dx}\left(\frac{\pi}{4}+\frac{x}{2}\right)$$

$$\Rightarrow \frac{\cos\left(\frac{\pi}{4}+\frac{x}{2}\right)}{\sin\left(\frac{\pi}{4}+\frac{x}{2}\right)}.\frac{1}{\cos^2\left(\frac{\pi}{4}+\frac{x}{2}\right)}.\left(0+\frac{1}{2}\right)$$

$$\Rightarrow \frac{1}{2\sin\left(\frac{\pi}{4}+\frac{x}{2}\right)\cos\left(\frac{\pi}{4}+\frac{x}{2}\right)}$$

$$\Rightarrow \frac{1}{\sin 2\left(\frac{\pi}{4}+\frac{x}{2}\right)}$$

$$\Rightarrow \frac{1}{\sin\left(\frac{\pi}{2}+\frac{x}{1}\right)}$$

$$\Rightarrow \frac{1}{\cos x}=\sec x$$

iii) $\sin(e^x\log x)$

Soln :– $\frac{d}{dx}\sin(e^x.\log x)$

$$=\cos(e^x\log x).\frac{d}{dx}(e^x\log x)$$

$$\Rightarrow \cos(e^x\log x)\left\{e^x\frac{d}{dx}\log x+\log x.\frac{d}{dx}e^x\right\}$$

$$\Rightarrow \cos(e^x\log x)\left\{e^x\left(\frac{1}{x}\right)+(\log x)e^x\right\}$$

$$\Rightarrow e^x.\cos(e^x\log x)\left(\frac{1}{x}+\log x\right)$$

iv) $\frac{d}{dx}\frac{e^x+\log x}{\sin(3x)}$

Soln :– $\frac{d}{dx}\frac{e^x+\log x}{\sin(3x)}$

$$=\frac{(\sin 3x)\left(e^x+\frac{1}{x}\right)-(e^x+\log x)(\cos 3x)(3)}{(\sin 3x)^2}$$

$$=\frac{(\sin 3x)\left(\frac{xe^x+1}{x}\right)-3(e^x+\log x)\cos 3x}{\sin^2 3x}$$

$$=\frac{(\sin 3x)(xe^x+1)-3x(e^x+\log x)\cos 3x}{x\sin^2 3x}$$

10. Differentiate w.r.t. x:

i) $\log_{\sin x}^{\cos x}$ ii) $\log\sin\sqrt{x^2+1}$

iii) $\sin\{\sin(\log 3x)\}$

Soln :– i) $\log_{\sin x}^{\cos x}$

We know that $\log_n m=\frac{\log_e m}{\log_e n}$

$$\therefore \frac{d}{dx}\mathrm{Log}_{\sin x}^{\cos x}=\frac{d}{dx}\left\{\frac{\log\cos x}{\log\sin x}\right\}$$

$$\Rightarrow \frac{\log\sin x.\frac{d}{dx}\log\cos x-\log\cos x\frac{d}{dx}\log\sin x}{(\log\sin x)^2}$$

$$\Rightarrow \frac{\left[(\log\sin x)\left(\frac{1}{\cos x}\right)(-\sin x)-(\log\cos x)\frac{1}{\sin x}(\cos x)\right]}{(\log\sin x)^2}$$

$$\Rightarrow \frac{-\{\tan x\log\sin x+\cot x\log\cos x\}}{(\log\sin x)^2}$$

ii) $\frac{d}{dx}\log\left(\sin\sqrt{x^2+1}\right)$

Soln :– $\frac{d}{dx}\log\left(\sin\sqrt{x^2+1}\right)$

$$=\frac{1}{\sin\sqrt{x^2+1}}\frac{d}{dx}\sin\sqrt{x^2+1}$$

$$\Rightarrow \frac{1}{\sin\sqrt{x^2+1}}\left\{\cos\sqrt{x^2+1}\right\}.\frac{d}{dx}(x^2+1)^{1/2}$$

$$\Rightarrow \left(\cot\sqrt{x^2+1}\right)\frac{1}{2}(x^2+1)^{-1/2}\frac{d}{dx}(x^2+1)$$

$$=\frac{\cot\sqrt{x^2+1}}{2\sqrt{x^2+1}}.(2x+0)$$

$$\Rightarrow \frac{x\cot\sqrt{x^2+1}}{\sqrt{x^2+1}}$$

iii) $\sin\{\sin(\log 3x)\}$

Soln :– $\frac{d}{dx}\sin\{\sin(\log 3x)\}$

$$=\cos\{\sin(\log 3x)\}.\frac{d}{dx}\sin(\log 3x)$$

$$\Rightarrow \cos\{\sin(\log 3x)\}.\cos(\log 3x)\frac{d}{dx}\log(3x)$$

(Contd........)

ಸಂಸದನ ಪತ್ನಿಗೆ ₹14 ಲಕ್ಷ ವಂಚನೆ

'ಗೋಲ್ಡನ್ ಅವರ್'ನಲ್ಲೇ ದೂರು: ಹಣ ವಾಪಸ್ ಕೊಡಿಸಿದ ಸೈಬರ್ ಪೊಲೀಸರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಕ್ಕಬಳ್ಳಾಪುರ ಸಂಸದ ಡಾ.ಕೆ.ಸುಧಾಕರ್ ಅವರ ಪತ್ನಿ, ವೈದ್ಯೆ ಪ್ರೀತಿ ಅವರಿಗೆ ಸೈಬರ್ ವಂಚಕರು 'ಡಿಜಿಟಲ್ ಅರೆಸ್ಟ್' ಹೆಸರಿನಲ್ಲಿ ಬೆದರಿಸಿ ₹14 ಲಕ್ಷ ದೋಚಿದ್ದು, ಅದನ್ನು ವಾಪಸ್ ಕೊಡಿಸುವಲ್ಲಿ ಸೈಬರ್ ಅಪರಾಧ ಠಾಣೆ ಪೊಲೀಸರು ಯಶಸ್ವಿ ಆಗಿದ್ದಾರೆ.

ಪ್ರೀತಿ

ವಂಚನೆಗೊಳಗಾದ ಒಂದು ಗಂಟೆಯೊಳಗೆ (ಗೋಲ್ಡನ್ ಅವರ್) ರಾಷ್ಟ್ರೀಯ ಸೈಬರ್ ಕ್ರೈಮ್ ಸಹಾಯವಾಣಿಯಲ್ಲಿ ಪ್ರೀತಿ ಅವರು ದೂರು ದಾಖಲಿಸಿದ್ದರು. ತತ್‌ಕ್ಷಣವೇ ದೂರು ದಾಖಲಿಸಿದ್ದರಿಂದಾಗಿ, ವಂಚಕರ ಖಾತೆಗೆ ಸಂದಾಯ ಆಗಿದ್ದ ಹಣವನ್ನು ಯಶಸ್ವಿಯಾಗಿ ಹಿಂಪಡೆಯಲಾಗಿದೆ ಎಂದು ಸೈಬರ್ ಪೊಲೀಸರು ಹೇಳಿದರು.

ಆ.26ರಂದು ಪ್ರೀತಿ ಅವರಿಗೆ ಕರೆ ಮಾಡಿದ್ದ ಸೈಬರ್ ವಂಚಕರು ಮುಂಬೈ ಸೈಬರ್ ಅಪರಾಧ ವಿಭಾಗದ ಪೊಲೀಸ್ ಅಧಿಕಾರಿಗಳೆಂದು ಪರಿಚಯಿಸಿಕೊಂಡು ಕೃತ್ಯ ಎಸಗಿದ್ದರು.

'ನಿಮ್ಮ ಕೆಲವು ದಾಖಲೆಗಳನ್ನು ಸದ್ದತ್ ಖಾನ್ ಎಂಬಾತ ಬಳಸಿಕೊಂಡು ಲಾವೋಸ್, ಕಾಂಬೋಡಿಯಾ, ವಿಯೆಟ್ನಾಂನಲ್ಲಿ ಕಾನೂನು ಬಾಹಿರ ಕೃತ್ಯ ಎಸಗಿದ್ದಾನೆ' ಎಂಬುದಾಗಿ ಬೆದರಿಸಿದ್ದರು.

'ಆರೋಪಿ ಸದ್ದತ್ ಖಾನ್ ನನ್ನು ಬಂಧಿಸಲಾಗಿದ್ದು, ನಿಮ್ಮ ಹೆಚ್ಚಿನ ವಿಚಾರಣೆಯ ಅಗತ್ಯವಿದೆ' ಎಂದು ವಾಟ್ಸ್‌ಆ್ಯಪ್ ಮೂಲಕ ವಿಡಿಯೊ ಕರೆ ಮಾಡಿ ವೈಯಕ್ತಿಕ ದಾಖಲೆಗಳನ್ನು ವಂಚಕರು ಪಡೆದುಕೊಂಡಿದ್ದರು. 'ನಿಮ್ಮ ಖಾತೆ ಅಕ್ರಮವಾಗಿದ್ದು, ಆರ್‌ಬಿಐನಿಂದ ಪರಿಶೀಲನೆ ನಡೆಸಬೇಕಾಗುವುದರಿಂದ ₹14 ಲಕ್ಷವನ್ನು ನಾವು ಹೇಳಿದ ಖಾತೆಗೆ ವರ್ಗಾಯಿಸಿ' ಎಂಬುದಾಗಿ ಸೈಬರ್ ವಂಚಕರು ಸೂಚಿಸಿದ್ದರು. ಪರಿಶೀಲನೆ ಪೂರ್ಣಗೊಳಿಸಿ 45 ನಿಮಿಷದಲ್ಲಿ ಹಣ ವಾಪಸ್ ನೀಡಲಾಗುವುದು. ಹಣ ನೀಡದಿದ್ದರೆ ಬಂಧಿಸಲಾಗುವುದು ಎಂಬುದಾಗಿ ಪ್ರೀತಿ ಅವರನ್ನು ಬೆದರಿಸಿದ್ದರು. ಸೈಬರ್ ಕಳ್ಳರ ಮಾತಿನಿಂದ ಆತಂಕಗೊಂಡಿದ್ದ ಪ್ರೀತಿ ಅವರು ತಮ್ಮ ಎಚ್‌ಡಿಎಫ್‌ಸಿ ಬ್ಯಾಂಕ್ ಖಾತೆಯಿಂದ ವಂಚಕರು ಸೂಚಿಸಿದ್ದ ಯೆಸ್ ಬ್ಯಾಂಕ್ ಖಾತೆಗೆ ಹಣ ವರ್ಗಾವಣೆ ಮಾಡಿದ್ದರು' ಎಂದು ಪೊಲೀಸರು ಹೇಳಿದರು.

ಹಣ ಪಾವತಿಸಿದ ಬಳಿಕ ವಂಚನೆ ಆಗಿರುವುದು ಪ್ರೀತಿ ಅವರಿಗೆ ಗೊತ್ತಾಗಿ ತಕ್ಷಣವೇ ಪಶ್ಚಿಮ ವಿಭಾಗದ ಸೈಬರ್ ಅಪರಾಧ ಠಾಣೆಗೆ ಮಾಹಿತಿ ನೀಡಿದ್ದರು.

ರಾಜ್ಯಸಭಾ ಸದಸ್ಯೆ ಸುಧಾಮೂರ್ತಿಗೆ ಬೆದರಿಕೆ

ರಾಜ್ಯಸಭಾ ಸದಸ್ಯೆ ಸುಧಾಮೂರ್ತಿ ಅವರಿಗೆ ಸೈಬರ್ ವಂಚಕರು ಕರೆ ಮಾಡಿ ವೈಯಕ್ತಿಕ ಮಾಹಿತಿ ಕಳವು ಮಾಡಲು ಪ್ರಯತ್ನಿಸಿ ಬೆದರಿಕೆ ಹಾಕಿದ್ದು ಈ ಸಂಬಂಧ ಸೈಬರ್ ಅಪರಾಧ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸುಧಾಮೂರ್ತಿ

ಗಣಪತಿ ಎಂಬುವರು ನೀಡಿದ ದೂರು ಆಧರಿಸಿ ಸೈಬರ್ ವಂಚಕರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಸೈಬರ್ ಅಪರಾಧ ವಿಭಾಗದ ಪೊಲೀಸರು ಹೇಳಿದರು.

ಸೆ.5ರಂದು ಬೆಳಿಗ್ಗೆ 9.40ರ ಸುಮಾರಿಗೆ ಸುಧಾಮೂರ್ತಿ ಅವರಿಗೆ ಕರೆಯೊಂದು ಬಂದಿತ್ತು. ಕರೆ ಮಾಡಿದ್ದ ವ್ಯಕ್ತಿ ತಾನು ಕೇಂದ್ರ ಸರ್ಕಾರದ ದೂರಸಂಪರ್ಕ ಸಚಿವಾಲಯದ ಉದ್ಯೋಗಿ ಎಂದು ಪರಿಚಯಿಸಿಕೊಂಡಿದ್ದ, ಜನಸಾಮಾನ್ಯರಲ್ಲಿ ಆಧಾರ್ ಲಿಂಕ್ ಮಾಡದೇ ನೋಂದಾಯಿಸಲಾಗಿದೆ ಎಂದು ಸುಳ್ಳು ಹೇಳಿ ವೈಯಕ್ತಿಕ ಮಾಹಿತಿ ಪಡೆಯಲು ಯತ್ನಿಸಿದ್ದ. ಅಲ್ಲದೇ, ಸುಧಾಮೂರ್ತಿ ಅವರ ಮೊಬೈಲ್ ಸಂಖ್ಯೆಯಿಂದ ಅಶ್ಲೀಲ ವಿಡಿಯೊ ಕಳುಹಿಸಲಾಗುತ್ತಿದೆ. ಮೊಬೈಲ್ ಸಂಪರ್ಕ ಸ್ಥಗಿತ ಮಾಡಲಾಗುವುದು ಎಂಬುದಾಗಿ ಬೆದರಿಕೆ ಹಾಕಿದ್ದ ಎಂದು ಗಣಪತಿ ಅವರು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ವೈದ್ಯಕೀಯ: ನಾಳೆ ಮರು ಹಂಚಿಕೆ ಫಲಿತಾಂಶ

ಬೆಂಗಳೂರು: ರಾಜ್ಯ ಕೋಟಾದಲ್ಲಿ ವೈದ್ಯಕೀಯ ಸೀಟು ಪಡೆದ 774 ಅಭ್ಯರ್ಥಿಗಳು ಅಖಿಲ ಭಾರತ ಕೋಟಾದಲ್ಲೂ ಆಯ್ಕೆಯಾಗಿದ್ದಾರೆ. ಅವರಿಗೆ ಹೊರಹೋಗಲು ಅವಕಾಶ ನೀಡಲಾಗಿದ್ದು, ಉಳಿಕೆ ಸೀಟುಗಳನ್ನು ಪರಿಗಣಿಸಿ, ಸೆ.23ರಂದು ಮರು ಹಂಚಿಕೆ ಫಲಿತಾಂಶ ಪ್ರಕಟಿಸಲಾಗುತ್ತದೆ.

ವೈದ್ಯಕೀಯ, ದಂತ ವೈದ್ಯಕೀಯ ಕೋರ್ಸ್‌ಗಳ ಎಂದು ಹಾಗೂ ಆಯುಷ್ ಕೋರ್ಸ್‌ಗಳ ಮೂರನೇ ಸುತ್ತಿನ ಸೀಟು ಹಂಚಿಕೆಯ ಅಂತಿಮ ಫಲಿತಾಂಶ ಪ್ರಕಟವಾಗಲಿದ್ದು, ಸೆ.26ರ ಒಳಗೆ ಶುಲ್ಕ ಪಾವತಿಸಿ ಸೀಟು ಖಾತರಿ ಚೀಟಿ ಡೌನ್‌ಲೋಡ್ ಮಾಡಿಕೊಳ್ಳಬೇಕು. ಸೆ.28ರ ಒಳಗೆ ಕಾಲೇಜುಗಳಿಗೆ ಪ್ರವೇಶ ಪಡೆಯಬೇಕು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಹೇಳಿದ್ದಾರೆ.

ಕೆಇಎ ಮೊದಲ ಸುತ್ತಿನಲ್ಲಿ ಸೀಟು ಹಂಚಿಕೆಯಾಗಿ ಕಾಲೇಜಿಗೆ ಸೇರಿದ್ದ ಅಭ್ಯರ್ಥಿಗಳಿಗೆ ಎಂಸಿಸಿಯಲ್ಲಿ ಸೀಟು ಸಿಕ್ಕ ನಂತರ ರಾಜ್ಯ ಕೋಟಾದ ಸೀಟು ರದ್ದುಪಡಿಸಿಕೊಳ್ಳಲು ಅವಕಾಶ ನೀಡಲಾಗಿತ್ತು. ಆ ಸೀಟುಗಳನ್ನು ಕೂಡ ಎರಡನೇ ಸುತ್ತಿಗೆ ಪರಿಗಣಿಸಲಾಗಿದೆ.

ವೈದ್ಯಕೀಯ ಕೋರ್ಸ್‌ಗಳಿಗೆ ಅರ್ಜಿಯನ್ನೇ ಸಲ್ಲಿಸದವರಿಗೆ ನೋಂದಣಿ ಮಾಡಿಕೊಳ್ಳಲು ಸೆ.25ರಿಂದ 29ರವರೆಗೆ ಅವಕಾಶ ನೀಡಲಾಗುವುದು. ಸಿಇಟಿಗೆ ಅರ್ಜಿ ಸಲ್ಲಿಸಿ, ಕೆಇಎ ಪೋರ್ಟಲ್‌ನಲ್ಲಿ ನೀಟ್ ರೋಲ್ ನಂಬರ್ ನಮೂದಿಸಲು ಸೆ.29ರಿಂದ ಅ.3ರವರೆಗೆ ಅವಕಾಶ ನೀಡಲಾಗುವುದು ಎಂದು ವಿವರಿಸಿದ್ದಾರೆ.

'ಅಸ್ತ್ರವಲ್ಲ, ಅಕ್ಷರದಿಂದ ಬದುಕು ಗೆಲ್ಲಿ'

ಒಂದನೇ ಪುಟದಿಂದ...

ಸೌಹಾರ್ದ, ಸಮಾನತೆಗಾಗಿ ಶ್ರಮಿಸಿದ ಜಯಚಾಮರಾಜ ಒಡೆಯರ್, ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ಬಾಬಾ ಸಾಹೇಬ್ ಅಂಬೇಡ್ಕರ್ ಅವರನ್ನು ಬಾನು ಸ್ಮರಿಸಿದರು.

'ನನ್ನ ಧಾರ್ಮಿಕ ನಂಬಿಕೆಗಳು, ನನ್ನ ಜೀವನ ದರ್ಶನ ಎಂದಿಗೂ ಜೀವಪರ. ಅವು ಮದದ ನೆರಳಿನಂತೆ, ತಂಪಾದ ನದಿಯಂತೆ. ಇಂದಿನ ಜಗತ್ತು ಯುದ್ಧದ ಜ್ವಾಲೆಯಲ್ಲಿ ಸುಡುತ್ತಿದೆ. ದ್ವೇಷ, ರಕ್ತಪಾತದಲ್ಲಿ ಮನುಕುಲ ಮುಳುಗುತ್ತಿರುವಾಗ, ದಸರಾ ಘೋಷಣೆಯು ಎಲ್ಲರ ಕಿವಿಯಲ್ಲಿ ಪ್ರತಿಧ್ವನಿಸಲಿ. 'ಇದು ಶಾಂತಿಯ ಹಬ್ಬ, ಸೌಹಾರ್ದದ ಮೇಳ. ಸರ್ವಜನಾಂಗದ ಶಾಂತಿಯ ತೋಟ' ಎಂದು ಹೇಳಿದರು.

'ಪ್ರಜಾಪ್ರಭುತ್ವ ಒಂದು ವ್ಯವಸ್ಥೆಯಲ್ಲ, ಮೌಲ್ಯ. ಅದನ್ನು ಗೌರವಿಸೋಣ. ಇಲ್ಲಿ ಸೌಹಾರ್ದದ ಕುರುಹುಗಳಿವೆ. ಇಲ್ಲಿನ ಬಿಸಿಲು ಕೂಡ ಮಾನವೀಯತೆಯ ಪ್ರತೀಕವಾಗಿದೆ. ಶಕ್ತಿ, ಧೈರ್ಯ, ಮಮತೆ ಹಾಗೂ ರಕ್ಷಕತ್ವದ ಸಂಕೇತವಾದ ದೇವಿ ಚಾಮುಂಡಿ ನಮ್ಮೊಳಗಿನ ದ್ವೇಷ, ಅಸಹಿಷ್ಣುತೆಯನ್ನು ನಾಶ ಮಾಡಲಿ' ಎಂದು ಆಶಿಸಿದರು.

'ದಸರೆ ಎಂದರೆ ಹಬ್ಬವಷ್ಟೇ ಅಲ್ಲ. ನಾಡಿನ ನಾಡಿ ಮಿಡಿತ, ಸಂಸ್ಕೃತಿಯ ಉತ್ಸವ. ಇದು ಎಲ್ಲರನ್ನೂ ಒಟ್ಟಿಗೊಳ್ಳುವ ಗಳಿಗೆ. ಸಮನ್ವಯ ಮೇಳ. ವೈವಿಧ್ಯದಲ್ಲಿ ಏಕತೆ ಇರುವ ಸುಗಂಧ. ದಸರಾ ಹಬ್ಬ ಮೈಸೂರು ನಗರಕ್ಕೆ, ನಾಡಿಗೆ, ದೇಶಕ್ಕೆ ಸೀಮಿತವಾಗದೇ, ಇಡೀ ಜಗತ್ತಿನಾದ್ಯಂತ ಮಾನವ ಕುಲಕ್ಕೆ ಶಾಂತಿ ಸಹಾನುಭೂತಿ, ಪ್ರೀತಿ ಮತ್ತು ನ್ಯಾಯದ ದೀಪವನ್ನು ಬೆಳಗಿಸಲಿ. ಇಂದು ಬೆಳಗಿಸಿದ ದೀಪ ಈ ಸಂದೇಶದೊಂದಿಗೆ ಇಡೀ ಪ್ರಪಂಚದಾದ್ಯಂತ ತನ್ನ ನೆಲೆಯನ್ನು ಕಂಡುಕೊಳ್ಳಲಿ' ಎಂದು ಹಾರೈಸಿದರು.

'ಈ ನೆಲದಲ್ಲಿ ಹುಟ್ಟಿದ ಪ್ರತಿ ಜೀವಕ್ಕೂ ಈ ಮಣ್ಣಿನ ವಾರಸುದಾರಿಕೆ, ಸ್ಪಂದನ ಮತ್ತು ನಮ್ಮದೆಂಬ ಭಾವ ನೀಡಿದೆ. ನವರಾತ್ರಿಯಲ್ಲಿ ಉರ್ದು ಭಾಷಿಕರು ತಮ್ಮ ಗುರುತು ಕೊಟ್ಟಿದ್ದಾರೆ. ಶ್ರೀರಂಗಪಟ್ಟಣ ತಾಲ್ಲೂಕಿನ ಬೆಳಗೊಳದಲ್ಲಿ ವಾಸವಿದ್ದ ನನ್ನ ಅಪ್ಪ ಸಂಬಂಧಿ ಮೊಹಮದ್ ಗೌಸ್ ಎಂಬುವರು ಮೈಸೂರು ಮಹಾರಾಜರ ಅಂಗರಕ್ಷಕ ಪಡೆ ಸೈನಿಕರಾಗಿದ್ದರು. ಅಂಥ ಹಲವರು ಅಂಗರಕ್ಷಕ ಪಡೆಯಲ್ಲಿದ್ದರು. ಜಯಚಾಮರಾಜೇಂದ್ರ ಒಡೆಯರ್ ಮುಸ್ಲಿಮರನ್ನು ಅನುಮಾನಿಸದೆ ಅಂಗರಕ್ಷಕ ಪಡೆಗೆ ನೇಮಿಸಿಕೊಂಡಿದ್ದರು. ಇದು ಅವಿಸ್ಮರಣೀಯವಾದ ಹೆಮ್ಮೆ' ಎಂದು ನೆನಪಿಸಿಕೊಂಡರು.

'ಇತಿಹಾಸದತ್ತ ನೋಡಿದರೆ ನಾಲ್ವಡಿ ಕೃಷ್ಣರಾಜ ಒಡೆಯರ್ ಎಂದೆಂದಿಗೂ ಅವರು ಹಂಚಿಕೊಳ್ಳುವ ಮನದ ಅರಸ. ರಾಜಕೀಯ, ಆರ್ಥಿಕ, ಸಾಮಾಜಿಕ ನ್ಯಾಯದ ಬಿಡಾರದ ದೊರೆಯಾಗಿದ್ದರು. ಭೇದ ಭಾವಕ್ಕಿಂತ ಸಹಬಾಳ್ವೆ ಮನಸ್ಸಿಗೆ ಗೌರವವಿತ್ತು. ಅವರು ನೀಡಿದ ಸಂದೇಶ, ಸಂಪತ್ತನ್ನು ಹಂಚಿದಾಗ ಮಾತ್ರ ಅದು ಬೆಳೆಯುತ್ತದೆ. ಶಕ್ತಿಯನ್ನು ಹಂಚಿಕೊಂಡಾಗ ಮಾತ್ರ ದೀರ್ಘಕಾಲ ಬದುಕುತ್ತದೆ' ಎಂದು ಅಭಿಪ್ರಾಯಪಟ್ಟರು.

ಹತ್ತು ವರ್ಷಗಳ ಹಿಂದೆ ಬರೆದ 'ಬಾಗಿನ' ಕವಿತೆಯನ್ನು ಭಾಷಣದ ಕೊನೆಗೆ ಓದಿದ ಅವರು, ಬಾಗಿನ ಪಡೆದ ಮುಸ್ಲಿಂ ಮಹಿಳೆಯಲ್ಲಿ ಮೂಡುವ ಭಾವನೆಗಳನ್ನು ಬಣ್ಣಿಸಿದರು.

ಸೌಹಾರ್ದ ಸಾರಿದ ದಸರಾ

ಒಂದನೇ ಪುಟದಿಂದ...

'ಇದು ನನ್ನ ಜೀವನದ ಅತ್ಯಂತ ಗೌರವದ ಗಳಿಗೆ' ಎಂಬ ಧನ್ಯತೆ ವ್ಯಕ್ತಪಡಿಸಿದ ಅವರ ಪ್ರತಿ ಮಾತು ಸಾಮರಸ್ಯ–ಸಹಿಷ್ಣುತೆ, ಶಾಂತಿ, ಪ್ರೀತಿಯ ಕುರಿತೇ ಆಗಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ ಆದಿಯಾಗಿ ಮಾತನಾಡಿದ ಎಲ್ಲರೂ ಅದನ್ನೇ ಪುನರುಚ್ಚರಿಸಿದರು.

'ದೇವಿ ಚಾಮುಂಡಿಯೇ ನನ್ನನ್ನು ಇಲ್ಲಿಗೆ ಕರೆಸಿಕೊಂಡಿದ್ದಾಳೆ' ಎಂದು ಮಾತು ಆರಂಭಿಸಿದ ಬಾನು, 'ಸರ್ವ ಜನಾಂಗದ ತೋಟವಾದ ನಾಡಿನಲ್ಲಿ ಪ್ರತಿ ಹೂ ತನ್ನ ಬಣ್ಣದಲ್ಲಿ ಅರಳಲಿ, ತನ್ನ ಸುವಾಸನೆಯನ್ನೇ ಬೀರಲಿ, ಪ್ರತಿ ಹಕ್ಕಿ ತನ್ನ ರಾಗದಲ್ಲೇ ಹಾಡಲಿ. ಆದರೆ ಎಲ್ಲವೂ ಒಟ್ಟಾದಾಗ ಸೌಹಾರ್ದದ ಹಾಡಾಗಲಿ' ಎಂದು ಆಶಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ, ಬಾನು ಅವರ ಆಯ್ಕೆಯನ್ನು ಪ್ರಶ್ನಿಸಿದ್ದ ಅರ್ಜಿಯನ್ನು ವಜಾಗೊಳಿಸಿದ, ಸುಪ್ರೀಂ ಕೋರ್ಟ್ ಸಂವಿಧಾನದ ಪ್ರಸ್ತಾವನೆಯನ್ನು ಓದುವಂತೆ ಅರ್ಜಿದಾರರಿಗೆ ಹೇಳಿದ್ದನ್ನು ಉಲ್ಲೇಖಿಸಿದರು.

'ರಾಜ್ಯ ಸರ್ಕಾರ ಮತ್ತು ಸುಪ್ರೀಂ ಕೋರ್ಟ್ ಸಂವಿಧಾನದ ಪರವಾಗಿ ಇವೆ. ಎಲ್ಲರೂ ಸಂವಿಧಾನಕ್ಕೆ ಮಾತ್ರ ಉತ್ತರದಾಯಿಗಳು' ಎಂದು ಪ್ರತಿಪಾದಿಸಿದರು. ಶಾಸಕ ಜಿ.ಟಿ. ದೇವೇಗೌಡ ಅವರೂ ಬಾನು ಮುಷ್ತಾಕ್ ಅವರ ಆಯ್ಕೆಯನ್ನು ಸಮರ್ಥಿಸಿಕೊಂಡರು.

ಜೋಪಡಿ ವಾಸಿಗಳು ಕೆಳಮಟ್ಟದವರೇ?

ಒಂದನೇ ಪುಟದಿಂದ...

'ದೇವಸ್ಥಾನದ ಪಕ್ಕದಲ್ಲೇ ಜೋಪಡಿ ನಿರ್ಮಾಣಗೊಂಡರೆ ಭಕ್ತರ ಧಾರ್ಮಿಕ ಭಾವನೆಗಳು, ಪಾವಿತ್ರ್ಯ ಮತ್ತು ಶಾಂತ ವಾತಾವರಣಕ್ಕೆ ಧಕ್ಕೆ ಉಂಟಾಗುತ್ತದೆ. ಇದು ಸಂವಿಧಾನದ 29ನೇ ವಿಧಿಯ ಉಲ್ಲಂಘನೆಯಾಗುತ್ತದೆ' ಎಂಬ ಅರ್ಜಿದಾರರ ವಾದವನ್ನು ಸ್ಪಷ್ಟವಾಗಿ ತಿರಸ್ಕರಿಸಿರುವ ನ್ಯಾಯಪೀಠ, 'ದೇಗುಲ ಸಮಿತಿಯ ಈ ನಿಲುವು ಜಾತಿ, ವರ್ಗ ಅಥವಾ ಧರ್ಮದ ಮೂಲಕ ಸಮಾಜವನ್ನು ವಿಭಜಿಸುವ ಪ್ರಯತ್ನ. ಅರ್ಜಿದಾರರ ಪೂರ್ವಗ್ರಹ ಮತ್ತು ಬಹಿಷ್ಕಾರದ ಮನಃಸ್ಥಿತಿಗೆ ತಾಜಾ ನಿದರ್ಶನ' ಎಂದು ತೀಕ್ಷ್ಣ ಪದಗಳಲ್ಲಿ ಖಂಡಿಸಿದೆ.

'ಈ ಅರ್ಜಿಯು ಸಾರ್ವಜನಿಕ ಹಿತಾಸಕ್ತಿ ಒಳಗೊಂಡಿಲ್ಲ. ಅರ್ಜಿದಾರರು ಧಾರ್ಮಿಕ ಅಲ್ಪಸಂಖ್ಯಾತರೂ ಅಲ್ಲ. ಆದ್ದರಿಂದ, ಸಂವಿಧಾನದ 29ನೇ ವಿಧಿಯ ಅಡಿಯಲ್ಲಿ ಹಕ್ಕು ಉಲ್ಲಂಘನೆ ಆಗಿದೆ ಎಂದು ಅವರು ವಾದಿಸಲು ಸಾಧ್ಯವಿಲ್ಲ. ಏಕೆಂದರೆ 29ನೇ ವಿಧಿಯ ಉಲ್ಲಂಘನೆ ಘೋಷಿತ ಧಾರ್ಮಿಕ ಅಲ್ಪಸಂಖ್ಯಾತರಿಗೆ ಮಾತ್ರವೇ ಅನ್ವಯಿಸುತ್ತದೆ' ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

'ಭಾರತ ದೇಶವನ್ನು ಉನ್ನತ ದೇಶವನ್ನಾಗಿ ನೋಡಬೇಕೆಂದಿದ್ದರೆ, ಅದು ತನ್ನ ನಾಗರಿಕರನ್ನು ಎರಡನೇ ದರ್ಜೆಗೆ ಇಳಿಸಿ ನೋಡಲು ಸಾಧ್ಯವಿಲ್ಲ. ಜೋಪಡಿ ನಿವಾಸಿಗಳ ಘನತೆ ಯಾವುದೇ ಭಕ್ತರ ಘನತೆಗಿಂತ ಕೀಳಾಗಿಲ್ಲ. ದೇಶದಲ್ಲಿ ಒಬ್ಬರ ಹಕ್ಕನ್ನು ಉಳಿಸಲಿಕ್ಕಾಗಿ ಇನ್ನೊಬ್ಬರ ಹಕ್ಕನ್ನು ಅಡಗಿಸುವ ಅಗತ್ಯವಿಲ್ಲ. ನಮ್ಮ ದೇಶದ ಸಂವಿಧಾನಕ್ಕೆ ಮಾನವನ ಮೌಲ್ಯಾಧಾರಿತ ವರ್ಗ ಶ್ರೇಣಿಯಿಲ್ಲ. ಅದರ ದೃಷ್ಟಿಯಲ್ಲಿ ಎಲ್ಲರೂ ಸಮಾನರೇ' ಎಂದು ಗಟ್ಟಿಯಾದ ಧ್ವನಿಯಲ್ಲಿ ಪ್ರತಿಪಾದಿಸಿದೆ.

ಸುದೀರ್ಘ ವ್ಯಾಜ್ಯದ ನಂತರ ಮಂಡ್ಯದ ಸರ್ವೆ ನಂ 843 ಮತ್ತು 844ರಲ್ಲಿ ಒಟ್ಟು 28½ ಗುಂಟೆ ಭೂಮಿಯನ್ನು ಕಾಯ್ದೆಯ ಕಲಂ 3ರ ಅಡಿಯಲ್ಲಿ ಮರು-ಜೋಪಡಿ ಪ್ರದೇಶವೆಂದು ಘೋಷಿಸಿ, ಆ ಪ್ರದೇಶದಲ್ಲಿ ಮನೆಗಳನ್ನು ನಿರ್ಮಿಸಿ ಜೋಪಡಿ ವಾಸಿಗಳಿಗೆ ಪುನರ್ವಸತಿ ಕಲ್ಪಿಸುವಂತೆ ಆದೇಶ ಹೊರಡಿಸಲಾಗಿತ್ತು. ಈ ಕುರಿತಂತೆ ಜಿಲ್ಲಾಧಿಕಾರಿ 2018ರಲ್ಲಿ ಹೊರಡಿಸಿದ್ದ ಅಧಿಸೂಚನೆಯನ್ನು ರದ್ದುಪಡಿಸುವಂತೆ ಅರ್ಜಿದಾರರು ಕೋರಿದ್ದರು.

ನವೋದಯ ವಿದ್ಯಾಲಯ ಸಮಿತಿ
ಶಿಕ್ಷಣ ಸಚಿವಾಲಯದ ಅಡಿಯಲ್ಲಿ ಸ್ವಾಯತ್ತ ಸಂಸ್ಥೆ
ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆ, ಭಾರತ ಸರ್ಕಾರ.
PM SHRI

2026 ರ ಲ್ಯಾಟರಲ್ ಎಂಟ್ರಿ ಆಯ್ಕೆ ಪರೀಕ್ಷೆಯ ಮೂಲಕ IX ಮತ್ತು XI ನೇ ತರಗತಿಗಳಿಗೆ ಆನ್‌ಲೈನ್ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕದ ವಿಸ್ತರಣೆಯ ಅಧಿಸೂಚನೆ

ಆಯ್ಕೆ ಪರೀಕ್ಷೆಯ ಮೂಲಕ ಜವಾಹರ ನವೋದಯ ವಿದ್ಯಾಲಯಗಳಲ್ಲಿ IX ಮತ್ತು XI ನೇ ತರಗತಿಯ (2026–27) ನೇ ಸಾಲಿಗೆ ದಾಖಲಾತಿಗಾಗಿ ಆನ್ ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಪ್ರಕ್ರಿಯೆಯು ಪ್ರಗತಿಯಲ್ಲಿದೆ. ಆನ್ ಲೈನ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವನ್ನು **07 ನೇ ಅಕ್ಟೋಬರ್ 2025** ರ ವರೆಗೆ ವಿಸ್ತರಿಸಲಾಗಿದೆ. ಅಭ್ಯರ್ಥಿಗಳು ಕೆಳಗೆ ನೀಡಿರುವ ಲಿಂಕ್ ಗೆ ಭೇಟಿ ನೀಡುವ ಮೂಲಕ ಉಚಿತವಾಗಿ ಅರ್ಜಿ ಸಲ್ಲಿಸಬಹುದಾಗಿದೆ.
IX ತರಗತಿಗಾಗಿ LEST 2026: https://cbseitms.nic.in/2025/nvsix_9/
XI ತರಗತಿಗಾಗಿ LEST 2026 : https://cbseitms.nic.in/2025/nvsxi_11/
ನವೋದಯ ವಿದ್ಯಾಲಯ ಸಮಿತಿಯ ಪ್ರಕಟಣೆ

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್
(ಕರ್ನಾಟಕ ಸರ್ಕಾರದ ಉದ್ಯಮ)
ಗ್ರಾಮೀಣಾಭಿವೃದ್ಧಿ ಭವನ, 4 ಮತ್ತು 5ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು – 560 009
ಸಂಖ್ಯೆ.ಕೆಆರ್‌ಐಡಿಎಲ್/ಎಸಿಟಿ/ಟಿಎನ್‌ಡಿ/ಎಫ್‌ಡಿ/2025–26 ದಿನಾಂಕ:22.09.2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕೆಆರ್‌ಐಡಿಎಲ್ ಸುಮಾರು ರೂ.431.00 ಕೋಟಿ ಹಣವನ್ನು ಒಂದು ವರ್ಷದ ಅವಧಿವರೆಗೆ ನಿಶ್ಚಿತ ಠೇವಣಿಯಲ್ಲಿ ಹೂಡಿಕೆ ಮಾಡಲು ಸಾರ್ವಜನಿಕ ವಲಯದ ಬ್ಯಾಂಕುಗಳು/ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು/ ಖಾಸಗಿ ವಲಯದ ಬ್ಯಾಂಕುಗಳಿಂದ ಇ–ಬಿಡ್ಡಿಂಗ್ ಮೂಲಕ ಟೆಂಡರುಗಳನ್ನು ಆಹ್ವಾನಿಸಿದೆ. ಇತರೆ ನಿಯಮಗಳು ಮತ್ತು ನಿಬಂಧನೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್:**www.kppp.karnataka.gov.in** ನಲ್ಲಿ ನೋಡಬಹುದು. ಇ–ಪ್ರೋಕ್ ಸಹಾಯವಾಣಿ ಸಂಪರ್ಕ ಸಂ:+91–8046010000, +91–8068948777.
- ಇ–ಹರಾಜು ಪ್ರಕಟಣೆ ಪ್ರಕಟಿಸಿರುವ **ದಿನಾಂಕ: 23.09.2025**
- ಬಿಡ್ ಸಲ್ಲಿಸುವ ಕಡೆಯ **ದಿನಾಂಕ: 03.10.2025 ರಂದು 15.00 ಗಂಟೆವರೆಗೆ.**
- ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 06.10.2025 ರಂದು 15.00 ಗಂಟೆಗೆ.**
- ಇ–ಹರಾಜು ಪ್ರಾರಂಭದ **ದಿನಾಂಕ: 10.10.2025 ರಂದು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 3.00 ಗಂಟೆ ವರೆಗೆ.**

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
ಮುಖ್ಯ ಹಣಕಾಸು ಅಧಿಕಾರಿ
ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್, ಬೆಂಗಳೂರು–09
.ದೂರವಾಣಿ: 080–28015609, ಇ–ಮೇಲ್: cfo-1@kridl.net
ಸಹಿ/–ಮುಖ್ಯ ಹಣಕಾಸು ಅಧಿಕಾರಿ, ಕೆಆರ್‌ಐಡಿಎಲ್, ಬೆಂಗಳೂರು

BSNL ಭಾರತ್ ಸಂಚಾರ್ ನಿಗಮ್ ಲಿಮಿಟೆಡ್
(ಭಾರತ ಸರ್ಕಾರದ ಒಂದು ಉದ್ಯಮ)

ಸರ್ಕಾರಿ/ಸಾರ್ವಜನಿಕ ಉದ್ದಿಮೆ/ಬ್ಯಾಂಕ್‌ಗಳು–ಕಛೇರಿ/ವಾಣಿಜ್ಯ ಸ್ಥಳ ಬಾಡಿಗೆಗೆ ಲಭ್ಯ

ಬೆಂಗಳೂರಿನ ಪ್ರಮುಖ ಸ್ಥಳಗಳಲ್ಲಿರುವ ವಿವಿಧ ಬಿಎಸ್‌ಎನ್‌ಎಲ್ ಕಟ್ಟಡಗಳಲ್ಲಿ ಖಾಲಿಯಿರುವ ವಾಣಿಜ್ಯ/ಕಛೇರಿ ಸ್ಥಳಗಳು ಬಾಡಿಗೆಗೆ ಲಭ್ಯವಿದ್ದು ಕೆಳಕಂಡ ಸಂಸ್ಥೆ/ಇಲಾಖೆಗಳಿಗೆ ಸೂಕ್ತವಾಗಿದೆ.
1. ರಾಜ್ಯ ಹಾಗೂ ಕೇಂದ್ರ ಸರ್ಕಾರದ ಇಲಾಖೆಗಳು
2. ಸಾರ್ವಜನಿಕ ಕ್ಷೇತ್ರದ ಉದ್ದಿಮೆಗಳು (ಪಿಎಸ್‌ಯು ಗಳು)
3. ರಾಷ್ಟ್ರೀಕೃತ ಬ್ಯಾಂಕ್‌ಗಳು ಮತ್ತು ಹಣಕಾಸು ಸಂಸ್ಥೆಗಳು
4. ಶಾಸನಬದ್ಧ ಪ್ರಾಧಿಕಾರಿಗಳು ಮತ್ತು ಸ್ವಾಯತ್ತ ಸರ್ಕಾರಿ ಸಂಸ್ಥೆಗಳು

ಸ್ಥಳಗಳು ಸಂಪರ್ಕಕ್ಕೆ ಸುಗಮ, ಸುರಕ್ಷಿತ ಮತ್ತು ಕಛೇರಿ / ವಾಣಿಜ್ಯ ಉಪಯೋಗಕ್ಕೆ ಯೋಗ್ಯಕರ. ಸ್ವತ್ತುಗಳು ವಿಭಿನ್ನ ಅಳತೆಗಳಲ್ಲಿ ಲಭ್ಯ ಹಾಗೂ ಅಗತ್ಯತೆಗೆ ಅನುಗುಣವಾಗಿ ರಚಿಸಬಹುದು. ಸರ್ಕಾರಿ ಸಂಸ್ಥೆಗಳಿಗೆ ಮತ್ತು ಸಾರ್ವಜನಿಕ ಉದ್ದಿಮೆಗಳಿಗೆ ಪ್ರಾಮುಖ್ಯತೆ ನೀಡಲಾಗುವುದು.
ಆಸಕ್ತಿವುಳ್ಳ ಇಲಾಖೆಗಳು https://karnataka.bsnl.co.in/ ಗೆ ಲಾಗಾನ್ ಆಗಬಹುದು ಅಥವಾ ಹೆಚ್ಚಿನ ವಿವರಗಳಿಗಾಗಿ 9448010290 / 9448465116 ಅನ್ನು ಸಂಪರ್ಕಿಸಬಹುದು.

ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು
ಝಾನ್ಸಿಲಕ್ಷ್ಮೀಬಾಯಿ ರಸ್ತೆ, ಮೈಸೂರು– 570 005.
ಸಂ.: ಮೈಅಪ್ರಾ:ನಯೋಶಾ:ಭೂಉಬ:ನಯೋ–1:2025–26 ದಿನಾಂಕ: 20.09.2025

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಪ್ರಕರಣ 14(ಎ)ರನ್ವಯ ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ದಾರಿಪುರ ಗ್ರಾಮದ ಸ.ನಂ.110/2ರಲ್ಲಿ 00–35ಗುಂಟೆ, 110/3ರಲ್ಲಿ 00–19ಗುಂಟೆ, 110/5ರಲ್ಲಿ 00–20ಗುಂಟೆ, 110/7ರಲ್ಲಿ 00–20ಗುಂಟೆ, 110/8ರಲ್ಲಿ 00–33ಗುಂಟೆ, 111/1ರಲ್ಲಿ 01ಎಕರೆ 30ಗುಂಟೆ, 113/3ರಲ್ಲಿ 01ಎಕರೆ 04ಗುಂಟೆ ಮತ್ತು 115/11ರಲ್ಲಿ 00ಎಕರೆ 30ಗುಂಟೆ ಒಟ್ಟು 06ಎಕರೆ 31ಗುಂಟೆ ವಿಸ್ತೀರ್ಣದ ಜಮೀನನ್ನು ಕೆ.ಟಿ.ಸಿ.ಪಿ. ಕಾಯ್ದೆ 1961ರ ಪ್ರಕರಣ 14(ಎ) ರನ್ವಯ ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡುವಂತೆ ಶ್ರೀ ಶಿವಕುಮಾರ್ ಮತ್ತು ನಿತಿನ್ ಶಿವಕುಮಾರ್ ಇವರುಗಳು ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಬದಲಾವಣೆಯಿಂದ "ಈ ಜಮೀನುಗಳಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು ಮತ್ತು ಮಧ್ಯಮ ವರ್ಗದವರಿಗೆ ಹಾಗೂ ಸಾರ್ವಜನಿಕರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತವೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವ ಸಂಧರ್ಭದಲ್ಲಿ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ ಮತ್ತು ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಲಿನ ಪ್ರದೇಶದ ಅಭಿವೃದ್ಧಿ ಹೊಂದುತ್ತದೆ" ಎಂದು ಸಾರ್ವಜನಿಕ ಹಿತಾಸಕ್ತಿ ಕುರಿತು ಮನವಿಯಲ್ಲಿ ತಿಳಿಸಿರುತ್ತಾರೆ. ಸದರಿ ಜಮೀನಿನ ಭೂ ಉಪಯೋಗದ ಬದಲಾವಣೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಸಾರ್ವಜನಿಕರು ಈ ಪ್ರಕಟಣೆಯ ಪತ್ರಿಕೆಯಲ್ಲಿ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ನಗರ ಯೋಜಕ ಸದಸ್ಯರು, ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು –570005 ಇವರಿಗೆ ಮುದ್ದಾಂ ಅಥವಾ ನೋಂದಾಯಿತ ಅಂಚೆ ಮೂಲಕ ತಲುಪಿಸಬಹುದಾಗಿದೆ.

KEY PLAN NTS



LAND IN QUESTION

ಸಹಿ/– ನಗರ ಯೋಜಕ ಸದಸ್ಯರು
ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು.
DIPR/MYS/996/SA/2025-26

ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ನಂ.16/ಐ, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ,
ಬೆಂಗಳೂರು – 560 052, ದೂರವಾಣಿ: 080–2209 6555/2209 6512
E-mail: kfcscproc123@yahoo.com
ಸಂಖ್ಯೆ: ಕಆನಾಸನಿನಿ/ಸಂ/ಬೆಂ.ಬೆ/ಗೋ.ಸಾ/26/2025–26 ದಿನಾಂಕ: 20.09.2025

ಪ್ರಕಟಣೆ

ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮವು 2025–26ನೇ ಸಾಲಿನ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಗೋಣಿ ಚೀಲಗಳನ್ನು ಪಶ್ಚಿಮ ಬಂಗಾಳದಿಂದ ಕರ್ನಾಟಕ ರಾಜ್ಯಕ್ಕೆ ಸಾಗಾಣಿಕೆ ಮಾಡಲು ಅರ್ಹ ಸಾಗಾಣಿಕೆ ಗುತ್ತಿಗೆದಾರರನ್ನು ನೇಮಿಸಲು ಟೆಂಡರನ್ನು KPP Portal ನಲ್ಲಿ ಪ್ರಕಟಿಸಲಾಗಿದೆ. Tender Reference Number: KFCSCL/2025-26/SE0113.

ಹೆಚ್ಚಿನ ಮಾಹಿತಿಯನ್ನು https://kppp.karnataka.gov.in ಇಂದ ಪಡೆಯಬಹುದಾಗಿದೆ.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಇಂಜನೀಯರ್‌ರ ಕಛೇರಿ, ಕನೀನಿನಿ,
ಎಚ್.ಬಿ.ಸಿ ವಿಭಾಗ, ಅಥಣಿ – 591304. ತಾಲ್ಲೂಕು: ಅಥಣಿ, ಜಿಲ್ಲೆ: ಬೆಳಗಾವಿ.
ಸಂಖ್ಯೆ:ಕನೀನಿನಿ/ಎಚ್.ಬಿ.ಸಿ/ಪಿಬಿ/ಟೆಂಡರ್/2025–26/2013 ದಿನಾಂಕ: 20–09–2025

ಟೆಂಡರ್ ತಿದ್ದುಪಡಿ ಅಧಿಸೂಚನೆ (ಕೆ.ಪಿ.ಪಿ. ಪೋರ್ಟಲ್ ಮೂಲಕ ಮಾತ್ರ)

Name of Work : Supplying Equipments Dismentaling and re-erection including Labour Charges of Pump No-3 and 5 of Karimasuti LIS 1st stage (I.No. 3195)

Reference : This office Tender Notification No. (1) No. 1816 Dated. 06-09-2025

ಮೇಲ್ಕಾಣಿಸಿದ ಉಲ್ಲೇಖದ ಆಧಾರದ ಮೇಲೆ ಪ್ರಕಟಿಸಲಾದ ಟೆಂಡರ್ ಅಧಿಸೂಚನೆಯ ಮುಂದುವರಿಕೆಯಲ್ಲಿ, ಕೆಲವು ತಾಂತ್ರಿಕ ಸಮಸ್ಯೆಗಳ ಕಾರಣದಿಂದ ಕಾರ್ಯಕ್ರಮಗಳ ಕ್ಯಾಲೆಂಡರ್ ಮುಂದೂಡಲಾಗಿದ್ದು, ಈಗ ಕಾರ್ಯಕ್ರಮಗಳ ಕ್ಯಾಲೆಂಡರ್ ಹೀಗಿದೆ.

1) ಇ–ಸಂಗ್ರಹಣಾ ಕೋಶದಲ್ಲಿ ಟೆಂಡರ್ ದಾಖಲೆಗಳನ್ನು ಪಡೆಯಬಹುದಾದ ದಿನಾಂಕ: **23–09–2025 ರಂದು ಬೆಳಿಗ್ಗೆ 10.30 ರಿಂದ 03–10–2025 ರಂದು ಸಾಯಂಕಾಲ 4.00 ಗಂಟೆವರೆಗೆ.** 2) ಟೆಂಡರ್ ಪ್ರಶ್ನೆಗಳಿಗೆ ಕೊನೆಯ ದಿನಾಂಕ ಮತ್ತು ಸಮಯ: **30–09–2025 ರಂದು ಸಾಯಂಕಾಲ 4.00 ಗಂಟೆವರೆಗೆ.** 3) ಪೂರ್ಣವಾಗಿ ತುಂಬಿದ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ: **23–09–2025 ರಂದು ಬೆಳಿಗ್ಗೆ 10.30 ರಿಂದ 03–10–2025 ರಂದು ಸಾಯಂಕಾಲ 4.00 ಗಂಟೆವರೆಗೆ.** 4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (ಎಚ್.ಬಿ.ಸಿ. ವಿಭಾಗ ಕಛೇರಿ ಅಥಣಿಯಲ್ಲಿ): **06–10–2025 ರಂದು ಬೆಳಿಗ್ಗೆ 11.00 ಗಂಟೆಗೆ.** 5) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ (ಎಚ್.ಬಿ.ಸಿ. ವಿಭಾಗ ಕಛೇರಿ ಅಥಣಿಯಲ್ಲಿ): **08–10–2025 ರಂದು ಬೆಳಿಗ್ಗೆ 11.00 ಗಂಟೆಗೆ (ತಾಂತ್ರಿಕ ಬಿಡ್ ಅನುಮೋದನೆ ನಂತರ).** ನಿಗದಿಪಡಿಸಿದ ಇತರ ಎಲ್ಲಾ ಷರತ್ತುಗಳು ಅಚಲವಾಗಿರುತ್ತದೆ.

ಸಹಿ/– ಕಾರ್ಯನಿರ್ವಾಹಕ ಇಂಜನೀಯರರು
ಕನೀನಿನಿ, ಎಚ್.ಬಿ.ಸಿ. ವಿಭಾಗ, ಅಥಣಿ.
ವಾಸಾಸಂಇ/ಬೆಳಗಾವಿ/1072/ಅಡ್ವಟೋರ್/2025–26

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಕನೀನಿನಿ, ನಂ.5,
ಭದ್ರಾ ನಾಲಾ ವಿಭಾಗ, ದಾವಣಗೆರೆ. ಫೋ: 08192–264669
ಇ–ಮೇಲ್: eebcddvg@yahoo.co.in

ಟೆಂಡರ್ ಪ್ರಕಟಣೆ

ಉಲ್ಲೇಖ:– **No: EE/KNNL/ BCD-5/DVG/PB-4/4701RLIS/2025-26/ 1293 Date:20.09.2025**

ವ್ಯವಸ್ಥಾಪಕ ನಿರ್ದೇಶಕರು, ಕ.ನೀ.ನಿ.ನಿ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಕ.ನೀ.ನಿ.ನಿ, ನಂ.5 ಭದ್ರಾ ನಾಲಾ ವಿಭಾಗ, ದಾವಣಗೆರೆ ರವರು, ಉಲ್ಲೇಖಿತ ಟೆಂಡರ್ ಪ್ರಕಟಣೆಗಳಲ್ಲಿ ಲೆಕ್ಕ ಶೀರ್ಷಿಕೆ 4701 ಅಡಿಯಲ್ಲಿನ ಕಾಮಗಾರಿಗೆ ದ್ವಿ ಲಕೋಟೆ ಪದ್ಧತಿಯಡಿ ಕೆಪಿಪಿಪಿ–ಪೋರ್ಟ್‌ಲ್ ಮುಖಾಂತರ ಟೆಂಡರ್‌ನ್ನು ಆಹ್ವಾನಿಸಿರುತ್ತಾರೆ. ಅರ್ಹ ಗುತ್ತಿಗೆದಾರರಿಂದ ಶೇಕಡಾವಾರು ಟೆಂಡರ್‌ಗಳನ್ನು ಕೆಪಿಪಿಪಿ–ಪೋರ್ಟ್‌ಲ್ ವೆಬ್‌ಸೈಟ್ (https://kppp.karnataka.gov.in) ಮುಖಾಂತರವೇ ದಿನಾಂಕ: 20.09.2025 ರಿಂದ ಡೌನಲೋಡ್ ಮಾಡಿಕೊಂಡು ದಿ: 29.09.2025 ರ ಸಂಜೆ 5.00 ಘಂಟೆವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಟೆಂಡರ್ ಕುರಿತು ಸ್ಪಷ್ಟೀಕರಣಕ್ಕೆ ದಿನಾಂಕ: 24.09.2025 ರಂದು 4.00 ಘಂಟೆವರೆಗೆ, ಪ್ರಿ ಬಿಡ್ ಸಭೆ ದಿನಾಂಕ: 24.09.2025 ರಂದು ಬೆಳ್ಳಿಗ್ಗೆ 11.00 ಘಂಟೆಗೆ ಈ ಕೆಳಗೆ ಸಹಿ ಮಾಡಿದ ಕಛೇರಿಯಲ್ಲಿ ನೆರವೇರಿಸಲಾಗುವುದು ಮತ್ತು ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 30.09.2025 ರಂದು ಸಂಜೆ 5.10 ಘಂಟೆ.

1) KNNL/2025-26/LI/WORK_INDENT 2929/call-4)
ರೂ 18.00 ಕೋಟಿಗಳು (ಜಿ.ಎಸ್.ಟಿ. ಒಳಗೊಂಡಂತೆ)

ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಮುಂದೂಡುವ, ಅಂಗಿಕರೀಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕೆಳಗೆ ಸಹಿ ಮಾಡಿರುವ ಅಧಿಕಾರಿಗಳು ಕಾಯ್ದಿರಿಸಿಕೊಂಡಿರುತ್ತಾರೆ. ಹೆಚ್ಚಿನ ಮಾಹಿತಿಗಾಗಿ ಕೆಪಿಪಿಪಿ–ಪೋರ್ಟ್‌ಲ್ ಅಥವಾ ಕಛೇರಿ ವೇಳೆಯಲ್ಲಿ ಕೆಳಗೆ ಸಹಿ ಮಾಡಿದವರ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ.

ವಾಸಾಇ/ಡಿವಿಜಿ/366/ ಕೆಎಸ್‌ಎಂಸಿಎ/2025–26
ಸಹಿ/– ಕಾರ್ಯಪಾಲಕ ಇಂಜಿನಿಯರ್,
ಕನೀನಿನಿ ನಂ.5 ಭದ್ರಾ ನಾಲಾ ವಿಭಾಗ, ದಾವಣಗೆರೆ.

ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ನಂ.16/ಐ, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ,
ಬೆಂಗಳೂರು – 560 052, ದೂರವಾಣಿ: 080–2209 6555/2209 6512
E-mail: kfcscproc123@yahoo.com
ಸಂಖ್ಯೆ: ಕಆನಾಸನಿನಿ/ಸಂ/ಬೆಂ.ಬೆ/ಸಾ&ಹ/2025–26 ದಿನಾಂಕ: 20.09.2025

ಪ್ರಕಟಣೆ

ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮವು 2025–26ನೇ ಸಾಲಿನ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಖರೀದಿಸುವ ಆಹಾರ ಧಾನ್ಯಗಳನ್ನು ಸಾಗಾಣಿಕೆ ಮತ್ತು ಹಸ್ತಾಂತರ ಕಾರ್ಯನಿರ್ವಹಿಸಲು ಸಾಗಾಣಿಕೆ ಗುತ್ತಿಗೆದಾರರನ್ನು ನೇಮಿಸಲು ಟೆಂಡರನ್ನು KPP Portal ನಲ್ಲಿ ಟೆಂಡರ್ ಸಂಖ್ಯೆ: KFCSCL/2025-26/SE0114 ರಲ್ಲಿ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಯನ್ನು https://kppp.karnataka.gov.in ಜಾಲತಾಣದಿಂದ ಪಡೆಯಬಹುದಾಗಿದೆ.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು

ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ
Email: ee_pwdbellary@yahoo.com ದೂರವಾಣಿ ಸಂ: 08392 266123
ಸಂ:ಕಾನಿಇ/ಲೋಇ/ಬವಿ/ಟಿ.ಎಸ್–6/ಕೆಕೆಆರ್‌ಡಿಬಿ/2025–26/3283
ದಿನಾಂಕ: 18.09.2025

ಸಂಕ್ಷಿಪ್ತ ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅದ್ಯಾದೇಶ 2000 ಹಾಗೂ ಆಕ್ಟ್ 2000 ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ಗಳ ನಿಯಮಗಳನ್ವಯ ಕರ್ನಾಟಕ ರಾಜ್ಯ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರು, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ ಇವರಿಂದ ಕೆ.ಕೆ.ಆರ್.ಡಿ.ಬಿ. (ಸಿ.ಎಮ್.ಡಿ.ಕ್ಯೂ.) ಹಾಗೂ ಸಿ.ಇ.ಪಿ.ಎಮ್.ಐ.ಜೆಡ್. ಯೋಜನೆ ಅಡಿಯಲ್ಲಿ ಅನುಮೋದನೆಯಾದ ಕಾಮಗಾರಿಗಳಿಗೆ ವಿಸ್ತೃತ ಯೋಜನಾ ವರದಿಗಳನ್ನು (ಡಿಪಿಆರ್) ತಯಾರಿಸಲು ನೊಂದಾಯಿತರಾದ ಯೋಜನಾ ಸಮಾಲೋಚಕರುಗಳನ್ನು ನೇಮಿಸಲು ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗಳಿಗೆ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ವೆಬ್‌ಸೈಟ್ https:kppp.karnataka.gov.in ನಲ್ಲಿ ಟೆಂಡರ್‌ಗಾಗಿ ವಿವರಗಳನ್ನು ಪಡೆದು ಭಾಗವಹಿಸಬಹುದು. ಸದರಿ ಕಾಮಗಾರಿಗಳ ವಿವರ ಈ ಕೆಳಗೆನಂತಿವೆ.
1) PWD/2025-26/SE0444, 2) PWD/2025-26/SE0443.

ಸೂಚನೆ : ಕಾರಣಾಂತರಗಳಿಂದ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಹಾಗೂ ಇನ್ನಿತರೆ ಬದಲಾವಣೆಗಳಾದಲ್ಲಿ ಗುತ್ತೇದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ.

ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ ಸಂಖ್ಯೆ 08392 266123) ಹಾಗೂ ಹೆಚ್.ಪಿ. ಕಂಪನಿಯ ಸಹಾಯಕ ದೂರವಾಣಿ ಸಂಖ್ಯೆ 080 25501216 ಮತ್ತು 080 25501227 ರಿಂದ ಮಾಹಿತಿ ಪಡೆಯಬಹುದು.

ಟೆಂಡರಿಗಾಗಿ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ.

ಅ	ಟೆಂಡರ್ ದಾಖಲೆಗಳನ್ನು ಇ–ಪ್ರೋಕುರ್‌ಮೆಂಟ್ ಪೋರ್ಟಲ್ ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಲು ನಿಗಧಿಪಡಿಸಿದ ದಿನಾಂಕ ಮತ್ತು ಸಮಯ	ದಿನಾಂಕ: 20.09.2025 ರಿಂದ 29.09.2025 ರ 16.00 ಗಂಟೆವರೆಗೆ
ಆ	ಕಾಮಗಾರಿಗಳಿಗೆ ನಿಗಧಿಪಡಿಸಿದ ಪ್ರಿ–ಬಿಡ್ ಸಭೆ ದಿನಾಂಕ ಮತ್ತು ಸಮಯ	23.09.2025 ರಂದು 11.30 ಗಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೊಪಯೋಗಿ ಇಲಾಖಾ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ
ಇ	ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ	25.09.2025 ರಂದು 16.00 ಗಂಟೆಯ ವರೆಗೆ
ಈ	ಇ–ಪೋರ್ಟ್‌ಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	29.09.2025 ರಂದು 16.00 ಗಂಟೆಯ ವರೆಗೆ
ಉ	ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ.	30.09.2025 ರಂದು 16.30 ಗಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ ತೆರೆಯಲಾಗುವುದು
ಊ	ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ.	ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯವನ್ನು ಪ್ರತ್ಯೇಕವಾಗಿ ತಾಂತ್ರಿಕ ಬಿಡ್ ಅನುಮೋದನೆಯಾದ ಯೋಜನಾ ಸಮಾಲೋಚಕರಿಗೆ ತಿಳಿಸಲಾಗುವುದು

ಕಾರ್ಯನಿರ್ವಾಹಕ ಇಂಜಿನೀಯರ್,
ಲೋಕೋಪಯೋಗಿ ಇಲಾಖೆ, ವಿಭಾಗ, ಬಳ್ಳಾರಿ

ಕರ್ನಾಟಕ ಸರ್ಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ ವಿಭಾಗ, ರಾಯಚೂರು.
ದೂರವಾಣಿ ಸಂಖ್ಯೆ : 08532–225778 &234747
THESE WORKS ARE CATAGEORY WISE CONTRACTORS
ಲೋಇ/ರಾವಿ/ತಾಂಶಾ–4/ಟೆಂಪ್ರ/2025–26/2667 ದಿಃ16–09–2025

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಟೆಂಡರ್ ಪ್ರಕಟಣೆ (ಕೆ.ಡಬ್ಲ್ಯೂ–1, 2 & 4)

1) ಪ್ರಕಟಣೆ ಸಂಖ್ಯೆ ಮತ್ತು ದಿನಾಂಕ:ಲೋಇ/ರಾವಿ/ತಾಂಶಾ–4/ಟೆಂಪ್ರ/2025–26/2667 ದಿನಾಂಕಃ 16–09–2025 2) ಕಾಮಗಾರಿ ಹೆಸರು: ರಾಯಚೂರು ಜಿಲ್ಲೆಯ ಒಟ್ಟು 21 ಕಾಮಗಾರಿಗಳು. ರಾಯಚೂರು, ದೇವದುರ್ಗ ಸಿಂಧನೂರು ತಾಲೂಕು ವಿವಿಧೆಡೆ ಕಟ್ಟಡ, ಸೇತುವೆ ಮತ್ತು ರಸ್ತೆ ನಿರ್ವಹಣೆ ಕಾಮಗಾರಿಗಳು. 3) ಕಾಮಗಾರಿಯ ಮೊತ್ತ: ಕನಿಷ್ಠ ರೂ. 677309.62 ಗರಿಷ್ಠ ರೂ. 20158001.59 4) ಮುಂಗಡ ಠೇವಣಿ ಮೊತ್ತ: ಕನಿಷ್ಠ ರೂ. 8500.00 ಗರಿಷ್ಠ ರೂ. 302400.00 5) ಕಾಲಾವಧಿ (ಮಳೆಗಾಲ ಸೇರಿ) ಕನಿಷ್ಠ 3 (ಮೂರು) ತಿಂಗಳು ಗರಿಷ್ಠ 11 (ಹನ್ನೊಂದು) ತಿಂಗಳು 6) ಟೆಂಡರ್ ಸ್ವೀಕರಿಸುವ ಅಂತಿಮ ದಿನಾಂಕ: 25/09/2025 ಸಂಜೆ 4.00 ಗಂಟೆಯವರೆಗೆ 7) ಟೆಂಡರ್ ತೆರೆಯುವ ದಿನಾಂಕ: 26/09/2025 ಸಂಜೆ 4.30 ಗಂಟೆಯವರೆಗೆ

ಕಾರಣಾಂತರಗಳಿಂದ ತಿಳಿಯಪಡಿಸಿದ ಟೆಂಡರ ದಿನಾಂಕಗಳು ಹಾಗೂ ಇನ್ನಿತರ ಬದಲಾವಣೆಗಳಾದಲ್ಲಿ ಮತ್ತು ಮರು ಟೆಂಡರ ಆಹ್ವಾನಿಸಿದಲ್ಲಿ ಗುತ್ತೆದಾರರು ಕೆ.ಪಿ.ಪಿ ಪೋರ್ಟನಲ್ಲಿ ಗಮನಿಸಬಹುದಾಗಿದೆ. ಇದಕ್ಕಾಗಿ ಪ್ರತ್ಯೇಕವಾಗಿ ಜಾಯಿರಾತು ಹೊರಡಿಸಲಾಗುವುದಿಲ್ಲ ಮತ್ತು ಹೆಚ್ಚಿನ ವಿವರಗಳಿಗೆ ವೆಬ್‌ಸೈಟ್ https://kppp.karnataka.gov.in/ಮುಖಾಂತರ ನೋಡಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಭಾಗ ರಾಯಚೂರು.
DIP/RCR/417/KSMCA/418/2025-26

ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಹಟ್ಟಿ – 584 115, ಲಿಂಗಸುಗೂರು-ತಾ., ರಾಯಚೂರು ಜಿಲ್ಲೆ , ಕರ್ನಾಟಕ.
ದೂರವಾಣಿ: 08537–275022,
CIN No. U85110KA1947SGC001321

ನೇರ ಸಂದರ್ಶನ

ಕರ್ನಾಟಕ ರಾಜ್ಯದ ರಾಯಚೂರು ಜಿಲ್ಲೆಯ ಹಟ್ಟಿ ಚಿನ್ನದ ಗಣಿ ಹಟ್ಟಿಯಲ್ಲಿರುವ 120 ಹಾಸಿಗೆಗಳ ಆಸ್ಪತ್ರೆಗೆ ಗುತ್ತಿಗೆ ಆಧಾರದ ಮೇಲೆ ಈ ಕೆಳಕಂಡ ತಜ್ಞರು ಹಾಗು ವೈದ್ಯಾಧಿಕಾರಿಗಳು ಅವಶ್ಯಕತೆಯಿರುತ್ತದೆ.

1	**ಜನರಲ್ ಸರ್ಜನ್** ವಿದ್ಯಾರ್ಹತೆ ಕ್ರೋಢೀಕೃತ ಸಂಬಳ	**1 ಹುದ್ದೆ** ಎಂಎಸ್(ಜನರಲ್ ಸರ್ಜರಿ) ರೂ.1,40,000/–ಮಾಹೆಯಾನ (ನೆಗೋಷಿಯಬಲ್) ನಿವೃತ್ತ ವೈದ್ಯರು ಸಹ ಈ ಸಂದರ್ಶನಕ್ಕೆ ಹಾಜರಾಗಬಹುದು.
2	**ಅನಸ್ಥೆಸಿಸ್ಟ್** ವಿದ್ಯಾರ್ಹತೆ ಕ್ರೋಢೀಕೃತ ಸಂಬಳ	**1 ಹುದ್ದೆ** ಅನಸ್ಥೆಸಿಯದಲ್ಲಿ ಎಂಡಿ/ಡಿಎನ್‌ಬಿ/ಡಿಪ್ಲೊಮಾ ರೂ.1,40,000/–ಮಾಹೆಯಾನ (ನೆಗೋಷಿಯಬಲ್) ನಿವೃತ್ತ ವೈದ್ಯರು ಸಹ ಈ ಸಂದರ್ಶನಕ್ಕೆ ಹಾಜರಾಗಬಹುದು.
3	**ವೈದ್ಯಾಧಿಕಾರಿಗಳು** ವಿದ್ಯಾರ್ಹತೆ ಕ್ರೋಢೀಕೃತ ಸಂಬಳ	**3 ಹುದ್ದೆಗಳು** ಎಂಬಿಬಿಎಸ್ ರೂ.75,000/– ಮಾಹೆಯಾನ

ದಿನಾಂಕ **04.10.2025ರಂದು ಬೆಳಿಗ್ಗೆ 9.00 ಗಂಟೆಯಿಂದ ಸಂಜೆ 5.00 ಗಂಟೆಯವರೆಗೆ** ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ, ಹಟ್ಟಿ – 584 115 ನಲ್ಲಿರುವ ಆಡಳಿತ ಕಛೇರಿಯಲ್ಲಿ ನೇರ ಸಂದರ್ಶನ ಕೈಗೊಳ್ಳಲಾಗುವುದು. ಅಭ್ಯರ್ಥಿಗಳು ಸಂದರ್ಶನದ ಸಮಯದಲ್ಲಿ ತಮ್ಮ ಪೂರ್ಣ ವಿವರಗಳನ್ನೊಳಗೊಂಡ ಅರ್ಜಿಯನ್ನು ಮತ್ತು ಶೈಕ್ಷಣಿಕ ವಿದ್ಯಾರ್ಹತೆಯ ದಾಖಲೆ ಪ್ರಮಾಣ ಪತ್ರ, ಅನುಭವ ಪ್ರಮಾಣ ಪತ್ರ, ಜಾತಿ ಪ್ರಮಾಣ ಪತ್ರ ಇತ್ಯಾದಿಗಳ ಮೂಲ ಮತ್ತು ಪ್ರತಿಗಳೊಂದಿಗೆ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರದ ಜೊತೆಗೆ ಹಾಜರುಪಡಿಸಬೇಕು.

ಸಹಿ/– ಕಾರ್ಯನಿರ್ವಾಹಕ ನಿರ್ದೇಶಕರು

ಭಾರತದ ಅತಿ ಹೆಚ್ಚು ಚಿನ್ನದ ಉತ್ಪಾದಕರು

ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ–583101
Email: ee_pwdbellary@yahoo.com ದೂರವಾಣಿ ಸಂ: 08392 266123
ಸಂ: ಕಾನಿಇ/ಲೋಇ/ಬವಿ/ಟಿ.ಎಸ್–6/ಠೇವಣಿ ವಂತಿಕೆ/2025–26/3182
ದಿನಾಂಕ: 12.09.2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಆಸಕ್ತಿಯುಳ್ಳ ಗುತ್ತಿಗೆದಾರರಿಂದ ಈ ಕೆಳಕಾಣಿಸಿದ ಕಾಮಗಾರಿಗಳಿಗೆ ದ್ವಿ ಲಕೋಟೆ ಪದ್ಧತಿಯಂತೆ ಟೆಂಡರುಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಪ್ರಕಟಣೆಯಲ್ಲಿನ ಕಾಮಗಾರಿಗಳನ್ನು ಅಂತರ್ಜಾಲದ ಮೂಲಕ ವೆಬ್ ಸೈಟ್ ವಿಳಾಸ https:kppp.karnataka.gov.in ವನ್ನು ಸಂದರ್ಶಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಕ್ರ.ಸಂ	ಕಾಮಗಾರಿಗಳ ವಿವರ	ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)
1	PWD/2025-26/BD/WORK_INDENT22610	178.38
2	PWD/2025-26/BD/WORK_INDENT24101	50.47

ಸೂಚನೆ : ಕಾರಣಾಂತರಗಳಿಂದ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಬದಲಾದಲ್ಲಿ, ಮರು ಟೆಂಡರ್ ಆಹ್ವಾನಿಸಿದ್ದಲ್ಲಿ ಹಾಗೂ ಇನ್ನಿತರೆ ಬದಲಾವಣೆಗಳಿದ್ದಲ್ಲಿ ಗುತ್ತಿಗೆದಾರರು ಕೆ.ಪಿ.ಪಿ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ. ಇದಕ್ಕಾಗಿ ಪ್ರತ್ಯೇಕ ಜಾಹಿರಾತು ಹೊರಡಿಸಲಾಗುವುದಿಲ್ಲ.
ಟೆಂಡರಿಗಾಗಿ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ.

ಅ	ಕಾಮಗಾರಿಗಳಿಗೆ ನಿಗಧಿಪಡಿಸಿದ ಪ್ರಿ–ಬಿಡ್ ಸಭೆ ದಿನಾಂಕ ಮತ್ತು ಸಮಯ	22.09.2025 ರಂದು 11.00 ಗಂಟೆಗೆ ಕಾರ್ಯ ನಿರ್ವಾಹಕ ಇಂಜನೀಯರ್, ಲೋಕೋಪಯೋಗಿ ಇಲಾಖಾ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ
ಆ	ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ	25.09.2025 ರಂದು 12.00 ಗಂಟೆಯ ವರೆಗೆ
ಇ	ಕೆ.ಪಿ.ಪಿ ಪೋರ್ಟ್‌ಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	29.09.2025 ರಂದು 16.00 ಗಂಟೆಯ ವರೆಗೆ
ಈ	ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ.	30.09.2025 ರಂದು 16.30 ಗಂಟೆಗೆ ಕಾರ್ಯನಿರ್ವಾಹಕ ಇಂಜನೀಯರ್, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ ತೆರೆಯಲಾಗುವುದು

ಕಾರ್ಯನಿರ್ವಾಹಕ ಇಂಜನೀಯರ್,
ಲೋಕೋಪಯೋಗಿ ಇಲಾಖೆ, ವಿಭಾಗ, ಬಳ್ಳಾರಿ

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–01 **editpage@prajavani.co.in**

ಅಭಿಮತ



ಸುಭಾಷಿತ

ಪ್ರೇಮದಿಂದ ನೋವು ಸಂತೋಷವಾಗುತ್ತದೆ; ದುಃಖವೂ ಸುಖವಾಗುತ್ತದೆ.

–ಖಲೀಲ್ ಗಿಬ್ರಾನ್

ಸಂಪಾದಕೀಯ

ಎಚ್‌–1ಬಿ ವೀಸಾ: ದುಬಾರಿ ಶುಲ್ಕ ಭಾರತದ ಹಿತಾಸಕ್ತಿಗೆ ಪೆಟ್ಟು

ಎಚ್‌–1ಬಿ ವೀಸಾ ಪಡೆದು ಅಮೆರಿಕ ಪ್ರವೇಶಿಸುವ ಪ್ರತಿ ಉದ್ಯೋಗಿಯ ಪರವಾಗಿ ಆತನ ಕಂಪನಿಯು 1 ಲಕ್ಷ ಅಮೆರಿಕನ್ ಡಾಲರ್ (ಅಂದಾಜು ₹88 ಲಕ್ಷ) ಪಾವತಿಸಬೇಕು ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೊರಡಿಸಿರುವ ಆದೇಶ, ಅಮೆರಿಕದಲ್ಲಿ ಬದುಕು ಕಟ್ಟಿಕೊಳ್ಳುವ ಭಾರತೀಯ ಯುವಜನರ ಕನಸನ್ನು ಗಾಸಿಗೊಳಿಸುವಂತಹದ್ದು. ಈಗಾಗಲೇ ಈ ವೀಸಾ ಹೊಂದಿರುವವರಿಗೆ ಇಷ್ಟು ದೊಡ್ಡ ಮೊತ್ತ ಪಾವತಿಯ ಹೊರೆ ಇರುವುದಿಲ್ಲ. ಹೊಸದಾಗಿ ಎಚ್‌–1ಬಿ ವೀಸಾ ಬಯಸುವವರು ಒಂದು ಬಾರಿ ಮಾತ್ರ ಈ ಮೊತ್ತ ಪಾವತಿಸಬೇಕು. ಹೀಗಿದ್ದರೂ, ಅಮೆರಿಕದ ಅಧ್ಯಕ್ಷರ ಈ ನಡೆಯು ಅಮೆರಿಕ ಪ್ರವೇಶಿಸಲು ಬಯಸುವ ಭಾರತದ ಉದ್ಯೋಗಿಗಳನ್ನು ಹಿಂದಕ್ಕೆ ಕಳುಹಿಸುವ ಉದ್ದೇಶವನ್ನು ಹೇಳುತ್ತಿದೆ. ಹೊಸದಾಗಿ ಅಮೆರಿಕ ಪ್ರವೇಶಿಸಲು ಬಯಸುವವರಿಗೆ ಅಡೆತಡೆಗಳನ್ನು ಹೆಚ್ಚಿಸುವ ಇನ್ನಷ್ಟು ಕ್ರಮಗಳು ಜಾರಿಗೆ ಬರಬಹುದು, ವಲಸಿಗರು ಅಮೆರಿಕ ತೊರೆಯುವಂತಹ ಸನ್ನಿವೇಶ ಸೃಷ್ಟಿಯಾಗಬಹುದು ಎಂಬುದನ್ನು ಈ ಕ್ರಮವು ಮುಂದಾಗಿ ಹೇಳುತ್ತಿದೆ. ಈ ಕ್ರಮದಿಂದಾಗಿ, ಅಮೆರಿಕದ ಹಾಗೂ ಭಾರತದ ಮುಂಚೂಣಿ ತಂತ್ರಜ್ಞಾನ ಕಂಪನಿಗಳಿಗೆ ಪ್ರತಿಭಾವಂತರು ಲಭ್ಯವಾಗುವುದು ಕಡಿಮೆ ಆಗಬಹುದು. ಅಮೆರಿಕವು ಕೈಗೊಳ್ಳುತ್ತಿರುವ ರಕ್ಷಣಾತ್ಮಕ ಕ್ರಮಗಳು ಅಲ್ಲಿನ ಅನ್ವೇಷಣೆಯ ಪರಿಸರವನ್ನು ಹಾಳುಗೆಡವಬಹುದು, ತಂತ್ರಜ್ಞಾನ ಕ್ಷೇತ್ರದಲ್ಲಿನ ಪಾಲುದಾರಿಕೆಗಾಗಿ ಭಾರತವು ಚೀನಾ ಕಡೆ ಹೆಚ್ಚು ವಾಲಬಹುದು.

ಅಮೆರಿಕದಲ್ಲಿ ಬದುಕು ಕಟ್ಟಿಕೊಳ್ಳಲು ಬಯಸುವ ಭಾರತದ ಯುವಜನರ ಸುಂದರಸ್ವಪ್ನಗಳ ಮೇಲೆ ಟ್ರಂಪ್ ದಾಳಿ ನಡೆಸಿದ್ದಾರೆ. ಸ್ನೇಹದ ಹೆಸರಿನಲ್ಲಿ ಭಾರತದ ಮೇಲೆ ಅಮೆರಿಕ ನಿರ್ಬಂಧಗಳನ್ನು ಹೇರುತ್ತಿದೆ.

ಟ್ರಂಪ್ ಅವರ ಈ ಕ್ರಮವನ್ನು ಅಮೆರಿಕದ ನ್ಯಾಯಾಲಯಗಳು ಅಸಿಂಧುಗೊಳಿಸಬಹುದು ಎಂದು ಕೆಲವರು ಹೇಳುತ್ತಿದ್ದಾರೆ. ಆ ರೀತಿ ಆದರೂ, ಟ್ರಂಪ್ ಅವರು ಭಾರತದ ಕಂಪನಿಗಳು ಹಾಗೂ ನೌಕರರನ್ನು ಅತಿಯಾಗಿ ಗುರಿಯಾಗಿಸಿಕೊಂಡು, ವರಮಾನ ಸಂಗ್ರಹಿಸುವ ತಮ್ಮ ಉದ್ದೇಶದ ಈಡೇರಿಕೆಗಾಗಿ ಇತರ ಮಾರ್ಗ ಅನುಸರಿಸಬಹುದು. ಆ ಮೂಲಕ ಅವರು ವಲಸೆಯನ್ನು ನಿರುತ್ಸಾಹಗೊಳಿಸಲು ಇನ್ನಷ್ಟು ಕ್ರಮಗಳನ್ನು ಕೈಗೊಳ್ಳಬಹುದು. ಯಾವ ನಿಯಂತ್ರಣವೂ ಇಲ್ಲದೆ ವರ್ತಿಸುವುದು, ಊಹೆಗಳಿಗೆ ನಿಲುಕದಂತೆ ತೀರ್ಮಾನಗಳನ್ನು ತೆಗೆದುಕೊಳ್ಳುವುದು ಅಮೆರಿಕವು ಹಿಂದಿನಿಂದಲೂ ಪಾಲಿಸಿಕೊಂಡು ಬಂದಿರುವ ಕೆಲವು ಕ್ರಮಗಳಲ್ಲಿ ಸೇರಿದೆ. ಈ ರೀತಿ ಮಾಡುವುದರಿಂದ, ಏನಾಗುತ್ತಿದೆ ಎಂಬುದನ್ನು ಪೂರ್ತಿಯಾಗಿ ಅರ್ಥ ಮಾಡಿಕೊಳ್ಳುವ ಮೊದಲೇ ಅಮೆರಿಕದ ಗುರಿಗಳು ಈಡೇರಿರುತ್ತವೆ. ಈಗಿನ ಸಂದರ್ಭದಲ್ಲಿ ಟ್ರಂಪ್ ಅವರು ಭಾರತದ ಪ್ರಧಾನಿ ನರೇಂದ್ರ ಮೋದಿ ಅವರನ್ನು ‘ಸ್ನೇಹಿತ’ ಎಂದು ಸಂಬೋಧಿಸುತ್ತಿದ್ದಾರೆ. ಆದರೆ ಟ್ರಂಪ್ ಅವರ ನಿಕಟವರ್ತಿಗಳು, ‘ಅಮೆರಿಕವು ತನ್ನ ಸ್ನೇಹಿತರಿಂದ ಹೆಚ್ಚಿನದನ್ನು ನಿರೀಕ್ಷಿಸುತ್ತದೆ’ ಎನ್ನುತ್ತಾರೆ. ಇದರ ಅರ್ಥ, ಅಮೆರಿಕವು ತನ್ನ ಸ್ನೇಹಿತರ ಮೇಲೆ ಬಹಳ ಒತ್ತಡವನ್ನು ತರುತ್ತಿದೆ. ಈ ನಡುವೆ ಟ್ರಂಪ್ ಅವರ ನೀತಿಗಳ ಜೊತೆ ಗುರುತಿಸಿಕೊಂಡಿರುವ ಅಮೆರಿಕದ ಕೆಲವು ಮಾಧ್ಯಮಗಳು ಅಲ್ಲಿ ವಲಸಿಗ ವಿರೋಧಿ ಭಾವನೆಗಳನ್ನು ಬೆಳೆಸುತ್ತಿವೆ, ಅವರ ಬಗ್ಗೆ ಸಾರ್ವಜನಿಕರಲ್ಲಿ ದ್ವೇಷ ಮೂಡುವಂತೆ ಮಾಡುತ್ತಿವೆ. ಭಾರತದ ಕೆಲವು ಸಮುದಾಯಗಳು ತಮ್ಮ ಸಾಂಸ್ಕೃತಿಕ ಹಾಗೂ ಧಾರ್ಮಿಕ ಅಸ್ಮಿತೆಯನ್ನು ಅಮೆರಿಕದಲ್ಲಿ ಬಹಿರಂಗವಾಗಿ ತೋರಿಸಿಕೊಳ್ಳುವುದು ಅಲ್ಲಿನ ಸಮಾಜದಲ್ಲಿ ಸಮಂಜಸವಾಗಿ ಕಾಣುತ್ತಿಲ್ಲ. ವಲಸಿಗರು ತಾವು ಇರುವ ನಾಡಿನ ಸಮುದಾಯದ ಜೊತೆ ಬೆರೆಯುವುದು ಹಾಗೂ ತಮ್ಮ ಸಾಂಸ್ಕೃತಿಕ ಅಸ್ಮಿತೆಯನ್ನು ಉಳಿಸಿಕೊಳ್ಳುವುದರ ನಡುವೆ ಸಮತೋಲನವನ್ನು ಸಾಧಿಸಬೇಕಾಗಿದೆ.

ಟ್ರಂಪ್ ನೇತೃತ್ವದ ಆಡಳಿತವು ಭಾರತದ ಹಿತಾಸಕ್ತಿಗಳಿಗೆ ಧಕ್ಕೆ ಬರುವಂತೆ ಮತ್ತೆ ಮತ್ತೆ ನಡೆದುಕೊಳ್ಳುತ್ತಿರುವುದಕ್ಕೆ ಭಾರತ ಪ್ರತಿರೋಧ ತೋರಬೇಕಿದೆ. ಭಾರತದ ಜೊತೆ ಸಂಬಂಧ ಚೆನ್ನಾಗಿದೆ ಎಂದು ಹೇಳುತ್ತಲೇ ಅಮೆರಿಕವು, ಭಾರತದ ಹಿತಾಸಕ್ತಿಗಳಿಗೆ ಪೆಟ್ಟು ಕೊಡುವ ಕೆಲಸವನ್ನೂ ಮಾಡಿದೆ. ಭಾರತದಿಂದ ಆಮದಾಗುವ ಸರಕುಗಳ ಮೇಲೆ ಶೇಕಡ 50ರಷ್ಟು ಸುಂಕ ವಿಧಿಸಿದೆ, ಅಕ್ರಮ ಮಾದಕವಸ್ತು ಉತ್ಪಾದಿಸುವ ದೇಶಗಳ ಪಟ್ಟಿಯಲ್ಲಿ ಭಾರತದ ಹೆಸರು ಉಲ್ಲೇಖಿಸಲಾಗಿದೆ, ಇರಾನ್‌ನಲ್ಲಿನ ಚಾಬಹಾರ್ ಬಂದರಿನ ಮೇಲಿನ ನಿರ್ಬಂಧಗಳನ್ನು ಮತ್ತೆ ಜಾರಿಗೆ ತರಲಾಗಿದೆ, ಈಗ ಎಚ್‌–1ಬಿ ವೀಸಾ ಪಡೆಯಲು 1 ಲಕ್ಷ ಅಮೆರಿಕನ್ ಡಾಲರ್ ಶುಲ್ಕ ವಿಧಿಸಲಾಗಿದೆ. ವಿಶ್ವಸಂಸ್ಥೆಯ ವಾರ್ಷಿಕ ಮಹಾಸಭೆಯ ಸಂದರ್ಭದಲ್ಲಿ ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಅವರನ್ನು ಭೇಟಿ ಮಾಡುವ ಸಾಧ್ಯತೆ ಇದೆ. ಈ ಸಂದರ್ಭದಲ್ಲಿ ಭಾರತವು ‘ಭಯೋತ್ಪಾದನೆಯ ಬಗ್ಗೆ ಕಠಿಣ ನಿಲುವು ತಳೆಯುವ’ ಮಾಮೂಲಿ ಕೆಲಸದ ಆಚೆಗೂ ಕಣ್ಣುಹಾಯಿಸಬೇಕು. ಭಾರತದ ಹಿತಾಸಕ್ತಿ ಹಾಗೂ ಅಮೆರಿಕದಲ್ಲಿ ನೆಲಸಿರುವ ಭಾರತೀಯ ಸಮುದಾಯದವರ ಹಿತಾಸಕ್ತಿಗಳಿಗೆ ಧಕ್ಕೆ ತರುವ ಅಮೆರಿಕದ ನೀತಿಗಳ ಬಗ್ಗೆ ಪ್ರಧಾನಿ ಮೋದಿ ಅವರು ತಾಳಿರುವ ಮೌನವನ್ನು ಕೊನೆಗೊಳಿಸಬೇಕು. ಅಮೆರಿಕದ ಜೊತೆ ಮಾತುಕತೆ ನಡೆಸಲು ಆ ದೇಶದ ಮೇಲೆ ಅತಿಯಾದ ಪ್ರೀತಿ ಹೊಂದಿಲ್ಲದ ಮಧ್ಯಸ್ಥಿಕೆದಾರರ ಅಗತ್ಯ ಇದೆ. ಇಲ್ಲದಿದ್ದರೆ ಮಾತುಕತೆಗಳಿಂದ ಏನೂ ಸಾಧಿಸಲಾಗುವುದಿಲ್ಲ.

ಜನರ ಸಹಭಾಗಿತ್ವದಿಂದ ‘ಕಲ್ಯಾಣ’

ವಿಶ್ಲೇಷಣೆ

ಶ್ಯಾಮ್ ಎನ್. ಕಶ್ಯಪ್
ಚಕ್ರಧರ್ ಬುದ್ಧ

ಗ್ರಾಮೀಣ ಕುಟುಂಬಗಳಿಗೆ ನೂರು ದಿನಗಳ ಉದ್ಯೋಗವನ್ನು ಖಾತರಿಪಡಿಸುವ ‘ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ’ ಜಾರಿಯಾಗಿ ಇಪ್ಪತ್ತು ವರ್ಷಗಳಾಗುತ್ತಿದೆ. ಇದು ವಿಶ್ವದ ಅತಿದೊಡ್ಡ ಉದ್ಯೋಗ ಯೋಜನೆ. ಈ ಯೋಜನೆಯು ಕೋಟ್ಯಂತರ ಬಡ ಕುಟುಂಬಗಳಿಗೆ ಸಂವಿಧಾನದ 41ನೇ ವಿಧಿಯ ಆರ್ಥಿಕ ನ್ಯಾಯದ ಆಶ್ವಾಸನೆಯನ್ನು ಭಾಗಶಃ ಆದರೂ ಈಡೇರಿಸಿದೆ. ಆದರೆ, ಇಂತಹ ಮಹತ್ವದ ಯೋಜನೆಯಲ್ಲಿ ಬೆಳಕಿಗೆ ಬರುವ ಭ್ರಷ್ಟಾಚಾರದ ಹಗರಣಗಳು ಅದರ ಅಗಾಧ ಭರವಸೆಯನ್ನು ಹುಸಿಗೊಳಿಸುತ್ತಿವೆ.

ರಾಯಚೂರಿನಲ್ಲಿ 2023–24ರಲ್ಲಿ ನಕಲಿ ಹಾಜರಾತಿ ಮತ್ತು ಸರಬರಾಜು ಬಿಲ್‌ಗಳ ಮೂಲಕ ಕೋಟಿಗಟ್ಟಲೆ ಹಣವನ್ನು ಅಧಿಕಾರಿಗಳು ಲಪಟಾಯಿಸಿದ್ದು, ಯಾದಗಿರಿ– ಬಾಗಲಕೋಟೆ ಜಿಲ್ಲೆಗಳಲ್ಲಿ ಪುರುಷರು ಸೀರೆ ಉಟ್ಟು ‘ನ್ಯಾಷನಲ್ ಮೊಬೈಲ್ ಮಾನಿಟರಿಂಗ್ ಸಿಸ್ಟಮ್’ (ಎನ್‌ಎಂಎಂಎಸ್) ಆ್ಯಪ್ ಅನ್ನು ವಂಚಿಸಿದ್ದು, ಮತ್ತಿತರ ಹಗರಣಗಳನ್ನು ಗಮನಿಸಿದರೆ, ಭ್ರಷ್ಟಾಚಾರವು ಈ ಯೋಜನೆಯಲ್ಲಿ ಹಾಸುಹೊಕ್ಕಾಗಿರುವುದು ತಿಳಿಯುತ್ತದೆ. ಬಯೊಮೆಟ್ರಿಕ್ ದೃಢೀಕರಣ, ಜಿಯೋ–ಟ್ಯಾಗ್ ಮುಂತಾದ ತಂತ್ರಾಂಶಗಳು ಇದ್ದಾಗ್ಯೂ ಅಧಿಕಾರಿಗಳು, ಜನಪ್ರತಿನಿಧಿಗಳು ಮತ್ತು ಅವರಿಗೆ ಸಹಕರಿಸುವ ಒಂದಷ್ಟು ಕಾರ್ಮಿಕರು ಶಾಮೀಲಾದಾಗ, ತಾಂತ್ರಿಕ ವ್ಯವಸ್ಥೆಗಳು ವಿಫಲಗೊಂಡು ಭ್ರಷ್ಟಾಚಾರವನ್ನು ನಿಗ್ರಹಿಸಲು ಸೋತಿರುವುದು ಸ್ಪಷ್ಟವಾಗಿದೆ.

ಉದ್ಯೋಗ ಖಾತರಿ ಯೋಜನೆಯಲ್ಲಿ ಪ್ರಾರಂಭದಿಂದಲೂ ಇರುವ, ಆದರೆ ಬಹುತೇಕ ಜನರಿಗೆ ಗೊತ್ತಿರದ ಒಂದು ಪ್ರಮುಖ ಪ್ರಕ್ರಿಯೆ, ಸಾಮಾಜಿಕ ಲೆಕ್ಕ ಪರಿಶೋಧನೆ (ಸೋಷಿಯಲ್ ಆಡಿಟ್). ಸಮುದಾಯಗಳು ಸ್ವತಃ ಯೋಜನೆಯ ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸುವ, ಸರಿತಪ್ಪುಗಳನ್ನು ಪಟ್ಟಿ ಮಾಡುವ ಪ್ರಕ್ರಿಯೆಯಿದು. ಇದರಿಂದಾಗಿ ಆಂಧ್ರಪ್ರದೇಶ, ತೆಲಂಗಾಣ, ಜಾರ್ಖಂಡ್ ಮುಂತಾದ ರಾಜ್ಯಗಳ ಹಲವೆಡೆ, ಕಾರ್ಮಿಕರು ತಮ್ಮ ಉದ್ಯೋಗದ ಹಕ್ಕುಗಳನ್ನು ಪಡೆದುಕೊಂಡು ಸ್ಥಳೀಯವಾಗಿ ಭ್ರಷ್ಟಾಚಾರ ತಡೆಗಟ್ಟುವಲ್ಲಿ ಯಶಸ್ವಿಯಾಗಿದ್ದಾರೆ. ಸಾಮಾಜಿಕ ಲೆಕ್ಕ ಪರಿಶೋಧನೆಗಳ ಶಕ್ತಿಯ ಅರಿವಿದ್ದೂ ಹಲವು ರಾಜ್ಯಗಳು ಇದನ್ನು ನಾನಾ ಕಾರಣಗಳಿಂದ ಕಡೆಗಣಿಸಿವೆ. ತಳಹಂತದ ಕಾರ್ಮಿಕರ ಸಹಭಾಗಿತ್ವವಿಲ್ಲದೆ, ಡಿಜಿಟಲ್ ಪರಿಕರಗಳ ಮೂಲಕ ಯೋಜನೆಯ ಅನುಷ್ಠಾನವನ್ನು ನಿಯಂತ್ರಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪ್ರಯತ್ನಿಸುತ್ತಿವೆ.

‘ಪ್ಯಾಚಿಂಗ್ ಡೆವಲಪ್‌ಮೆಂಟ್’ ಕೃತಿಯಲ್ಲಿ ಪ್ರೊ. ರಾಜೇಶ್ ವೀರರಾಘವನ್, ಆಂಧ್ರಪ್ರದೇಶ ಮತ್ತು ಬಿಹಾರದಲ್ಲಿ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನವನ್ನು ವಿಶ್ಲೇಷಿಸಿದ್ದಾರೆ. ಅವರು ಹೇಳುವಂತೆ, ಸಮುದಾಯಚಾಲಿತ ಹೊಣೆಗಾರಿಕೆ ಪ್ರಕ್ರಿಯೆಗಳು ಇಲ್ಲದಿದ್ದಲ್ಲಿ, ಅಧಿಕಾರಿಗಳು, ಸ್ಥಳೀಯ ರಾಜಕಾರಣಿಗಳು ಮತ್ತು ಪ್ರಬಲ ಜಾತಿಗಳ ಪಿತೂರಿಯಿಂದ ತಂತ್ರಜ್ಞಾನವು ಭ್ರಷ್ಟಾಚಾರಕ್ಕೆ ಕಡಿವಾಣ ಹಾಕುವ ಬದಲು, ಅದಕ್ಕೆ ಪೂರಕ ಸಾಧನವಾಗಿ ಬಳಕೆಯಾಗುತ್ತದೆ. ತಂತ್ರಜ್ಞಾನದ ದುರುಪಯೋಗದ ನಿದರ್ಶನ ಕರ್ನಾಟಕದಲ್ಲೂ ಸಿಗುತ್ತದೆ. ಉತ್ತರ ಕರ್ನಾಟಕದ ಒಂದು ಹಳ್ಳಿಯಲ್ಲಿ, ಉದ್ಯೋಗ ಖಾತರಿ ಯೋಜನೆಯ ಹತ್ತು ‘ಮೇಟ್’ಗಳು (ಸ್ಥಳೀಯ ಕಾರ್ಮಿಕರಲ್ಲೇ ಒಬ್ಬರಾದ, ಕಾಮಗಾರಿ ಮಟ್ಟದಲ್ಲಿ ಹಾಜರಾತಿ ಮತ್ತಿತರ ಕೆಲಸಗಳನ್ನು ನಿರ್ವಹಿಸುವ ಮೇಲ್ವಿಚಾರಕರು) 200 ಕಾರ್ಮಿಕರ ಹಾಜರಾತಿಯನ್ನು ‘ಎನ್‌ಎಂಎಂಎಸ್’ ಆ್ಯಪ್ ಬಳಸಿ ನಿರ್ವಹಿಸುತ್ತಿದ್ದರು. ಇದ್ದಕ್ಕಿದ್ದಂತೆ ಅವರ ಆ್ಯಪ್ ಲಾಗಿನ್ ನಿರ್ಬಂಧಿಸಲಾಯಿತು. ಲಿಖಿತ ಹಾಜರಾತಿ ದಾಖಲೆಗಳನ್ನು ಬಳಸಿ ಗ್ರಾಮ ಪಂಚಾಯಿತಿ ಕೆಲಸ ಮುಂದುವರಿಸಿತು. ಆ್ಯಪ್ ಬಳಸದೇ ನಿಯಮ ಉಲ್ಲಂಘಿಸಿದ ಕಾರಣಕ್ಕೆ ತಾಲ್ಲೂಕು ಪಂಚಾಯಿತಿ ಅಧಿಕಾರಿಯು ಕಾಮಗಾರಿಗಳನ್ನು ನಿಲ್ಲಿಸಿದರು. ಸ್ಥಳೀಯ ವಾರ್ಡ್ ಸದಸ್ಯರೊಬ್ಬರು ಕೆಲಸದಲ್ಲಿ ಇತರ ಉಲ್ಲಂಘನೆಗಳೂ ನಡೆದಿವೆ ಎಂದು ವಾದಿಸಿದರು. ಈ ಆಪಾದನೆಗಳನ್ನು ವಿರೋಧಿಸಿದ ಮೇಟ್‌ಗಳಿಗೆ ಬೆದರಿಕೆ ಹಾಕಲಾಯಿತು. ಕೆಲಸವನ್ನು ಪುನರಾರಂಭಿಸಲು ಮೇಟ್‌ಗಳು ಅಧಿಕಾರಿಯನ್ನು ಕೋರಿದಾಗ, ಆ್ಯಪ್ ಬಳಕೆಯನ್ನು ಮತ್ತೆ ಸ್ಥಾಪಿಸಲು ಪ್ರತಿ ಮೇಟ್‌ಗೆ ₹30,000 ಲಂಚ ಕೇಳಿದರು. ಲಂಚ ಕೊಡಲು ನಿರಾಕರಿಸಿದ ಮೇಟ್‌ಗಳ ಲಾಗಿನ್‌ಗಳು ನಿರ್ಬಂಧಕ್ಕೊಳಗಾದವು. ಕಾರ್ಮಿಕರಿಗೆ ಸಮಯಕ್ಕೆ ಸರಿಯಾಗಿ ಕೆಲಸ ಮತ್ತು ವೇತನ ನೀಡಲು ಸಹಕಾರಿ ಆಗಬೇಕಾಗಿದ್ದ ತಂತ್ರಾಂಶವು, ಅದಕ್ಕೆ ವಿರುದ್ಧವಾಗಿ ಕಾರ್ಮಿಕರಿಗೆ ತೊಡರಾಗಿ ಬಳಕೆಯಾಯಿತು.

> ಉದ್ಯೋಗ ಖಾತರಿ ಯೋಜನೆಯ ಯಶಸ್ಸಿಗೆ ತಂತ್ರಾಂಶಗಳಷ್ಟೇ ಸಾಲದು, ಜನರ ಸಹಭಾಗಿತ್ವವೂ ಅಗತ್ಯ. ಜನರ ಸಹಭಾಗಿತ್ವ ಹಾಗೂ ಸಾಮಾಜಿಕ ಲೆಕ್ಕ ಪರಿಶೋಧನೆಗಳ ಪರಿಣಾಮಕಾರಿ ಅನುಷ್ಠಾನದಿಂದ ಕಲ್ಯಾಣ ಯೋಜನೆಗಳು ಯಶಸ್ವಿಯಾಗುತ್ತವೆ ಹಾಗೂ ಪ್ರಜಾಪ್ರಭುತ್ವ ಬೇರು ಮಟ್ಟದಲ್ಲಿ ಬಲಗೊಳ್ಳುತ್ತದೆ.

ಎಂಐಎಸ್ ಆಧಾರಿತ ಪಾವತಿಗಳು, ನೇರ ನಗದು ವರ್ಗಾವಣೆ, ಜಿಯೋ–ಟ್ಯಾಗಿಂಗ್, ಬಯೊಮೆಟ್ರಿಕ್ಸ್, ಎನ್‌ಎಂಎಂಎಸ್ ಹಾಜರಾತಿ ಅಪ್ಲಿಕೇಷನ್ ಬಳಸಿ ಅನುಷ್ಠಾನದಲ್ಲಿ ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ಸಾಧಿಸುವ ಗುರಿ ಕೇಂದ್ರ ಸರ್ಕಾರದ್ದು. ಇಷ್ಟೆಲ್ಲಾ ಇದ್ದರೂ ಆಡಳಿತ ವ್ಯವಸ್ಥೆಯ ಮೇಲೆ ತಂತ್ರಜ್ಞಾನದ ಪರಿಣಾಮ ಅಷ್ಟಕ್ಕಷ್ಟೆ. ಕರ್ನಾಟಕದಲ್ಲಿ ನಕಲಿ ಹಾಜರಾತಿಗಳು ಮುಂದುವರಿದಿವೆ. ಯಂತ್ರಗಳ ಬಳಕೆಯನ್ನು ಮಾನವ ಶ್ರಮದ ಲೆಕ್ಕದಲ್ಲಿ ತೋರಿಸಲಾಗುತ್ತಿದೆ; ಕಾರ್ಮಿಕರಿಗೆ ಕಡಿಮೆ ಕೆಲಸ, ಕಡಿಮೆ ವೇತನ ನೀಡಲಾಗುತ್ತಿದೆ. ತಕ್ಷಣದ ಜೀವನೋಪಾಯಕ್ಕಾಗಿ ಕಾರ್ಮಿಕರು ಇಂತಹ ವ್ಯವಸ್ಥೆಗೆ ಪರೋಕ್ಷವಾಗಿ ಒಪ್ಪಿಯೂ ಇದ್ದಾರೆ. ಲಿಬ್‌ಟೆಕ್ ಇಂಡಿಯಾ ಸಂಸ್ಥೆಯ 2023ರ ಅಧ್ಯಯನದ ಪ್ರಕಾರ, ಉದ್ಯೋಗ ಖಾತರಿ ಯೋಜನೆಯಲ್ಲಿ ಕರ್ನಾಟಕದ ಶೇ 34ರಷ್ಟು ಕಾರ್ಮಿಕರಿಗೆ ವೇತನದಲ್ಲಿ 60 ದಿನಗಳಿಗಿಂತ ಹೆಚ್ಚು ವಿಳಂಬವಾಗಿತ್ತು.

ಕಾರ್ಮಿಕರು ಯೋಜನೆಯ ದಸ್ತಾವೇಜುಗಳನ್ನು ಪರಿಶೀಲಿಸಿ, ಅಧಿಕಾರಿಗಳನ್ನು ತಮ್ಮ ಜವಾಬ್ದಾರಿಗಳಿಗೆ ಹೊಣೆಗಾರರನ್ನಾಗಿ ಮಾಡಲು ಸಾಮಾಜಿಕ ಲೆಕ್ಕ ಪರಿಶೋಧನೆಯ ಸಾರ್ವಜನಿಕ ವೇದಿಕೆಯನ್ನು ಕಟ್ಟಿಕೊಂಡಿದ್ದಾರೆ. ಇದರಿಂದಾಗಿ ಹಲವು ರಾಜ್ಯಗಳಲ್ಲಿ ಬಡತನ ನಿರ್ಮೂಲನ ಯೋಜನೆಯ ಪ್ರಮುಖ ಭಾಗೀದಾರರಾಗಿದ್ದಾರೆ. ಅವಿಭಜಿತ ಆಂಧ್ರಪ್ರದೇಶದ ಸಾಮಾಜಿಕ ಲೆಕ್ಕ ಪರಿಶೋಧನಾ ಪ್ರಕ್ರಿಯೆಗಳು ದೇಶಕ್ಕೆ ಮಾದರಿ ಎನಿಸಿದ್ದವು.

ರಾಜ್ಯದ ಹಳ್ಳಿಯೊಂದರಲ್ಲಿ, ಸ್ಥಳೀಯ ಎನ್‌ಜಿಒ ಸಹಯೋಗದಲ್ಲಿ ನಡೆದ ತಳಮಟ್ಟದ ಲೆಕ್ಕ ಪರಿಶೋಧನೆಯು ಕಾರ್ಮಿಕರಿಗೆ, ತಮ್ಮ ಹಳ್ಳಿಯಲ್ಲಿ ನಡೆದ ಅಕ್ರಮಗಳನ್ನು ಹುಡುಕಿ ದಾಖಲಿಸಲು ಸಹಕರಿಸಿತು. ಇದರಿಂದ ವಿಳಂಬವಾಗಿದ್ದ ₹10 ಲಕ್ಷ ವೇತನವನ್ನು ವಸೂಲಿ ಮಾಡಲಾಯಿತು ಮತ್ತು ಅಕ್ರಮ ಯಂತ್ರಗಳ ಬಳಕೆ ನಿಷೇಧಿಸಲಾಯಿತು. ನಿಧಾನವಾದರೂ, ಸಾಮಾಜಿಕ ಲೆಕ್ಕ ಪರಿಶೋಧನೆಗಳು ಪ್ರಜಾಪ್ರಭುತ್ವದ ಸ್ಥಳೀಯ ಪ್ರಕ್ರಿಯೆಗಳನ್ನು ಬಲಿಷ್ಠಗೊಳಿಸಿ ಉದ್ಯೋಗ ಖಾತರಿಯಂತಹ ಯೋಜನೆಗಳನ್ನು ಪರಿಣಾಮಕಾರಿ ಆಗಿಸುತ್ತವೆ.

ಸಾಮಾಜಿಕ ಲೆಕ್ಕ ಪರಿಶೋಧನೆಗೆ ಮಿತಿಗಳು ಇಲ್ಲವೆಂದಲ್ಲ. ಇವು ಸ್ಥಳೀಯ ಪ್ರಭಾವಿಗಳಿಂದಾಗಿ ಸಾಂಕೇತಿಕವಾಗಿ ನಡೆಯುತ್ತವೆ. ದೊಡ್ಡ ಅಕ್ರಮಗಳನ್ನು ಬದಿಗಿರಿಸಿ ಸಣ್ಣ ತಪ್ಪುಗಳನ್ನು ಶೋಧಿಸಿ ಜನರನ್ನು ದಾರಿ ತಪ್ಪಿಸುವ ಕೆಲಸವೂ ನಡೆಯುತ್ತದೆ. ಕಾರ್ಮಿಕರು ಸಭೆಗಳಲ್ಲಿ ಮಾತನಾಡಲು ಹಿಂಜರಿಯುವುದರಿಂದ, ಬಹುಪಾಲು ಸಾಮಾಜಿಕ ಲೆಕ್ಕ ಪರಿಶೋಧನೆಗಳು ಕಾರ್ಮಿಕರ ಉದ್ಯೋಗದ ಹಕ್ಕನ್ನು ಖಾತರಿಪಡಿಸುವ ವೇದಿಕೆಗಳಾಗದೇ ಉಳಿದಿವೆ. ಆದರೂ, ನಾಗರಿಕ ಸಮಾಜದ ಬೆಂಬಲ ಸಿಕ್ಕಾಗ, ಸಾಮಾಜಿಕ ಲೆಕ್ಕ ಪರಿಶೋಧನೆಗಳು ವ್ಯವಸ್ಥೆಯನ್ನು ಪರಿವರ್ತಿಸಬಹುದು.

ಇತರ ರಾಜ್ಯಗಳಿಗೆ ಹೋಲಿಸಿದರೆ, ಕರ್ನಾಟಕದ ಗ್ರಾಮ ಪಂಚಾಯಿತಿಗಳು ಹೆಚ್ಚು ಸಂಪನ್ಮೂಲಗಳನ್ನು ಹೊಂದಿವೆ, ಹೆಚ್ಚು ಸೇವೆಗಳನ್ನು ಒದಗಿಸುತ್ತವೆ ಮತ್ತು ತಂತ್ರಾಂಶಗಳ ಮೇಲೆ ಹೆಚ್ಚು ಅವಲಂಬಿತವಾಗಿವೆ. ಆರ್ಥಿಕ ಸಂಪನ್ಮೂಲಗಳು ಹೆಚ್ಚಿದ್ದು, ಸಾಮಾಜಿಕ–ಆರ್ಥಿಕ ಅಸಮಾನತೆಗಳೂ ಇದ್ದಲ್ಲಿ, ಸಂಪನ್ಮೂಲಗಳು ಮತ್ತು ಯೋಜನೆಗಳ ಪ್ರಯೋಜನ ಪಡೆಯುವವರಲ್ಲಿ ಅಸಮತೋಲನದ ಸಂಭವವೂ ಹೆಚ್ಚು. ಗ್ರಾಮ ಪಂಚಾಯಿತಿಗಳ ಕಾರ್ಯಕ್ಷಮತೆ ಮೇಲೆ ಕಣ್ಣಿಡುವ ತಾಂತ್ರಿಕ ಮಾನಿಟರಿಂಗ್ ವ್ಯವಸ್ಥೆಯ ಜೊತೆ ಜೊತೆಗೆ, ಸ್ಥಳೀಯ ಸಮುದಾಯಗಳ ಸಹಭಾಗಿತ್ವದಲ್ಲಿ ಗ್ರಾಮ ಪಂಚಾಯಿತಿಗಳ ಕೆಲಸ ಕಾರ್ಯಕ್ರಮಗಳನ್ನು ಪರಿಶೀಲಿಸುವ ವ್ಯವಸ್ಥೆಯೂ ಗಟ್ಟಿಯಾಗಿದ್ದರೆ, ಸಮತೋಲನವನ್ನು ಕಾಪಾಡುವುದರ ಜೊತೆಗೆ, ಮೇಲ್ವಿಚಾರಣೆಯೂ ಪರಿಣಾಮಕಾರಿ ಆಗಬಲ್ಲದು. ರಾಯಚೂರಿನ ಹಗರಣದಿಂದ ಹಿಡಿದು ದುಡ್ಡಿಗಾಗಿ ಆ್ಯಪ್‌ಗಳ ನಿರ್ಬಂಧದವರೆಗೆ, ಉದ್ಯೋಗ ಖಾತರಿ ಯೋಜನೆಯ ವೈಫಲ್ಯಗಳು, ಡಿಜಿಟಲ್ ಪರಿಹಾರಗಳ ಮಿತಿಗಳನ್ನು ಬಹಿರಂಗಪಡಿಸುತ್ತವೆ.

ಜನ ಸಹಭಾಗಿತ್ವದ ವ್ಯವಸ್ಥೆಗಳನ್ನು ಗಟ್ಟಿಗೊಳಿಸದೇ ಹೋದರೆ, ಕಲ್ಯಾಣ ಯೋಜನೆಗಳ ಕೋಟಿಗಟ್ಟಲೆ ವೆಚ್ಚಗಳು ಆರ್ಥಿಕ ಮತ್ತು ಸಾಮಾಜಿಕ ನ್ಯಾಯವನ್ನು ಜನತೆಗೆ ನೀಡಲು ಸಾಧ್ಯ ಆಗದಿರಬಹುದು. ಇಂದು ಹಲವು ಸರ್ಕಾರಿ ಯೋಜನೆಗಳಲ್ಲಿ ಅಧಿಕಾರಿಗಳ ಕಾರ್ಯಕ್ಷಮತೆಯನ್ನು ಡಿಜಿಟಲ್ ಡ್ಯಾಶ್‌–ಬೋರ್ಡ್‌ಗಳಲ್ಲಿ ಬಿಂಬಿಸಲಾಗುತ್ತಿದೆ. ಪರ್ಯಾಯವಾಗಿ, ಅಧಿಕಾರಿಗಳು ತಾವು ಸೇವೆ ಸಲ್ಲಿಸುತ್ತಿರುವ ಸಮುದಾಯಗಳಿಗೆ ಉತ್ತರ ಹೇಳಬೇಕಾದ ಹೊಸ ಕರ್ನಾಟಕವನ್ನು ನಾವು ಗಟ್ಟಿಗೊಳಿಸಬೇಕಾಗಿದೆ. ಇದನ್ನು ಸಾಧಿಸಲು ತಮ್ಮ ಹಕ್ಕುಗಳನ್ನು ಆಗ್ರಹಿಸುವ ಜಾಗೃತ ಮತ್ತು ಸಂಘಟಿತ ಕಾರ್ಮಿಕರು ಬೇಕಾಗಿದ್ದಾರೆ. ತಂತ್ರಜ್ಞಾನವು ಅವರ ಶಕ್ತಿಯನ್ನು [illegible]

(ಶ್ಯಾಮ್ ಎನ್. ಕಶ್ಯಪ್ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಲ್ಲಿ ಸಹಾಯಕ ಪ್ರಾಧ್ಯಾಪಕ, ಚಕ್ರಧರ್ ಬುದ್ಧ ‘ಲಿಬ್‌ಟೆಕ್ ಇಂಡಿಯಾ’ ಸಂಸ್ಥಾಪಕ)

ವಾಚಕರ ವಾಣಿ

ಜಾತ್ಯತೀತ ತತ್ತ್ವಕ್ಕೆ ಸಂದ ಗೆಲುವು

ಧಾರ್ಮಿಕ ಮತ್ತು ಸಾಂಸ್ಕೃತಿಕ ಹಬ್ಬವಾದ ದಸರೆಯನ್ನು ಮುಸ್ಲಿಂ ಮಹಿಳೆ ಉದ್ಘಾಟಿಸಿದ್ದು, ಧರ್ಮಕ್ಕಿಂತಲೂ ಒಬ್ಬ ವ್ಯಕ್ತಿಯ ಸಾಧನೆ, ವ್ಯಕ್ತಿತ್ವ ಮತ್ತು ಸಾಮಾಜಿಕ ಕೊಡುಗೆಗೆ ಹೆಚ್ಚಿನ ಮಹತ್ವ ನೀಡಿದಂತಾಗಿದೆ. ಇದು ಧಾರ್ಮಿಕ ಸಹಿಷ್ಣುತೆ ಮತ್ತು ಸಾಮರಸ್ಯವನ್ನು ಎತ್ತಿಹಿಡಿಯುವ ಪ್ರಮುಖ ಹೆಜ್ಜೆ.

ಹೋರಾಟದ ಹಿನ್ನೆಲೆಯುಳ್ಳ ಮಹಿಳೆಗೆ ದಸರಾದಂತಹ ನಾಡಹಬ್ಬದ ಉದ್ಘಾಟನಾ ಗೌರವ ನೀಡಿರುವುದು, ಹೋರಾಟ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ನಿಂತ ಮಹಿಳೆಯರಿಗೆ ಸಂದ ಗೌರವ. ಆ ಮೂಲಕ, ರಾಜ್ಯ ಸರ್ಕಾರವು ಮಹಿಳೆಯೊಬ್ಬರ ಬೌದ್ಧಿಕ ಮತ್ತು ಕಲಾತ್ಮಕ ಸಾಧನೆಗಳಿಗೆ ಅತ್ಯುನ್ನತ ಗೌರವ ನೀಡಿದೆ. ಬಹಳಷ್ಟು ಜನರು ಆಕ್ಷೇಪ ವ್ಯಕ್ತಪಡಿಸಿದ್ದರೂ, ಸರ್ಕಾರವು ತನ್ನ ನಿರ್ಧಾರವನ್ನು ಸಮರ್ಥಿಸಿಕೊಂಡು, ಮಹಿಳೆಯರು ಮತ್ತು ಅಲ್ಪಸಂಖ್ಯಾತ ಸಮುದಾಯದವರು ಸಾರ್ವಜನಿಕ ಜೀವನದಲ್ಲಿ ಪ್ರಮುಖ ಸ್ಥಾನ ಅಲಂಕರಿಸುವುದಕ್ಕೆ ವಿರೋಧ ವ್ಯಕ್ತಪಡಿಸುವವರಿಗೆ ಸ್ಪಷ್ಟ ಸಂದೇಶ ರವಾನಿಸಿದೆ.

ಸಂಧ್ಯಾ ಹೆಚ್‌.ಎಸ್., ಹಂಪಿ

ಹೊಸ ಕಂದಾಯ ಗ್ರಾಮ ಘೋಷಣೆ

ದಾಖಲೆಗಳಿಲ್ಲದ ಜನವಸತಿ ಪ್ರದೇಶಗಳಿಗೆ ಹಕ್ಕು ದಾಖಲೆ ಕೊಡುವ ಹಿನ್ನೆಲೆಯಲ್ಲಿ ಹೊಸ ಕಂದಾಯ ಗ್ರಾಮ, ಹೊಸ ಕಂದಾಯ ಉಪ ಗ್ರಾಮಗಳನ್ನು ರಚಿಸುತ್ತಿರುವುದು ಸ್ವಾಗತಾರ್ಹ.

ಗ್ರಾಮ ಠಾಣಾಕ್ಕೆ ಹೊಂದಿಕೊಂಡೇ ಬೆಳೆದಿರುವ ದಾಖಲೆರಹಿತ ಜನವಸತಿ ಪ್ರದೇಶಗಳಿಗೆ ಉಪ ಕಂದಾಯ ಗ್ರಾಮ ರಚಿಸುವ ಮೂಲಕ, ಹಕ್ಕು ದಾಖಲೆ ನೀಡುವುದನ್ನು ಸಾರ್ವತ್ರಿಕವಾಗಿ ಯೋಚಿಸಿರುವುದನ್ನು ಪುನರ್ ಪರಿಶೀಲಿಸಬೇಕು. ಉಪ ಕಂದಾಯ ಗ್ರಾಮ ಅಥವಾ ಗ್ರಾಮ ಠಾಣಾ ವಿಸ್ತರಣೆ ಇವೆರಡರಲ್ಲಿ ಯಾವುದು ಸುಲಭ ಹಾಗೂ ತ್ವರಿತವಾಗಿ ಮಾಡಲು ಸಾಧ್ಯವೋ ಆ ಆಯ್ಕೆ ಮಾಡಿಕೊಳ್ಳುವ ವಿವೇಚನಾಧಿಕಾರವನ್ನು ಜಿಲ್ಲಾಧಿಕಾರಿಗೆ ನೀಡಬೇಕು. ಆಗ ಗ್ರಾಮ ಠಾಣಾಕ್ಕೆ ಹೊಂದಿಕೊಂಡಿರುವ ದಾಖಲೆರಹಿತ ಜನವಸತಿ ಪ್ರದೇಶಗಳಿಗೆ ತ್ವರಿತವಾಗಿ ಹಕ್ಕು ದಾಖಲೆ ನೀಡಲು ಸಾಧ್ಯ.

ತೇಜಸ್ವಿ ವಿ. ಪಟೇಲ್, ಕಾರಿಗನೂರು

ಬೆಳಗಿದ ಬಾನು!

ಈ ಭೂಮಿಗೂ
ಆ ಬಾನಿಗೂ
ಎಲ್ಲಿದೆ ಎಲ್ಲೆ?
ಅದೇನಿದ್ದರೂ
ನಮ್ಮ ನಮ್ಮಲ್ಲೇ!

ಮ.ಗು. ಬಸವಣ್ಣ, ಮೈಸೂರು

ಕೆ–ಸೆಟ್: ‘ಕೆಇಎ’ ಮಲತಾಯಿ ಧೋರಣೆ

ಕರ್ನಾಟಕ ಪರೀಕ್ಷಾ ಪ್ರಾಧಿಕಾರವು (ಕೆಇಎ) ‘ಕೆ–ಸೆಟ್’ ಪರೀಕ್ಷೆಗೆ ಸಂಬಂಧಿಸಿದಂತೆ ಅರ್ಜಿ ಆಹ್ವಾನಿಸಿದೆ. ರಾಜ್ಯದ ಪದವಿ ಕಾಲೇಜುಗಳಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಲು ಈ ಪರೀಕ್ಷೆ ಅರ್ಹತಾ ಮಾನದಂಡ.

ಆದರೆ, ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಸಣ್ಣಪುಟ್ಟ ತಪ್ಪಾಗಿದ್ದರೆ ಅದನ್ನು ಸರಿಪಡಿಸಲು ತಿದ್ದುಪಡಿಗೆ ಅಥವಾ ಮತ್ತೆ ಹೊಸದಾಗಿ ಅರ್ಜಿ ಸಲ್ಲಿಸಲು ಅವಕಾಶ ನೀಡಿಲ್ಲ. ಈ ಸಂಬಂಧ ವಿಚಾರಿಸಲು ಕೆಇಎ ನೀಡಿರುವ ಸಹಾಯವಾಣಿಗೆ ಕರೆ ಮಾಡಿದರೂ ‘ನಮ್ಮ ಕಾರ್ಯ ನಿರ್ವಾಹಕರು ಬೇರೆ ಕರೆಯಲ್ಲಿ ನಿರತರಾಗಿದ್ದಾರೆ’ ಎಂಬ ಪ್ರತಿಕ್ರಿಯೆ ಬಿಟ್ಟರೆ ಬೇರೆ ಉತ್ತರ ದೊರೆಯುತ್ತಿಲ್ಲ. ಇ–ಮೇಲ್‌ಗೆ ಸಂದೇಶ ಕಳುಹಿಸಿದರೂ ಪ್ರತಿಕ್ರಿಯೆ ಬರುವುದಿಲ್ಲ. ಕೆಇಎಯಿಂದ ನಡೆಸುವ ಬೇರೆಲ್ಲ ಪರೀಕ್ಷಾ ಅರ್ಜಿಗಳ ತಿದ್ದುಪಡಿಗೆ ಅವಕಾಶ ಕಲ್ಪಿಸಲಾಗುತ್ತದೆ. ಕೆ–ಸೆಟ್‌ಗೆ ಮಾತ್ರ ಮಲತಾಯಿ ಧೋರಣೆ ಸರಿಯೇ?

ಸಾವಿತ್ರಿ ಮೇಗಾಡಿ, ಮುಧೋಳ

ಅಮೀಬಾ ಸೋಂಕು: ಮುನ್ನೆಚ್ಚರಿಕೆ ಬೇಕು

ಕೇರಳದಲ್ಲಿ ಮೆದುಳು ತಿನ್ನುವ ಮಾರಕ ಅಮೀಬಾ ಸೋಂಕಿಗೆ 19 ಮಂದಿ ಪ್ರಾಣ ಕಳೆದುಕೊಂಡಿದ್ದಾರೆ. ಸೋಂಕು ಹರಡುವ ಈ ಅಮೀಬಾವು ನಿಂತ ನೀರು, ಕೊಳ ಮತ್ತು ಸರೋವರದಲ್ಲಿನ ನೀರಿನಲ್ಲಿ ಸಾಮಾನ್ಯವಾಗಿ ಕಂಡುಬರುತ್ತದೆ. ಆ ನೀರಿನಲ್ಲಿ ಸ್ನಾನ ಮಾಡಿದಾಗ ಅಥವಾ ಈಜಿದಾಗ ಮೂಗಿನ ಮೂಲಕ ದೇಹ ಪ್ರವೇಶಿಸಿ ಮೆದುಳಿನ ನರವ್ಯೂಹದ ಮೇಲೆ ಪರಿಣಾಮ ಬೀರುತ್ತದೆ. ಕರ್ನಾಟಕದಲ್ಲಿ ಸೋಂಕು ಪತ್ತೆಯಾಗಿಲ್ಲ. ಆದರೆ, ಆರೋಗ್ಯ ಇಲಾಖೆಯು ಮುನ್ನೆಚ್ಚರಿಕೆ ವಹಿಸುವುದು ಒಳಿತು.

ಕಲ್ಪನಾ ಜಿ., ಬೆಂಗಳೂರು

ವೀಸಾ ಬಿಸಿತುಪ್ಪ: ಮಾತುಕತೆ ನಡೆಸಲಿ

‘ಅಮೆರಿಕವೇ ಮೊದಲು’ ಎನ್ನುವುದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ನೀತಿ. ಭಾರತ ಸೇರಿ ಹಲವು ದೇಶಗಳ ಮೇಲೆ ಅವೈಜ್ಞಾನಿಕವಾಗಿ ಪ್ರತಿಸುಂಕ ಹೇರಿದ್ದ ಟ್ರಂಪ್ ಈಗ ಎಚ್‌–1ಬಿ ವೀಸಾ ಶುಲ್ಕ ಹೆಚ್ಚಿದ್ದಾರೆ. ಇದು ಭಾರತದ ಐ.ಟಿ ಉದ್ಯೋಗಿಗಳ ಪಾಲಿಗೆ ನುಂಗಲಾರದ ಬಿಸಿತುಪ್ಪ. ಐ.ಟಿ ವಲಯಕ್ಕೂ ಆತಂಕ. ಐ.ಟಿ ವಲಯವು ದೇಶದ ಆರ್ಥಿಕತೆಗೆ ಅತಿದೊಡ್ಡ ಕೊಡುಗೆ ನೀಡುತ್ತಿದೆ. ಹಾಗಾಗಿ, ಕೇಂದ್ರ ಸರ್ಕಾರವು, ಈ ವಲಯದ ಭವಿಷ್ಯದ ದೃಷ್ಟಿಯಿಂದ ಟ್ರಂಪ್ ಆಡಳಿತದ ಜೊತೆಗೆ ಮಾತುಕತೆ ನಡೆಸುವುದು ಸೂಕ್ತ.

ಕಾವ್ಯ ಕೆ., ತುಮಕೂರು

ಸಾರ್ವಜನಿಕ ಸಾರಿಗೆಗೆ ಉತ್ತೇಜನ ಅಗತ್ಯ

ಕೆಎಸ್‌ಆರ್‌ಟಿಸಿ ಮತ್ತು ಬಿಎಂಟಿಸಿ ಬಸ್ ಟಿಕೆಟ್ ದರವನ್ನು ಇದೇ ವರ್ಷದ ಜನವರಿಯಲ್ಲಿ ಶೇ 15ರಷ್ಟು ಹೆಚ್ಚಿಸಲಾಗಿತ್ತು. ಹತ್ತು ವರ್ಷದ ಹಿಂದೆ ಇದ್ದ ಟಿಕೆಟ್ ದರ ಈಗ ದುಪ್ಪಟ್ಟಾಗಿದೆ. ದರ ಏರಿಕೆಯ ಬಗ್ಗೆ ಸುಳ್ಳು ಹೇಳುವ ಸರ್ಕಾರ, ಜನರಿಗೆ ಜ್ಞಾಪಕಶಕ್ತಿ ಇಲ್ಲವೆಂದು ಭಾವಿಸಿರಬೇಕು. ಸಾರ್ವಜನಿಕ ಸಾರಿಗೆಯನ್ನು ಉತ್ತೇಜಿಸಬೇಕಾದ ಸರ್ಕಾರ, ಈ ಸೇವೆಯನ್ನು ಲಾಭ–ನಷ್ಟದ ದೃಷ್ಟಿಯಲ್ಲಿ ನೋಡುವುದು ಸರಿಯಲ್ಲ.

ಮಧುಸೂದನ್ ಬಿ.ಎಸ್., ಬೆಂಗಳೂರು

ಕೂಡಿ ಬಾಳುವುದೇ ಲೇಸು

‘ನಾವೆಲ್ಲರೂ ಒಂದೇ ಜಾತಿ ಒಂದೇ ಮತ ಒಂದೇ... ನಾವು ಮನುಜರು...’; ಹೊರಗಿನಿಂದ ಪ್ರಹಾರ ಹೆಚ್ಚುತ್ತಿರುವಾಗ, ನಾವೆಲ್ಲ ಕಾದಾಡದೆ ಕೂಡಿ ಬಾಳುವುದೇ ಲೇಸು.

ಸವಿತಾ ನಾಗಭೂಷಣ, ಕವಯಿತ್ರಿ, ‘ಫೇಸ್‌ಬುಕ್’ನಿಂದ

ಕಿಡಿನುಡಿ

ಸಂವಿಧಾನದ ಆಶಯದಂತೆ ಎಲ್ಲಾ ಜಾತಿ, ಧರ್ಮದ ಮತ್ತು ಎಲ್ಲಾ ಪಕ್ಷದ ಬಡವರಿಗೆ ನಾವು ಗ್ಯಾರಂಟಿಗಳನ್ನು ಜಾರಿ ಮಾಡಿದ್ದೇವೆ. ಬಿಜೆಪಿ, ಜೆಡಿಎಸ್‌ನವರು ಗ್ಯಾರಂಟಿಗಳ ಫಲಾನುಭವಿಗಳಲ್ಲವೇ?

ಸಿದ್ದರಾಮಯ್ಯ, ಮುಖ್ಯಮಂತ್ರಿ

25 ವರ್ಷಗಳ ಹಿಂದೆ

ಶನಿವಾರ, 23-9-2000

• ವಿದ್ಯುತ್ ಬಾಕಿ ತೀರಿಸಿದರೆ 330 ಕೋಟಿ ಬಡ್ಡಿ ಮನ್ನಾ

ಬೆಂಗಳೂರು, ಸೆಪ್ಟೆಂಬರ್ 22– ರಾಜ್ಯ ವಿದ್ಯುತ್ ಪ್ರಸರಣ ನಿಗಮಕ್ಕೆ ರೈತರು, ಸರ್ಕಾರಿ–ಅರೆ ಸರ್ಕಾರಿ ಸಂಸ್ಥೆಗಳು ಮತ್ತು ಖಾಸಗಿಯವರು ಉಳಿಸಿಕೊಂಡಿರುವ ವಿದ್ಯುತ್ ಬಾಕಿಯನ್ನು ನವೆಂಬರ್ 30ರೊಳಗೆ ಪಾವತಿ ಮಾಡಿದರೆ ಒಟ್ಟು 330 ಕೋಟಿ ರೂಪಾಯಿ ಬಡ್ಡಿ ಮನ್ನಾ ಮಾಡಲು ಸರ್ಕಾರ ನಿರ್ಧರಿಸಿದೆ.

ನಿಗಮದ ಕಾರ್ಯವೈಖರಿಯನ್ನು ಪ್ರತಿ ವಾರ ಪರಿಶೀಲಿಸಲು ರಚನೆಯಾಗಿರುವ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ನೇತೃತ್ವದ ಸಂಪುಟ ಉಪ ಸಮಿತಿಯ ಮೊದಲ ಸಭೆಯಲ್ಲಿ, ಇದೂ ಸೇರಿದಂತೆ ಹಲವು ಮಹತ್ವದ ತೀರ್ಮಾನಗಳನ್ನು ತೆಗೆದುಕೊಳ್ಳಲಾಗಿದೆ.

• ಶತಾಬ್ದಿ: ಐಷಾರಾಮಿ ಸೌಲಭ್ಯ

ಚೆನ್ನೈ, ಸೆಪ್ಟೆಂಬರ್ 22 (ಪಿಟಿಐ)– ಚೆನ್ನೈ–ಬೆಂಗಳೂರು–ಮೈಸೂರು ಮಧ್ಯೆ ಸಂಚರಿಸುವ ಶತಾಬ್ದಿ ಎಕ್ಸ್‌ಪ್ರೆಸ್ ರೈಲಿನಲ್ಲಿ ‘ಎಕ್ಸಿಕ್ಯುಟೀವ್ ಚೇರ್ ಕಾರ್’ ಸೌಲಭ್ಯ ಅಳವಡಿಸಲಾಗುತ್ತಿದೆ. ಈ ಐಷಾರಾಮಿ ಸೌಲಭ್ಯವು ಅಕ್ಟೋಬರ್ 2ರಿಂದ ಜಾರಿಗೆ ಬರಲಿದೆ.

ಉದ್ಯಮಿಗಳಿಗಾಗಿ ಈ ಸೌಲಭ್ಯ ಅಳವಡಿಸಲಾಗುತ್ತಿದೆ ಎಂದು ದಕ್ಷಿಣ ರೈಲ್ವೆ ತಿಳಿಸಿದೆ.

75 ವರ್ಷಗಳ ಹಿಂದೆ

ಶನಿವಾರ, 23-9-1950

• ಹಿಂದೂಸ್ತಾನ್ ಏರ್‌ಕ್ರಾಫ್ಟ್ ನೌಕರರ ಪ್ರತಿಭಟನೆ

ಬೆಂಗಳೂರು, ಸೆಪ್ಟೆಂಬರ್ 22– ಹಿಂದೂಸ್ತಾನ್ ಏರ್‌ಕ್ರಾಫ್ಟ್ ನೌಕರರು ನಡೆಸುತ್ತಿರುವ ಪ್ರತಿಭಟನೆಯು ಅಸಾಂವಿಧಾನಿಕವಾದುದು ಎಂದು ಕಂಪನಿಯ ಹಂಗಾಮಿ ಪ್ರಧಾನ ವ್ಯವಸ್ಥಾಪಕ ರಾಮಕೃಷ್ಣ ಹೇಳಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನೌಕರರು ನಡೆಸುತ್ತಿರುವ ಹೋರಾಟವನ್ನು ಆಡಳಿತ ಮಂಡಳಿಯು ಪರಿಶೀಲನೆ ನಡೆಸಿದೆ. ಅಸಾಂವಿಧಾನಿಕ ಚಟುವಟಿಕೆಯಲ್ಲಿ ನಿರತ ನೌಕರರ ವಿರುದ್ಧ ಶಿಸ್ತುಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಚುರುಮುರಿ

ಜಾತಿರತ್ನಗಳು

• ಡಿ.ಎಸ್. ಲಿಂಗರಾಜು

‘ನಮಸ್ಕಾರ ಸಾ. ನಾವು ಜಾತಿಗಣತೀಗೆ ಬಂದುದವಿ. ಒಂದಷ್ಟು ಪ್ರಶ್ನೆಗೆ ಉತ್ತರ ಕೊಡಿ. ನಿಮ್ದು ಯಾವ ಜಾತಿ ಸಾ?’

‘ನಾನೂ ಅಡ್ಬಿದ್ದೆ. ನಮ್ಮ ಜಾತಿರತ್ನಗಳಾದ ಸ್ವಾಮಿಗೋಳು, ನಾಯಕರು ಹೇಳಿದ್ದೇ ದಿಟವಾದ ಕೋಡು. ಅದ್ನೇ ಬರ್ಕಳಿ. ಎಲ್ಲಾ ಅನುಕೂಲ ಅವರಿಗೆ. ನಮಗೆ ನಾಯಿಕೆಮ್ಮಲು’.

‘ಶಿಕ್ಷಣ, ಆದಾಯ ಎಷ್ಟು ಸಾ?’

‘ಎರಡೆಮ್ಮೆ ಕಟ್ಟಿದ್ದೆ ಕಪ್ಪಾ. ಎರಡೂ ಬರ್ಕತ್ತಾಗಲಿಲ್ಲ. ಪಿಂಚಣಿ ಟೈಮಾದ್ರೂ ಇನ್ನೂ ಅತಿಥಿ ಉಪನ್ಯಾಸಕನಾಗಿವ್ನಿ. ಆರು ತಿಂಗಳಿಗೊಂದ್ಸಾರಿ ಗೌರವಧನದ ಕಾಸು ಬತ್ತದೆ ಕಯ್ಯಾ’.

‘ವೋಟರ್ ಐಡಿ ಅದಾ ಸಾ?’

‘ನೀನು ದಿಗಿಲಿಕ್ಕಿಸಬ್ಯಾಡ ಸುಮ್ಮಗಿರಪ್ಪೋ. ಐಡಿ ಏನೋ ಅದೆ. ಆದ್ರೆ ಮತವೇ ಕದ್ದುಕೋಗವ್ರಂತಲ್ಲ?’

‘ಅಂಗವೈಕಲ್ಯ?’

‘ಕ್ರೇಟರ್ ಬೆಂಗಳೂರು ಗುಂಡಿಯಿಂದ ರಸ್ತೆ ವೈಕಲ್ಯವಾಗಿ ಸೊಂಟ ಉಳುಕ್ಯದೆ. ನಾಯಕರು ರೋಡು ಇರೋದೇ ಹಿಂಗೆ, ಇರೋದಾದ್ರೆ ಇರ್ರಿ ಹೋಗೋದಾದ್ರೆ ಹೋಗ್ರಿ ಅಂದವ್ರೆ’.

‘ಮನೆ ಸ್ವಂತದ್ದಾ ಸಾ?’

‘ಬಾಡಿಗೇದು ಕಯ್ಯಾ. ಸ್ವಂತ ಮನೆ ಕಟ್ಟಿವ್ನಿ. ಆದರೆ ಓಸಿ, ಸಿಸಿ ಇಲ್ಲ ಅಂತ ಸರ್ಕಾರ ಕರಂಟು, ನೀರು ಕೊಟ್ಟಿಲ್ಲ. ಬಾಡಿಗೆ ಮನೇಲೂವೆ ವಿದ್ಯುತ್ತು, ನೀರಿಂದೇ ತೊಂದ್ರೆ ಕಯ್ಯಾ’.

‘ನಿಮ್ಮದು ಜಮೀನು ಎಷ್ಟದೆ ಸಾ?’

‘ಮಾಡೋರಿಲ್ಲದೇ ಭೂಮಿ ಪಾಳು ಬಿದ್ದದೆ. ಕೂಲಿಕಾರರು ಗ್ಯಾರಂಟಿ ಮಜಾ ತಕ್ಕತಿರದ್ರಿಂದ ಕೆಲಸಕ್ಕೆ ಯಾರೂ ಬತ್ತಿಲ್ಲ’.

‘ಪಶುಪಾಲನೆ ಮಾಡ್ತಿದ್ದೀರಾ?’

‘ಮಗಳು ಹೆರಿಗೇಗೆ ಬಂದವ್ಳೆ. ಸದ್ಯಕ್ಕೆ ಶಿಶುಪಾಲನೆ ಮಾಡ್ತಿವ್ನಿ’.

‘ಸರ್ಕಾರದ ಯೋಜನೆಗಳೇನಾದ್ರೂ ಬಳಸಿಕ್ಯಂದಿದೀರಾ?’

‘ರೇಷನ್ ಕಾರ್ಡಿಲ್ಲ. ಬಿಪಿಎಲ್, ಎಪಿಎಲ್ಲಿನಲ್ಲೂ ನಾವಿಲ್ಲ’.

‘ಮನೇಲಿ ಏನೇನು ಉಪಕರಣಗಳವೆ ಸಾ?’

‘ಟೀವಿ, ಫ್ರಿಜ್ಜು, ಕಂಪ್ಯೂಟರು, ಮೊಬೈಲು, ಸ್ಕೂಟರು ಎಲ್ಲಾನೂ ಸಾಲದ ಕಂತಲ್ಲಿ ತಂದಿರೋ ಕಂತುಪಿತ ಕನಪ್ಪಾ ನಾನು’.

ಸಂಗತ

‘ಆತ್ಮನಿರ್ಭರ’ದಲ್ಲಿ ಗಾಂಧಿಬೋಧೆ ಇದೆಯೆ?

ಮೋದಿ ಪ್ರತಿಪಾದಿಸುತ್ತಿರುವ ‘ಆತ್ಮನಿರ್ಭರ ಭಾರತ’ ಹಾಗೂ ಗಾಂಧಿಯ ‘ಸ್ವದೇಶಿ’ ಪರಿಕಲ್ಪನೆ ಮೇಲ್ನೋಟಕ್ಕೆ ಒಂದೇ ರೀತಿಯಾದರೂ ಆಳದಲ್ಲಿ ಸಂಪೂರ್ಣ ಭಿನ್ನ.

• ಪುರುಷೋತ್ತಮ ಬಿಳಿಮಲೆ

ಪ್ರಧಾನಿ ನರೇಂದ್ರ ಮೋದಿ ಅವರು, ‘ಆತ್ಮನಿರ್ಭರ ಭಾರತ’ದ (ಸ್ವದೇಶಿ ಪರಿಕಲ್ಪನೆ) ಬಗ್ಗೆ ಹೆಚ್ಚು ಒತ್ತು ಕೊಟ್ಟು ಮಾತನಾಡುತ್ತಿದ್ದಾರೆ. ದೇಶೀಯತೆ ಅಥವಾ ಸ್ವದೇಶಿ ಪರಿಕಲ್ಪನೆ ಬಗ್ಗೆ ಬಲಪಂಥೀಯರು ಹೀಗೆ ಮಾತನಾಡುವುದು ಹೊಸತೇನಲ್ಲ. ಆದರೆ, ಅಧಿಕಾರಕ್ಕೆ ಏರಿದಾಗ ಇವರೆಲ್ಲ ಹೇಗೆ ಬಂಡವಾಳಶಾಹಿಗಳ ಪರವಾಗಿ ನಿಲ್ಲುತ್ತಾರೆ ಎಂಬುದನ್ನು ನಾವು ಸ್ಪಷ್ಟವಾಗಿ ಕಂಡಿದ್ದೇವೆ. ಅದಾನಿ, ಅಂಬಾನಿ ಮೊದಲಾದ ಬಂಡವಾಳಶಾಹಿಗಳನ್ನೂ ಹಾಗೂ ಅಮೆರಿಕದಂಥ ಬಂಡವಾಳಶಾಹಿ ದೇಶವನ್ನು ಬಗಲಲ್ಲಿ ಇರಿಸಿಕೊಂಡು ಇವರೆಲ್ಲ ಹೇಳುತ್ತಿರುವ ಸ್ವದೇಶಿಪರ ಮಾತುಗಳು ಎಷ್ಟು ಪೊಳ್ಳು ಎಂಬುದು ಖಚಿತವಾಗಬೇಕಾದರೆ ಇವರ ಆಡಳಿತ ವಿಧಾನಗಳನ್ನು, ಮಹಾತ್ಮ ಗಾಂಧೀಜಿ ಪ್ರತಿಪಾದಿಸಿದ ಸ್ವರಾಜ್ಯದ ಪರಿಕಲ್ಪನೆಯೊಂದಿಗೆ ಹೋಲಿಸಿ ನೋಡಬೇಕು. ಗಾಂಧಿಯನ್ನು ವಿರೋಧಿಸಿದವರಿಗೆ ‘ಸ್ವದೇಶಿ ಪರಿಕಲ್ಪನೆ’ ಅರ್ಥವಾಗಲಾರದು.

ಗಾಂಧೀಜಿಯವರ ‘ಸ್ವದೇಶಿ ಚಳವಳಿ’ಗೆ ಬ್ರಿಟಿಷ್ ಉತ್ಪನ್ನಗಳನ್ನು ಬಹಿಷ್ಕರಿಸಿ, ಸ್ಥಳೀಯವಾಗಿ ತಯಾರಿಸಿದ ವಸ್ತುಗಳನ್ನು ಬಳಸುವುದರ ಮೂಲಕ ದೇಶೀಯ ಆರ್ಥಿಕತೆಯನ್ನು ಬಲಪಡಿಸುವ ಸ್ಪಷ್ಟವಾದ ಗುರಿಯಿತ್ತು. ಇದಕ್ಕೆ ಪೂರಕವಾಗಿ, ಗಾಂಧೀಜಿ ಖಾದಿ ಮತ್ತು ನೂಲುವಿಕೆಯನ್ನು ಪ್ರತಿಪಾದಿಸಿದರು. ಈ ಪ್ರಕ್ರಿಯೆ ಸ್ವಯಂ ಆಡಳಿತಕ್ಕೆ (ಸ್ವರಾಜ್ಯ) ಅತ್ಯಗತ್ಯ ಎಂದು ಅವರು ನಂಬಿದ್ದರು.

ಬ್ರಿಟಿಷ್ ಆರ್ಥಿಕತೆಯನ್ನು ದುರ್ಬಲಗೊಳಿಸುವುದು, ದೇಶೀಯ ಉದ್ಯಮಗಳ ಉತ್ತೇಜನದ ಮೂಲಕ ಸ್ವಾವಲಂಬನೆಯನ್ನು ಬೆಳೆಸುವುದು, ಖಾದಿ ಧರಿಸುವುದು, ಎಲ್ಲರಿಗೂ ನೂಲುವಿಕೆ ಸಾಧ್ಯವಾಗುವಂಥ ಸರಳ ಸೂತ್ರಗಳ ಮೂಲಕ ದೇಶದ ಜನರನ್ನು ಒಗ್ಗೂಡಿಸುವುದು ಇತ್ಯಾದಿ ಗಾಂಧೀಜಿಯ ಯೋಜನೆಗಳಾಗಿದ್ದವು. ಇದರಿಂದ ಬ್ರಿಟಿಷ್ ಉತ್ಪನ್ನಗಳ ಮಾರಾಟ ಕುಸಿಯಿತು. ಭಾರತೀಯ ಸಮಾಜದ ಎಲ್ಲಾ ವರ್ಗದ ಜನರು, ಮುಖ್ಯವಾಗಿ ವಿದ್ಯಾರ್ಥಿಗಳು ಮತ್ತು ಮಹಿಳೆಯರು ಸ್ವದೇಶಿ ಚಳವಳಿಗೆ ಧುಮುಕಿದರು. ಪರಿಣಾಮವಾಗಿ, ಭಾರತದ ರಾಷ್ಟ್ರೀಯ ಘನತೆ ಮತ್ತು ಆತ್ಮವಿಶ್ವಾಸ ಹೆಚ್ಚಿತು.

ಮಹಾತ್ಮ ಗಾಂಧಿ ಅವರು ಬಳಸಿದ ಸ್ವದೇಶಿ (ಭಾರತೀಯತೆ) ಪದವನ್ನು ಹಿಂದುತ್ವದ ಸಿದ್ಧಾಂತಿಗಳೂ ಬಳಸುತ್ತಾರೆ. ಆದರೆ, ಗಾಂಧೀಜಿಯ ಸ್ವರಾಜ್ಯದ ಕಲ್ಪನೆ ಮತ್ತು ಹಿಂದುತ್ವವಾದಿಗಳ ದೇಶೀಯತೆ ಅಥವಾ ಭಾರತೀಯತೆಯ ಕಲ್ಪನೆ ಒಂದೇ ಅಲ್ಲ ಎಂಬುದನ್ನು ಮರೆಯಬಾರದು. ಅದು ಒಂದೇ ಆಗಿದ್ದರೆ ಹಿಂದುತ್ವವಾದಿಗಳು ಗಾಂಧಿಯನ್ನು ಈ ಪರಿ ದ್ವೇಷಿಸುತ್ತಿರಲಿಲ್ಲ. ಗಾಂಧಿಯವರು ಸ್ವದೇಶಿ ಚಳವಳಿಯನ್ನು ಜನರಲ್ಲಿ ದೇಶಭಕ್ತಿಯನ್ನು ತುಂಬುವ ಸಾಧನವಾಗಿ ಬಳಸಿದರು. ಆದರೆ, ಹಿಂದುತ್ವವಾದಿಗಳು ರಾಷ್ಟ್ರೀಯತೆ ಹೆಸರಲ್ಲಿ ಹಿಂದೂಗಳಲ್ಲದವರ ವಿರುದ್ಧ ದ್ವೇಷ ಸಾರಲು ಭಾರತೀಯತೆಯನ್ನು ಉಪಯೋಗಿಸುತ್ತಾರೆ. ಗಾಂಧೀಜಿಯವರಿಗೆ ಸ್ವದೇಶಿ ಎಂದರೆ ದೇಶದ ಚೈತನ್ಯ. ಆದರೆ, ಹಿಂದುತ್ವವಾದಿಗಳಿಗೆ ಸ್ವದೇಶಿ ಎನ್ನುವುದು ದೇಶದೊಳಗಿನ ಜನರನ್ನು ಪರಸ್ಪರ ಎತ್ತಿಕಟ್ಟಲು ಒಂದು ಅಸ್ತ್ರ. ದ್ವೇಷವೇ ಅವರ ಭಾಷೆ.

ಗಾಂಧೀಜಿ ವಿದೇಶಿ ಉತ್ಪನ್ನಗಳನ್ನು ಬಳಸಲು ನಿರಾಕರಿಸಿದ್ದು ಅವರ ವಿರುದ್ಧ ಸೇಡು ತೀರಿಸಿಕೊಳ್ಳುವ ಕಾರಣಕ್ಕಿಂತ ಹೆಚ್ಚಾಗಿ ತಾಯ್ನಾಡಿನ ಮೇಲಿನ ಬದ್ಧತೆಯ ಕಾರಣದಿಂದ. ಗಾಂಧಿಯವರ ಸ್ವದೇಶಿ ಯೋಜನೆ ಹಿಂದೂ ರಾಷ್ಟ್ರೀಯವಾದಿಗಳಂತೆ ದುರಭಿಮಾನದಿಂದ ಕೂಡಿರಲಿಲ್ಲ. ಅಲ್ಲಿ ದ್ವೇಷಭಾಷೆಯೂ ಇರಲಿಲ್ಲ. ಭಾರತದ ಬಡವರ ಹಿತಾಸಕ್ತಿಗೆ ವಿರುದ್ಧವಾದ ಉತ್ಪನ್ನಗಳನ್ನು ನಿರಾಕರಿಸುವುದು ಗಾಂಧಿಯವರ ನೀತಿಯಾದರೆ, ಹಿಂದುತ್ವವಾದಿಗಳು ಸ್ವದೇಶಿ ಹೆಸರಿನಲ್ಲಿ ಶ್ರೀಮಂತ ಹಿಂದೂ ಕಾರ್ಪೊರೇಟ್‌ಗಳನ್ನು ಬೆಂಬಲಿಸುತ್ತಾರೆ.

ಸ್ವದೇಶಿ ಚಳವಳಿಯ ಭಾಗವಾಗಿ ಗಾಂಧೀಜಿ ಅಸಹಕಾರ ಚಳವಳಿಯನ್ನು ಬೆಳೆಸಿದರು. ಆ ಚಳವಳಿಯನ್ನು ‘ಸಂವಿಧಾನಬಾಹಿರ’ ಎಂದು ಕರೆದವರ ವಿರುದ್ಧ ಗಾಂಧಿಯವರು ‘ಇದು ನ್ಯಾಯಯುತ ಮತ್ತು ಧಾರ್ಮಿಕ ಸಿದ್ಧಾಂತವನ್ನು ಆಧರಿಸಿದೆ’ ಎಂದು ವಾದಿಸಿದರು. ‘ಅನ್ಯಾಯದ ಸರ್ಕಾರದೊಂದಿಗೆ ಸಹಕರಿಸದಿರುವುದು ಪ್ರತಿಯೊಬ್ಬ ಮನುಷ್ಯನ ಅಂತರ್ಗತ ಹಕ್ಕು. ಅನ್ಯಾಯ ಮತ್ತು ನ್ಯಾಯದ ನಡುವೆ, ಸತ್ಯ ಮತ್ತು ಅಸತ್ಯದ ನಡುವೆ ಯಾವುದೇ ಸಹಕಾರ ಇರಬಾರದು’ ಎಂದು ಗಾಂಧೀಜಿ ವಾದಿಸಿದರೆ, ಹಿಂದುತ್ವವಾದಿಗಳ ಆಡಳಿತ ಚಳವಳಿಗಳನ್ನು ನ್ಯಾಯಬಾಹಿರ ಎಂದು ಘೋಷಿಸಿ, ಅನೇಕರನ್ನು ಜೈಲಿಗೆ ತಳ್ಳಿದೆ.

‘ಸರ್ಕಾರವು ತಮ್ಮ ಗೌರವವನ್ನು ಕಸಿದುಕೊಂಡಾಗ ವಿರೋಧಿಸುವುದು ನಾಗರಿಕರ ಹಕ್ಕು’ ಎಂದು ಗಾಂಧೀಜಿ ವಾದಿಸಿದರೆ, ಹಿಂದುತ್ವವಾದಿಗಳು ಜನರು ಪ್ರತಿಭಟಿಸುವುದನ್ನು ಒಪ್ಪುವುದೇ ಇಲ್ಲ. ಮತಕಳ್ಳತನದ ಬಗ್ಗೆ ದನಿಯೆತ್ತಿದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರೇ ಜೈಲಿಗೆ ಹೋಗಬೇಕೆಂದು ವಾದಿಸುವ ಅವರು, ಚುನಾವಣಾ ಆಯೋಗದ ಬಗ್ಗೆ ಮೌನವಾಗಿರುತ್ತಾರೆ. ಈ ಎಲ್ಲ ಹಿನ್ನೆಲೆಯಲ್ಲಿ ಮಾನ್ಯ ಪ್ರಧಾನಿಗಳು ಪ್ರತಿಪಾದಿಸುವ ‘ಆತ್ಮನಿರ್ಭರ ಭಾರತ’ದ ಪರಿಕಲ್ಪನೆಯನ್ನು ಗಾಂಧೀಜಿಯ ‘ಸ್ವರಾಜ್ಯ’ದ ಪರಿಕಲ್ಪನೆಯಿಂದ ದೂರ ಇರಿಸಿ ನೋಡಬೇಕಾದ್ದು ಅಗತ್ಯ.

ಈ ಹೊತ್ತಿನ ‘ಆತ್ಮನಿರ್ಭರ ಭಾರತ’ದ ಪರಿಕಲ್ಪನೆ ಒಂದು ಘೋಷಣೆಯಾಗಿಯಷ್ಟೇ ಚಾಲ್ತಿಯಲ್ಲಿದೆ. ಆದರೆ, ಮಹಾತ್ಮ ಪ್ರತಿಪಾದಿಸಿದ ‘ಸ್ವದೇಶಿ ಚಿಂತನೆ’ ಘೋಷಣೆಯಾಗಿಯಷ್ಟೇ ಉಳಿಯದೆ, ಗಾಂಧೀಜಿ ಹಾಗೂ ಅವರ ಅನುಯಾಯಿಗಳ ಜೀವನವಿಧಾನವೂ ಆಗಿತ್ತು. ಗಾಂಧೀಜಿ ಅವರ ಆಶ್ರಮಗಳು ಸ್ವದೇಶಿ ಚಿಂತನೆಗಳ ಪ್ರಯೋಗಶಾಲೆಗಳೂ ಆಗಿದ್ದವು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕುರುಬ ಸಮುದಾಯವನ್ನು ಪರಿಶಿಷ್ಟ ಪಂಗಡ ಪಟ್ಟಿಗೆ ಸೇರಿಸುವ ಪ್ರಸ್ತಾವ

ಎಸ್‌ಟಿ ಸ್ಥಾನಮಾನ ಪ್ರಕ್ರಿಯೆ ಹೇಗೆ?

ಕುರುಬ ಸಮುದಾಯವನ್ನು ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸಲು 2023ರಲ್ಲಿ ಕೇಂದ್ರಕ್ಕೆ ಶಿಫಾರಸು ಮಾಡಿದ್ದ ರಾಜ್ಯ ಸರ್ಕಾರವು, ಈ ಸಂಬಂಧ ಮತ್ತೊಮ್ಮೆ ಕೇಂದ್ರಕ್ಕೆ ಪ್ರಸ್ತಾವ ಸಲ್ಲಿಸಲು ಚಿಂತನೆ ನಡೆಸುತ್ತಿದೆ. ಬೀದರ್, ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯ ಕುರುಬರು ಗೊಂಡ ಬುಡಕಟ್ಟಿನೊಂದಿಗೆ ಹೊಂದಿರುವ ಸಾಮ್ಯತೆಯನ್ನು ಗುರುತಿಸುವ, ಅದರ ಆಧಾರದಲ್ಲಿ ಕುರುಬರನ್ನು ಎಸ್‌ಟಿ ಪಟ್ಟಿಗೆ ಸೇರಿಸುವ ಬಗ್ಗೆಯೂ ಸರ್ಕಾರ ಪ್ರಯತ್ನ ನಡೆಸುತ್ತಿದೆ. ಯಾವುದೇ ಜಾತಿಯನ್ನು ಎಸ್‌ಟಿ ಪಟ್ಟಿಗೆ ಸೇರಿಸಲು ಇಲ್ಲವೇ ಪಟ್ಟಿಯಿಂದ ತೆಗೆಯಲು ದೀರ್ಘ ಪ್ರಕ್ರಿಯೆಯನ್ನು ಅನುಸರಿಸಬೇಕಾಗುತ್ತದೆ; ರಾಷ್ಟ್ರಪತಿಯವರ 1950ರ ಸಾಂವಿಧಾನಿಕ ಆದೇಶವನ್ನು ತಿದ್ದುಪಡಿ ಮಾಡಬೇಕಾಗುತ್ತದೆ. ಈ ಪ್ರಕ್ರಿಯೆಯಲ್ಲಿ ಕೇಂದ್ರ ಸರ್ಕಾರದ ಪಾತ್ರವು ನಿರ್ಣಾಯಕವಾಗಿರುತ್ತದೆ

ಪ್ರಜಾವಾಣಿ ವಾರ್ತೆ

- **ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿರುವ ಸಮುದಾಯಗಳ ಸಾಮಾಜಿಕ ನೆಲೆ ಏನು?**

ಸಂವಿಧಾನದ 342ನೇ ವಿಧಿಯ ಅನ್ವಯ ಪರಿಶಿಷ್ಟ ಪಂಗಡವನ್ನು ರೂಪಿಸಲಾಗಿದ್ದು, ಪ್ರಸ್ತುತ ರಾಜ್ಯದ ಈ ಪಟ್ಟಿಯಲ್ಲಿ 50 ಜಾತಿಗಳು ಸ್ಥಾನ ಪಡೆದಿವೆ. ಶ್ರೇಣೀಕೃತ ಜಾತಿ ವ್ಯವಸ್ಥೆಯಲ್ಲಿ ಪರಿಶಿಷ್ಟ ಜಾತಿಗಳಂತೆಯೇ (ಎಸ್‌ಸಿ) ಪರಿಶಿಷ್ಟ ಪಂಗಡಗಳೂ (ಎಸ್‌ಟಿ) ಸಾಮಾಜಿಕವಾಗಿ, ಆರ್ಥಿಕವಾಗಿ ಸವಲತ್ತುಗಳಿಂದ ವಂಚಿತವಾಗಿದ್ದು, ಆ ಸಮುದಾಯಗಳನ್ನು ಸಶಕ್ತಗೊಳಿಸುವ ದಿಸೆಯಲ್ಲಿ ಹಲವು ಕ್ರಮಗಳನ್ನು ಅನುಸರಿಸಲಾಗುತ್ತಿದೆ. ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ಎಸ್‌ಸಿಗಳಂತೆ ಎಸ್‌ಟಿ ಸಮುದಾಯಗಳಿಗೂ ಮೀಸಲಾತಿ ಸೌಲಭ್ಯ ಕಲ್ಪಿಸಿರುವುದು ಅದರಲ್ಲಿ ಪ್ರಮುಖವಾದುದು.

- **ಸಂವಿಧಾನ ಏನು ಹೇಳುತ್ತದೆ?**

ಸಂವಿಧಾನದ 342ನೇ ವಿಧಿಯು ಯಾವುದೇ ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶದಲ್ಲಿ ಅಲ್ಲಿನ ರಾಜ್ಯಪಾಲರ ಸಲಹೆ ಪಡೆದು ನಿರ್ದಿಷ್ಟ ಸಮುದಾಯ ಅಥವಾ ಜಾತಿಯನ್ನು ಪರಿಶಿಷ್ಟ ಪಂಗಡ ಎಂದು ಅಧಿಸೂಚನೆ ಹೊರಡಿಸುವ ಅಧಿಕಾರವನ್ನು ರಾಷ್ಟ್ರಪತಿಯವರಿಗೆ ನೀಡುತ್ತದೆ.

ಸಂವಿಧಾನದ 366ನೇ ವಿಧಿಯ 25ನೇ ಕಲಂ ಪರಿಶಿಷ್ಟ ಪಂಗಡಕ್ಕೆ ಸೇರಿದವರು ಯಾರು ಎಂಬುದನ್ನು ವಿವರಿಸುವಾಗ, ಸಂವಿಧಾನದ 342ನೇ ವಿಧಿಯನ್ನೇ ಉಲ್ಲೇಖಿಸುತ್ತದೆ. ಎಸ್‌ಟಿ ಎಂದು ಗುರುತಿಸಲಾದ ಎಲ್ಲ ಸಮುದಾಯಗಳನ್ನು 1950ರ ರಾಷ್ಟ್ರಪತಿಯವರ (ಪರಿಶಿಷ್ಟ ಪಂಗಡಗಳು) ಆದೇಶದಲ್ಲಿ ಪಟ್ಟಿ ಮಾಡಲಾಗಿದೆ. ಈ ಸಮುದಾಯಗಳನ್ನು ಪರಿಶಿಷ್ಟ ಪಂಗಡಕ್ಕೆ ಸೇರಿದವು ಎಂದು ಸಂವಿಧಾನದ ಪ್ರಕಾರವೇ ಪರಿಗಣಿಸಲಾಗುತ್ತದೆ.

ಸಂಸತ್ತು, ಹೊಸ ಕಾನೂನು ರೂಪಿಸುವುದರ ಮೂಲಕ ಪರಿಶಿಷ್ಟ ವರ್ಗಗಳ ವ್ಯಾಪ್ತಿಗೆ ಹೊಸ ಜಾತಿಯನ್ನು ಸೇರಿಸಬಹುದು ಇಲ್ಲವೇ, ಜಾತಿ ಹೆಸರನ್ನು ತೆಗೆದು ಹಾಕಬಹುದು.

- **ಎಸ್‌ಟಿ ಪಟ್ಟಿ ಸೇರ್ಪಡೆಗೆ ಮಾನದಂಡವೇನು?**

ದೇಶದಲ್ಲಿ 1931ರಲ್ಲಿ ನಡೆದಿದ್ದ ಕೊನೆಯ ಜಾತಿಗಣತಿಯಲ್ಲಿ 'ಆದಿವಾಸಿ ಬುಡಕಟ್ಟು' (ಪ್ರಿಮಿಟಿವ್ ಟ್ರೈಬ್ಸ್) ಸಮುದಾಯಗಳನ್ನು ಪಟ್ಟಿ ಮಾಡಲಾಗಿತ್ತು. ನಂತರ 1935ರ ಭಾರತ ಸರ್ಕಾರ ಕಾಯ್ದೆಯಲ್ಲಿ 'ಹಿಂದುಳಿದ ಬುಡಕಟ್ಟು' ಸಮುದಾಯಗಳ ಪಟ್ಟಿಯನ್ನು ರೂಪಿಸಿ, ಎಸ್‌ಟಿ ಜಾತಿಗಳ ಪಟ್ಟಿಗೆ ಸೇರ್ಪಡೆಗೊಳಿಸಲಾಗಿತ್ತು. ದೇಶದ ಸಂವಿಧಾನವು ನಿರ್ದಿಷ್ಟ ಸಮುದಾಯವನ್ನು ಎಸ್‌ಟಿ ಎಂದು ಗುರುತಿಸುವ ಮಾನದಂಡವನ್ನು ವ್ಯಾಖ್ಯಾನಿಸದೇ ಇರುವುದರಿಂದ 1950ರ ರಾಷ್ಟ್ರಪತಿಯವರ ಸಾಂವಿಧಾನಿಕ ಆದೇಶವನ್ನೇ ಪರಿಗಣಿಸಲಾಗುತ್ತದೆ.

1950ರ ಆದೇಶದಲ್ಲಿ ಪರಿಶಿಷ್ಟ ಪಂಗಡಗಳ ಅಡಿಯಲ್ಲಿ ಬರುವ ಜಾತಿಗಳನ್ನು ಪಟ್ಟಿ ಮಾಡುವಾಗ ಸಮುದಾಯಗಳ ಆದಿಮ ಸ್ವರೂಪ ಮತ್ತು ತೀರಾ ಹಿಂದುಳಿದಿರುವಿಕೆ– ಈ ಎರಡು ಅಂಶಗಳನ್ನು ಪ್ರಮುಖವಾಗಿ ಪರಿಗಣಿಸಲಾಗಿತ್ತು. ಪರಿಶಿಷ್ಟ ಜಾತಿಗಳಂತೆ ಪರಿಶಿಷ್ಟ ವರ್ಗಗಳ ಅಡಿಯಲ್ಲಿ ಬರುವ ಸಮುದಾಯಗಳು ಧರ್ಮ ಆಧಾರಿತವಲ್ಲ.

- **ಪರಿಶಿಷ್ಟ ಪಂಗಡದ ಪಟ್ಟಿ ಸೇರ್ಪಡೆಯ ಮಾನದಂಡ ಬದಲಾಗಿರುವ ಇತಿಹಾಸವಿದೆಯೇ?**

1950 ಮತ್ತು 1960ರ ದಶಕಗಳಲ್ಲಿ ಭಾಷೆಗಳ ಆಧಾರದಲ್ಲಿ ಪ್ರತ್ಯೇಕ ರಾಜ್ಯಗಳನ್ನು ರೂಪುಗೊಳಿಸಲಾಯಿತು. ಪರಿಶಿಷ್ಟ ಪಂಗಡಗಳ ಪಟ್ಟಿಯಲ್ಲಿ ಹಲವು ರೀತಿಯ ವ್ಯತ್ಯಾಸಗಳು, ಸಮಸ್ಯೆಗಳು ಕಾಣಿಸಿಕೊಂಡವು. ಉದಾಹರಣೆಗೆ, ಬ್ರಿಟಿಷರ ಕಾಲದಲ್ಲಿ ಅಪರಾಧ ಬುಡಕಟ್ಟು ಎಂದು ಪರಿಗಣಿತವಾಗಿದ್ದ ಪಾರ್ಧಿ ಸಮುದಾಯವನ್ನು ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶದಲ್ಲಿ ಎಸ್‌ಟಿ ಪಟ್ಟಿಗೆ ಸೇರಿಸಲಾಗಿತ್ತು. ಆದರೆ, ಅದೇ ಸಮುದಾಯವನ್ನು ರಾಜಸ್ಥಾನದಲ್ಲಿ ಎಸ್‌ಸಿ ಪಟ್ಟಿಗೆ ಸೇರಿಸಲಾಗಿತ್ತು. ಈ ದಿಸೆಯಲ್ಲಿ ಕೇಂದ್ರ ಸರ್ಕಾರವು 1965ರಲ್ಲಿ ಆಗ ಕಾನೂನು ಕಾರ್ಯದರ್ಶಿಯಾಗಿದ್ದ ಪಿ.ಬಿ.ಲೋಕೂರ್ ಅವರ ನೇತೃತ್ವದಲ್ಲಿ ಸಮಿತಿ ರಚಿಸಿ, ಪರಿಶಿಷ್ಟ ಪಂಗಡ ಎನ್ನುವುದನ್ನು ಸೂಕ್ತವಾಗಿ ವ್ಯಾಖ್ಯಾನಿಸಲು, ಎಸ್‌ಟಿ ಪಟ್ಟಿಯಲ್ಲಿ ಜಾತಿಗಳನ್ನು ಸೇರಿಸಲು ಮಾನದಂಡಗಳನ್ನು ನಿಗದಿಪಡಿಸುವಂತೆ ಸೂಚಿಸಿತು.

- **ಎಸ್‌ಟಿ ಪಟ್ಟಿಯಲ್ಲಿ ಬದಲಾವಣೆ ಮಾಡಲು ಯಾವ ಪ್ರಕ್ರಿಯೆಯನ್ನು ಅನುಸರಿಸಬೇಕು?**

ಪರಿಶಿಷ್ಟ ಪಂಗಡಕ್ಕೆ ಸಂಬಂಧಿಸಿದ ರಾಷ್ಟ್ರಪತಿಯವರ 1950ರ ಆದೇಶವನ್ನು ಬದಲಾಯಿಸಿ, ನಿರ್ದಿಷ್ಟ ಜಾತಿಯನ್ನು ಪಟ್ಟಿಗೆ ಸೇರಿಸುವಂತೆ ಅಥವಾ ನಿರ್ದಿಷ್ಟ ಜಾತಿಯನ್ನು ಪಟ್ಟಿಯಿಂದ ಕೈಬಿಡುವಂತೆ ಪ್ರಸ್ತಾವವನ್ನು ಕೇಂದ್ರ ಬುಡಕಟ್ಟು ವ್ಯವಹಾರಗಳ ಸಚಿವಾಲಯಕ್ಕೆ ಕಳುಹಿಸಲಾಗುತ್ತದೆ. ನಂತರ, ಆ ಪ್ರಸ್ತಾವವನ್ನು ಪರಿಶಿಷ್ಟ ಪಂಗಡಗಳ ರಾಷ್ಟ್ರೀಯ ಆಯೋಗ ಮತ್ತು ರಿಜಿಸ್ಟ್ರಾರ್ ಜನರಲ್ ಆಫ್ ಇಂಡಿಯಾಕ್ಕೆ (ಆರ್‌ಜಿಐ) ಕಳುಹಿಸಿ, ಅವರ ಅಭಿಪ್ರಾಯ ಮತ್ತು ಸಲಹೆ ಕೇಳಲಾಗುತ್ತದೆ. ಆರ್‌ಜಿಐನವರು ಆಂಥ್ರೊಪೊಲಾಜಿಕಲ್ ಸರ್ವೆ ಆಫ್ ಇಂಡಿಯಾ ಸೇರಿದಂತೆ ಹಲವು ಸಂಸ್ಥೆಗಳ, ತಜ್ಞರ ಅಭಿಪ್ರಾಯ ಪಡೆಯುತ್ತಾರೆ; ಪ್ರಸ್ತಾವವು ಲೋಕೂರ್ ಸಮಿತಿ ನಿಗದಿಪಡಿಸಿರುವ ಮಾನದಂಡಗಳಿಗೆ ಅನುಗುಣವಾಗಿದೆಯೇ ಎನ್ನುವುದನ್ನು ಪರಿಶೀಲಿಸುತ್ತಾರೆ.

- **ಎಸ್‌ಟಿ ಪಟ್ಟಿ ಬದಲಾವಣೆ ಮಾಡುವ ದಿಸೆಯಲ್ಲಿ ಲೋಕಸಭೆಯಲ್ಲಿ ಯಾವ ಪ್ರಕ್ರಿಯೆ ನಡೆಯುತ್ತದೆ?**

ಆರ್‌ಜಿಐ ಮತ್ತು ಪರಿಶಿಷ್ಟ ಪಂಗಡಗಳ ರಾಷ್ಟ್ರೀಯ ಆಯೋಗದ ಸಲಹೆಗಳ ಆಧಾರದಲ್ಲಿ ಪರಿಶಿಷ್ಟ ಪಂಗಡಗಳ ಪಟ್ಟಿಯನ್ನು ಬದಲಾಯಿಸುವ ದಿಸೆಯಲ್ಲಿ ತಿದ್ದುಪಡಿ ಮಸೂದೆಯನ್ನು ಸಂಸತ್‌ನಲ್ಲಿ ಮಂಡಿಸುತ್ತದೆ. ಆ ಮಸೂದೆಯು ವಿಶೇಷ ಬಹುಮತದೊಂದಿಗೆ ಸಂಸತ್‌ನ ಉಭಯ ಸದನಗಳಲ್ಲಿ ಅಂಗೀಕಾರವಾಗಬೇಕು; ಮೂರನೇ ಎರಡರಷ್ಟು ಸದಸ್ಯರು ಸದನದಲ್ಲಿ ಹಾಜರಿರಬೇಕು ಮತ್ತು ಮತ ಚಲಾಯಿಸಬೇಕು. ಆ ಸಂಖ್ಯೆಯು ಸಂಸತ್‌ನ ಒಟ್ಟು ಬಲದಲ್ಲಿ ಶೇ 50ಕ್ಕಿಂತ ಹೆಚ್ಚಿರಬೇಕು.

ಆಧಾರ: ಲೋಕೂರ್ ಸಮಿತಿಯ ವರದಿ, ಮಾಧ್ಯಮ ವರದಿಗಳು

ಕುರುಬ ಸಮುದಾಯದ ಬೇಡಿಕೆ

ಕುರುಬರನ್ನು ಎಸ್‌ಟಿ ಪಟ್ಟಿಗೆ ಸೇರಿಸಬೇಕು ಎನ್ನುವ ಒತ್ತಾಯ ಹಿಂದಿನಿಂದಲೂ ಕೇಳಿಬರುತ್ತಿದೆ. ಪ್ರಸ್ತುತ ಕುರುಬ ಸಮುದಾಯವು ಹಿಂದುಳಿದ 'ಎ' ಪಟ್ಟಿಯಲ್ಲಿದ್ದು, ಅದೇ ಪಟ್ಟಿಯಲ್ಲಿರುವ ಇತರೆ 102 ಜಾತಿಗಳೊಂದಿಗೆ ಶೇ 15ರ ಮೀಸಲಾತಿಯನ್ನು ಹಂಚಿಕೊಳ್ಳುತ್ತಿದೆ. ಕುರುಬ ಸಮುದಾಯವನ್ನು ಎಸ್‌ಟಿ ಪಟ್ಟಿಗೆ ಸೇರಿಸುವಂತೆ 2023ರಲ್ಲೇ ರಾಜ್ಯ ಸರ್ಕಾರವು ಕೇಂದ್ರಕ್ಕೆ ಶಿಫಾರಸು ಮಾಡಿತ್ತು. ಈ ಸಂಬಂಧ ಮೈಸೂರಿನ ಬುಡಕಟ್ಟು ಸಂಶೋಧನಾ ಸಂಸ್ಥೆ ನಡೆಸಿದ ಕುಲಶಾಸ್ತ್ರೀಯ ಅಧ್ಯಯನದ ವರದಿಯನ್ನೂ ಲಗತ್ತಿಸಲಾಗಿತ್ತು. ಆದರೆ, ಪ್ರಸ್ತಾವವನ್ನು ಕೇಂದ್ರವು ವಾಪಸ್ ಕಳುಹಿಸಿತ್ತು.

ಕುರುಬರು, ಭಾರತದ ಮೂಲನಿವಾಸಿಗಳಾಗಿದ್ದು, ಸಮುದಾಯವನ್ನು 1868 ಮತ್ತು 1901ರ ಜನಗಣತಿಯ ಸಂದರ್ಭದಲ್ಲಿ ಪರಿಶಿಷ್ಟ ಪಂಗಡ ಎಂದೇ ಗುರುತಿಸಲಾಗಿತ್ತು. ಸ್ವಾತಂತ್ರ್ಯಾನಂತರ ಪಟ್ಟಿಯಿಂದ ಕೈಬಿಡಲಾಗಿತ್ತು. ದೇವರಾಜ ಅರಸರು ಕಾಡು ಕುರುಬ ಮತ್ತು ಜೇನು ಕುರುಬರನ್ನು ಎಸ್‌ಟಿ ಪಟ್ಟಿಗೆ ಸೇರಿಸಿದರು. ಆಂಧ್ರಪ್ರದೇಶ ಮತ್ತು ತಮಿಳುನಾಡಿನಲ್ಲಿ ಕುರುಬರನ್ನು ಎಸ್‌ಟಿ ಎಂದು ಪರಿಗಣಿಸಲಾಗುತ್ತಿದೆ ಎನ್ನುವುದು ಸಮುದಾಯದ ಮುಖಂಡರ ವಾದ. ಆದರೆ, ಕುರುಬ ಸಮುದಾಯವನ್ನು ಎಸ್‌ಟಿ ಪಟ್ಟಿಗೆ ಸೇರಿಸುವುದಕ್ಕೆ ವಾಲ್ಮೀಕಿ ಮಹಾಸಭಾ ಸೇರಿದಂತೆ ಹಲವು ಸಂಘಟನೆಗಳು, ಸಮುದಾಯಗಳು ವಿರೋಧ ವ್ಯಕ್ತಪಡಿಸಿವೆ.

ಲೋಕೂರ್ ಸಮಿತಿಯ ವರದಿಯಲ್ಲೇನಿತ್ತು?

ಪರಿಶಿಷ್ಟ ಪಂಗಡಗಳ ವ್ಯಾಪ್ತಿಗೆ ಬರುವ ಸಮುದಾಯಗಳ ಪಟ್ಟಿಯನ್ನು ಪರಿಷ್ಕರಿಸುವುದಕ್ಕಾಗಿ ಸಮಿತಿಯು ಆದಿವಾಸಿಗಳ ಗುಣಲಕ್ಷಣಗಳನ್ನು ಹೊಂದಿರುವುದು, ವಿಭಿನ್ನ ಸಂಸ್ಕೃತಿ, ಭೌಗೋಳಿಕವಾಗಿ ಪ್ರತ್ಯೇಕವಾಗಿ ವಾಸ ಇರುವುದು, ಇತರ ಸಮುದಾಯಗಳೊಂದಿಗೆ ಸಂಪರ್ಕ ಸಾಧಿಸಲು ಮತ್ತು ಬೆರೆಯಲು ಸಂಕೋಚ ಪಡುವುದು ಮತ್ತು ತೀರಾ ಹಿಂದುಳಿದಿರುವಿಕೆಗಳನ್ನು ಪ್ರಮುಖ ಮಾನದಂಡಗಳನ್ನಾಗಿ ಪರಿಗಣಿಸಿತ್ತು. ಯಾವುದೇ ಬುಡಕಟ್ಟು ಸಮುದಾಯಕ್ಕೆ ಸೇರಿದ ಜನರು ಮುಖ್ಯವಾಹಿನಿ ಜನರೊಂದಿಗೆ ಬೆರೆತಿದ್ದರೆ, ಅಂತಹವರು ಪರಿಶಿಷ್ಟ ಪಂಗಡಗಳ ಪಟ್ಟಿಗೆ ಸೇರಲು ಅರ್ಹರಲ್ಲ ಎಂದೂ ಸಮಿತಿ ಪ್ರತಿಪಾದಿಸಿತ್ತು. 'ಕೆಲವು ರಾಜ್ಯಗಳಲ್ಲಿ ಒಂದೇ ಹೆಸರಿನ ಎರಡು ಭಿನ್ನ ಸಮುದಾಯಗಳಿವೆ. ಆದರೆ, ಅವುಗಳಲ್ಲಿ ಒಂದು ಸಮುದಾಯ ಮಾತ್ರ ಎಸ್‌ಟಿ ಪಟ್ಟಿಗೆ ಸೇರಲು ಅರ್ಹವಾಗಿರುವುದು ಕಂಡು ಬಂದಿದೆ. ಬುಡಕಟ್ಟು ಸಮುದಾಯಗಳಿಗೆ ಸೇರಿದ ಜನರು ರಾಜ್ಯವೊಂದರ ನಿರ್ದಿಷ್ಟ ಪ್ರದೇಶಗಳಲ್ಲಿ ನೆಲಸಿರುವ ಮತ್ತು ಅದೇ ಸಮುದಾಯದ ಮತ್ತೂ ಕೆಲವರು ರಾಜ್ಯದ ಉಳಿದ ಪ್ರದೇಶಗಳಲ್ಲಿ ವಾಸಿಸುತ್ತಿರುವ ಕೆಲವು ಉದಾಹರಣೆಗಳು ಕಂಡುಬಂದಿವೆ. ಇವರಲ್ಲಿ ನಿರ್ದಿಷ್ಟ ಪ್ರದೇಶಗಳಲ್ಲಿ ವಾಸಿಸುತ್ತಿರುವವರನ್ನು ಎಸ್‌ಟಿ ಪಟ್ಟಿಗೆ ಸೇರಿಸುವ ಅಗತ್ಯವಿದೆ. ಉಳಿದ ಕಡೆಗಳಲ್ಲಿ ನೆಲಸಿರುವವರು ಈ ಪಟ್ಟಿಗೆ ಸೇರುವ ಅರ್ಹತೆ ಪಡೆದಿಲ್ಲ' ಎಂದು ಸಮಿತಿಯು ತನ್ನ ವರದಿಯಲ್ಲಿ ತಿಳಿಸಿತ್ತು.

ಆದರೆ, ನಂತರದ ವರ್ಷಗಳಲ್ಲಿ ಕೇಂದ್ರ ಸರ್ಕಾರವು ಪಟ್ಟಿಗೆ ಜಾತಿಗಳನ್ನು ಸೇರ್ಪಡೆಯಾಗಲು ಅಥವಾ ಪಟ್ಟಿಯಿಂದ ತೆಗೆದು ಹಾಕಲು ಇರಬೇಕಾದ ವಿಧಾನಗಳನ್ನು ಬದಲಾಯಿಸಿತು.

ಅತ್ಯಲ್ಪ ಯಶಸ್ಸು

ಕರ್ನಾಟಕದಲ್ಲಿ ಹಲವು ಜಾತಿಗಳನ್ನು ಅವುಗಳ ಸ್ಥಿತಿಗತಿ ಆಧರಿಸಿ ಎಸ್‌ಟಿ ಪಟ್ಟಿಗೆ ಸೇರಿಸುವ ಸಂಬಂಧ ಹಿಂದಿನಿಂದಲೂ ಪ್ರಸ್ತಾವಗಳನ್ನು ಕಳುಹಿಸುವುದು ನಡೆದೇ ಇದೆ. ಕಾಡುಗೊಲ್ಲರನ್ನು ಎಸ್‌ಟಿ ಪಟ್ಟಿಗೆ ಸೇರಿಸಬೇಕೆನ್ನುವ ಬೇಡಿಕೆ ಬಹಳ ಕಾಲದಿಂದಲೂ ಇದೆ. ಈ ಸಂಬಂಧ ರಾಜ್ಯದಿಂದ ಹಿಂದೆಯೇ ಶಿಫಾರಸು ಮಾಡಲಾಗಿತ್ತು. ಇದೇ ರೀತಿ ಗಂಗಾಮತ ಮತ್ತು ಅದರ ಉಪಜಾತಿಗಾಳದ ಕೋಲಿ, ಕಬ್ಬಲಿಗ, ಬೆಸ್ತ, ಬಾರಿಕ, ಅಂಬಿಗ ಇವುಗಳನ್ನು ಎಸ್‌ಟಿ ಪಟ್ಟಿಗೆ ಸೇರಿಸಬೇಕು ಎನ್ನುವ ಒತ್ತಾಯ ಇದೆ. ಬಹಳ ಹಿಂದಿನಿಂದಲೂ ಈ ಬೇಡಿಕೆ ಇದ್ದು, ಮೂರು ಬಾರಿ ಶಿಫಾರಸು ಮಾಡಲಾಗಿತ್ತು. ಮೂರು ಬಾರಿಯೂ ಪ್ರಸ್ತಾವವನ್ನು ವಾಪಸ್ ಕಳುಹಿಸಲಾಗಿದೆ. ರಾಜ್ಯದ ಇಂಥ ಪ್ರಯತ್ನಗಳ ಪೈಕಿ ಯಶ ಕಂಡಿರುವುದು ಕೆಲವು ಮಾತ್ರ. ರಾಜ್ಯ ಸರ್ಕಾರದ ಶಿಫಾರಸು ಆಧರಿಸಿ ಮೇದಾರ, ತಳವಾರರನ್ನು ಎಸ್‌ಟಿ ಪಟ್ಟಿಗೆ ಸೇರಿಸಲಾಗಿದೆ. ಇದೇ ರೀತಿ ಕೆಲವು ಜಿಲ್ಲೆಗಳಲ್ಲಿರುವ ಸಿದ್ದಿ ಸಮುದಾಯವನ್ನೂ ಎಸ್‌ಟಿ ಪಟ್ಟಿಗೆ ಸೇರಿಸಲಾಗಿದೆ. ಆದರೆ, ರಾಜ್ಯದ ಪ್ರಯತ್ನಗಳಿಗೆ ಸಿಕ್ಕಿರುವ ಯಶಸ್ಸು ಅತ್ಯಲ್ಪ.

2025ರ ಸೆಪ್ಟೆಂಬರ್ 16ರಂದು ಕರೆದಿದ್ದ ಸಭೆಯಲ್ಲಿ ಕುರುಬರನ್ನು ಎಸ್‌ಟಿ ಪಟ್ಟಿಗೆ ಸೇರಿಸುವ ವಿಚಾರದ ಜತೆಗೆ ಗಂಗಾಮತಸ್ಥರನ್ನು ಎಸ್‌ಟಿ ಪಟ್ಟಿಗೆ ಸೇರಿಸುವ ಪ್ರಸ್ತಾವದ ಬಗ್ಗೆಯೂ ಚರ್ಚಿಸಬೇಕಾಗಿತ್ತು. ಆದರೆ, ನಂತರ ಆ ಸಭೆ ಮುಂದೂಡಲಾಯಿತು.

ರಾಷ್ಟ್ರೀಯ

'ಅಪರಾಧ ವ್ಯಾಪ್ತಿಯಿಂದ ಹೊರಗಿಡಬೇಕಿದೆ'

ನವದೆಹಲಿ: ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ (ಜೆಎನ್‌ಯು) ಮಾಜಿ ಪ್ರಾಧ್ಯಾಪಕಿ ಅಮಿತಾ ಸಿಂಗ್ ಸಲ್ಲಿಸಿದ್ದ ಮಾನನಷ್ಟ ಮೊಕದ್ದಮೆ ಸಂಬಂಧ ಆನ್‌ಲೈನ್ ಸುದ್ದಿ ಪೋರ್ಟಲ್ 'ದಿ ವೈರ್'ಗೆ ನೀಡಲಾದ ಸಮನ್ಸ್ ಪ್ರಶ್ನಿಸಿ ಸಲ್ಲಿಸಲಾದ ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, 'ಮಾನನಷ್ಟ ಆರೋಪಕ್ಕೆ ಸಂಬಂಧಿಸಿದ ಪ್ರಕರಣ-ಗಳನ್ನು ಅಪರಾಧದ ವ್ಯಾಪ್ತಿಯಿಂದ ಹೊರಗಿಡಬೇಕಾದ ಸಮಯ ಬಂದಿದೆ' ಎಂದು ಸೋಮವಾರ ಹೇಳಿದೆ.

ನ್ಯಾಯಮೂರ್ತಿಗಳಾದ ಎಂ.ಎಂ. ಸುಂದರೇಶ್ ಮತ್ತು ಸತೀಶ್ ಚಂದ್ರ ಶರ್ಮಾ ಅವರನ್ನೊಳಗೊಂಡ ಪೀಠವು ವಿಚಾರಣೆ ನಡೆಸಿತು.

ಅರ್ಜಿಯ ಕುರಿತು ನೋಟಿಸ್ ಜಾರಿ ಮಾಡಲು ಸಮ್ಮತಿಸಿದ ನ್ಯಾಯಮೂರ್ತಿ ಸುಂದರೇಶ್, 'ಇದೆಲ್ಲವನ್ನೂ ಅಪರಾಧದ ವ್ಯಾಪ್ತಿಯಿಂದ ಹೊರಗಿಡುವ ಸಮಯ ಬಂದಿದೆ ಎಂದು ನಾನು ಭಾವಿಸುತ್ತೇನೆ' ಎಂದು ಮೌಖಿಕವಾಗಿ ಹೇಳಿದರು.

ಸುದ್ದಿ ಪೋರ್ಟಲ್ ಅನ್ನು ಪ್ರತಿನಿಧಿಸಿದ್ದ ಹಿರಿಯ ವಕೀಲ ಕಪಿಲ್ ಸಿಬಲ್ ಅವರು, ನ್ಯಾಯಪೀಠದ ಅಭಿಪ್ರಾಯವನ್ನು ಒಪ್ಪಿಕೊಂಡರು.

'ದಿ ವೈರ್' ಅನ್ನು ನಡೆಸುತ್ತಿದ್ದ ಫೌಂಡೇಷನ್ ಫಾರ್ ಇಂಡಿಪೆಂಡೆಂಟ್ ಜರ್ನಲಿಸಂ ಸಲ್ಲಿಸಿದ್ದ ಅರ್ಜಿ ಮೇರೆಗೆ ನ್ಯಾಯಾಲಯವು ಅಮಿತಾ ಸಿಂಗ್ ಅವರಿಗೆ ನೋಟಿಸ್ ಜಾರಿ ಮಾಡಿತು. 2016ರಲ್ಲಿ ಪ್ರಕಟವಾದ ಲೇಖನಕ್ಕೆ ಸಂಬಂಧಿಸಿದಂತೆ ಮಾನನಷ್ಟ ಮೊಕದ್ದಮೆ ಹೂಡಲಾಗಿದೆ.

ಏನಿದು ಪ್ರಕರಣ?: ಜೆಎನ್‌ಯು ವಿದ್ಯಾರ್ಥಿನಿಯರ ಹಾಸ್ಟೆಲ್‌ನಲ್ಲಿ 'ಸೆಕ್ಸ್ ದಂಧೆ' ನಡೆಯುತ್ತಿದೆ ಎಂದು ಪ್ರೊ. ಅಮಿತಾ ಸಿಂಗ್ ಅವರನ್ನೊಳಗೊಂಡ ತಂಡವು ವಿಶ್ವವಿದ್ಯಾಲಯದ ಆಡಳಿತಕ್ಕೆ ವರದಿ ಸಲ್ಲಿಸಿದೆ ಎಂದು ಸುಳ್ಳು ಆರೋಪ ಮಾಡಿ 'ದಿ ವೈರ್' ಸುದ್ದಿ ಪ್ರಕಟಿಸಿದೆ ಎಂದು ಆರೋಪಿಸಿ ಸಿಂಗ್ ಅವರು ಮಾನನಷ್ಟ ಮೊಕದ್ದಮೆ ದಾಖಲಿಸಿದ್ದರು.

ಕಾಶ್ಮೀರದಿಂದ ಸೇಬು ಸಾಗಣೆ ನೈರುತ್ಯ ರೈಲ್ವೆ ಹೊಸ ಕ್ರಮ

ಜಮ್ಮು (ಪಿಟಿಐ): ಕಾಶ್ಮೀರದಿಂದ ಸೇಬು ಸಾಗಣೆಗೆ 21 ಕಂಟೈನರ್ ವ್ಯಾಗನ್‌ಗಳುಳ್ಳ ರೈಲು ಸೇವೆಯನ್ನು ನೈರುತ್ಯ ರೈಲ್ವೆ ಸೋಮವಾರ ಆರಂಭಿಸಿದೆ.

ಸೇಬು ಉದ್ಯಮವನ್ನು ಉತ್ತೇಜಿಸುವ ಸಲುವಾಗಿ ಈ ಉಪಕ್ರಮವನ್ನು ಕೈಗೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಾಶ್ಮೀರ ಕಣಿವೆಯ ಅನಂತನಾಗ್ ಗೂಡ್ಸ್ ಶೆಡ್ ಟರ್ಮಿನಲ್‌ನಿಂದ ವ್ಯಾಗನ್‌ಗಳನ್ನು ಬಳಸಿಕೊಂಡು ಕಳೆದ ವಾರ 6,400 ಟನ್‌ಗಳಿಗೂ ಹೆಚ್ಚು ಸೇಬುಗಳನ್ನು ಕಾಶ್ಮೀರದಿಂದ ದೆಹಲಿಗೆ ಸಾಗಣೆ ಮಾಡಲಾಗಿದೆ.

ಸಾಗಣೆಗಾಗಿ ಬಡೀ ಬ್ರಾಹ್ಮಣಾದಲ್ಲಿ ಒಟ್ಟು 21 ವ್ಯಾಗನ್‌ಗಳ ಸರಬರಾಜು ಮಾಡಲಾಗಿದೆ. ಪ್ರತಿ ವ್ಯಾಗನ್‌ನಲ್ಲಿ ಸುಮಾರು 76 ವಿಶೇಷ ಕಂಟೈನರ್‌ಗಳನ್ನು ಅಳವಡಿಸಲಾಗಿದ್ದು, ಒಂದು ಕಂಟೈನರ್‌ಗೆ 40 ಕೆ.ಜಿ ಹಣ್ಣು ಹಿಡಿಯುತ್ತದೆ.

'ಪಂಜಾಬ್‌ಗೆ ಪರಿಹಾರ ಘೋಷಿಸಿ'

ರಾಹುಲ್ ಗಾಂಧಿ

ನವದೆಹಲಿ (ಪಿಟಿಐ): ಪ್ರವಾಹದಿಂದ ತೊಂದರೆಗೆ ಒಳಗಾಗಿರುವ ಪಂಜಾಬ್‌ಗೆ ಕೇಂದ್ರ ಸರ್ಕಾರ ತಕ್ಷಣವೇ ವಿಶೇಷ ಪರಿಹಾರ ಪ್ಯಾಕೇಜ್ ಘೋಷಿಸಬೇಕು ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಒತ್ತಾಯಿಸಿದ್ದಾರೆ.

ಪಂಜಾಬ್‌ನ ಪ್ರವಾಹ ಪೀಡಿತ ಪ್ರದೇಶಗಳಿಗೆ ತಾವು ನೀಡಿರುವ ಭೇಟಿಗೆ ಸಂಬಂಧಿಸಿದ 10 ನಿಮಿಷಗಳ ವಿಡಿಯೊವನ್ನು ಅವರು ಸೋಮವಾರ 'ಎಕ್ಸ್'ನಲ್ಲಿ ಹಂಚಿಕೊಂಡಿದ್ದಾರೆ.

'ಪ್ರವಾಹದಿಂದಾಗಿ ಪಂಜಾಬ್‌ನಲ್ಲಿ ಸುಮಾರು ₹20,000 ಕೋಟಿ ನಷ್ಟ ಉಂಟಾಗಿದೆ. ಇಂತಹ ಪರಿಸ್ಥಿತಿಯಲ್ಲಿ, ಪ್ರಧಾನಿ ಘೋಷಿಸಿದ ₹1,600 ಕೋಟಿ ಆರಂಭಿಕ ಪರಿಹಾರ ಪ್ಯಾಕೇಜ್ ಪಂಜಾಬ್ ಜನರಿಗೆ ಮಾಡಿರುವ ಅನ್ಯಾಯ' ಎಂದು ಹೇಳಿದ್ದಾರೆ.

ರಾಹುಲ್ ಅವರು ಕಳೆದ ಸೋಮವಾರ ಅಮೃತಸರ ಮತ್ತು ಗುರುದಾಸಪುರದ ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿದ್ದರು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

✗ **ಲೋಕಸಭೆ** ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಮಲೇಷ್ಯಾದಲ್ಲಿ ಭಾರತದಿಂದ ಪರಾರಿಯಾಗಿರುವ ವಿವಾದಿತ ಧರ್ಮ ಬೋಧಕ ಝಾಕೀರ್ ನಾಯ್ಕ್‌ನನ್ನು ಭೇಟಿಯಾಗಿದ್ದಾರೆ ಎಂದು ಪ್ರತಿಪಾದಿಸುತ್ತಾ, ರಾಹುಲ್ ಗಾಂಧಿ ಆತನೊಂದಿಗೆ ಇರುವ ಫೋಟೊವೊಂದನ್ನು ಸಾಮಾಜಿಕ ಜಾಲತಾಣಗಳ ಹಲವು ಬಳಕೆದಾರರು ಹಂಚಿಕೊಳ್ಳುತ್ತಿದ್ದಾರೆ. ಆದರೆ, ಇದು ಸುಳ್ಳು.

✓ **ಜಾಲತಾಣಗಳಲ್ಲಿ** ಪೋಸ್ಟ್ ಮಾಡಿದ್ದ ಫೋಟೊವನ್ನು ಗೂಗಲ್ ಲೆನ್ಸ್‌ನಲ್ಲಿ ಹಾಕಿ ಹುಡುಕಿದಾಗ 2023ರ ಮಾರ್ಚ್ 23ರಂದು ಅರೇಬಿಯನ್ ನ್ಯೂಸ್ ಎಂಬ ಸುದ್ದಿ ಪೋರ್ಟಲ್ ತನ್ನ ಫೇಸ್‌ಬುಕ್ ಪುಟದಲ್ಲಿ ಹಂಚಿಕೊಂಡಿದ್ದ ಫೋಟೊವೊಂದು ಸಿಕ್ಕಿತು. ಝಾಕೀರ್ ನಾಯ್ಕ್, ತನ್ನ ಮಗ ಫಾರಿಕ್‌ನೊಂದಿಗೆ ಒಮಾನ್‌ನ ಗ್ರ್ಯಾಂಡ್ ಮುಫ್ತಿ ಶೇಖ್ ಅಹಮದ್ ಬಿನ್ ಹಮಾದ್ ಅಲ್ ಖಲಿಲಿ ಅವರನ್ನು ಭೇಟಿ ಮಾಡಿದ ಫೋಟೊ ಅದಾಗಿತ್ತು. ಈಗ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಚಿತ್ರಕ್ಕೂ ಈ ಚಿತ್ರಕ್ಕೂ ಸಾಕಷ್ಟು ಸಾಮ್ಯತೆಗಳಿದ್ದು, ಮುಫ್ತಿ ಅವರ ಫೋಟೊ ಇರುವ ಜಾಗದಲ್ಲಿ ರಾಹುಲ್ ಗಾಂಧಿ ಅವರ ಫೋಟೊ ಕಾಣಿಸುತ್ತಿದೆ. ಕೂಲಂಕಷವಾಗಿ ಪರಿಶೀಲಿಸಿದಾಗ, ಫೋಟೊ ತಿರುಚಿರುವ ಅನುಮಾನವೂ ಬಂತು. ಇದರ ಆಧಾರದಲ್ಲಿ ಎಐಯನ್ನು ಪತ್ತೆ ಮಾಡುವ ಹೈವ್ ಮಾಡರೇಷನ್ ಮತ್ತು ವಾಸ್ ಇಟ್ ಎಐ ಟೂಲ್‌ಗಳನ್ನು ಬಳಸಿ ಚಿತ್ರವನ್ನು ಪರಿಶೀಲನೆಗೆ ಒಳಪಡಿಸಿದಾಗ ರಾಹುಲ್ ಗಾಂಧಿ ಮತ್ತು ಝಾಕೀರ್ ನಾಯ್ಕ್ ಅಕ್ಕ ಪಕ್ಕ ಕುಳಿತಿರುವ ಚಿತ್ರ ಎಐ ಮೂಲಕ ಸೃಷ್ಟಿಸಿದ್ದು ಎಂಬುದು ದೃಢಪಟ್ಟಿತು. ಹಳೆಯ ಚಿತ್ರವನ್ನು ಡಿಜಿಟಲ್ ತಂತ್ರಜ್ಞಾನದಲ್ಲಿ ತಿರುಚಿ ಈಗ ತಪ್ಪಾಗಿ ಬಿಂಬಿಸಲಾಗುತ್ತಿದೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಪದಬಂಧ 6173

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಹಸುವಿನಲ್ಲಿ ಕೈಗೂಡದ ಆಸೆ ಕಂಡೀತೆ? (6)
4.ತಮದಲ್ಲಿ ಮೇಲುಕೀಳು (4)
6.ಗಲ್ಲಿಯಲ್ಲಿರುವಾಗ ದಿಕ್ಕು ತೋಚದಿರುವುದು (4)
8.ತುಂಬಿದ ಮೈಕಟ್ಟು (4)
10.ಇನ್ನೂ ಬಲಿಯದಿರುವ ಕಾಯಿ (4)
12.ದಂತಚೂರ್ಣ ಇಲ್ಲಿದೆ (4)
13.ಉಪಾಯದಿಂದ ಹಾಕಿದ ನೆಲೆಗಟ್ಟು (4)
15.ಇದು ಹಣೆ ಬರಹ (6)

ಮೇಲಿಂದ ಕೆಳಕ್ಕೆ

1.ಹಣ್ಣು ತಂದಾಗ ನೆಟ್ಟಿರುವ ತೀಕ್ಷ್ಣದೃಷ್ಟಿ! (4)
2.ಸುನೀತಳ ಮಗನಿವನು (2)
3.ಕಾಮನೆ ಹುಟ್ಟಿಸುವ ಮನ್ಮಥ (2)
5.ಹಾಗೆ ಆಗಲಿ ಎಂದು ಹೀಗೆ ಹೇಳಬಹುದು (3)
7.ಗಾಡಿಯಲ್ಲಿಟ್ಟಿರುವ ಚಿಲ್ಲರೆ ಹಣವಿದು (4)
8.ಅಗಲವಾದ ದುಂಡನೆಯ ಪಾತ್ರೆ (3)
9.ಒಂದು ಬಗೆಯ ನಯವಾದ ಬಟ್ಟೆ (4)
10.ಕನ್ನಡಿಗನು ಹಿಡಿದಿರುವ ದರ್ಪಣ (3)
11.ಈತ ಸಂಪ್ರದಾಯವನ್ನು ಅನುಸರಿಸುವವನು (4)
13. ಈಕೆ ಹಿರಿಯ ಸಹೋದರಿ (2)
14.ಸಂಗೀತ ಮತ್ತು ನೃತ್ಯದಲ್ಲಿನ ಗತಿ ತಲೆಕೆಳಗಾಗಿದೆಯಲ್ಲಾ! (2)



6172ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಮೂಷಿಕ 4.ಆಸೆಬುರುಕ 6.ವಿರೂಪ 8.ಲಾಲಬಹಾದ್ದೂರ್‌ಶಾಸ್ತ್ರಿ 10.ಜಲಾನಯನಪ್ರದೇಶ 12.ಜನನ 14.ಆಹ್ಲಾದಕರ 16.ವರಸೆ

ಮೇಲಿಂದ ಕೆಳಕ್ಕೆ:
1.ನೇಹಿ 2.ಮೂಕ 3.ಕವಿ 5.ಸೆಲಾ 7.ಪರಸ್ತ್ರೀ 9.ಹಾಸನ 10.ಜಲಜ 11.ಶತಕ 13.ನವ 14.ಆಸೆ 15.ರದ

ಸುಡೊಕು 6557

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	4			2		7		3
6		9	5		7		4	
	3			8		6		
	7			9			3	
	9	3	6		8			4
4				5		8		
7			8		9			
	5							7
	8			4		9		1

6556 ಸುಡೊಕು

2	1	8	3	7	5	4	6	9
4	9	7	6	1	2	8	5	3
3	6	5	9	4	8	1	7	2
9	2	3	1	8	7	5	4	6
5	7	1	4	6	3	9	2	8
8	4	6	5	2	9	3	1	7
7	3	9	2	5	1	6	8	4
6	5	2	8	9	4	7	3	1
1	8	4	7	3	6	2	9	5

ನುಡಿ ಬೆಳಗು

ದೀಪಾ ಹಿರೇಗುತ್ತಿ

ಯುದ್ಧದ ಭೀಕರತೆ

ಕುವೆಂಪು ಅವರ 'ಶ್ಮಶಾನ ಕುರುಕ್ಷೇತ್ರ' ನಾಟಕದ ಒಂದು ದೃಶ್ಯ. ಮಹಾಭಾರತ ಯುದ್ಧ ಮುಗಿದ ರಾತ್ರಿ. ಬಹಳ ಮಂದಿ ಗೋಳಾಡುತ್ತ ಬಂದು ರಣರಂಗದಲ್ಲಿ ಬಿದ್ದಿರುವ ತಮ್ಮವರ ಶವಗಳನ್ನು ಹುಡುಕುತ್ತಿದ್ದಾರೆ. ಆಗ ಓರ್ವ ಕಿರಿಯ ವಯಸ್ಸಿನ ಮಹಿಳೆ ಮತ್ತು ಓರ್ವ ಮುದುಕಿ ಭೇಟಿಯಾಗುತ್ತಾರೆ. ಮಹಿಳೆ ತನ್ನ ಗಂಡನನ್ನು ಹುಡುಕಿಕೊಂಡು ಬಂದಿದ್ದರೆ, ಮುದುಕಿ ಮಗ ಸಿಗುವನೆಂಬ ಆಸೆಯಿಂದ ಬಂದಿರುತ್ತಾಳೆ. ಇಬ್ಬರೂ ಮಾತಾಡುತ್ತಾರೆ. ಮಹಿಳೆಯ ಗಂಡ ಪಾಂಡವರ ಪಕ್ಷದವನು, ಮುದುಕಿಯ ಮಗ ಕೌರವರ ಪಕ್ಷದವನು. ಇಬ್ಬರೂ ಅವರವರ ಮನೆಗೆ ಆಧಾರವಾಗಿದ್ದವರು. ಆಗ ಮಹಿಳೆ, 'ನಿನ್ನ ಮಗನೆನ್ನ ಪತಿಗೆ ಪಗೆಯಾಗಿದ್ದನೇನ್?' (ನಿನ್ನ ಮಗ ನನ್ನ ಪತಿಗೆ ಶತ್ರುವಾಗಿದ್ದನೇ?) ಎಂದು ಕೇಳುತ್ತಾಳೆ. ಆಗ ಮುದುಕಿ, 'ಆರಿಗಾರು ಪಗೆ? ನಿನಗಾನ್ ಪಗೆಯೇ?' (ಯಾರಿಗೆ ಯಾರು ಶತ್ರುಗಳು, ನಿನಗೆ ನಾನು ಶತ್ರುವೇ) ಎಂದು ಕೇಳುತ್ತಾಳೆ. ಮುಂದೆ ಹೋಗಿ ನೋಡಿದರೆ ಇಬ್ಬರು ಸೈನಿಕರು ಒಬ್ಬರನ್ನೊಬ್ಬರು ತಿವಿದುಕೊಂಡು ಸತ್ತಿದ್ದಾರೆ. ಅದನ್ನು ನೋಡಿ ಮಹಿಳೆ, 'ಅಯ್ಯೋ ಅಜ್ಜೀ ನೋಡಿಲ್ಲಿ, ನನ್ನ ಪತಿಯನ್ ಈ ಪಾಪಿ ತಿವಿದು ಕೊಂದಿಹನ್, ಅಯ್ಯೋ' ಎನ್ನುತ್ತಾಳೆ. ಮುದುಕಿ, 'ಅಯ್ಯೋ ಅಯ್ಯೋ, ನನ್ನ ಮಗನನ್ ನಿನ್ನ ಪತಿ ತಿವಿದು ಕೊಂದಿಹನಲ್ಲಮ್ಮಾ! ಅಯ್ಯೋ ಪಾಂಡವರು ಹಾಳಾಗಲಿ' ಎನ್ನುತ್ತಾಳೆ. ಮಹಿಳೆ, 'ಅಯ್ಯೋ ಕೌರವರು ಹಾಳಾಗಲಿ' ಎನ್ನುತ್ತಾಳೆ. ಇಬ್ಬರೂ ಹೊರಳಾಡಿ ಅಳತೊಡಗುತ್ತಾರೆ.

ಕುವೆಂಪು ಅವರು ಕೆಲವೇ ಮಾತುಗಳಲ್ಲಿ ಯುದ್ಧದ ಭೀಕರತೆಯನ್ನು, ಜನಸಾಮಾನ್ಯರ ಬದುಕಿನಲ್ಲಿ ಅದು ಉಂಟುಮಾಡುವ ಘೋರ ಪರಿಣಾಮಗಳನ್ನು ಬಹು ಪ್ರಭಾವಶಾಲಿಯಾಗಿ ಚಿತ್ರಿಸಿದ್ದಾರೆ. ಯುದ್ಧದಲ್ಲಿ ಯಾರು ಗೆದ್ದರೂ ಯಾರು ಸೋತರೂ ಅದು ಮಾಡುವುದು ಸರ್ವನಾಶವನ್ನೇ. ಗೆದ್ದವರು ಸೋತರು, ಸೋತವರು ಸತ್ತರು ಎಂದು ಹಿರಿಯ ಜೀವಗಳು ಹೇಳುವ ಮಾತುಗಳು ಗೆಲುವಿನ ಅರ್ಥಹೀನತೆಯನ್ನು ಹೇಳುತ್ತವೆ. ಜಗತ್ತಿನಲ್ಲಿ ಆದ ಎಷ್ಟೆಲ್ಲ ಯುದ್ಧಗಳಲ್ಲಿ ಸಾವು, ನೋವು ಉಂಡದ್ದು ಸಾಮಾನ್ಯ ಸೈನಿಕರು, ಅವರ ಕುಟುಂಬಗಳು ಮತ್ತು ಈ ಯುದ್ಧದ ಭೀಕರ ಪರಿಣಾಮಗಳನ್ನು ಅನುಭವಿಸುವವರು ಯುದ್ಧದಲ್ಲಿ ಯಾವ ಪಾತ್ರವನ್ನೂ ಹೊಂದಿರದ ಸಾಮಾನ್ಯ ಪ್ರಜೆಗಳು.

ಭೂಮಿಗಾಗಿ, ಧರ್ಮಕ್ಕಾಗಿ, ಕೊನೆಗೆ ಆಯುಧಗಳ ಮಾರಾಟಕ್ಕಾಗಿ ಶುರುವಾಗುವ ಯುದ್ಧಗಳು ಜಗತ್ತಿಗೆ ಮತ್ತಷ್ಟು ಅಶಾಂತಿಯನ್ನು ತುಂಬಿ ಹೋಗುತ್ತವೆ. ಯುದ್ಧ ಮುಗಿದರೂ ಯುದ್ಧದ ಪರಿಣಾಮಗಳು ಶಾಶ್ವತವಾಗಿರುತ್ತವೆ. ಅದು ಕಾಡುವುದು ಜನಸಾಮಾನ್ಯರನ್ನೇ. ದೈಹಿಕವಾಗಿ ಮಾತ್ರವಲ್ಲ, ಮಾನಸಿಕವಾಗಿಯೂ ಯುದ್ಧಗಳು ದೇಶವೊಂದನ್ನು ಕಾಡುತ್ತವೆ. ಯುದ್ಧವನ್ನು ಗೆದ್ದರೂ ಸೋತರೂ ಆ ಕರಾಳ ನೆನಪುಗಳು ದುಃಸ್ವಪ್ನಗಳಾಗುತ್ತವೆ. ಆದರೂ ಇಂದು ಎಳೆಯ ಮನಸ್ಸುಗಳು ಯುದ್ಧದ ಉನ್ಮಾದಕ್ಕೆ ಒಳಗಾಗುತ್ತಿರುವುದು ಪ್ರಪಂಚದ ಎಲ್ಲ ಕಡೆಗಳಲ್ಲೂ ನಡೆಯುತ್ತಿರುವ ದುರಂತ. ಈಗಿನ ಜಗತ್ತಿಗೆ ಯುದ್ಧ ಬೇಕೇ ಎಂದು ಜಗತ್ತಿನ ಅಧಿಕಾರದ ಕೇಂದ್ರದಲ್ಲಿರುವ ಮುಂದಾಳುಗಳು ತಮ್ಮ ಆತ್ಮಸಾಕ್ಷಿಯನ್ನು ಕೇಳಿಕೊಂಡರೆ ಸಿಗುವ ಉತ್ತರ ಬೇಡ ಎಂಬುದೇ ಆಗಿರುತ್ತದೆ. ಆದರೆ, ಆತ್ಮಸಾಕ್ಷಿಯಂತೆ ನಡೆಯುವವರಾದರೂ ಯಾರು?

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

23 ಸೆಪ್ಟೆಂಬರ್ 2025 ಮಂಗಳವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಶುಕ್ಲ ದ್ವಿತೀಯ ಗಂ. 28-52 **ನಕ್ಷತ್ರ:** ಹಸ್ತ ಗಂ. 13-40 **ಯೋಗ:** ಬ್ರಹ್ಮ ಗಂ. 20-23 **ಕರಣ:** ಬಾಲವ ಗಂ. 15-52 ಕನ್ಯಾ ಮಾಸದ 06 ನೇ ದಿನ. **ಮಳೆ ನಕ್ಷತ್ರ:** ಉತ್ತರಾ 3 ನೇ ಪಾದ. **ರಾಹುಕಾಲ :** ಮಧ್ಯಾಹ್ನ 03-00 04-30 **ಸೂರ್ಯೋದಯ :** 06-23 ಸೂರ್ಯಾಸ್ತ : 06-23, **ಮುಸ್ಲಿಂ ದಿನಾಂಕ :** 30 ರಬಿಉಲ್ಲಾವಲ್ , **ಅದೃಷ್ಟ ಸಂಖ್ಯೆ :** 3, 12

ಮೇಷ: ಅಪೇಕ್ಷೆ ಪಟ್ಟಿದ್ದ ಹೊಸ ಉದ್ಯೋಗವನ್ನು ಸಂಪಾದಿಸುವಲ್ಲಿ ರಾಜಕೀಯ ವ್ಯಕ್ತಿಗಳ ಮೂಲಕ ಯಶಸ್ಸು ಗಳಿಸುವಿರಿ. ಸಣ್ಣ ಕೈಗಾರಿಕೋದ್ಯಮಿ-ಗಳಿಗೆ ರಫ್ತು ಮಾರಾಟದಿಂದ ಹೇರಳ ಲಾಭ. ಕಾರ್ಯಗಳು ಹೆಚ್ಚಲಿವೆ.

ವೃಷಭ: ತಾಂತ್ರಿಕ ವಿದ್ಯಾರ್ಥಿಗಳು ಪರಿಶ್ರಮ ಪಡಬೇಕಾಗುವುದು. ಮನೆಯಲ್ಲಿ ಮದುವೆ ಸಮಾರಂಭಗಳು ನಿಗದಿಯಾಗುವ ಸಾಧ್ಯತೆ ಇದೆ. ಜೀವನದಲ್ಲಿನ ಪ್ರಮುಖ ಬದಲಾವಣೆಯನ್ನು ನಿರೀಕ್ಷಿಸಬಹುದು.

ಮಿಥುನ: ಪ್ರಭಾವಶಾಲಿ ವ್ಯಕ್ತಿಯೊಂದಿಗಿನ ಭೇಟಿಯನ್ನು ತಳ್ಳಿ ಹಾಕದೆ ಅವರಿಂದ ವೃತ್ತಿ ಕ್ಷೇತ್ರಕ್ಕೆ ಲಾಭ ಉಂಟಾಗುವಂತೆ ನೋಡಿಕೊಳ್ಳಿ. ಕಲಾವಿದರಿಗೆ ಹಾಗೂ ದಿನಗೂಲಿ ನೌಕರರಿಗೆ ಅನುಕೂಲಕರ ವಾತಾವರಣಗಳು ಸಿಗಲಿವೆ.

ಕರ್ಕಾಟಕ: ಚೋರಭೀತಿ ಇರುವುದರಿಂದ ವ್ಯವಹಾರ ಕ್ಷೇತ್ರದ ರಕ್ಷಣಾ ವ್ಯವಸ್ಥೆಯ ಬಗ್ಗೆ ಗಮನವಹಿಸಿ. ಏಕಾಗ್ರತೆ ಹಾಗೂ ಧ್ಯಾನದಿಂದ ಮಾನಸಿಕವಾಗಿ ಸದೃಢರಾಗುವಿರಿ.

ಸಿಂಹ: ವಿದ್ಯಾರ್ಥಿಗಳಿಗೆ ತಮ್ಮ ಶೈಕ್ಷಣಿಕ ವಿಚಾರದಲ್ಲಿ ಮರೆಯಲಾಗದ ಕಹಿಘಟನೆ ನಡೆಯಬಹುದು. ಇತ್ತೀಚಿನ ದಿನದಲ್ಲಿ ಬದಲಾವಣೆಗೊಂಡ ಔಷಧಿ ದೇಹಕ್ಕೆ ಹೊಂದಿಕೊಳ್ಳುವುದೋ, ಇಲ್ಲವೋ ಎಂದು ಪರೀಕ್ಷಿಸಿಕೊಳ್ಳಿರಿ.

ಕನ್ಯಾ: ವರಿಷ್ಠ ಅಧಿಕಾರಿಗಳಿಗೆ ವಿಶೇಷ ಅಧಿಕಾರಗಳು ಪ್ರಾಪ್ತವಾಗಲಿವೆ. ಸಂಸ್ಕಾರದ ಕೊರತೆಯಿಂದಾಗಿ ಮಕ್ಕಳು ದಾರಿ ತಪ್ಪಬಹುದು. ಭೂಸಂಬಂಧಿ ವ್ಯವಹಾರದಲ್ಲಿರುವವರಿಗೆ ಸುತ್ತಾಟವಿರುವುದು.

ತುಲಾ: ತಡವಾದ ಹಾಗೂ ಬಾಕಿಯುಳಿದ ಕಾರ್ಯಕ್ಕೆ ಇಂದು ಹೊಸ ಜೀವ ಬರುವುದು. ಹೊಸ ಆಲೋಚನೆಗಳು ಹೊಳೆಯುತ್ತವೆ. ನಿಮ್ಮೆದುರಿಗಿರುವ ಅವಕಾಶವನ್ನು ಕಳೆದುಕೊಳ್ಳಬಾರದು. ವಿಮಾ ಏಜೆಂಟರಿಗೆ ಒಳ್ಳೆಯ ದಿನ.

ವೃಶ್ಚಿಕ: ವಿದ್ಯಾರ್ಥಿಗಳು ಕಡೆಯ ಕ್ಷಣದಲ್ಲಿ ಮಾಡಿದ ಪ್ರಯತ್ನಕ್ಕೆ ಒಳ್ಳೆಯ ಅಂಕ ಪಡೆಯಬಹುದು. ಸ್ವಂತ ಕೆಲಸಕ್ಕೆ ಸಮಯ ಮೀಸಲಿಡುವುದು ಉತ್ತಮ. ಪರಸ್ಥಳದಿಂದ ಪ್ರಮುಖ ಸುದ್ದಿ ತಲುಪುತ್ತದೆ.

ಧನು: ಕಫ ಪ್ರಕೃತಿಯ ದೇಹ ಹೊಂದಿರುವ ನಿಮಗೆ ಉಸಿರಾಟಕ್ಕೆ ಸಂಬಂಧಿಸಿದಂತೆ ಆರೋಗ್ಯದಲ್ಲಿ ಏರು-ಪೇರು ಅನುಭವಕ್ಕೆ ಬರಲಿದೆ. ಕ್ರೀಡಾ-ಪಟುಗಳಿಗೆ ಇಂದಿನ ಪಂದ್ಯದಲ್ಲಿ ಕೊನೆಕ್ಷಣದ ಜಯ ಪ್ರಾಪ್ತಿಯಾಗುವುದು.

ಮಕರ: ಪ್ರಯೋಜನ ಪಡೆದ ವ್ಯಕ್ತಿಗಳು ನಿಮ್ಮನ್ನು ದೂಷಿಸುವರು. ಹಣಕಾಸಿನ ವ್ಯಾಮೋಹ ಹೆಚ್ಚಾಗಿ ತೊಂದರೆಗಳಿಗೆ ಕಾರಣವಾಗದಂತೆ ನೋಡಿಕೊಳ್ಳಿ. ಭೂ ವ್ಯವಹಾರದಲ್ಲಿ ಆದಾಯ ಇರಲಿದೆ.

ಕುಂಭ: ಶೀಘ್ರಕೋಪಿಗಳಾಗುವ ವ್ಯಕ್ತಿತ್ವಕ್ಕೆ ಬದಲಾವಣೆಯ ಗಾಳಿ ಬೀಸಲಿದೆ. ವಿದ್ಯುತ್ ಉಪಕರಣಗಳ ಬಳಕೆಯಲ್ಲಿ ಜಾಗರೂಕತೆ ಮುಖ್ಯವಾಗುವುದು. ಆರೋಗ್ಯ ಕಾಪಾಡಿಕೊಳ್ಳುವುದರ ಬಗ್ಗೆ ಮುಂಜಾಗ್ರತೆ ತೆಗೆದುಕೊಳ್ಳಿರಿ.

ಮೀನ: ಷೇರು ವ್ಯವಹಾರಗಳು ನಿನ್ನೆಯ ನಷ್ಟವನ್ನು ಹೋಗಲಾಡಿಸಿ ಕೂಡಿ ಬರುವುವು. ಬರಹಗಾರರಿಗೆ ಉತ್ತೇಜನದ ಕೊರತೆ ಕಾಣಲಿದೆ. ಗುಂಪು ಚಟುವಟಿಕೆಗಳಿಗೆ ಮುಂದಾಳತ್ವ ಅಗತ್ಯವಾಗಿರುವುದು.

ಬಿಎಫ್‌ಸಿ ಪರ ಬೋಲ್ಟ್ ಆಟ

ಮುಂಬೈ (ಪಿಟಿಐ): ಜಮೈಕಾದ ದಿಗ್ಗಜ ಅಥ್ಲೀಟ್ ಉಸೇನ್ ಬೋಲ್ಟ್ ಅವರು ಬೆಂಗಳೂರು ಎಫ್‌ಸಿ ಹಾಗೂ ಮುಂಬೈ ಸಿಟಿ ಎಫ್‌ಸಿ ತಂಡಗಳ ನಡುವಣ ಫುಟ್‌ಬಾಲ್ ಪ್ರದರ್ಶನ ಪಂದ್ಯದಲ್ಲಿ ಆಡಲಿದ್ದಾರೆ.

ಒಲಿಂಪಿಕ್ಸ್ ಕೂಟಗಳಲ್ಲಿ ಎಂಟು ಚಿನ್ನದ ಪದಕಗಳನ್ನು ಗೆದ್ದಿರುವ ತಾರಾ ಓಟಗಾರ, 'ಪ್ಯೂಮಾ' ಆಯೋಜಿಸುತ್ತಿರುವ ಪ್ರದರ್ಶನ ಪಂದ್ಯದಲ್ಲಿ ಉಭಯ ತಂಡಗಳ ಪರ ತಲಾ ಅರ್ಧ ಅವಧಿಗೆ ಆಡಲಿದ್ದಾರೆ. ಅಕ್ಟೋಬರ್ 1ರಂದು ಮುಂಬೈನಲ್ಲಿ ಪಂದ್ಯ ನಡೆಯಲಿದೆ. ಫುಟ್‌ಬಾಲ್ ತಾರೆಯರು ಹಾಗೂ ಬಾಲಿವುಡ್ ಖ್ಯಾತನಾಮರು ಈ ಕಾರ್ಯಕ್ರಮದಲ್ಲಿ ಹಾಜರಿರಲಿದ್ದಾರೆ.

ಫುಟ್‌ಬಾಲ್ ಬಗ್ಗೆ ವಿಶೇಷ ಪ್ರೀತಿ ಹೊಂದಿರುವ ಬೋಲ್ಟ್ ಅವರು ಅಥ್ಲೆಟಿಕ್ಸ್‌ನಿಂದ ನಿವೃತ್ತರಾದ ಬಳಿಕ ನಿಯಮಿತವಾಗಿ ಪ್ರದರ್ಶನ ಪಂದ್ಯಗಳಲ್ಲಿ ಆಡುತ್ತಿದ್ದಾರೆ. ಅವರು ಪ್ಯೂಮಾ ಸಂಸ್ಥೆಯ ಜಾಗತಿಕ ರಾಯಭಾರಿಯಾಗಿಯೂ ಕಾರ್ಯನಿರ್ವಹಿಸಿದ್ದರು.

'ದೇಶದ ಅತ್ಯಂತ ಜನಪ್ರಿಯ ಕ್ರೀಡೆಗಳಲ್ಲಿ ಫುಟ್‌ಬಾಲ್ ಕೂಡ ಒಂದು.

ಫುಟ್‌ಬಾಲ್ ಆಡುತ್ತಿರುವ ಉಸೇನ್ ಬೋಲ್ಟ್ ಎಎಫ್‌ಪಿ ಸಂಗ್ರಹ ಚಿತ್ರ

ಸಾರ್ವಕಾಲಿಕ ಶ್ರೇಷ್ಠ ಓಟಗಾರರಲ್ಲಿ ಒಬ್ಬರಾದ ಬೋಲ್ಟ್ ಅವರನ್ನು ಇಲ್ಲಿಗೆ ಕರೆತಂದು ಪಂದ್ಯ ಆಡಿಸುವ ಮೂಲಕ ಫುಟ್‌ಬಾಲ್ ಸಂಭ್ರಮದಲ್ಲಿ ನಾವೂ ಭಾಗಿಯಾಗಲಿದ್ದೇವೆ' ಎಂದು 'ಪ್ಯೂಮಾ ಇಂಡಿಯಾ'ದ ಕಾರ್ಯನಿರ್ವಾಹಕ ನಿರ್ದೇಶಕ ಕಾರ್ತಿಕ್ ಬಾಲಗೋಪಾಲನ್ ಹೇಳಿದ್ದಾರೆ.

ಫುಟ್‌ಬಾಲ್: ಪಾಕ್ ಆಟಗಾರನ ವಿವಾದಾತ್ಮಕ ಸಂಭ್ರಮ

ಕೊಲಂಬೊ (ಪಿಟಿಐ): ಭಾರತದ ಬಾಲಕರ ತಂಡವು ಸೋಮವಾರ ನಡೆದ ಸ್ಯಾಫ್ 17 ವರ್ಷ ದೊಳಗಿನವರ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 3-2 ಗೋಲುಗಳಿಂದ ಪಾಕಿಸ್ತಾನ ತಂಡವನ್ನು ಮಣಿಸಿತು. ಪಂದ್ಯದ ವೇಳೆ ಪಾಕ್ ಆಟಗಾರ ಮೊಹಮ್ಮದ್ ಅಬ್ದುಲ್ಲಾ ವಿವಾದಾತ್ಮಕ ರೀತಿಯಲ್ಲಿ ಸಂಭ್ರಮಿಸಿದ್ದಾರೆ.

ಭಾನುವಾರ ದುಬೈನಲ್ಲಿ ಭಾರತ ವಿರುದ್ಧದ ಏಷ್ಯಾ ಕಪ್ ಸೂಪರ್ ಫೋರ್ ಪಂದ್ಯದ ವೇಳೆ ಪಾಕ್ ಆಟಗಾರರಾದ ಹ್ಯಾರಿಸ್ ರವೂಫ್ ಮತ್ತು ಸಾಹೀಬ್ ಝಾದಾ ಫರ್ಹಾನ್ 'ಗನ್‌ಶಾಟ್' ಅಣಕು ಮಾಡಿದ ಒಂದು ದಿನದ ನಂತರ ಅಬ್ದುಲ್ಲಾ ಅವರಿಂದ ವಿವಾದಾತ್ಮಕ ಸಂಜ್ಞೆ ವ್ಯಕ್ತವಾಯಿತು.

ಎರಡೂ ತಂಡಗಳು ಸೆಮಿಫೈನಲ್‌ಗೆ ಅರ್ಹತೆ ಪಡೆದಿದ್ದರಿಂದ ಈ ಪಂದ್ಯಕ್ಕೆ ಹೆಚ್ಚಿನ ಮಹತ್ವ ಇರಲಿಲ್ಲ. 31ನೇ ನಿಮಿಷದಲ್ಲಿ ದಲ್ಲಾಲ್ಮುನ್ ಗ್ಯಾಂಗ್ಟೆ ಭಾರತಕ್ಕೆ ಮುನ್ನಡೆ ಒದಗಿಸಿದರು. 43ನೇ ನಿಮಿಷದಲ್ಲಿ ಅಬ್ದುಲ್ಲಾ ಗೋಲು ದಾಖಲಿಸಿದ್ದರಿಂದ, ತಂಡಗಳ ಸ್ಕೋರ್ ಸಮನಾಯಿತು. ಈ ವೇಳೆ ಅಬ್ದುಲ್ಲಾ ಮೈದಾನದ ಮೂಲೆಗೆ ಓಡಿ ಕುಳಿತು, ತನ್ನ ತಂಡದ ಸದಸ್ಯರೊಂದಿಗೆ ಚಹಾ ಕುಡಿದಂತೆ ಸಂಭ್ರಮಿಸಿದರು. ಭಾರತವನ್ನು ಅಣಕಿಸುವಂತಿದ್ದ ಅವರ ಆಚರಣೆ ಚರ್ಚೆಗೆ ಕಾರಣವಾಗಿದೆ.

'ಬಿ' ಗುಂಪಿನಲ್ಲಿರುವ ಭಾರತ ಮತ್ತು ಪಾಕ್ ತಂಡವು ಕ್ರಮವಾಗಿ ಮೊದಲೆರಡು ಸ್ಥಾನದೊಂದಿಗೆ ಸೆಮಿಫೈನಲ್‌ಗೆ ಮುನ್ನಡೆದವು. ನಾಲ್ಕರ ಘಟ್ಟದಲ್ಲಿ ಭಾರತ ತಂಡವು ನೇಪಾಳ ವಿರುದ್ಧ; ಪಾಕಿಸ್ತಾನ ತಂಡವು ಬಾಂಗ್ಲಾದೇಶ ವಿರುದ್ಧ ಸೆಣಸಲಿವೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಚಿರಸ್ಮರಣೆ

ಟಿ. ಶ್ರೀನಿವಾಸ
14-04-1942 23-09-2002
ವರದಾ ಶ್ರೀನಿವಾಸ ಕುಟುಂಬ, ಬಂಧುವರ್ಗ ಮತ್ತು ಶ್ರೀ ವೆಂಕಟೇಶ್ವರ ವಿದ್ಯಾಪೀಠ

ಹತ್ತನೇ ವರ್ಷದ ಪುಣ್ಯಸ್ಮರಣೆ

ದಿ|| ಶ್ರೀಮತಿ ಹೆಚ್.ಎಂ. ಕಮಲಮ್ಮ
ಜನನ: 26-03-1950, ನಿಧನ : 23-09-2015
ನೀವು ಹಚ್ಚಿದೊಂದು ಹಣತೆ ಇನ್ನೂ ಬೆಳಗಿದೆ, ಮನಕೆ ಮಬ್ಬು ಕವಿಯದಂತೆ ಸದಾ ಕಾದಿದೆ.
ಇಂದಿಗೆ ನೀವು ನಮ್ಮನ್ನು ಅಗಲಿ ಹತ್ತನೇ ವರ್ಷವಾದರು, ನಿಮ್ಮ ಧ್ಯೇಯ, ಧೈರ್ಯದ ನುಡಿಗಳು, ಇಂದಿಗೂ ನೀವು ನಮ್ಮೊಂದಿಗಿರುವಂತೆ ಮಾಡಿವೆ.
ಸದಾ ನಿಮ್ಮ ಸ್ಮರಣೆಯಲ್ಲೇ ಇರುವ
ಶ್ರೀ ಎಂ.ವಿ. ಭೀಮರಾಜು (ಪತಿ),
ಶ್ರೀ ಭೀ. ಪದ್ಮನಾಭ, ಶ್ರೀಮತಿ ಎಂ.ಸಿ. ಲತಾ,
ಮಕ್ಕಳು, ಅಳಿಯ, ಮೊಮ್ಮಕ್ಕಳು ಹಾಗು ಕುಟುಂಬದವರು
7829155592/9986811974

ಭಾರತ–ಪಾಕ್ ಕ್ರಿಕೆಟ್ 'ಪೈಪೋಟಿ' ಅಂದು ಇಂದು

ಸತ್ಯಕ್ಕೆ ಕನ್ನಡಿ ಹಿಡಿದ ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್

• ಆರ್. ಕೌಶಿಕ್

ದುಬೈ: 'ಜನರ ನಡುವೆ, ವ್ಯಾಪಾರ–ವಹಿವಾಟು ಇತ್ಯಾದಿಗಳಲ್ಲಿ 'ಪೈಪೋಟಿ ಅಥವಾ ಜಿದ್ದಾಜಿದ್ದಿ' ನಡೆಯುತ್ತದೆ. ಅಲ್ಲಿ ಸ್ಪರ್ಧೆಗಿಳಿದವರು ಒಂದೇ ಗುರಿಸಾಧನೆಯತ್ತ ಚಿತ್ತ ನೆಟ್ಟಿರುತ್ತಾರೆ'

–ಜಿದ್ದಾಜಿದ್ದಿ ಪದಕ್ಕೆ ಕೇಂಬ್ರಿಜ್ ನಿಘಂಟಿನಲ್ಲಿ ಈ ರೀತಿಯ ವ್ಯಾಖ್ಯಾನ ಇದೆ. ಸಮಬಲಶಾಲಿಗಳ ನಡುವೆ ಒಂದು 'ಪ್ರಶಸ್ತಿ'ಗಾಗಿ ಪೈಪೋಟಿ ಏರ್ಪಡುತ್ತದೆ ಎಂಬುದಷ್ಟೇ ಇದರ ಭಾವಾರ್ಥ. ಈ ಸಂಗತಿಯನ್ನು ಕೆಲವರು ಪಿಸುಗುಡುತ್ತಿದ್ದರೆ, ಇನ್ನೊಂದಿಷ್ಟು ಜನ ಸಾಮಾಜಿಕ ಜಾಲತಾಣಗಳ ಮೂಲಕ ಘಂಟಾಘೋಷವಾಗಿ ಹೇಳುತ್ತಿದ್ದಾರೆ.

ಏಷ್ಯಾ ಕಪ್ 2025

ಇದೀಗ ಭಾರತ ಟಿ20 ಕ್ರಿಕೆಟ್ ತಂಡದ ನಾಯಕ ಸೂರ್ಯಕುಮಾರ್ ಯಾದವ್ ಅವರು ಈ 'ಪ್ರಹಸನ'ದ ಮೇಲಿನ ಪರದೆಯನ್ನು ಕಿತ್ತು ಬಿಸಾಕಿದ್ದಾರೆ.

'ಭಾರತ ಮತ್ತು ಪಾಕ್ ಪಂದ್ಯವನ್ನು ವೈರತ್ವದ ಹಣಾಹಣಿಯೆಂದು ಕರೆಯದಿರಿ. ಅದೆಲ್ಲವೂ ಈಗ ಇತಿಹಾಸದ ಪುಟಗಳನ್ನು ಸೇರಿದೆ. ಆದರೆ ಈಗ ಭಾರತಕ್ಕೆ ಪಾಕ್ ಸಮಬಲದ ಪ್ರತಿಸ್ಪರ್ಧಿಯಲ್ಲ' ಎಂದು ಸೂರ್ಯ ಘೋಷಿಸಿದ್ದಾರೆ.

ಈ ಕುರಿತ ಮೂಲಸಂಗತಿಗಳನ್ನು ಪರಿಗಣಿಸಿದರೆ; 2022ರ ಅಕ್ಟೋಬರ್‌ನಲ್ಲಿ ಮೆಲ್ಬರ್ನ್‌ನಲ್ಲಿ ನಡೆದಿದ್ದ ಟಿ20 ವಿಶ್ವಕಪ್ ಟೂರ್ನಿಯ ಮುಖಾಮುಖಿಯಿಂದ ಇಲ್ಲಿಯವರೆಗೆ ಭಾರತವು ಪಾಕ್ ವಿರುದ್ಧ 7–0 ಜಯದ ದಾಖಲೆ ಹೊಂದಿದೆ. ಏಕದಿನ ಕ್ರಿಕೆಟ್‌ನಲ್ಲಿ ಮೂರು ಭರ್ಜರಿ ಜಯಗಳು. 2023ರಲ್ಲಿ ತವರಿನಲ್ಲಿ ನಡೆದಿದ್ದ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಭಾರತ ಫೈನಲ್ ಪ್ರವೇಶಿಸಿತ್ತು. ಹೋದ ವರ್ಷ ಟಿ20 ವಿಶ್ವಕಪ್ ವಿಜಯಿಯಾಗಿತ್ತು. ಅಲ್ಲದೇ ಏಕದಿನ ಕ್ರಿಕೆಟ್‌ನಲ್ಲಿ ಚಾಂಪಿಯನ್ಸ್ ಟ್ರೋಫಿ ಜಯಿಸಿರುವ ತಂಡವು ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನವನ್ನು ಪಡೆದಿತ್ತು. ಒಟ್ಟಾರೆ ಕಳೆದ ಮೂರು ನಿಗದಿಯ ಓವರ್‌ಗಳ ವಿಶ್ವ ಕ್ರಿಕೆಟ್ ಟೂರ್ನಿಗಳಲ್ಲಿ ಎರಡರಲ್ಲಿ ಚಾಂಪಿಯನ್ ಆಗಿ, ಒಂದರಲ್ಲಿ ಮಾತ್ರ ಸೋತಿದೆ.

ಆದರೆ ಪಾಕ್ ತಂಡವು ಈ ಮೂರೂ ಟೂರ್ನಿಗಳಲ್ಲಿ ನಾಕೌಟ್ ಕೂಡ ಪ್ರವೇಶಿಸಿಲ್ಲ. ಏಕದಿನ ರ‍್ಯಾಂಕಿಂಗ್‌ನಲ್ಲಿ ಐದನೇ ಸ್ಥಾನದಲ್ಲಿದ್ದಾರೆ. ಚಲನಚಿತ್ರಗಳಲ್ಲಿ ನಟ–ನಟಿಯರು ದೃಶ್ಯಗಳಿಗೆ ತಕ್ಕಂತೆ ತಮ್ಮ ಬಟ್ಟೆಗಳನ್ನು ಬದಲಾಯಿಸುವ ರೀತಿಯಲ್ಲಿ ಪಾಕ್ ತಂಡವು ನಾಯಕರನ್ನು ಬದಲಿಸಿದೆ. ಆದರೆ ವೈಫಲ್ಯ ಮಾತ್ರ ಮುಂದುವರಿಯಿತು.

ಉಭಯ ತಂಡಗಳ ಗಟ್ಟಿ ಪೈಪೋಟಿಗಳು ಕುರಿತು ಮಾತನಾಡುವುದಾದರೆ; 1986ರ ಏಪ್ರಿಲ್‌ನಲ್ಲಿ ಶಾರ್ಜಾದಲ್ಲಿ ನಡೆದಿದ್ದ ಆಸ್ಟ್ರೇಲಿಯಾ–ಏಷ್ಯಾ ಕಪ್ ಫೈನಲ್ ಪಂದ್ಯ ಉದಾಹರಣೆಯಾಗುತ್ತದೆ. ಭಾರತದ ವೇಗಿ ಚೇತನ್ ಶರ್ಮಾ ಹಾಕಿದ ಆ ಪಂದ್ಯದ ಕೊನೆಯ ಎಸೆತದಲ್ಲಿ ಜಾವೇದ್ ಮಿಯಾಂದಾದ್ ಸಿಕ್ಸರ್‌ಗೆತ್ತಿದರು. ಅದು ಕ್ರಿಕೆಟ್ ವಲಯದಲ್ಲಿ ಅತಿ ಹೆಚ್ಚು ಚರ್ಚೆಗೊಳಗಾದ ಸಿಕ್ಸರ್ ಆಯಿತು. ಮಿಯಾಂದಾದ್ ವೃತ್ತಿಜೀವನ ಮುಗಿಸಿದ ನಂತರದ 16 ವರ್ಷಗಳಲ್ಲಿ ಪಾಕ್ ತಂಡವು ಭಾರತದೊಂದಿಗಿನ 68 ಪಂದ್ಯಗಳ ಪೈಕಿ 44 ಪಂದ್ಯಗಳಲ್ಲಿ (21 ಸೋಲುಗಳು) ಜಯಗಳಿಸಿತ್ತು.

ದುಬೈನಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಭಾರತದ ಶುಭಮನ್ ಗಿಲ್ ಹಾಗೂ ಅಭಿಷೇಕ್ ಶರ್ಮಾ ಅವರೊಂದಿಗೆ ಪಾಕ್ ಬೌಲರ್ ಹ್ಯಾರಿಸ್ ರವೂಫ್ ಮಾತಿನ ಚಕಮಕಿ ನಡೆಸಿದರು. ಈ ಸಂದರ್ಭದಲ್ಲಿ ಅಂಪೈರ್ ಮಧ್ಯ ಪ್ರವೇಶಿಸಿದರು ಎಎಫ್‌ಪಿ ಚಿತ್ರ

ನಂತರದ ಬೆಳವಣಿಗೆಗಳಲ್ಲಿ ಶಕ್ತಿಕೇಂದ್ರ ಬದಲಾಗಿರುವುದು ನಿಸ್ಸಂಶಯ. 2003ರ ವಿಶ್ವಕಪ್ ಟೂರ್ನಿಯಿಂದ ಭಾರತವು ಏಕದಿನ ಕ್ರಿಕೆಟ್‌ನಲ್ಲಿ 29–21ರ ಮುನ್ನಡೆ ಸಾಧಿಸಿತು. ಆದರೆ 2013ರ ಜನವರಿ 6ರಂದು ಉಭಯ ತಂಡಗಳ ದ್ವಿಪಕ್ಷೀಯ ಪಂದ್ಯವು ಕೊನೆಯ ಬಾರಿಗೆ ನಡೆಯಿತು.

ಭಾರತವು 12 ಏಕದಿನ ಪಂದ್ಯಗಳಲ್ಲಿ 9-2 ಮತ್ತು ಹತ್ತು ಟಿ20 ಪಂದ್ಯಗಳಲ್ಲಿ 8-2 ದಾಖಲೆಗಳೊಂದಿಗೆ ಸಮಗ್ರವಾಗಿ ಉತ್ತಮ, ಹೆಚ್ಚು ಪ್ರಬಲ ತಂಡವಾಗಿದೆ. ಪಾಕಿಸ್ತಾನದ ಗೆಲುವುಗಳು ಅಸಮಾಧಾನದ ಬಣ್ಣವನ್ನು ಪಡೆದುಕೊಂಡಿವೆ. ಭಾರತದ ಗೆಲುವುಗಳು ನಿರೀಕ್ಷಿತವಾಗಿದ್ದವು. ನಿಕಟ ಸ್ಪರ್ಧೆಗಳು ತುಂಬಾ ಕಡಿಮೆ ಆಗಿವೆ. ಗುಣಮಟ್ಟ, ಚುರುಕುತನ, ಸಾಮಾನ್ಯ ಜ್ಞಾನ, ಭಾವನಾತ್ಮಕ ಸಮತೋಲನ ಮತ್ತು ಆಟದ ಅರಿವಿನ ಅಂತರವು ನಿಕಟ ಭವಿಷ್ಯದಲ್ಲಿ ಕಡಿಮೆಯಾಗಬಹುದು.

ಏಕೆಂದರೆ ಪಾಕಿಸ್ತಾನದಿಂದ ಒಂದು ಕಾಲದಲ್ಲಿ ಪ್ರವರ್ಧಮಾನಕ್ಕೆ ಬರುತ್ತಿದ್ದ ವಿಶ್ವದರ್ಜೆಯ ಬ್ಯಾಟರ್‌ಗಳು ಈಗ ಇಲ್ಲ. ಜಗತ್ತಿನ ಬೇರೆಲ್ಲ ತಂಡಗಳೂ ಬಿರುಗಾಳಿ ಎಬ್ಬಿಸುತ್ತಿರುವ ಹೊತ್ತಿನಲ್ಲಿ ಅವರು ತಮ್ಮ ತಲೆಗಳನ್ನು ಮರಳಲ್ಲಿ ಮುಚ್ಚಿಟ್ಟುಕೊಳ್ಳುತ್ತಿರುವ ಪ್ರಯತ್ನದಲ್ಲಿದ್ದಾರೆ!

ಆದರೆ ಭಾರತವು ನಿಧಾನವಾಗಿ ಆದರೂ ಬದಲಾಗಿದೆ. ಆಧುನಿಕ ಆಟಕ್ಕೆ ತಕ್ಕಂತೆ ಹೊಂದಿಕೊಂಡಿರುವ ರೀತಿ ಅದ್ಭುತ. ಐಪಿಎಲ್ ಟೂರ್ನಿಯು ಜಾಗತಿಕ ಮಟ್ಟದಲ್ಲಿ ಅದ್ಭುತ ವ್ಯವಸ್ಥೆಯಾಗಿ ರೂಪುಗೊಂಡಿದೆ. ಭಾರತೀಯ ಕ್ರಿಕೆಟ್ ವ್ಯವಸ್ಥೆಯು ಸದೃಢ, ರೋಮಾಂಚಕ, ರಚನಾತ್ಮಕವಾಗಿ ರೂಪುಗೊಂಡಿರುವುದರಲ್ಲಿ ಸಂದೇಹವಿಲ್ಲ.

ಇದೀಗ ಆ ಸತ್ಯಕ್ಕೆ ಕನ್ನಡಿ ಹಿಡಿದಿರುವ ಸೂರ್ಯಕುಮಾರ್ ಅವರ ಬೆನ್ನು ತಟ್ಟಬೇಕು. ಒಂದು ಕಾಲದಲ್ಲಿ ಉಭಯ ದೇಶಗಳ ಮಧ್ಯೆ ಇದ್ದ ಕ್ರಿಕೆಟ್ ವೈರತ್ವ ಈಗ ಇಲ್ಲ. ಬಹುಶಃ ಭವಿಷ್ಯದಲ್ಲಿಯೂ ಇರುವುದಿಲ್ಲ.

ಇಂದಿನ ಪಂದ್ಯ
ಪಾಕಿಸ್ತಾನ–ಶ್ರೀಲಂಕಾ
ಪಂದ್ಯ ಆರಂಭ: ರಾತ್ರಿ 8
ನೇರಪ್ರಸಾರ: ಸೋನಿ ಸ್ಪೋರ್ಟ್ಸ್

ಗನ್‌ಶಾಟ್: ಜನ ಏನಂದುಕೊಂಡರೂ ಚಿಂತೆಯಿಲ್ಲ –ಫರ್ಹಾನ್ ಪ್ರತಿಕ್ರಿಯೆ

ದುಬೈ (ಪಿಟಿಐ): ಪಾಕಿಸ್ತಾನ ತಂಡದ ಬ್ಯಾಟರ್ ಸಾಹೀಬ್‌ಝಾದಾ ಫರ್ಹಾನ್ ಅವರು ಭಾನುವಾರ ಭಾರತ ತಂಡದ ಎದುರಿನ ಏಷ್ಯಾ ಕಪ್ ಸೂಪರ್ ಫೋರ್ ಪಂದ್ಯದಲ್ಲಿ ಅರ್ಧಶತಕ ಗಳಿಸಿದರು. ಈ ಸಂದರ್ಭದಲ್ಲಿ ಅವರು ತಮ್ಮ ಬ್ಯಾಟ್ ಅನ್ನು ಬಂದೂಕಿನಂತೆ ಹಿಡಿದು ಟ್ರಿಗರ್ ಒತ್ತುವ ಅಣಕು (ಗನ್‌ಶಾಟ್) ಮಾಡಿ ಸಂಭ್ರಮಿಸಿದರು. ಅವರ ಈ ನಡೆಯು ಈಗ ಸಾರ್ವಜನಿಕ ವಲಯದಲ್ಲಿ ಟೀಕೆಗಳಿಗೆ ಕಾರಣವಾಗಿದೆ.

ಆದರೆ ಈ ಕುರಿತು ಪ್ರತಿಕ್ರಿಯಿಸಿರುವ ಫರ್ಹಾನ್ ಅವರು, 'ಸ್ಕೋರ್‌ಬೋರ್ಡ್‌ನಲ್ಲಿ ನನ್ನ ಅರ್ಧಶತಕದ ಸಾಧನೆ ಮೂಡಿದಾಗ ಮನಸ್ಸಲ್ಲಿ ಸಂಭ್ರಮಿಸಬೇಕು ಅನಿಸಿತ್ತು. ಮಾಡಿದೆ. ಇದಕ್ಕೆ ಜನ ಹೇಗೆ ಪ್ರತಿಕ್ರಿಯಿಸಬಹುದು ಎಂದು ನಾನು ಯೋಚಿಸಿಯೂ ಇಲ್ಲ. ಜನ ಹೇಗೆ ಸ್ವೀಕರಿದ್ದಾರೆಂದು ತಲೆಯನ್ನೂ ಕೆಡಿಸಿಕೊಳ್ಳುವುದೂ ಇಲ್ಲ' ಎಂದಿದ್ದಾರೆ.

ಈಶ ಗ್ರಾಮೋತ್ಸವ: ಬಡಗನ್ನೂರಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಬಡಗನ್ನೂರು ತಂಡವು ಕೊಯಮತ್ತೂರಿನಲ್ಲಿ ಭಾನುವಾರ ಮುಕ್ತಾಯಗೊಂಡ 17ನೇ ಆವೃತ್ತಿಯ ಈಶ ಗ್ರಾಮೋತ್ಸವದ ಮಹಿಳೆಯರ ಥ್ರೋಬಾಲ್ ಸ್ಪರ್ಧೆಯಲ್ಲಿ ಪ್ರಶಸ್ತಿ ಗೆದ್ದುಕೊಂಡಿತು. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೆಗ್ಗಡಿಹಳ್ಳಿ ತಂಡವು ಪುರುಷರ ವಾಲಿಬಾಲ್ ಸ್ಪರ್ಧೆಯಲ್ಲಿ ರನ್ನರ್ಸ್‌ಅಪ್ ಆಯಿತು.

ಕ್ರೀಡಾಕೂಟದಲ್ಲಿ ಕರ್ನಾಟಕದ ತಂಡಗಳೇ ಪಾರಮ್ಯ ಸಾಧಿಸಿದ್ದು ಕಂಡುಬಂತು. ಬಡಗನ್ನೂರು ತಂಡವು ಫೈನಲ್‌ನಲ್ಲಿ ಕೊಯಮತ್ತೂರು ಜಿಲ್ಲೆಯ ದೇವರಾಯಪುರಂ ತಂಡವನ್ನು ಸೋಲಿಸಿತು.

ಹೆಗ್ಗಡಿಹಳ್ಳಿ ತಂಡವು ಪ್ರಶಸ್ತಿ ಸುತ್ತಿನಲ್ಲಿ ತಮಿಳುನಾಡಿನ ಸೇಲಂ ಜಿಲ್ಲೆಯ ಉತ್ತಮಸೋಲಾಪುರಂ ತಂಡದ ವಿರುದ್ಧ ಪರಾಭವಗೊಂಡಿತು.

ಮಹಿಳೆಯರ ಥ್ರೋಬಾಲ್ ಸ್ಪರ್ಧೆಯಲ್ಲಿ ಪ್ರಶಸ್ತಿ ಗೆದ್ದ ಬಡಗನ್ನೂರು ತಂಡಕ್ಕೆ ಟ್ರೋಫಿ ಪ್ರದಾನ ಮಾಡಲಾಯಿತು. (ಎಡದಿಂದ) ಬ್ಯಾಡ್ಮಿಂಟನ್ ತಾರೆ ಸೈನಾ ನೆಹ್ವಾಲ್, ಚೆಸ್ ಗ್ರ್ಯಾಂಡ್‌ಮಾಸ್ಟರ್ ವೈಶಾಲಿ.ಆರ್, ಈಶ ಫೌಂಡೇಷನ್ ಸಂಸ್ಥಾಪಕ ಸದ್ಗುರು ಜಗ್ಗಿ ವಾಸುದೇವ್, ಕೇಂದ್ರ ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ, ಪ್ಯಾರಾಲಿಂಪಿಯನ್ ಭಾವಿನಾ ಪಟೇಲ್ ಅವರು 2025ರ ಆವೃತ್ತಿಯ ಗ್ರಾಮೋತ್ಸವ 'ಗ್ರ್ಯಾಂಡ್ ಫಿನಾಲೆ' ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು

ವಿಜೇತ ತಂಡಕ್ಕೆ ₹5 ಲಕ್ಷ ಹಾಗೂ ರನ್ನರ್ ಅಪ್ ತಂಡಕ್ಕೆ ₹3 ಲಕ್ಷ ಬಹುಮಾನ ವಿತರಿಸಲಾಯಿತು. ಅದರೊಂದಿಗೆ, ಎರಡು ತಿಂಗಳಿಂದ ನಡೆದ ದೇಶದ ಅತಿ ದೊಡ್ಡ ಗ್ರಾಮೀಣ ಕ್ರೀಡಾ ಉತ್ಸವಕ್ಕೆ ವಿಜೃಂಭಣೆಯ ತೆರೆಬಿತ್ತು.

ದಸರಾ ಕುಸ್ತಿಗೆ ಸಿ.ಎಂ ಸಿದ್ದರಾಮಯ್ಯ ಚಾಲನೆ

ಮೊದಲ ದಿನ ನಾಡಕುಸ್ತಿ ರಂಗು

ಪ್ರಜಾವಾಣಿ ವಾರ್ತೆ

ಮೈಸೂರು: ನಾಡಹಬ್ಬ ದಸರಾದ ಮೊದಲ ದಿನವಾದ ಸೋಮವಾರ ದಸರಾ ಕ್ರೀಡಾಕೂಟ ಹಾಗೂ ಕುಸ್ತಿಗೂ ಸಂಭ್ರಮದ ಚಾಲನೆ ದೊರೆತಿದ್ದು, ಆವೆ ಮಣ್ಣಿನಲ್ಲಿ ಪೈಲ್ವಾನರ ಕಾದಾಟವು ಪ್ರೇಕ್ಷಕರನ್ನು ತುದಿಗಾಲಲ್ಲಿ ನಿಲ್ಲಿಸಿತು.

ಇಲ್ಲಿನ ದೊಡ್ಡಕೆರೆ ಮೈದಾನದ ಡಿ. ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣದಲ್ಲಿ ಮಧ್ಯಾಹ್ನ ದಸರಾ ನಾಡಕುಸ್ತಿಯಲ್ಲಿ ಮಹದೇವಪುರದ ವಿಕಾಸ್ ಹಾಗೂ ದಾವಣಗೆರೆಯ ಕಿರಣ್ ನಡುವಿನ ಉದ್ಘಾಟನಾ ಪಂದ್ಯವೇ ರೋಚಕವಾಗಿತ್ತು.

ಆರಂಭದ ಹತ್ತು ನಿಮಿಷ ಸಮಬಲದ ಪ್ರದರ್ಶನ ನಡೆಯಿತು. ನಂತರದಲ್ಲಿ ವಿಕಾಸ್ ಎದುರಾಳಿಯನ್ನು ಹಿಡಿತಕ್ಕೆ ತೆಗೆದುಕೊಳ್ಳಲು ಮುಂದಾದರು. ಅಂತಿಮವಾಗಿ ಪಂದ್ಯದ 22ನೇ ನಿಮಿಷದಲ್ಲಿ ಕಿರಣ್ ಅವರನ್ನು ಚಿತ್ ಮಾಡಿ ವಿಜಯದ ನಗೆ ಬೀರಿದರು. ಕುಸ್ತಿ ಟೂರ್ನಿಗೆ ಚಾಲನೆ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಇಡೀ ಪಂದ್ಯವನ್ನು ವೀಕ್ಷಿಸಿ, ಕುಸ್ತಿಪಟುಗಳ ಬೆನ್ನು ತಟ್ಟಿದರು.

ಮಹಿಳೆಯರ ಕುಸ್ತಿ ಉದ್ಘಾಟನಾ ಪಂದ್ಯದಲ್ಲಿ ಗಾಣಿಗರ ಕೊಪ್ಪಲಿನ ನಂದಿನಿ ಮತ್ತು ಬೆಂಗಳೂರಿನ ಪುಷ್ಪಾ ಸ್ಪರ್ಧೆ ನಡೆಸಿದರು. ಕೇವಲ 1 ನಿಮಿಷ, 10 ಸೆಕೆಂಡಿನಲ್ಲೇ ನಂದಿನಿ ಎದುರಾಳಿಯನ್ನು ಸೋಲಿಸಿದರು. ಮೊದಲ ದಿನ ಒಟ್ಟು 40 ಜೋಡಿಗಳು ಸೆಣಸಿದವು.

ಸೆ.28ರವರೆಗೆ ಒಂದು ವಾರ ಕಾಲ ಕುಸ್ತಿ ಟೂರ್ನಿ ನಡೆಯಲಿದೆ. ನಾಡಕುಸ್ತಿಯಲ್ಲಿ ಒಟ್ಟು 250 ಜೋಡಿಗಳು ಸೆಣಸಲಿವೆ. ವಿಜೇತರು ಸಾಹುಕಾರ್ ಚೆನ್ನಯ್ಯ ಕಪ್, ಮೈಸೂರು ಮಹಾರಾಜ ಒಡೆಯರ್ ಕಪ್, ಮೈಸೂರು ಮೇಯರ್ ಕಪ್ ಮತ್ತು ಕಿತ್ತೂರು ರಾಣಿ ಚನ್ನಮ್ಮ ಕಪ್ ಎತ್ತಿ ಹಿಡಿಯಲಿದ್ದಾರೆ. 24ರಿಂದ 28ರ ವರೆಗೆ ಕಿರಿಯರ ವಿಭಾಗದ ಕುಸ್ತಿಗಳು ನಡೆಯಲಿವೆ.

ಮೈಸೂರಿನಲ್ಲಿ ಒಲಿಂಪಿಯನ್ ಕುಸ್ತಿಪಟು ವಿನೇಶ್ ಫೋಗಟ್ ಅವರಿಗೆ ₹ 5 ಲಕ್ಷದ ಚೆಕ್ ನೀಡಿ ಸನ್ಮಾನಿಸಲಾಯಿತು

ತಂಡದಲ್ಲಿ ಸ್ಥಾನಕ್ಕಾಗಿ ಕರುಣ್, ಪಡಿಕ್ಕಲ್ ಪೈಪೋಟಿ

ದುಬೈ (ಪಿಟಿಐ): ಇಂಗ್ಲೆಂಡ್ ವಿರುದ್ಧ ಸಾಧಾರಣ ಪ್ರದರ್ಶನ ನೀಡಿದ ಕರುಣ್ ನಾಯರ್ ಅವರು ವೆಸ್ಟ್ ಇಂಡೀಸ್ ವಿರುದ್ಧ ಎರಡು ಟೆಸ್ಟ್‌ಗಳ ಕ್ರಿಕೆಟ್ ಸರಣಿಯಲ್ಲಿ ಆಡುವ ಭಾರತ ತಂಡದಲ್ಲಿ ಸ್ಥಾನ ಉಳಿಸಿಕೊಳ್ಳುವರೇ ಎಂಬ ಕುತೂಹಲವಿದೆ. ರಾಜ್ಯದ ಇನ್ನೊಬ್ಬ ಆಟಗಾರ ದೇವದತ್ತ ಪಡಿಕ್ಕಲ್ ಅವರೂ ರೇಸ್‌ನಲ್ಲಿದ್ದಾರೆ.

ಅಕ್ಟೋಬರ್ 2 ರಂದು ಅಹಮದಾಬಾದಿನಲ್ಲಿ ಆರಂಭವಾಗುವ ಎರಡು ಟೆಸ್ಟ್‌ಗಳ ಸರಣಿಗೆ 15 ಆಟಗಾರರ ಭಾರತ ತಂಡವನ್ನು ಆಯ್ಕೆ ಮಾಡಲು ಅಜಿತ್ ಅಗರಕರ್ ನೇತೃತ್ವದ ಆಯ್ಕೆ ಸಮಿತಿ ಈ ವಾರ ಸಭೆ ಸೇರಲಿದೆ. ಬುಧವಾರ ಅಥವಾ ಗುರುವಾರ ಆನ್‌ಲೈನ್ ಮೂಲಕ ಸಭೆ ನಡೆಯುವ ಸಾಧ್ಯತೆಯಿದೆ.

ಬ್ಯಾಟರ್ ಕರುಣ್ ಅವರಿಗೆ ಪಡಿಕ್ಕಲ್ ಮತ್ತು ನಿತೀಶ್ ರೆಡ್ಡಿ ಅವರಿಂದ ಪೈಪೋಟಿ ಎದುರಾಗಲಿದೆ.

ಸಂಭವನೀಯ ತಂಡ (15): ಶುಭಮನ್ ಗಿಲ್ (ನಾಯಕ), ಯಶಸ್ವಿ ಜೈಸ್ವಾಲ್, ಕೆ.ಎಲ್.ರಾಹುಲ್, ಸಾಯಿ ಸುದರ್ಶನ್, ಕರುಣ್ ನಾಯರ್/ ದೇವದತ್ತ ಪಡಿಕ್ಕಲ್, ಧ್ರುವ್ ಜುರೇಲ್ (ವಿಕೆಟ್ ಕೀಪರ್), ರವೀಂದ್ರ ಜಡೇಜ, ವಾಷಿಂಗ್ಟನ್ ಸುಂದರ್, ಕುಲದೀಪ್ ಯಾದವ್, ಮೊಹಮ್ಮದ್ ಸಿರಾಜ್, ಪ್ರಸಿದ್ಧ ಕೃಷ್ಣ, ಅಕ್ಷರ್ ಪಟೇಲ್, ನಾರಾಯಣ ಜಗದೀಶನ್ (ವಿಕೆಟ್ ಕೀಪರ್), ನಿತೀಶ್ ರೆಡ್ಡಿ ಮತ್ತು ಆಕಾಶ್ ದೀಪ್.

ಫಿಡೆ ವಿಶ್ವಕಪ್: ದಿವ್ಯಾ ದೇಶಮುಖ್‌ಗೆ ವೈಲ್ಡ್‌ಕಾರ್ಡ್

ನವದೆಹಲಿ (ಪಿಟಿಐ): ಫಿಡೆ ಮಹಿಳಾ ವಿಶ್ವಕಪ್ ವಿಜೇತೆ ಗ್ರ್ಯಾಂಡ್ ಮಾಸ್ಟರ್ ದಿವ್ಯಾ ದೇಶಮುಖ್ ಅವರು ಗೋವಾದಲ್ಲಿ ನಡೆಯಲಿರುವ 2025ರ ಆವೃತ್ತಿಯ ಫಿಡೆ ವಿಶ್ವಕಪ್‌ಗೆ ವೈಲ್ಡ್‌ಕಾರ್ಡ್ ಪ್ರವೇಶ ಪಡೆದಿದ್ದಾರೆ.

ದಿವ್ಯಾ

ವಿಶ್ವಕಪ್ ಟೂರ್ನಿಯು ಅಕ್ಟೋಬರ್ 31ರಿಂದ ನವೆಂಬರ್ 27ರ ತನಕ ನಡೆಯಲಿದೆ. ಒಬ್ಬ ಸ್ಪರ್ಧಿಯು ಕೊನೆಯ ಕ್ಷಣದಲ್ಲಿ ಹಿಂದೆ ಸರಿದ ಕಾರಣ 19 ವರ್ಷದ ದಿವ್ಯಾ ಅವರಿಗೆ ಅವಕಾಶ ದೊರಕಿದೆ.

ಫಿಡೆ ವಿಶ್ವಕಪ್ ಪ್ರತಿ ಎರಡು ವರ್ಷಗಳಿಗೊಮ್ಮೆ ನಡೆಯುತ್ತದೆ. ವಿಶ್ವದ 206 ಚೆಸ್‌ಪಟುಗಳು ಕಣಕ್ಕೆ ಇಳಿಯಲಿದ್ದಾರೆ. 20 ಆಟಗಾರರನ್ನು ಒಳಗೊಂಡ ಭಾರತದ ಸವಾಲನ್ನು ವಿಶ್ವ ಚಾಂಪಿಯನ್ ಡಿ. ಗುಕೇಶ್ ಮುನ್ನಡೆಸಲಿದ್ದಾರೆ.

ಹಿನ್ನಡೆ ಭೀತಿಯಲ್ಲಿ ಕಾರ್ಯದರ್ಶಿ ಇಲೆವೆನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಚನ್ ಎಸ್. ಗೌಡ (88;155ಎ) ಮತ್ತು ಕೃತಿಕ್ ಕೃಷ್ಣ (ಔಟಾಗದೇ 89;180ಎ) ಅವರ ಚೆಂದದ ಬ್ಯಾಟಿಂಗ್ ನಂತರವೂ ಕೆಎಸ್‌ಸಿಎ ಕಾರ್ಯದರ್ಶಿ ಇಲೆವೆನ್ ತಂಡವು ಕ್ಯಾಪ್ಟನ್ ತಿಮ್ಮಪ್ಪಯ್ಯ ಸ್ಮಾರಕ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಗೋವಾ ತಂಡದ ವಿರುದ್ಧ ಮೊದಲ ಇನಿಂಗ್ಸ್ ಹಿನ್ನಡೆಯ ಭೀತಿಯಲ್ಲಿದೆ.

ನಗರದ ಹೊರವಲಯದಲ್ಲಿರುವ ಆಲೂರಿನ ಪ್ಲಾಟಿನಂ ಓವಲ್‌ನಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ಭಾನುವಾರ 9 ವಿಕೆಟ್‌ಗಳಿಗೆ 323 ರನ್ ಗಳಿಸಿದ್ದ ಗೋವಾ ತಂಡವು ಸೋಮವಾರ 338 ರನ್‌ಗಳಿಗೆ ಆಲೌಟ್ ಆಯಿತು. ಅದಕ್ಕೆ ಪ್ರತಿಯಾಗಿ ಇನಿಂಗ್ಸ್ ಆರಂಭಿಸಿದ ಕಾರ್ಯದರ್ಶಿ ಇಲೆವೆನ್ ತಂಡವು ಎರಡನೇ ದಿನದಾಟ ಅಂತ್ಯಕ್ಕೆ 83 ಓವರ್‌ಗಳಲ್ಲಿ 8 ವಿಕೆಟ್‌ಗೆ 245 ರನ್ ಗಳಿಸಿದೆ. ಇನಿಂಗ್ಸ್ ಚುಕ್ತಾ ಮಾಡಲು ಇನ್ನೂ 93 ರನ್ ಬೇಕಿದೆ.

ಗೋವಾ ತಂಡದ ಅರ್ಜುನ್ ತೆಂಡೂಲ್ಕರ್ 3 ವಿಕೆಟ್ ಪಡೆದು ಮಿಂಚಿದರೆ, ಮೋಹಿತ್ ರೇಡ್ಕರ್ ಎರಡು ವಿಕೆಟ್ ಕಬಳಿಸಿದರು.

ಕೃತಿಕ್ ಕೃಷ್ಣ ಅವರ ಹೊಡೆತದ ವೈಖರಿ ಚಿತ್ರ: ಕೃಷ್ಣ ಕುಮಾರ್ ಪಿ.ಎಸ್.

ಸಂಕ್ಷಿಪ್ತ ಸ್ಕೋರ್: ಆಲೂರು ಕ್ರೀಡಾಂಗಣ: ಗೋವಾ ತಂಡ: 94.4 ಓವರ್‌ಗಳಲ್ಲಿ 338 (ಲಲಿತ್ ಯಾದವ್ ಔಟಾಗದೇ 113; ಮಾಧವ್ ಪಿ. ಬಜಾಜ್ 88ಕ್ಕೆ 3). ಕೆಎಸ್‌ಸಿಎ ಕಾರ್ಯದರ್ಶಿ ಇಲೆವೆನ್: 83 ಓವರ್‌ಗಳಲ್ಲಿ 8 ವಿಕೆಟ್‌ಗೆ 245 (ಲೋಚನ್ ಎಸ್. ಗೌಡ 88, ಕೃತಿಕ್ ಕೃಷ್ಣ ಔಟಾಗದೇ 89; ಅರ್ಜುನ್ ತೆಂಡೂಲ್ಕರ್ 50ಕ್ಕೆ 3, ಮೋಹಿತ್ ರೇಡ್ಕರ್ 67ಕ್ಕೆ 2) **ಚಿನ್ನಸ್ವಾಮಿ ಕ್ರೀಡಾಂಗಣ:** ಮಧ್ಯಪ್ರದೇಶ: 141.2 ಓವರ್‌ಗಳಲ್ಲಿ 425 (ಹಿಮಾಂಶು ಮಂತ್ರಿ 131; ಮುಕುಲ್ ನೇಗಿ 110ಕ್ಕೆ 5). ಹಿಮಾಚಲ ಪ್ರದೇಶ: 36 ಓವರ್‌ಗಳಲ್ಲಿ 6 ವಿಕೆಟ್‌ಗೆ 106 (ಸಿದ್ಧಾಂತ್ ಪುರೋಹಿತ್ 39; ಕುಮಾರ್ ಕಾರ್ತಿಕೇಯ 23ಕ್ಕೆ 3)

ಗೆಲುವಿನ ಹಳಿಗೆ ಬೆಂಗಳೂರು ಬುಲ್ಸ್

ಜೈಪುರ: ರೇಡಿಂಗ್ ಮತ್ತು ಟ್ಯಾಕಲ್‌ನಲ್ಲಿ ಸಾಂಘಿಕ ಆಟ ಪ್ರದರ್ಶಿಸಿದ ಬೆಂಗಳೂರು ಬುಲ್ಸ್ ತಂಡವು ಸೋಮವಾರ 12ನೇ ಆವೃತ್ತಿಯ ಪ್ರೊ ಕಬಡ್ಡಿ ಲೀಗ್‌ನ ಪಂದ್ಯದಲ್ಲಿ 4 ಅಂಕಗಳಿಂದ ಗುಜರಾತ್ ಜೈಂಟ್ಸ್ ತಂಡವನ್ನು ಮಣಿಸಿತು.

ಇಲ್ಲಿನ ಸವಾಯಿ ಮಾನಸಿಂಗ್ ಕ್ರೀಡಾಂಗಣದಲ್ಲಿ ನಡೆದ ಈ ಆವೃತ್ತಿಯ 45ನೇ ಪಂದ್ಯದಲ್ಲಿ ಬುಲ್ಸ್ ತಂಡ 28-24ರಿಂದ ಜೈಂಟ್ಸ್‌ಗೆ ಸೋಲುಣಿಸಿತು. ತಮಿಳು ತಲೈವಾಸ್ ವಿರುದ್ಧ ಹಿಂದಿನ ಪಂದ್ಯದಲ್ಲಿ ಸೋಲು ಕಂಡಿದ್ದ ಯೋಗೇಶ್ ಸಾರಥ್ಯದ ಬುಲ್ಸ್ ತಂಡವು ಮತ್ತೆ ಗೆಲುವಿನ ಹಳಿಗೆ ಮರಳಿತು.

ಬೆಂಗಳೂರು ತಂಡಕ್ಕೆ ಒಂಬತ್ತು ಪಂದ್ಯಗಳಲ್ಲಿ ಇದು ಐದನೇ ಗೆಲುವಾಗಿದೆ. ಒಟ್ಟು 10 ಅಂಕಗಳನ್ನು ಸಂಪಾದಿಸಿ ಲೀಗ್ ಪಟ್ಟಿಯಲ್ಲಿ ನಾಲ್ಕನೇ ಸ್ಥಾನಕ್ಕೆ ಬಡ್ತಿ ಪಡೆಯಿತು. ಜೈಂಟ್ಸ್ ತಂಡಕ್ಕೆ ಏಳು ಪಂದ್ಯಗಳಲ್ಲಿ ಇದು ಆರನೇ ಸೋಲಾಗಿದ್ದು, ಕೊನೆಯ ಸ್ಥಾನದಲ್ಲಿ ಮುಂದುವರಿದಿದೆ.

ಆರಂಭದಲ್ಲಿ ಉಭಯ ತಂಡಗಳು ರಕ್ಷಣಾತ್ಮಕ ಆಟಕ್ಕೆ ಒತ್ತು ನೀಡಿದ ಕಾರಣ ರೇಡರ್‌ಗಳು ಪಾಯಿಂಟ್ಸ್ ಕಲೆ ಹಾಕಲು ತಿಣುಕಾಡಿದರು. ಮೊದಲಾರ್ಧದಲ್ಲಿ ಲಭಿಸಿದ ನಾಲ್ಕು ಅಂಕಗಳ (17-13) ಮುನ್ನಡೆಯ ವಿಶ್ವಾಸದೊಂದಿಗೆ ಆಟ ಮುಂದುವರಿಸಿದ ಬೆಂಗಳೂರು ತಂಡವು ಯಾವುದೇ ಹಂತದಲ್ಲೂ ಎದುರಾಳಿಗೆ ಚೇತರಿಸಿಕೊಳ್ಳಲು ಅವಕಾಶ ನೀಡಲಿಲ್ಲ. ಕೊನೆಯ ಹಂತದಲ್ಲಿ ಜೈಂಟ್ಸ್ ತಂಡವು ಕೊಂಚ ಪ್ರತಿರೋಧ ತೋರಿ, ಸೋಲಿನ ಅಂತರ ಕಡಿಮೆ ಮಾಡಿಕೊಂಡಿತು.

ಬುಲ್ಸ್ ಪರ ಆಕಾಶ್ ಶಿಂದೆ (7 ಅಂಕ), ಯೋಗೇಶ್ (6), ದೀಪಕ್ ಶಂಕರ್ (4) ಮತ್ತು ಆಶಿಶ್ ಮಲಿಕ್ (4) ಗಮನ ಸೆಳೆಯುವ ಆಟ ಪ್ರದರ್ಶಿಸಿದರು. ಗುಜರಾತ್ ಪರ ವಿಶ್ವನಾಥ್ ಮತ್ತು ಲಕ್ಕಿ ಶರ್ಮ ತಲಾ 5 ಅಂಕ ಗಳಿಸಿದರು.

ಬೆಂಗಳೂರು ಬುಲ್ಸ್ ತಂಡದ ಆಟಗಾರರು ಗುಜರಾತ್ ತಂಡದ ರೇಡರ್‌ನನ್ನು ಟ್ಯಾಕಲ್ ಮಾಡಲು ಯತ್ನಿಸಿದರು

ದಿನದ ಮತ್ತೊಂದು ಪಂದ್ಯದಲ್ಲಿ ಯು.ಪಿ. ಯೋಧಾಸ್ ತಂಡವು 39–22ರಿಂದ ತಮಿಳು ತಲೈವಾಸ್ ತಂಡವನ್ನು ಸುಲಭವಾಗಿ ಮಣಿಸಿತು.

ಇಂದಿನ ಪಂದ್ಯಗಳು: ಗುಜರಾತ್ ಜೈಂಟ್ಸ್–ತೆಲುಗು ಟೈಟನ್ಸ್ (ರಾತ್ರಿ 8) ಜೈಪುರ ಪಿಂಕ್ ಪ್ಯಾಂಥರ್ಸ್–ಯು ಮುಂಬಾ (ರಾತ್ರಿ 9)

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

PUBLIC NOTICE

ಕರ್ನಾಟಕ ಗೃಹ ಮಂಡಳಿ
ಗುರುಶ್ರೀ ಮ್ಯಾನ್‌ಷನ್, 1ನೇ ಮಹಡಿ, ಅರ್ಕಾವತಿ ಬಡಾವಣೆ, ಬಿ.ಎಂ. ರಸ್ತೆ, ಐಜೂರು ಪೋಲೀಸ್ ಸ್ಟೇಷನ್ ಹತ್ತಿರ, ಬೆಂಗಳೂರು ದಕ್ಷಿಣ ಜಿಲ್ಲೆ, (ರಾಮನಗರ–562159)
ದೂರವಾಣಿ: 080–27275632
ಸಂ:ಕಗೃಮಂ/ಸಕಾಅ/ಜಿಯೋಕ/ಬೆಂ.ದ.ಜಿಲ್ಲೆ/82/2025–26, ದಿನಾಂಕ: 17–09–2025
ಪ್ರಕಟಣೆ
ಬೆಂಗಳೂರು ದಕ್ಷಿಣ ಜಿಲ್ಲೆ (ರಾಮನಗರ), ಬಿಡದಿ ಹೋಬಳಿ, ಕಾಕರಾಮನಹಳ್ಳಿ, ಬೋರೇಹಳ್ಳಿ ಮತ್ತು ಮುದ್ದಾಪುರಕರೇನಹಳ್ಳಿ ಗ್ರಾಮದಲ್ಲಿ ನಿರ್ಮಿಸಿರುವ ನೇತಾಜಿ ಸುಭಾಷ್ ಚಂದ್ರ ಬೋಸ್ ಬಡಾವಣೆಯಲ್ಲಿ MIG ವರ್ಗದ ನಿವೇಶನ ಸಂಖ್ಯೆ: 235–B1 ಹಂಚಿಕೆದಾರರಾದ ಶ್ರೀಮತಿ ಇಂದ್ರಾಣಿ ರವರು ದಿನಾಂಕ: 23–06–2024 ರಂದು ಮರಣ ಹೊಂದಿರುತ್ತಾರೆ. ಈ ಹಿನ್ನಲೆಯಲ್ಲಿ ಸದರಿ ನಿವೇಶನವನ್ನು ದಿವಂಗತರ ಪತಿಯಾದ ಶ್ರೀ ಪುಟ್ಟಸ್ವಾಮಿ ಇವರ ಹೆಸರಿಗೆ ವರ್ಗಾವಣೆ ಮಾಡಲು ಪರಿಗಣಿಸಿದ್ದು, ಈ ಸಂಬಂಧ ಯಾವುದೇ ತಕರಾರು/ಆಕ್ಷೇಪಣೆ ಇದ್ದಲ್ಲಿ ಈ ಪ್ರಕಟಣೆಯು ಪ್ರಕಟಣೆಗೊಂಡ ದಿನಾಂಕದಿಂದ 15 ದಿನಗಳೊಳಗೆ ಸೂಕ್ತ ದಾಖಲಾತಿಗಳೊಂದಿಗೆ ತಕರಾರು ಅರ್ಜಿಯನ್ನು ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಜಿಲ್ಲಾ ಯೋಜನಾ ಕಛೇರಿಯಲ್ಲಿ ಸಲ್ಲಿಸಬಹುದಾಗಿದೆ. ನಿಗಧಿತ ದಿನಾಂಕದೊಳಗೆ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ಸದರಿ ಸ್ವತ್ತನ್ನು ಮೃತರ ವಾರಸುದಾರರಾದ ಶ್ರೀ ಪುಟ್ಟಸ್ವಾಮಿ ರವರಿಗೆ ವರ್ಗಾವಣೆ ಮಾಡಿಕೊಡಲಾಗುವುದೆಂದು ಹಾಗೂ ನಂತರ ಬರುವ ಯಾವುದೇ ತಕರಾರು/ ಮನವಿಗಳನ್ನು ಪರಿಗಣಿಸಲಾಗುವುದಿಲ್ಲವೆಂದು ಈ ಮೂಲಕ ತಿಳಿಯಪಡಿಸಿದೆ.
ಸಹಿ/- ಕಾರ್ಯಪಾಲಕ ಅಭಿಯಂತರರು,
ಕರ್ನಾಟಕ ಗೃಹ ಮಂಡಳಿ
ಸಮನ್ವಯ ಕಛೇರಿ, ಬೆಂಗಳೂರು ದಕ್ಷಿಣ ಜಿಲ್ಲೆ – 562159.

General

ಕರ್ನಾಟಕದಾದ್ಯಂತ ಕಂಪನಿಗಳಿಗೆ Work from Home ಕೆಲಸಕ್ಕೆ ಯುವಕರು, ಯುವತಿಯರು ಬೇಕಾಗಿದ್ದಾರೆ. 18000/- 25000/- 7th, 10th, AnyDegree. 9019427194

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000- 86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ಪ್ರವಾಸ

Travel

03.10.2025 ಗುರುವಾಯುರು, ಕೊಚ್ಚಿನ್, ಅಲಪೇ, ತಿರುವನಂತಪುರ, ಕನ್ಯಾಕುಮಾರಿ, ರಾಮೇಶ್ವರಂ. 03.10.2025 ಭೈದ್ಯನಾಥ್, ಗಯಾ, ಕಾಶಿ, ಅಯೋದ್ಯಾ, ಪ್ರಯಾಗ್‌ರಾಜ್. ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ). 9845035349, 9482435755.

ಉದ್ಯೋಗಾವಕಾಶ

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777503, 8884777502.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಜಿಲ್ಲಾನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ
ವಿಜಯನಗರ ಜಿಲ್ಲೆ ಹೊಸಪೇಟೆ–583201
ಸಂ: ಜಿ.ನ.ಕೊ.ವಿ/ಟೆಂಡರ್/ಅ.ನ.ಮ(4)/ಟೆಂ.ಪ್ರ/2025–26 ದಿನಾಂಕ :20.09.2025
ಅಲ್ಪಾವಧಿ ಟೆಂಡರ್ ಪ್ರಕಟಣೆ
ವಿಜಯನಗರ ಜಿಲ್ಲೆ ವ್ಯಾಪ್ತಿಯ ನಗರಸಭೆ ಹೊಸಪೇಟೆ ವ್ಯಾಪ್ತಿಯಲ್ಲಿ ಅಮೃತ ನಗರೋತ್ಥಾನ(ಮು)4 ರ ಯೋಜನೆಯಡಿ ಅನುಮೋದನೆಯಾದ ಕಾಮಗಾರಿಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸ್ಥಳೀಯ ಸಂಸ್ಥೆವಾರು ಟೆಂಡರ್‌ಗಳನ್ನು ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ದಸ್ತಾವೇಜು ಗಳನ್ವಯ ಈ ಕೆಳಕಾಣಿಸಿದಂತೆ **Public Procurement Portal** ಮೂಲಕ ಟೆಂಡರ್ ಅಹ್ವಾನಿಸಲಾಗಿರುತ್ತದೆ. **ಕಾಮಗಾರಿ ವಿವರ:** 01.Construction of UGD manhole chambers, providing and laying of ugd lines for missing links, household connection and restoration works at various locations in Hospete CMC Limits (DMA/2024-25/OW/WORK_INDENT35098/Call-4). **ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ):** 694.83. **ಇ.ಎಂ.ಡಿ. (ರೂ.ಗಳಲ್ಲಿ):** 1042245.00. **ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:** 06.10.2025 Time :16.30 Hr. **ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ:** 08.10.2025 Time :17.00 Hr.
ಮೇಲ್ಕಂಡ ದಿನಾಂಕಗಳಲ್ಲಿ ಆಕಸ್ಮಿಕ ರಜೆಗಳು ಬಂದಲ್ಲಿ ಮರು ದಿನವನ್ನು ಪರಿಗಣಿಸಲಾಗುವುದು, ಟೆಂಡರ್ ದಾಖಲಾತಿ ಮತ್ತು ಷರತ್ತುಗಳಿಗಾಗಿ **https://kppp.karnataka.gov.in** ವೆಬ್‌ಸೈಟ್‌ನಲ್ಲಿ ಲಾಗಿನ್ ಆಗಿ ಪರಿಶೀಲಿಸಿ, ಟೆಂಡರ್ ಭರ್ತಿ ಮಾಡುವುದು ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕಗಳಲ್ಲಿ ಬದಲಾವಣೆ ಅಥವಾ ಷರತ್ತುಗಳಲ್ಲಿ ಏನಾದರೂ ಮಾರ್ಪಾಡುಗಳಿದ್ದಲ್ಲಿ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪ್ರಚುರಪಡಿಸಲಾಗುವುದು. ಈ ಬಗ್ಗೆ ಪ್ರತ್ಯೇಕವಾಗಿ ಯಾವುದೇ ಪತ್ರಿಕಾ ಪ್ರಕಟಣೆ ನೀಡುವುದಿಲ್ಲ. ಹೆಚ್ಚಿನ ವಿವರಗಳಿಗೆ ಶ್ರೀ ಬಿ.ವೀರೇಶ್, ಸಹಾಯಕ ಕಾರ್ಯಪಾಲಕ ಅಭಿಯಂತರರು, (ದೂ ಸಂ: 9731867295) ಇವರನ್ನು ಸಂಪರ್ಕಿಸಿ ಪಡೆಯಬಹುದು.
ವಾ.ಸಾ.ಸಂ.ಇ/ವಿಜಯನಗರ/2025–26/ ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/267
ಸಹಿ/–ಕಾರ್ಯಪಾಲಕ ಅಭಿಯಂತರರು
ಜಿಲ್ಲಾನಗರಾಭಿವೃದ್ಧಿ ಕೋಶ, ವಿಜಯನಗರ ಜಿಲ್ಲೆ.

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರ ಕಛೇರಿ, ಕಾರ್ಯ ಮತ್ತು ಪಾಲನಾ ವಿಭಾಗ, ಪಾಂಡವಪುರ
ಮೊ.ಸಂ. 9448994893/9449598564 Website : eeeppura@cescmysore.org
ಪತ್ರ ಸಂಖ್ಯೆ:ಕಾನಿಇಂ(ವಿ)/ಪಾಂ.ಪುರ/ಲೆಅ/ಸಲೆಅ/ಹಿಸ(ಸಿ)/2025–26 ದಿನಾಂಕ : 22.09.2025
ಪ್ರಕಟಣೆ – ಅಂತಿಮ ಮರು ಕರೆ ನೋಟೀಸ್
ವಿಷಯ: **ಅನಧಿಕೃತ ಗೈರು ಹಾಜರಾತಿಯಲ್ಲಿರುವ ಶ್ರೀ ಯಲನಾಯ್ಕ ಗಿರೆಪ್ಪ ನಾಯ್ಕ, ಕಿರಿಯ ಪವರ್‌ಮ್ಯಾನ್ ರವರು ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಾಗಿರುವ ಬಗ್ಗೆ.**
ಉಲ್ಲೇಖ: 1)ಕಾನಿಇಂ(ವಿ)/ಲೆಅ/ಪಾಂ.ಪುರ/1452–54 ದಿನಾಂಕ: 12.07.2023.
2)ಕಾನಿಇಂ(ವಿ)/ಲೆಅ/ಸಲೆಅ/ಪಾಂ.ಪುರ/886–90 ದಿನಾಂಕ: 19.06.2024.
3)ಕಾನಿಇಂ(ವಿ)/ಪಾಂ.ಪುರ/ಲೆಅ/ಸಲೆಅ/ಹಿಸ(ಸಿ)/2024–25/6467–70 ದಿನಾಂಕ: 10.02.2025.
4)ಕಾನಿಇಂ(ವಿ)/ಪಾಂ.ಪುರ/ಲೆಅ/ಸಲೆಅ/ಹಿಸ(ಸಿ)/2025–26/551–54 ದಿನಾಂಕ: 21.05.2025.
5)ಕಾನಿಇಂ(ವಿ)/ಪಾಂ.ಪುರ/ಲೆಅ/ಸಲೆಅ/ಹಿಸ(ಸಿ)/2025–26/884 ದಿನಾಂಕ: 17.06.2025.
ಶ್ರೀ ಯಲನಾಯ್ಕ ಗಿರೆಪ್ಪ ನಾಯ್ಕ, ಕಿರಿಯ ಪವರ್‌ಮ್ಯಾನ್, ಚಾವಿಸನಿನಿ, ಪಟ್ಟಣ ಶಾಖೆ, ಶ್ರೀರಂಗಪಟ್ಟಣ ಉಪ–ವಿಭಾಗ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ನೀವು ದಿನಾಂಕ: 07.02.2023 ರಿಂದ 15.02.2023 ರವರೆಗೆ ಮುಂದುವರೆದಂತೆ ದಿ: 25.03.2023 ರಿಂದ ಈ ದಿನದವರೆವಿಗೂ ನಿಗಮದ ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಾಗಿರುತ್ತೀರಿ. ಉಲ್ಲೇಖಿತ ಪತ್ರಗಳಲ್ಲಿ ನೋಟೀಸು ಹಾಗೂ ಮರು ಕರೆ ನೋಟೀಸುಗಳನ್ನು ಜಾರಿ ಮಾಡಿದ್ದರೂ ಸಹ ಸ್ವೀಕೃತಗೊಳ್ಳದೆ ವಾಪಸ್ಸು ಬಂದಿರುತ್ತವೆ. ಅಲ್ಲದೆ ಉಲ್ಲೇಖಿತ (5) ರ ಆದೇಶದಂತೆ ಪ್ರಜಾವಾಣಿ ದಿನ ಪತ್ರಿಕೆಯಲ್ಲಿ ದಿನಾಂಕ: 02.07.2025 ರಂದು ಪ್ರಕಟಣೆಯನ್ನು ಹೊರಡಿಸಿ, ಕರ್ತವ್ಯಕ್ಕೆ ಹಾಜರಾಗುವಂತೆ ಅವಕಾಶ ನೀಡಿದ್ದರೂ, ಸಹ ಈವರೆವಿಗೆ ನೀವು ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲ. ಮುಂದುವರೆದಂತೆ ನಗದು ದುರೋಪಯೋಗಪಡಿಸಿಕೊಂಡಿರುವ ಪ್ರಕರಣಕ್ಕೆ ಸಂಬಂಧಪಟ್ಟಂತೆ, ನಿಮ್ಮ ವಿರುದ್ಧ ಇಲಾಖಾ ವಿಚಾರಣೆಗೆ ಆದೇಶಿಸಿದ್ದು, ನೀವು ವಿಚಾರಣೆಗೂ ಸಹ ಗೈರು ಹಾಜರಾಗಿರುತ್ತೀರಿ. ಈ ವಿಷಯದಲ್ಲಿ ಏಕಪಕ್ಷೀಯವಾಗಿ ತೀರ್ಮಾನ ಕೈಗೊಳ್ಳಲಾಗುವುದು ಎಂದು ತಿಳಿಸಲಾಗಿದೆ.
ನಿಮಗೆ ಅಂತಿಮವಾಗಿ ಮತ್ತೊಮ್ಮೆ ಅವಕಾಶ ನೀಡಲಾಗುತ್ತಿದ್ದು, ಈ ಪತ್ರಿಕಾ ಪ್ರಕಟಣೆಯ **ದಿನಾಂಕದಿಂದ 07 ದಿನಗಳ ಒಳಗಾಗಿ** ಈ ಕೆಳ ಸಹಿದಾರರ ಕಛೇರಿಯಲ್ಲಿ ಕರ್ತವ್ಯಕ್ಕೆ ಹಾಜರಾಗತಕ್ಕದ್ದು, ಇಲ್ಲವಾದಲ್ಲಿ, ನಿಮಗೆ ನಿಗಮದ ಸೇವೆಯಲ್ಲಿ ಮುಂದುವರೆಯುವ ಯಾವುದೇ ಇಚ್ಛೆ ಅಥವಾ ಆಸಕ್ತಿ ಇಲ್ಲವೆಂದು ಪರಿಗಣಿಸಿ, ಕವಿಪ್ರನಿನಿ ನೌಕರರ ಸೇವಾ (ನಡತೆ) ನಿಯಮಗಳು–1988 ರ ನಿಯಮ 33 (ಅನುಬಂಧ–ಬಿ) ರಡಿ ಉಲ್ಲೇಖಿಸಲಾದ (i), (iV), (Vi), (XiV) ರಲ್ಲಿನ ನಿಯಮದನ್ವಯ ದುರ್ನಡತೆ ಎಂದು ಪರಿಗಣಿಸಿ ಹಾಗೂ ನಿಮ್ಮ ವಿರುದ್ಧ ಕೆಇಬಿ ನೌಕರರ ವರ್ಗೀಕರಣ ಶಿಸ್ತು ನಿಯಂತ್ರಣ ಮತ್ತು ಮೇಲ್ಮನವಿ ನಿಯಮಾವಳಿ 1987 ರ ನಿಯಮಾವಳಿ 11 ರ ಅನ್ವಯ ನಿಮ್ಮನ್ನು ನಿಗಮದ ಸೇವೆಯಿಂದ ವಜಾಗೊಳಿಸಲಾಗುವುದು.
ಸಹಿ/–
ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನಾ ವಿಭಾಗ, ಪಾಂಡವಪುರ
ವಾಸಾಸಂಇ/ಮೈಸೂರು/08/ಎಸ್‌ಎಸ್‌ಸಿ/2025–26

ವಿಜಯ್ ಕೃಷ್ಣ, ಪ್ರಿಯಾಂಕಾ

7 ಸಾವಿರ ತೆರೆಗಳಲ್ಲಿ ಕಾಂತಾರ ಪ್ರೀಕ್ವೆಲ್

ನಟ ರಿಷಬ್ ಶೆಟ್ಟಿ ನಟಿಸಿ, ನಿರ್ದೇಶಿಸಿರುವ 'ಕಾಂತಾರ: ಒಂದು ದಂತಕಥೆ, ಚಾಪ್ಟರ್-1' ಸಿನಿಮಾ ದೇಶದಾದ್ಯಂತ ಸುಮಾರು ಏಳು ಸಾವಿರ ತೆರೆಗಳಲ್ಲಿ ಅ.2ರಂದು ಬಿಡುಗಡೆಯಾಗಲಿದೆ.

ಸಿನಿಮಾ ಟ್ರೇಲರ್ ರಿಲೀಸ್ ಕಾರ್ಯಕ್ರಮದಲ್ಲಿ ಮಾತನಾಡಿದ ಹೊಂಬಾಳೆ ಫಿಲ್ಮ್ಸ್ ಸಂಸ್ಥಾಪಕ ವಿಜಯ್ ಕಿರಗಂದೂರು, 'ದೇಶದಾದ್ಯಂತ ಏಳು ಸಾವಿರ ತೆರೆಗಳಲ್ಲಿ ಸಿನಿಮಾ ರಿಲೀಸ್ ಆಗಲಿದೆ. ಏಕಕಾಲದಲ್ಲಿ ಸುಮಾರು 30 ದೇಶಗಳಲ್ಲಿ ಸಿನಿಮಾ ತೆರೆಕಾಣಲಿದ್ದು, ಮೊದಲ ಬಾರಿಗೆ ದಕ್ಷಿಣ ಅಮೆರಿಕದಲ್ಲಿ ಸ್ಪ್ಯಾನಿಶ್ ಭಾಷೆಯಲ್ಲಿ ಡಬ್ ಆಗಿ ಸಿನಿಮಾ ಬಿಡುಗಡೆಯಾಗಲಿದೆ. ಸೆ.27ರಿಂದ ತಂಡ ಪ್ರಚಾರಕ್ಕಾಗಿ ಬೇರೆ ರಾಜ್ಯಗಳಿಗೆ ಹೋಗಲಿದೆ' ಎಂದರು.

ಸಿನಿಮಾ ಟಿಕೆಟ್ ದರ ಮಿತಿ ವಿಚಾರವಾಗಿ ಹೊಂಬಾಳೆ ಫಿಲ್ಮ್ಸ್ ನ್ಯಾಯಾಲಯದ ಮೆಟ್ಟಿಲೇರಿರುವ ವಿಚಾರಕ್ಕೆ ಸಂಬಂಧಿಸಿದಂತೆ ಈ ವೇದಿಕೆಯಲ್ಲಿ ಉತ್ತರಿಸಲು ವಿಜಯ್ ಕಿರಗಂದೂರು ನಿರಾಕರಿಸಿದರು.

ಸಾಕಷ್ಟು ಅಡೆತಡೆಗಳು: 'ಐದು ವರ್ಷದ 'ಕಾಂತಾರ'ದ ಪಯಣದಲ್ಲಿ ಸಿನಿಮಾ ಪೂರ್ಣಗೊಳಿಸಲಾಗದಷ್ಟು ಅಡೆತಡೆಗಳನ್ನು ಎದುರಿಸಿದ್ದೇವೆ. ಈ ಸಂದರ್ಭದಲ್ಲಿ ನನ್ನ ಬೆನ್ನಹಿಂದೆ ನಿಂತಿದ್ದು ನನ್ನ ಪತ್ನಿಯಾದ ಪ್ರಗತಿ. ಅವಳು ಹೊತ್ತ ಹರಕೆಗಳಿಗೆ ಲೆಕ್ಕವಿಲ್ಲ. ಅತ್ತು ಬಿಡುವಷ್ಟು ಭಾವನಾತ್ಮಕ ಪಯಣವೂ ಇದಾಗಿತ್ತು. ಮಕ್ಕಳನ್ನು ನೋಡುವಷ್ಟು ಸಮಯವೂ ನನಗೆ ಇರಲಿಲ್ಲ. ಎಲ್ಲವನ್ನೂ ಪ್ರಗತಿ ನಿಭಾಯಿಸುತ್ತಿದ್ದಳು. ಮೂರು ತಿಂಗಳಿಂದ ಸರಿಯಾಗಿ ನಿದ್ದೆಯೇ ಮಾಡಿಲ್ಲ. 'ಕಾಂತಾರ' ಸಿನಿಮಾ ಮಾಡಲು ಪ್ರಾರಂಭಿಸಿದ ಮೇಲೆ ಸೆಟ್‌ನಲ್ಲಿ ಹಾಗಾಯಿತು, ಹೀಗಾಯಿತು ಎನ್ನುವ ಸುದ್ದಿಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದವು. ಲೆಕ್ಕಹಾಕಿದರೆ ನಾಲ್ಕೈದು ಬಾರಿ ನಾನೇ ಸಾಯುವಂತಹ ಘಟನೆಗಳು ನಡೆದಿದ್ದವು. ಇವತ್ತು ನಾನು ಬದುಕಿ ಬಂದು, ಹೆಗಲ ಮೇಲೆ ಹೊತ್ತು ಈ ಸಿನಿಮಾವನ್ನು ಜನರ ಮುಂದೆ ಇಟ್ಟಿದ್ದೇನೆ ಎಂದರೆ ಅದಕ್ಕೆ ಆ ದೈವದ ಆಶೀರ್ವಾದವೇ ಕಾರಣ' ಎಂದರು ನಟ ರಿಷಬ್ ಶೆಟ್ಟಿ.

'ಈ ಸಿನಿಮಾಗಾಗಿ ದೈವಗಳ ಬಗ್ಗೆ ಸಂಶೋಧನೆ ಮಾಡಿರುವ ಪ್ರಾಧ್ಯಾಪಕರ ಜೊತೆ ಚರ್ಚಿಸಿ, ಸಂಶೋಧನೆಗಳನ್ನು ಮಾಡುತ್ತಾ ಮೂಲ ಕಥೆಯನ್ನು ರಚಿಸಿದ್ದೆ. ಕಳರಿಪಯಟ್ಟನ್ನು ಒಂದು ದೃಶ್ಯಕ್ಕಾಗಿ ನಾನು ಅಭ್ಯಾಸ ಮಾಡಿಲ್ಲ. ವ್ಯಾಯಾಮದ ಒಂದು ಭಾಗವಾಗಿರುವ ಈ ಕಲೆಯನ್ನು ಸಿನಿಮಾದ ಕಥೆಯೊಳಗೆ ಅಳವಡಿಸಿದ್ದೇನೆ. ಈ ಸಿನಿಮಾದಿಂದ ಸುಮಾರು 4.5 ಲಕ್ಷ ಗಂಟೆಯ ಕೆಲಸ ಜನರಿಗೆ ದೊರಕಿತ್ತು. ಸಿನಿಮಾ ಸ್ಥಳೀಯ ಊರಿನ ಜನರಿಗೂ ಉದ್ಯೋಗ ನೀಡಿತ್ತು' ಎಂದರು ರಿಷಬ್.


ರಿಷಬ್ ಶೆಟ್ಟಿ

ನಾನಾವತಾರಗಳಲ್ಲಿ ರಿಷಬ್

ಈ ವರ್ಷದ ಬಹುನಿರೀಕ್ಷಿತ ಸಿನಿಮಾಗಳಲ್ಲಿ ಒಂದಾದ 'ಕಾಂತಾರ' ಪ್ರೀಕ್ವೆಲ್ ಅ.2ರಂದು ತೆರೆಕಾಣುತ್ತಿದೆ. ಸಿನಿಮಾದ ಟ್ರೇಲರ್ ಬಿಡುಗಡೆಯಾಗಿದ್ದು, ನಾನಾವತಾರಗಳಲ್ಲಿ ರಿಷಬ್ ತೆರೆ ಮೇಲೆ ಬರಲಿದ್ದಾರೆ. 'ಕಾಂತಾರ' ಸಿನಿಮಾದಲ್ಲಿ 'ಶಿವ'ನ ತಂದೆ ಕಾಣೆಯಾದ ಜಾಗದಿಂದ 'ಪ್ರೀಕ್ವೆಲ್'ನ ಕಥೆ ಆರಂಭವಾಗಲಿದೆ. 'ಶಿವ'ನ ಹಿರಿಯರ ಕಥೆ 'ಪ್ರೀಕ್ವೆಲ್'ನಲ್ಲಿದ್ದು, ಧರ್ಮ ಕಾಪಾಡಲು ಬಂದ ಶಿವನ ಗಣದ ಉಲ್ಲೇಖ ಇಲ್ಲಿದೆ. ಆದಿ ದೈವ ಎಂದು ಕರೆಯಲ್ಪಡುವ 'ಬೆರ್ಮೆ'ಯ ಸುತ್ತ ಈ ಸಿನಿಮಾ ಸಾಗುತ್ತದೆ. 'ಈಶ್ವರ'ನಾಗಿಯೂ ರಿಷಬ್ ಶೆಟ್ಟಿ ಕ್ಲೈಮ್ಯಾಕ್ಸ್‌ನಲ್ಲಿ ಕಾಣಿಸಿಕೊಳ್ಳಲಿದ್ದಾರೆ. ರಾಜಕುಮಾರಿಯಾಗಿ ರುಕ್ಮಿಣಿ ವಸಂತ್, 'ರಾಜ'ನಾಗಿ ಮಲಯಾಳ ನಟ ಜಯರಾಮ್, 'ಕುಲಶೇಖರ' ಎಂಬ ಪಾತ್ರದಲ್ಲಿ ಬಾಲಿವುಡ್ ನಟ ಗುಲ್ಶನ್ ದೇವಯ್ಯ ಚಿತ್ರದಲ್ಲಿದ್ದಾರೆ.

ಒಟಿಟಿಯಲ್ಲಿ ದೂರ ತೀರ ಯಾನ

ನಿರ್ದೇಶಕ ಮಂಸೋರೆ ನಿರ್ದೇಶನದ 'ದೂರ ತೀರ ಯಾನ' ಸಿನಿಮಾ ಸೆ.26ರಂದು ಸನ್‌ನೆಕ್ಸ್ಟ್ ಒಟಿಟಿ ವೇದಿಕೆಯಲ್ಲಿ ರಿಲೀಸ್ ಆಗಲಿದೆ.

ಕಳೆದ ಜುಲೈ 11ರಂದು ತೆರೆಕಂಡಿದ್ದ ಈ ಸಿನಿಮಾವನ್ನು ಡಿ.ಕ್ರಿಯೇಷನ್ಸ್ ಮೂಲಕ ದೇವರಾಜ್ ಆರ್. ನಿರ್ಮಾಣ ಮಾಡಿದ್ದರು. ಸಿನಿಮಾದಲ್ಲಿ ವಿಜಯ್ ಕೃಷ್ಣ ಹಾಗೂ ಪ್ರಿಯಾಂಕ ಕುಮಾರ್ ಜೋಡಿ ನಟಿಸಿದೆ. ಇದೊಂದು ಟ್ರಾವೆಲಿಂಗ್ ಸ್ಟೋರಿಯಾಗಿದ್ದು, ಚಿತ್ರದ ಮೊದಲ ಹತ್ತು ನಿಮಿಷದ ಕಥೆ ಬೆಂಗಳೂರಿನಲ್ಲಿ ನಡೆಯುತ್ತದೆ. ಉಳಿದೆಲ್ಲಾ ಕಥೆ ದಾರಿಯಲ್ಲಿ ಸಾಗುತ್ತದೆ. ಕಥೆಯ ನಾಯಕ ಆಕಾಶ್ ಮತ್ತು ನಾಯಕಿ ಭೂಮಿ ಐದು ವರ್ಷಗಳಿಂದ ಪ್ರೀತಿಸುತ್ತಿರುತ್ತಾರೆ. ಇಬ್ಬರ ನಡುವಿನ ಸಂಬಂಧ ಸರಿ ಬರುತ್ತಿಲ್ಲ. ಸಣ್ಣ, ಸಣ್ಣ ವಿಷಯಗಳಿಗೂ ಜಗಳ. ಹೀಗಾಗಿ ಮದುವೆಯಾಗದೇ ಸಂಬಂಧವನ್ನು ಕಡಿದುಕೊಳ್ಳುವ ನಿರ್ಧಾರಕ್ಕೆ ಬರುತ್ತಾರೆ. ಇಬ್ಬರೂ ಒಂದು ವಾರ ಒಟ್ಟಿಗೆ ಪಯಣಿಸಿ, ಬಳಿಕ ಬೇರೆಯಾಗಲು ನಿರ್ಧಾರ ಮಾಡುತ್ತಾರೆ. ಆ ಒಂದು ವಾರದ ಬದುಕಿನ ಪಯಣವೇ ಕಥೆಯಾಗಿದೆ.

'ಮಫ್ತಿ ಪೊಲೀಸ್' ಆದ ಅರ್ಜುನ್ ಸರ್ಜಾ

ಆ್ಯಕ್ಷನ್ ಕಿಂಗ್ ಅರ್ಜುನ್ ಸರ್ಜಾ ಮತ್ತು ಐಶ್ವರ್ಯ ರಾಜೇಶ್ ಮುಖ್ಯಭೂಮಿಕೆಯಲ್ಲಿ ನಟಿಸಿರುವ ಪ್ಯಾನ್ ಇಂಡಿಯಾ ಸಿನಿಮಾ 'ಮಫ್ತಿ ಪೊಲೀಸ್' ಸಿನಿಮಾದ ಟೀಸರ್ ಬಿಡುಗಡೆಯಾಗಿದೆ.

ಜಿ.ಎಸ್. ಆರ್ಟ್ಸ್ ನಿರ್ಮಿಸಿರುವ ಈ ಚಿತ್ರವನ್ನು ನಿರ್ಮಾಪಕ ಜಿ.ಅರುಲ್ ಕುಮಾರ್ ಪ್ರಸ್ತುತಪಡಿಸಿದ್ದಾರೆ. ದಿನೇಶ್ ಲಕ್ಷ್ಮಣನ್ ನಿರ್ದೇಶನದ ಚೊಚ್ಚಲ ಚಿತ್ರ ಇದಾಗಿದೆ. 'ಮಫ್ತಿ ಪೊಲೀಸ್' ಕ್ರೈಂ ಥ್ರಿಲ್ಲರ್ ಕಥಾಹಂದರ ಹೊಂದಿದೆ. 'ನ್ಯಾಯವನ್ನು ನೀತಿಯಿಂದ ಮೀರಿಸಬಹುದು. ಆದರೆ ಅಂತಿಮ ಲೆಕ್ಕಾಚಾರದಲ್ಲಿ ನೀತಿ ಮಾತ್ರ ಗೆಲ್ಲುತ್ತದೆ ಎಂಬ ಎಳೆ ಇಟ್ಟುಕೊಂಡು ಸಿನಿಮಾ ಮಾಡಲಾಗಿದೆ' ಎಂದಿದೆ ಚಿತ್ರತಂಡ.

ಟೀಸರ್‌ನಲ್ಲಿ ಭರ್ಜರಿಯಾದ ಆ್ಯಕ್ಷನ್ ದೃಶ್ಯಗಳು ತುಂಬಿವೆ. ಅಭಿರಾಮಿ, ರಾಮ್‌ಕುಮಾರ್, ಜಿ.ಕೆ.ರೆಡ್ಡಿ, ಪಿ.ಎಲ್. ತೇನಪ್ಪನ್, ಲೋಗು, ವೇಲಾ ರಾಮಮೂರ್ತಿ, ತಂಗದುರೈ, ರಾಹುಲ್, ಒ.ಎ.ಕೆ. ಸುಂದರ್ ಸೇರಿದಂತೆ ಹಲವರು ತಾರಾಬಳಗದಲ್ಲಿದ್ದಾರೆ. ಸರವಣನ್ ಅಭಿಮನ್ಯು ಛಾಯಾಚಿತ್ರಗ್ರಹಣ, ಆಶಿವಗನ್ ಸಂಗೀತ, ಲಾರೆನ್ಸ್ ಕಿಶೋರ್ ಸಂಕಲನ ಚಿತ್ರಕ್ಕಿದೆ. ಸಿನಿಮಾ ಬಿಡುಗಡೆ ದಿನಾಂಕವನ್ನು ಶೀಘ್ರದಲ್ಲೇ ಚಿತ್ರತಂಡ ಘೋಷಿಸಲಿದೆ. ಕನ್ನಡ ಸೇರಿದಂತೆ ನಾಲ್ಕು ಭಾಷೆಗಳಲ್ಲಿ ಸಿನಿಮಾ ತೆರೆಕಾಣಲಿದೆ.


ಅರ್ಜುನ್ ಸರ್ಜಾ, ಐಶ್ವರ್ಯ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	25,327
ಇಂದಿನ ಅಂತ್ಯ:	25,202
ದಿನದ ಕನಿಷ್ಠ:	25,151
	124

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	100 ಕ್ಕೆ	₹580
	12 ಕ್ಕೆ	₹80
ಮೈಸೂರು:	100 ಕ್ಕೆ	₹585

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹335-681
ದ್ವಿತಳಿ (ಬಿ.ವಿ)	₹500-825

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹183
ಆರ್‌ಎಸ್‌ಎಸ್-5	₹178
ಗುಡ್ ಲಾಟ್	₹163

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1330 (1325)
ಸೋಯಾ (ರಿಫೈನ್ಡ್)	₹1280 (1275)
ಸೂರ್ಯಕಾಂತಿ (ರಿಫೈನ್ಡ್)	₹1420 (1415)
ಪಾಮೋಲಿನ್	₹1280 (1275)

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹16000-20000
ಮಧುಗಿರಿ	₹15500-16800
ತಿಪಟೂರು	₹26000-27609
ತುರುವೇಕೆರೆ	₹26000-27000

ಎಚ್–1ಬಿ ಪರಿಣಾಮ: ಸೂಚ್ಯಂಕ ಇಳಿಕೆ

ಮುಂಬೈ (ಪಿಟಿಐ): ಅಮೆರಿಕದ ಎಚ್–1ಬಿ ವೀಸಾ ಶುಲ್ಕ ಹೆಚ್ಚಳದ ನಿರ್ಧಾರದ ಪರಿಣಾಮವಾಗಿ ದೇಶದ ಮಾಹಿತಿ ತಂತ್ರಜ್ಞಾನ ವಲಯದ ಕಂಪನಿಗಳ ಷೇರಿನ ಮೌಲ್ಯವು ಇಳಿದಿದೆ. ಹೀಗಾಗಿ, ಸೋಮವಾರ ನಡೆದ ವಹಿವಾಟಿನಲ್ಲಿ ಷೇರುಪೇಟೆ ಸೂಚ್ಯಂಕಗಳು ಇಳಿಕೆ ಕಂಡಿವೆ. ಸೂಚ್ಯಂಕಗಳ ಇಳಿಕೆಯಿಂದ ಮಾರುಕಟ್ಟೆ ಬಂಡವಾಳ ಮೌಲ್ಯ ₹83,994 ಕೋಟಿ ಕರಗಿದೆ. ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 466 ಅಂಶ ಇಳಿಕೆಯಾಗಿ, 82,159ಕ್ಕೆ ವಹಿವಾಟು ಅಂತ್ಯಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ 124 ಅಂಶ ಕಡಿಮೆಯಾಗಿ, 25,202ಕ್ಕೆ ಕೊನೆಗೊಂಡಿದೆ.

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಜಿಎಸ್‌ಟಿ: ನಿತ್ಯದ ವೆಚ್ಚ ಶೇ 13ರಷ್ಟು ಇಳಿಕೆ

ಸ್ಟೇಷನರಿ, ಬಟ್ಟೆ, ಪಾದರಕ್ಷೆ ಮತ್ತು ಔಷಧಗಳ ಖರೀದಿಯಿಂದ ಶೇ 12ರವರೆಗೆ ಉಳಿತಾಯ: ಕೇಂದ್ರ ಸರ್ಕಾರ ಅಂದಾಜು

ನವದೆಹಲಿ (ಪಿಟಿಐ): ಜಿಎಸ್‌ಟಿ ದರದಲ್ಲಿ ಆಗಿರುವ ಪರಿಷ್ಕರಣೆಯು ದಿನಸಿ ವಸ್ತುಗಳು ಹಾಗೂ ನಿತ್ಯದ ಬಳಕೆಯ ಇತರ ವಸ್ತುಗಳಿಗೆ ಮಾಡುವ ವೆಚ್ಚದಲ್ಲಿ ಶೇಕಡ 13ರಷ್ಟು ಉಳಿತಾಯಕ್ಕೆ ಕಾರಣವಾಗುತ್ತದೆ ಎಂದು ಕೇಂದ್ರ ಸರ್ಕಾರ ಅಂದಾಜು ಮಾಡಿದೆ.

ಪರಿಷ್ಕೃತ ದರವು ಸೋಮವಾರದಿಂದ ಜಾರಿಗೆ ಬಂದಿದೆ. ಸಣ್ಣ ಕಾರು ಖರೀದಿಸಲು ಮುಂದಾಗುವವರು ಅಂದಾಜು ₹70 ಸಾವಿರ ಉಳಿತಾಯ ಮಾಡಲು ಸಾಧ್ಯವಿದೆ.

ಸ್ಟೇಷನರಿ, ಬಟ್ಟೆ, ಪಾದರಕ್ಷೆ ಮತ್ತು ಔಷಧಗಳ ಖರೀದಿ ಸಂದರ್ಭದಲ್ಲಿ ಶೇ 7ರಿಂದ ಶೇ 12ರವರೆಗೆ ಉಳಿತಾಯ ಆಗಲಿದೆ ಎಂದು ಸರ್ಕಾರವು ಅಂದಾಜಿಸಿದೆ. ವೈಯಕ್ತಿಕ ಆರೋಗ್ಯ ವಿಮೆ ಹಾಗೂ ಜೀವ ವಿಮಾ ಪಾಲಿಸಿಗಳ ಪ್ರೀಮಿಯಂ ಮೇಲಿನ ಉಳಿತಾಯವು ಶೇ 18ರಷ್ಟು ಇರಲಿದೆ.

ದಿನಸಿ ಉತ್ಪನ್ನಗಳು, ಕೃಷಿ ಉಪಕರಣಗಳು, ಬಟ್ಟೆ, ಔಷಧಗಳು ಮತ್ತು ವಾಹನಗಳು ಸೇರಿದಂತೆ ಒಟ್ಟು 375 ಉತ್ಪನ್ನಗಳ ಮೇಲಿನ ಜಿಎಸ್‌ಟಿ ದರ ಪರಿಷ್ಕರಣೆ ಆಗಿದೆ. ಜಿಎಸ್‌ಟಿ ಸುಧಾರಣೆಗಳನ್ನು ಪ್ರಧಾನಿ ನರೇಂದ್ರ ಮೋದಿ ಅವರು 'ಜಿಎಸ್‌ಟಿ ಉಳಿತಾಯ ಉತ್ಸವ' ಎಂದು ಕರೆದಿದ್ದಾರೆ.

1,800 ಸಿ.ಸಿ.ವರೆಗಿನ ಎಂಜಿನ್ ಸಾಮರ್ಥ್ಯದ ಟ್ರ್ಯಾಕ್ಟರ್ ಖರೀದಿಸುವವರಿಗೆ ₹40 ಸಾವಿರದವರೆಗೆ ಉಳಿತಾಯ ಆಗಲಿದೆ. 350 ಸಿ.ಸಿ. ವರೆಗಿನ ಎಂಜಿನ್ ಸಾಮರ್ಥ್ಯದ ದ್ವಿಚಕ್ರ ವಾಹನ ಖರೀದಿಸುವವರಿಗೆ ₹8,000ದಷ್ಟು, 32 ಇಂಚುಗಳಿಗಿಂತ ಹೆಚ್ಚು ದೊಡ್ಡದಾದ ಟಿ.ವಿ. ಖರೀದಿಸುವವರಿಗೆ ₹3,500ರಷ್ಟು, ಹವಾನಿಯಂತ್ರಕ ಖರೀದಿ ಸಮಯದಲ್ಲಿ ₹2,800ರಷ್ಟು ಉಳಿತಾಯ ಆಗಲಿದೆ.

ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಜಿಎಸ್‌ಟಿ ಇಳಿಕೆಯ ಪರಿಣಾಮವಾಗಿ ಗೋರಖ್‌ಪುರದ ಮಳಿಗೆಯೊಂದರಲ್ಲಿ ಬಟ್ಟೆಯ ಮಾರಾಟ ದರ ಇಳಿಕೆ ಆಗಿರುವುದನ್ನು ಸೋಮವಾರ ಪರಿಶೀಲಿಸಿದರು ಪಿಟಿಐ ಚಿತ್ರ

ಕಾರು ಮಾರಾಟ ಬಿರುಸು

ಜಿಎಸ್‌ಟಿ ದರ ಪರಿಷ್ಕರಣೆ ಜಾರಿಗೆ ಬಂದ ಮೊದಲ ದಿನವೇ ಕಾರು ಮಾರಾಟ ಮಳಿಗೆಗಳಲ್ಲಿ ಗ್ರಾಹಕರ ಸಂಖ್ಯೆ ಹೆಚ್ಚಾಗಿತ್ತು.

ಗ್ರಾಹಕರು ಡೀಲರ್‌ಗಳನ್ನು ಸಂಪರ್ಕಿಸಿ ಕಾರುಗಳ ಬಗ್ಗೆ ವಿಚಾರಿಸುವುದು ಕಳೆದ 3-4 ವಾರಗಳಿಂದ ದೊಡ್ಡ ಪ್ರಮಾಣದಲ್ಲಿ ಹೆಚ್ಚಾಗಿತ್ತು. ನವರಾತ್ರಿಯ ಮೊದಲ ದಿನ ಬಹಳ ಒಳ್ಳೆಯ ರೀತಿಯಲ್ಲಿ ಮಾರಾಟ ನಡೆದಿದೆ ಎಂದು ಆಟೊಮೊಬೈಲ್ ಡೀಲರ್‌ಗಳ ಸಂಘಟನೆಗಳ ಒಕ್ಕೂಟದ (ಎಫ್‌ಎಡಿಎ) ಅಧ್ಯಕ್ಷ ಸಿ.ಎಸ್. ವಿಘ್ನೇಶ್ವರ ತಿಳಿಸಿದ್ದಾರೆ.

'ಈ ತೆರಿಗೆ ಸುಧಾರಣೆಯ ಪರಿಣಾಮವು ಈ ತಿಂಗಳಿಗೆ, ಈ ಅವಧಿಗೆ ಸೀಮಿತ ಎಂದು ನಾನು ಭಾವಿಸಿಲ್ಲ. ಇದು ಮುಂದಿನ ಕೆಲವು ವರ್ಷಗಳವರೆಗೆ ನಮಗೆ ಪ್ರಯೋಜನ ತಂದುಕೊಡಲಿದೆ' ಎಂದು ಅವರು ಹೇಳಿದ್ದಾರೆ.

ನವರಾತ್ರಿಯ ಮೊದಲ ದಿನ ಎಷ್ಟು ವಾಹನಗಳ ಮಾರಾಟ ಆಗಿದೆ ಎಂಬ ವಿವರವನ್ನು ಅವರು ನೀಡಿಲ್ಲ.

ಸೋಮವಾರ ಕಾರು ಮಾರಾಟದಲ್ಲಿ ಶೇ 400ರಷ್ಟು ಏರಿಕೆ ಆಗಿದೆ ಎಂದು ಬಳಸಿದ ಕಾರುಗಳ ಮಾರಾಟ ವೇದಿಕೆ ಕಾರ್ಸ್24 ಹೇಳಿದೆ. ದೆಹಲಿ, ಅಹಮದಾಬಾದ್, ಬೆಂಗಳೂರು, ಪುಣೆ ಮತ್ತು ಮುಂಬೈನಲ್ಲಿ ಹೆಚ್ಚಿನ ಕಾರುಗಳ ಮಾರಾಟ ಕಂಡುಬಂದಿದೆ ಎಂದು ತಿಳಿಸಿದೆ.

ಚಿನ್ನ ₹2,200, ಬೆಳ್ಳಿ ₹4,380 ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಸೋಮವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆ ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ಏರಿಕೆಯಾಗಿದೆ.

10 ಗ್ರಾಂ ಚಿನ್ನದ (ಶೇ 99.9 ಪರಿಶುದ್ಧತೆ) ದರವು ₹2,200 ಹೆಚ್ಚಳವಾಗಿ, ₹1,16,200ರಂತೆ ಮಾರಾಟವಾಗಿದೆ. ಆಭರಣ ಚಿನ್ನದ (ಶೇ 99.5 ಪರಿಶುದ್ಧತೆ) ಬೆಲೆಯು ₹2,150 ಏರಿಕೆಯಾಗಿ, ₹1,15,650 ಆಗಿದೆ. ಬೆಳ್ಳಿ ದರವು ಕೆ.ಜಿಗೆ ₹4,380 ಹೆಚ್ಚಳವಾಗಿ, ₹1,36,380ಕ್ಕೆ ತಲುಪಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

'ಪ್ರಸಕ್ತ ವರ್ಷದ ಅಂತ್ಯದ ವೇಳೆಗೆ ಅಮೆರಿಕದ ಫೆಡರಲ್ ರಿಸರ್ವ್ ಎರಡು ಬಾರಿ ಬಡ್ಡಿ ದರ ಕಡಿತ ಮಾಡುವ ನಿರೀಕ್ಷೆ ಇದೆ. ಅಲ್ಲದೆ, ಕೇಂದ್ರೀಯ ಬ್ಯಾಂಕ್‌ಗಳಿಂದ ಚಿನ್ನದ ಖರೀದಿ ಪ್ರಮಾಣವು ಹೆಚ್ಚಳವಾಗಿದೆ. ಇದು ಹಳದಿ ಲೋಹದ ದರ ಏರಿಕೆಗೆ ಕಾರಣವಾಗಿದೆ' ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಹಿರಿಯ ವಿಶ್ಲೇಷಕ ಸೌಮಿಲ್ ಗಾಂಧಿ ಹೇಳಿದ್ದಾರೆ.

'ವಿದ್ಯುತ್‌ಚಾಲಿತ ವಾಹನಗಳು, ಎಲೆಕ್ಟ್ರಾನಿಕ್ಸ್ ವಲಯ, ಸೌರ ಪರಿಕರಗಳಿಗೆ ಬೆಳ್ಳಿ ಬಳಸಲಾಗುತ್ತಿದ್ದು, ಹೆಚ್ಚಿನ ಬೇಡಿಕೆ ಇದೆ. ಆದರೆ, ಬೆಳ್ಳಿ ಪೂರೈಕೆಯಲ್ಲಿ ಇಳಿಕೆ ಆಗಿದೆ. ಇದು ಬೆಳ್ಳಿ ದರ ಏರಿಕೆಗೆ ಕಾರಣವಾಗಿದೆ' ಎಂದು ರಿಲಯನ್ಸ್ ಸೆಕ್ಯುರಿಟೀಸ್‌ನ ಹಿರಿಯ ಸಂಶೋಧನಾ ವಿಶ್ಲೇಷಕ ಜಿಗರ್ ತ್ರಿವೇದಿ ಹೇಳಿದ್ದಾರೆ.

ಅಡಿಕೆ ಧಾರಣೆ

ಕುಮಟಾ		ಶಿವಮೊಗ್ಗ		ಶಿರಸಿ	
ಚಾಲಿ	37099-44299	ಬೆಟ್ಟೆ	47599-65899	ಬೆಟ್ಟೆ	27609-46989
ಚಿಪ್ಪು	26899-33099	ಗೊರಬಲು	19019-36750	ಬಿಳಿಗೋಟು	28799-36099
ಕೋಕ	7569-27099	ಹೊಸತು	48036-58099	ಚಾಲಿ	35199-44500
ಫ್ಯಾಕ್ಟರಿ	6019-26569	ರಾಶಿ	48069-61099	ಕೆಂಪುಗೋಟು	26118-29699
ಹೊಸಚಾಲಿ	38999-43999	ಸರಕು	69230-84996	ರಾಶಿ	44010-50699
ಸಾಗರ		**ಸಿದ್ದಾಪುರ**		**ಯಲ್ಲಾಪುರ**	
ಬಿಳಿಗೋಟು	18099-33707	ಬಿಳಿಗೋಟು	25100-33109	ಬಿಳಿಗೋಟು	19410-34900
ಚಾಲಿ	30299-40699	ಚಾಲಿ	36066-43599	ಚಾಲಿ	35309-44399
ಕೋಕ	11099-26989	ಕೋಕ	20099-26800	ಕೋಕ	11699-18900
ಕೆಂಪುಗೋಟು	29999-36399	ಕೆಂಪುಗೋಟು	21600-27489	ಕೆಂಪುಗೋಟು	22109-27629
ರಾಶಿ	41689-60849	ರಾಶಿ	43319-52029	ರಾಶಿ	41199-55799
ಸಿಪ್ಪೆಗೋಟು	14200-22800	ತಟ್ಟಿಬೆಟ್ಟೆ	32319-49689	ತಟ್ಟಿಬೆಟ್ಟೆ	32519-39469

ಮೂಲಸೌಕರ್ಯ ವಲಯದ ಬೆಳವಣಿಗೆ 13 ತಿಂಗಳ ಗರಿಷ್ಠ

ನವದೆಹಲಿ (ಪಿಟಿಐ): ದೇಶದ ಪ್ರಮುಖ ಎಂಟು ಮೂಲಸೌಕರ್ಯ ವಲಯಗಳ ಬೆಳವಣಿಗೆ ಆಗಸ್ಟ್‌ನಲ್ಲಿ 13 ತಿಂಗಳ ಗರಿಷ್ಠ ಮಟ್ಟಕ್ಕೆ ಏರಿಕೆ ಆಗಿದ್ದು, ಶೇ 6.3ರಷ್ಟು ದಾಖಲಾಗಿದೆ ಎಂದು ಕೇಂದ್ರ ಸರ್ಕಾರ ಸೋಮವಾರ ತಿಳಿಸಿದೆ.

ಕಲ್ಲಿದ್ದಲು, ಉಕ್ಕು, ಸಿಮೆಂಟ್ ಉತ್ಪಾದನೆಯಲ್ಲಿನ ಹೆಚ್ಚಳದಿಂದಾಗಿ ಈ ಬೆಳವಣಿಗೆ ಸಾಧ್ಯವಾಗಿದೆ ಎಂದು ತಿಳಿಸಿದೆ.

ಜುಲೈನಲ್ಲಿ ವಲಯದ ಉತ್ಪಾದನೆ ಶೇ 3.7ರಷ್ಟಿತ್ತು. ಕಳೆದ ವರ್ಷದ ಆಗಸ್ಟ್‌ನಲ್ಲಿ ಬೆಳವಣಿಗೆ ಶೇ (–) 1.5 ದಾಖಲಾಗಿತ್ತು.

ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಆಗಸ್ಟ್‌ವರೆಗಿನ ಅವಧಿಯಲ್ಲಿ ವಲಯದ ಪ್ರಗತಿ ಶೇ 2.8ರಷ್ಟಾಗಿದೆ ಎಂದು ಕೇಂದ್ರ ತಿಳಿಸಿದೆ. ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ಇದು ಶೇ 4.6ರಷ್ಟಿತ್ತು.

ಕಲ್ಲಿದ್ದಲು (ಶೇ 11.4), ಉಕ್ಕು (ಶೇ 14.2), ಸಿಮೆಂಟ್ (ಶೇ 6.1), ಸಂಸ್ಕರಿಸಿದ ಉತ್ಪನ್ನಗಳು (ಶೇ 3), ರಸಗೊಬ್ಬರ (ಶೇ 4.6), ವಿದ್ಯುತ್ (ಶೇ 3.1ರಷ್ಟು) ಉತ್ಪಾದನೆ ಹೆಚ್ಚಳ ವಾಗಿದೆ. ಕಚ್ಚಾ ತೈಲ, ನೈಸರ್ಗಿಕ ಅನಿಲ ಉತ್ಪಾದನೆ ಇಳಿಕೆ ಆಗಿದೆ ಎಂದು ತಿಳಿಸಿದೆ.

ಮುಂಬೈ ಧಾರಣೆ (ಶೇಂಗಾ)

22-09-2025	
ಜಾವಾ 70/80(ಹೊಸ)	10500-10600
ಜಾವಾ 80/90(ಹೊಸ)	9800-9900
ದಪ್ಪ ಮಧ್ಯಪ್ರದೇಶ (ಹೊಸ)	7500-7600
ದಪ್ಪ ಗುಜರಾತ್ (ಹೊಸ)	8500-8600
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1340 (1335)
ಒಂದು ವಾರದ ಡೆಲಿವರಿ	1335 (1330)
ಪಾಮ್ ವಾರದ ಡೆಲಿವರಿ	1278 (1273)
ಸೂರ್ಯಕಾಂತಿ ಎಣ್ಣೆ ಕಚ್ಚಾ	1350 (1345)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,11,500 (1,10,400)
ಬೆಳ್ಳಿ ಕೆ.ಜಿಗೆ	1,32,000 (1,30,500)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

'ಪಾರದರ್ಶಕತೆ ಅಡಿಪಾಯ ಆಗಿರಲಿ'

ನವದೆಹಲಿ (ಪಿಟಿಐ): 'ಬಂದರು ನಿರ್ವಹಣೆಯಿಂದ ಇಂಧನ ಉತ್ಪಾದನೆಯವರೆಗೆ ಉದ್ಯಮಗಳನ್ನು ಮುನ್ನಡೆಸುತ್ತಿರುವ ಅದಾನಿ ಸಮೂಹವು ಈಗ ಸಂಶೋಧನೆಗೆ ವೇಗ ನೀಡಲು, ಪಾರದರ್ಶಕತೆಯನ್ನು ಹೆಚ್ಚಿಸಲು ಮುಂದಡಿ ಇರಿಸಲಿದೆ' ಎಂದು ಅದಾನಿ ಸಮೂಹದ ಅಧ್ಯಕ್ಷ ಗೌತಮ್ ಅದಾನಿ ಹೇಳಿದ್ದಾರೆ.

ಗೌತಮ್ ಅದಾನಿ

ಸಮೂಹದ ಸಿಬ್ಬಂದಿಗೆ ಪತ್ರ ಬರೆದಿರುವ ಅದಾನಿ ಅವರು, '2023ರ ಜನವರಿಯಲ್ಲಿ ಅಮೆರಿಕದ ಹಿಂಡನ್‌ಬರ್ಗ್ ರಿಸರ್ಚ್ ಸಂಸ್ಥೆಯು ಸಮೂಹದ ಕಂಪನಿಗಳ ಮೇಲೆ ಹಲವು ಆರೋಪಗಳನ್ನು ಹೊರಿಸಿತ್ತು. ಈ ಆರೋಪಗಳನ್ನು ಸಮೂಹವು ತಿರಸ್ಕರಿಸಿತ್ತು. ಈ ಬಗ್ಗೆ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ಸಮಗ್ರ ತನಿಖೆ ನಡೆಸಿ, ಆರೋಪಗಳನ್ನು ಆಧಾರರಹಿತ ಎಂದು ಹೇಳಿದೆ' ಎಂದು ತಿಳಿಸಿದ್ದಾರೆ.

'ಪ್ರಾಮಾಣಿಕತೆ ಮತ್ತು ಪಾರದರ್ಶಕತೆ ನಾವು ಮಾಡುವ ಎಲ್ಲವುಗಳ ಅಡಿಪಾಯ ಆಗಿರಬೇಕು. ಈ ವಿವಾದವೊಂದು ಅಗ್ನಿಪರೀಕ್ಷೆ ಆಗಿತ್ತು. ಪ್ರತಿ ಬಿಕ್ಕಟ್ಟು ಸಂಸ್ಥೆಯನ್ನು ಸದೃಢಗೊಳಿಸುತ್ತದೆ' ಎಂದು ಪತ್ರದಲ್ಲಿ ಹೇಳಿದ್ದಾರೆ.

ಹಿಂಡನ್‌ಬರ್ಗ್ ಆರೋಪದಿಂದ ಅದಾನಿ ಸಮೂಹದ ಮಾರುಕಟ್ಟೆ ಬಂಡವಾಳ ಮೌಲ್ಯ ₹13 ಲಕ್ಷ ಕೋಟಿಗೂ ಹೆಚ್ಚು ಕುಸಿದಿತ್ತು.

ಐದು ಲಕ್ಷ ಉದ್ಯೋಗ ಸೃಷ್ಟಿಯ ಗುರಿ • ತುಮಕೂರು, ಶಿವಮೊಗ್ಗ, ಕಲಬುರಗಿಯಲ್ಲಿ ಐ.ಟಿ ಕ್ಲಸ್ಟರ್: ಪ್ರಿಯಾಂಕ್

₹1 ಸಾವಿರ ಕೋಟಿ ವೆಚ್ಚದಲ್ಲಿ 'ಎಲ್‌ಇಎಪಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ತಂತ್ರಜ್ಞಾನ ಕ್ಷೇತ್ರವನ್ನು ಬೆಂಗಳೂರಿನ ಹೊರಗೆ ವಿಸ್ತರಿಸುವ ಉದ್ದೇಶ ಹೊಂದಿರುವ ಎಲ್‌ಇಎಪಿ (ಸ್ಥಳೀಯ ಆರ್ಥಿಕ ವೇಗವರ್ಧಕ ಕಾರ್ಯಕ್ರಮ- ಲೀಪ್) ಕಾರ್ಯಕ್ರಮಕ್ಕೆ ₹1,000 ಕೋಟಿ ಮೀಸಲಿಡಲಾಗಿದೆ. ಇದರಿಂದ ಸ್ಥಳೀಯವಾಗಿ 5 ಲಕ್ಷ ಉದ್ಯೋಗ ಸೃಷ್ಟಿ ಆಗಲಿದೆ' ಎಂದು ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ಪ್ರಿಯಾಂಕ್ ಖರ್ಗೆ

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, 'ತಂತ್ರಜ್ಞಾನ, ನಾವೀನ್ಯ ಮತ್ತು ಆರ್ಥಿಕ ಅಭಿವೃದ್ಧಿಯಲ್ಲಿ ಸಹಕಾರ ಬಲಪಡಿಸಲು ಕರ್ನಾಟಕ ಸರ್ಕಾರವು ನ್ಯೂಜೆರ್ಸಿ ರಾಜ್ಯದ ಜೊತೆ ಮೂರು ವರ್ಷಗಳ ಮಹತ್ವದ ಒಪ್ಪಂದಕ್ಕೆ ಸಹಿ ಹಾಕಿದೆ' ಎಂದರು.

'ಈ ಒಪ್ಪಂದದಿಂದ ಪರಿಸರ ವ್ಯವಸ್ಥೆ ಹಾಗೂ ಮಾನವ ಸಂಪನ್ಮೂಲಕ್ಕೂ ಹೆಚ್ಚು ಒತ್ತು ಸಿಗಲಿದೆ. ಜೀವವಿಜ್ಞಾನ (ಅಲೈಡ್ ಹೆಲ್ತ್ ಸೈನ್ಸ್), ಡೀಪ್ ಟೆಕ್ನಾಲಜಿ (ಸೈಬರ್ ಸೆಕ್ಯುರಿಟಿ ಮತ್ತು ಆರ್ಟಿಫಿಶಿಯಲ್ ಇಂಟೆಲಿಜೆನ್ಸ್) ಮತ್ತು ಎಲೆಕ್ಟ್ರಾನಿಕ್ಸ್ ಮತ್ತು ಸೆಮಿಕಂಡಕ್ಟರ್‌ಗಳಲ್ಲಿ ಜಂಟಿಯಾಗಿ ಯೋಜನೆಗಳನ್ನು ರೂಪಿಸಲಾಗುವುದು. ಕೌಶಲ ಸುಧಾರಣೆ ಗಮನದಲ್ಲಿ ಇಟ್ಟುಕೊಂಡು ಈ ಒಪ್ಪಂದ ಮಾಡಿಕೊಳ್ಳಲಾಗಿದೆ. ಎಲ್‌ಇಎಪಿ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತಂದು ತುಮಕೂರು, ಶಿವಮೊಗ್ಗ ಮತ್ತು ಕಲಬುರಗಿಯಲ್ಲಿ ಮಾಹಿತಿ ತಂತ್ರಜ್ಞಾನದ ಕ್ಲಸ್ಟರ್ ಅಭಿವೃದ್ಧಿಪಡಿಸಲಾಗುವುದು' ಎಂದರು.

'ಬೆಂಗಳೂರಿನಲ್ಲಿ ಎಲ್ಲ ಭಾಗದವರು ಕೆಲಸ ಮಾಡುತ್ತಾರೆ. ಅವರನ್ನು ಸ್ಥಳೀಯವಾಗಿ ಬಳಸಿಕೊಳ್ಳುವ ಯೋಚನೆ ಇದೆ. ಬೇರೆ ಸ್ಥಳಗಳಲ್ಲೂ ಸರ್ಕಾರಿ, ಖಾಸಗಿ ಸಹಭಾಗಿತ್ವದಲ್ಲಿ ಮಾಹಿತಿ ತಂತ್ರಜ್ಞಾನ ಅಭಿವೃದ್ಧಿಪಡಿಸಲಾಗುವುದು' ಎಂದರು.

'ಜಿಎಸ್‌ಟಿಯಿಂದ ಬಡ, ಮಧ್ಯಮವರ್ಗ ನಾಶ'

'ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ ಎಚ್-1ಬಿ ವೀಸಾ ಶುಲ್ಕ ಹೆಚ್ಚಳ ದೇಶದ ಮೇಲೆ ಪರಿಣಾಮ ಬೀರಲಿದೆ' ಎಂದು ಪ್ರಿಯಾಂಕ್ ಹೇಳಿದರು.

'ಜಿಎಸ್‌ಟಿ ಉತ್ಸವ, ಜನ ಮರುಳೊ ಜಾತ್ರೆ ಮರುಳೊ ಎಂಬಂತಾಗಿದೆ. ಈ ಮೊದಲು ಜಿಎಸ್‌ಟಿ ಹೆಚ್ಚಿಸಿದ್ದು, ಈಗ ಇಳಿಸಿದ್ದಾರೆ. ಬಡವರನ್ನು ಬಾವಿಗೆ ತಳ್ಳಿ, ಮಧ್ಯಮವರ್ಗದವರನ್ನು ನಾಶ ಮಾಡಿ ಈಗ ಜಿಎಸ್‌ಟಿ ಕಡಿಮೆ ಮಾಡಿದ್ದಕ್ಕೆ ನಾವು ಧನ್ಯವಾದ ಹೇಳಬೇಕೇ? ಜನರ ತೆರಿಗೆಯನ್ನು ವಾಪಸ್ ನೀಡುವುದಕ್ಕೆ ಪ್ರಧಾನಿ ಮೋದಿಗೆ ಏಕೆ ಧನ್ಯವಾದ ಹೇಳಬೇಕು? ಇಷ್ಟು ವರ್ಷ ಎಷ್ಟು ಆತ್ಮನಿರ್ಭರ ಮಾಡಿದ್ದೀರಿ' ಎಂದು ಪ್ರಶ್ನಿಸಿದರು.

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ

ಕಾರ್ಯನಿರ್ವಾಹಕ ಅಭಿಯಂತರರ (ಉತ್ತರ) ಕಚೇರಿ, ಹುಬ್ಬಳ್ಳಿ.

ಸಂಖ್ಯೆ: ಎಚ್‌ಡಿಎಮ್‌ಸಿ/61/12/2025–26 ದಿನಾಂಕ: 20–09–2025

ಅಲ್ಪಾವಧಿ / ಇ–ಟೆಂಡರ್ ಅಧಿಸೂಚನೆ

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ಸನ್ 2025–26 ನೇ ಸಾಲಿನ 15ನೇ ಹಣಕಾಸು ಯೋಜನೆ ಹಾಗೂ ಸನ್ 2020–21ವ, 2022–23 ನೇ ಸಾಲಿನ 15ನೇ ಹಣಕಾಸು ಯೋಜನೆ (ಉಳಿತಾಯ) ಯೋಜನೆ ಮತ್ತು 2022–23 ನೇ ಸಾಲಿನ ಮಾನ್ಯ ಶಾಸಕರ ಅನುದಾನ ಯೋಜನೆ ಹಾಗೂ ಸನ್ 2025–26 ನೇ ಸಾಲಿನ ವಾರ್ಡ್ ವಾರು ಅನುದಾನ ಅಡಿಯಲ್ಲಿ ಮಂಜೂರಾದ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದೇಶ 1999–2000 ರ ಪ್ರಕಾರ ಆ್ಯಕ್ಟ್ 2000 ನಿಯಮದನ್ವಯ PWD ಇಲಾಖೆಯಲ್ಲಿ ನೋಂದಾಯಿತರಾದ ಅರ್ಹ ಗುತ್ತಿಗೆದಾರರು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಯಾವುದಾದರೂ ಬದಲಾವಣೆಯಾದಲ್ಲಿ, ಸದರಿ ಬದಲಾವಣೆಯ ವಿವರಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಪರಿಶಿಷ್ಟ ಜಾತಿ (SC) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ

1) ಇಂಡೆಂಟ್ ನಂ – 48030 ರೂ. 25.00 ಲಕ್ಷ
2) ಇಂಡೆಂಟ್ ನಂ – 48814 ರೂ. 25.00 ಲಕ್ಷ
3) ಇಂಡೆಂಟ್ ನಂ – 49604 ರೂ. 10.00 ಲಕ್ಷ
4) ಇಂಡೆಂಟ್ ನಂ – 48025 ರೂ. 16.00 ಲಕ್ಷ
5) ಇಂಡೆಂಟ್ ನಂ – 32021 ರೂ. 40.00 ಲಕ್ಷ

ಪರಿಶಿಷ್ಟ ಪಂಗಡದ (ST) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ

6) ಇಂಡೆಂಟ್ ನಂ – 49026, ರೂ. 12.30 ಲಕ್ಷ

(CAT-2A) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ

7) ಇಂಡೆಂಟ್ ನಂ – 48432 ರೂ. 33.20 ಲಕ್ಷ
8) ಇಂಡೆಂಟ್ ನಂ – 48667 ರೂ. 12.00 ಲಕ್ಷ
9) ಇಂಡೆಂಟ್ ನಂ – 47021 ರೂ. 19.35 ಲಕ್ಷ
10) ಇಂಡೆಂಟ್ ನಂ – 47024 ರೂ. 13.65 ಲಕ್ಷ
11) ಇಂಡೆಂಟ್ ನಂ – 48812 ರೂ. 14.00 ಲಕ್ಷ
12) ಇಂಡೆಂಟ್ ನಂ – 42611 ರೂ. 55.00 ಲಕ್ಷ

ಸಾಮಾನ್ಯ ವರ್ಗದ ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ

13) ಇಂಡೆಂಟ್ ನಂ – 49417 ರೂ. 35.00 ಲಕ್ಷ
14) ಇಂಡೆಂಟ್ ನಂ – 48113 ರೂ. 4.50 ಲಕ್ಷ
15) ಇಂಡೆಂಟ್ ನಂ – 46411 ರೂ. 5.20 ಲಕ್ಷ
16) ಇಂಡೆಂಟ್ ನಂ – 49027 ರೂ. 7.00 ಲಕ್ಷ
17) ಇಂಡೆಂಟ್ ನಂ – 47643 ರೂ. 2.50 ಲಕ್ಷ
18) ಇಂಡೆಂಟ್ ನಂ – 47805 ರೂ. 16.00 ಲಕ್ಷ
19) ಇಂಡೆಂಟ್ ನಂ – 47228 ರೂ. 2.50 ಲಕ್ಷ
20) ಇಂಡೆಂಟ್ ನಂ – 47023 ರೂ. 40.00 ಲಕ್ಷ
21) ಇಂಡೆಂಟ್ ನಂ – 48735 ರೂ. 50.00 ಲಕ್ಷ
22) ಇಂಡೆಂಟ್ ನಂ – 48813 ರೂ. 25.00 ಲಕ್ಷ
23) ಇಂಡೆಂಟ್ ನಂ – 48087 ರೂ. 14.00 ಲಕ್ಷ
24) ಇಂಡೆಂಟ್ ನಂ – 49468 ರೂ. 20.00 ಲಕ್ಷ
25) ಇಂಡೆಂಟ್ ನಂ – 49591 ರೂ. 30.00 ಲಕ್ಷ
26) ಇಂಡೆಂಟ್ ನಂ – 49466 ರೂ. 8.91 ಲಕ್ಷ
27) ಇಂಡೆಂಟ್ ನಂ – 48033 ರೂ. 32.00 ಲಕ್ಷ
28) ಇಂಡೆಂಟ್ ನಂ – 44117 ರೂ. 85.00 ಲಕ್ಷ

ಮರು ಕರೆ ಕಾಮಗಾರಿಗಳು

ಪರಿಶಿಷ್ಟ ಜಾತಿ (SC) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ

29) ಇಂಡೆಂಟ್ ನಂ–45637 ರೂ. 40.00 ಲಕ್ಷ (2ನೇ ಕರೆ)
30) ಇಂಡೆಂಟ್ ನಂ–46734 ರೂ. 10.00 ಲಕ್ಷ (2ನೇ ಕರೆ)
31) ಇಂಡೆಂಟ್ ನಂ–32696 ರೂ. 10.40 ಲಕ್ಷ (2ನೇ ಕರೆ)
32) ಇಂಡೆಂಟ್ ನಂ–45513 ರೂ. 12.00 ಲಕ್ಷ (2ನೇ ಕರೆ)
33) ಇಂಡೆಂಟ್ ನಂ–44230 ರೂ. 8.95 ಲಕ್ಷ (2ನೇ ಕರೆ)
34) ಇಂಡೆಂಟ್ ನಂ–44209 ರೂ. 3.75 ಲಕ್ಷ (2ನೇ ಕರೆ)
35) ಇಂಡೆಂಟ್ ನಂ–44225 ರೂ. 4.68 ಲಕ್ಷ (2ನೇ ಕರೆ)
36) ಇಂಡೆಂಟ್ ನಂ–32021 ರೂ. 40.00 ಲಕ್ಷ (2ನೇ ಕರೆ)
37) ಇಂಡೆಂಟ್ ನಂ–46409 ರೂ. 2.98 ಲಕ್ಷ (2ನೇ ಕರೆ)

ಪರಿಶಿಷ್ಟ ಪಂಗಡ (ST) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ

38) ಇಂಡೆಂಟ್ ನಂ–44382 ರೂ. 2.13 ಲಕ್ಷ (2ನೇ ಕರೆ)
39) ಇಂಡೆಂಟ್ ನಂ–45543 ರೂ. 20.00 ಲಕ್ಷ (2ನೇ ಕರೆ)
40) ಇಂಡೆಂಟ್ ನಂ–44228 ರೂ. 3.50 ಲಕ್ಷ (2ನೇ ಕರೆ)

(CAT-2A) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ

41) ಇಂಡೆಂಟ್ ನಂ–42574 ರೂ. 16.00 ಲಕ್ಷ (2ನೇ ಕರೆ)
42) ಇಂಡೆಂಟ್ ನಂ–45512 ರೂ. 15.00 ಲಕ್ಷ (2ನೇ ಕರೆ)
43) ಇಂಡೆಂಟ್ ನಂ–46373 ರೂ. 18.00 ಲಕ್ಷ (2ನೇ ಕರೆ)
44) ಇಂಡೆಂಟ್ ನಂ–46323 ರೂ. 48.00 ಲಕ್ಷ (2ನೇ ಕರೆ)

ಸಾಮಾನ್ಯ ವರ್ಗದ ಗತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ

45) ಇಂಡೆಂಟ್ ನಂ–46141 ರೂ. 5.00 ಲಕ್ಷ (2ನೇ ಕರೆ)
46) ಇಂಡೆಂಟ್ ನಂ–41420 ರೂ. 10.00 ಲಕ್ಷ (3ನೇ ಕರೆ)
47) ಇಂಡೆಂಟ್ ನಂ–44148 ರೂ. 6.00 ಲಕ್ಷ (2ನೇ ಕರೆ)
48) ಇಂಡೆಂಟ್ ನಂ–41452 ರೂ. 1.80 ಲಕ್ಷ (3ನೇ ಕರೆ)
49) ಇಂಡೆಂಟ್ ನಂ–41462 ರೂ. 9.75 ಲಕ್ಷ (3ನೇ ಕರೆ)
50) ಇಂಡೆಂಟ್ ನಂ–41239 ರೂ. 9.43 ಲಕ್ಷ (3ನೇ ಕರೆ)
51) ಇಂಡೆಂಟ್ ನಂ–44536 ರೂ. 6.45 ಲಕ್ಷ (2ನೇ ಕರೆ)
52) ಇಂಡೆಂಟ್ ನಂ–44545 ರೂ. 5.05 ಲಕ್ಷ (2ನೇ ಕರೆ)
53) ಇಂಡೆಂಟ್ ನಂ–44543 ರೂ. 6.00 ಲಕ್ಷ (2ನೇ ಕರೆ)
54) ಇಂಡೆಂಟ್ ನಂ–44549 ರೂ. 3.80 ಲಕ್ಷ (2ನೇ ಕರೆ)
55) ಇಂಡೆಂಟ್ ನಂ–44547 ರೂ. 11.00 ಲಕ್ಷ (2ನೇ ಕರೆ)
56) ಇಂಡೆಂಟ್ ನಂ–45973 ರೂ. 9.91 ಲಕ್ಷ (2ನೇ ಕರೆ)
57) ಇಂಡೆಂಟ್ ನಂ–45972 ರೂ. 5.00 ಲಕ್ಷ (2ನೇ ಕರೆ)
58) ಇಂಡೆಂಟ್ ನಂ–46020 ರೂ. 18.00 ಲಕ್ಷ (2ನೇ ಕರೆ)
59) ಇಂಡೆಂಟ್ ನಂ–45540 ರೂ. 17.60 ಲಕ್ಷ (2ನೇ ಕರೆ)
60) ಇಂಡೆಂಟ್ ನಂ–44229 ರೂ. 20.00 ಲಕ್ಷ (2ನೇ ಕರೆ)
61) ಇಂಡೆಂಟ್ ನಂ–44215 ರೂ. 42.23 ಲಕ್ಷ (2ನೇ ಕರೆ)
62) ಇಂಡೆಂಟ್ ನಂ–45514 ರೂ. 8.20 ಲಕ್ಷ (2ನೇ ಕರೆ)
63) ಇಂಡೆಂಟ್ ನಂ–46432 ರೂ. 3.56 ಲಕ್ಷ (2ನೇ ಕರೆ)
64) ಇಂಡೆಂಟ್ ನಂ–32568 ರೂ. 4.85 ಲಕ್ಷ (3ನೇ ಕರೆ)
65) ಇಂಡೆಂಟ್ ನಂ–43487 ರೂ. 15.55 ಲಕ್ಷ (3ನೇ ಕರೆ)
66) ಇಂಡೆಂಟ್ ನಂ–43492 ರೂ. 6.09 ಲಕ್ಷ (3ನೇ ಕರೆ)
67) ಇಂಡೆಂಟ್ ನಂ–43581 ರೂ. 49.53 ಲಕ್ಷ (3ನೇ ಕರೆ)
68) ಇಂಡೆಂಟ್ ನಂ–43486 ರೂ. 10.04 ಲಕ್ಷ (3ನೇ ಕರೆ)
69) ಇಂಡೆಂಟ್ ನಂ–37838 ರೂ. 4.00 ಲಕ್ಷ (4ನೇ ಕರೆ)
70) ಇಂಡೆಂಟ್ ನಂ–41454 ರೂ. 15.00 ಲಕ್ಷ (3ನೇ ಕರೆ)
71) ಇಂಡೆಂಟ್ ನಂ–42557 ರೂ. 16.00 ಲಕ್ಷ (3ನೇ ಕರೆ)
72) ಇಂಡೆಂಟ್ ನಂ–44532 ರೂ. 15.50 ಲಕ್ಷ (3ನೇ ಕರೆ)
73) ಇಂಡೆಂಟ್ ನಂ–44546 ರೂ. 3.85 ಲಕ್ಷ (3ನೇ ಕರೆ)
74) ಇಂಡೆಂಟ್ ನಂ–42708 ರೂ. 11.22 ಲಕ್ಷ (3ನೇ ಕರೆ)
75) ಇಂಡೆಂಟ್ ನಂ–40103 ರೂ. 41.00 ಲಕ್ಷ (2ನೇ ಕರೆ)

ಇ.ಎಂ.ಡಿ, ಕಾಮಗಾರಿ ಅವಧಿ ಹಾಗೂ ಇತರೆ ವಿವರಗಳನ್ನು ವೆಬ್‌ಸೈಟ್ ಮೂಲಕ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ **ಗುತ್ತಿಗೆದಾರರು ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ)** ಇವರ ಕಚೇರಿಯ ಕೆಲಸದ ವೇಳೆಯಲ್ಲಿ ಮಾಹಿತಿಯನ್ನು ಪಡೆಯಬಹುದಾಗಿದೆ. ಕಚೇರಿಯ ದೂರವಾಣಿ ಸಂಖ್ಯೆ: **0836–2213834** ನ್ನು ಸಂಪರ್ಕಿಸಬಹುದಾಗಿದೆ ಮತ್ತು ಅಂತರ್‌ಜಾಲದ ವೆಬ್‌ಸೈಟ್ ವಿಳಾಸ: **https://kppp.karnataka.gov.in** ರಲ್ಲಿ ಪಡೆಯಬಹುದು. ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರ ಇ–ಪ್ರೊಕ್ಯೂರಮೆಂಟ್‌ನಲ್ಲಿ ದಿನಾಂಕ: **23–09–2025** ಪಡೆಯಬಹುದಾಗಿದೆ.

- ಕ್ರಮ ಸಂಖ್ಯೆ. 14, 29 ರಿಂದ 75 ರ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: **04–10–2025 ರಂದು ಸಾಯಂಕಾಲ 4.00 ಘಂಟೆಯವರೆಗೆ.**
- ಕ್ರಮ ಸಂಖ್ಯೆ. 14, 29 ರಿಂದ 75 ರ ಟೆಂಡರ್‌ನ್ನು ದಿನಾಂಕ: **06–10–2025 ರಂದು ಸಾಯಂಕಾಲ 4.30 ಘಂಟೆಯ ನಂತರ ತೆರೆಯಲಾಗುವುದು.**
- ಕ್ರಮ ಸಂಖ್ಯೆ. 01 ರಿಂದ 13, 15 ರಿಂದ 28 ರ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: **08–10–2025 ರಂದು ಸಾಯಂಕಾಲ 4.00 ಘಂಟೆಯವರೆಗೆ.**
- ಕ್ರಮ ಸಂಖ್ಯೆ. 01 ರಿಂದ 13, 15 ರಿಂದ 28 ರ ಟೆಂಡರ್‌ನ್ನು ದಿನಾಂಕ: **09–10–2025 ರಂದು ಸಾಯಂಕಾಲ 4.30 ಘಂಟೆಯ ನಂತರ ತೆರೆಯಲಾಗುವುದು.**
- ಕ್ರಮ ಸಂಖ್ಯೆ. 12, 28 ರ ಕಾಮಗಾರಿಯ ಆರ್ಥಿಕ ಬಿಡ್‌ನ್ನು ದಿನಾಂಕ: **14–10–2025 ರಂದು ತೆರೆಯಲಾಗುವುದು,** ಇಲ್ಲದಿದ್ದಲ್ಲಿ ನಂತರದ ಅನುಕೂಲಕರ ದಿನಗಳಲ್ಲಿ ತೆರೆಯಲಾಗುವುದು.

ಸಹಿ/–
ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ)
ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ, ಹುಬ್ಬಳ್ಳಿ.

ವಾ.ಸಾ.ಇ/ಧಾರವಾಡ/696/ಅಡ್ವರ್ಟೋ/2025–26



150+ TOUCHPOINTS ACROSS INDIA

VISIT A CITROËN SHOWROOM TODAY | 1800 267 1000 | +91 7391055934 **Bangalore (Yeshwanthpur), KHT Prime:** 84949 11115 | **Bangalore (Hosur Road), Akira:** 79961 11102 | **Chennai (OMR), VTK:** 95000 22916 | **Chennai (Nungambakkam), VTK:** 95000 22916 | **Salem, True Sai:** 99940 77226 | **Vellore, Sarvesh:** 96555 31377 | **Pondicherry, Sarvesh:** 99407 93277 | **Coimbatore, SGA:** 80984 44055 | **Tiruppur, SGA:** 80984 44055 | **Madurai, ARAS:** 98940 43573 | **Sivakasi, ARAS:** 96778 82444 | **Tirunelveli, H&H:** 89259 92801 | **Nagercoil, H&H:** 94425 01576 | **Trichy, Jayaraj Carz:** 92442 27773 | **Kumbakonam, Jayaraj Carz:** 92442 27773 | **Perambalur, Jayaraj Carz:** 92442 27773 | **Hyderabad (Jubilee Hills), Pride:** 91000 65767 | **Hyderabad (Nagole), Pride:** 73311 51666 | **Hyderabad (Kukkatpally), Pride:** 79957 77069 | **Tirupati, Lotus:** 96441 31415 | **Visakhapatnam, Bharath:** 79979 90561 | **Vijaywada, Turbo:** 88866 26640 | **Warangal, Pride:** 99499 95453 | **Karimnagar, BJR:** 91001 22204 | **Kerala, EVM:** 85939 77777 | **Kochi | Thrissur | Palakkad | Calicut | Kannur | Kottayam | Kollam | Trivandrum**

*Terms and conditions apply. ^Pricing is ex-showroom and considers 18% proposed GST rate and will be effective from 22nd September 2025. *Pricing is ex-showroom and considers 40% proposed GST rate and will be effective from 22nd September 2025. Always drive safely and maintain traffic rules. The dark glass reflection is for creative representation purposes only. Accessories shown and features mentioned may not be part of standard fitment and are subject to change without prior intimation. Actual colour of car and upholstery may differ.

HONDA The Power of Dreams | **How we move you.** CREATE ▶ TRANSCEND, AUGMENT

Terms and Conditions applied. *Approval of the loan is at the sole discretion of the financiers, and additional documentation may be required. *The interest rates, loan amount, down payment, tenure options and EMI are based on the financier's assessment of the applicant's credit profile. *Low EMI offers are applicable for select HMSI models as follows: ₹49/- per day for Shine100 DX; ₹79/- per day for Shine125, SP125 & CB125 Hornet; ₹1999/- per month for Activa. *Some of the mentioned components of the scheme cannot be clubbed together. *The offers/features may be modified or withdrawn at any time without prior intimation. *Offer valid until 31st October 2025. **Instant Cashback up to ₹5000 is available on selected HMSI models for EMI transactions using HDFC Bank credit cards with a minimum transaction value of Rs. 40000. **An instant cashback of flat ₹2000 is applicable on a minimum full swipe transaction of ₹40000, and flat ₹3000 Instant cashback on a minimum full swipe transaction of ₹75001. **Instant Cashback up to ₹4000 is available on selected HMSI models for EMI transactions using IDFC Bank credit cards. **The offer is valid on credit card transactions processed through Pine Labs machines only and is applicable for one transaction per card/order during the offer period. **The HDFC Bank Instant Cashback offer is valid until 31st October 2025, while the IDFC Bank Instant cashback offer is valid until 30th September 2025. Product shown in the picture may vary from actual product available in the market. Accessories shown in the picture are not part of standard equipment.

Honda Motorcycle & Scooter India Pvt. Ltd., Registered Office: Plot No. 1, Sector - 03, IMT Manesar, Distt. Gurugram, (Haryana) – 122052, India; **Website:** www.honda2wheelersindia.com; **Customer Care:** customercare@honda.hmsi.in

Honda Exclusive Authorised Dealerships: **Ananda Honda - BOMMANAHALLI:** 9738074162; **HEBBAGODI:** 9738074162; **SARJAPUR RD:** 9738074162; **JIGANI:** 9738066600; **HOSA ROAD:** 9738066600; **Anekal Honda - ANEKAL:** 9880458863; **City Honda - ST. JOHNS ROAD:** 08025139199; **H.R.B.R:** 9845941305; **FRAZER TOWN:** 9480812353; **LALBAGH:** 9480812397; **Haiku Honda - DOMLUR:** 9342432156; **INDIRANAGAR:** 9342432157; **Dhruvdesh Honda - MEKHRI CIRCLE:** 9343968419; **THANISANDRA (NAGAWARA):** 7353030333; **YELAHANKA:** 9343968407; **VIDYARANYAPURA:** 8150866333; **MALLESHWARAM:** 8971887792; **Raja Honda - KORAMANGALA:** 08067329000; **Prime Honda - VIJAYNAGAR:** : 080-23010300; **NAGARBHAVI:** 080-23010700; **KAMAKSHIPALYA:** 080-23019700; **Silicon Honda - RV ROAD:** 9844502222; **BANSHANKARI:** 9844502444; **R.R. NAGAR:** 9964388333; **MONOTYPE:** 7353744400; **JAYANAGAR:** 8722801626; **Saphire Honda - JP NAGAR:** 7026000002; **BG ROAD:** 8553004004; **KKP ROAD:** 8553004002; **PUTTENHALLI:** 7353251007; **GOTTIGERE:** 8553004009; **BTM:** 7353252007; **VFM Honda - KR PURAM:** 9071858885; **HENNUR ROAD:** 9108989811; **Tansi Honda - HOODI:** 7259030091; **MARTHAHALLI:** 7259030100; **VARTHUR RD:** 8105597877; **GUNJUR:** 9606450642; **Turbo Honda - DODDABALLAPURA:** 7022620885; **NELAMANAGALA:** 7022008894; **Wings Honda - HOSKOTE:** 7676907272; **MALUR:** 7676155600; **TC PALYA:** 9590815959; **Sri Kausthub Honda - KOLAR:** 9900018515; **KGF:** 9900092115; **MULBAGAL:** 9008941044; **SRINIVASAPUR:** 8495956515; **BANGARPET** - 9980607661; **Namma Honda - CHIKKABALLAPUR:** 9606060610; **CHINTAMANI:** 9606060620; **BAGEPALLI:** 9611596112; **Shankar Honda - GOWRIBIDANUR:** 9900007422/33; **SIDLAGHATTA:** 9611596113; **Shantinath Honda - TUMKUR:** 9972433799; **KUNIGAL:** 08132-295609; **KUNIGAL ROAD:** 9844351599; **KORATAGERE:** 9606955149; **Honey Honda - PAVAGADA:** 9535941215; **Annapoorna Honda - MADHUGIRI:** 9886627429; **Vignesh Honda - TIPTUR:** 9886711161; **TURUVEKERE:** 9964605093; **Sri Srinivasa Honda - CHIKKANAYAKANAHALLI:** 8722522221; **Prestige Honda - RAMNAGARA:** 9606490030; **KANAKAPURA:** 9606036053; **CHANNAPATNA:** 9606490034; **ART Honda - BIDADI:** 9945966771; **Springs Honda - KENGERI:** 9513771114; **Nideesh Honda - DEVANAHALLI:** 9108871999; **VIJAYAPURA:** 9108871999.

For Bulk/Institutional enquiries, please write us at: institutionalsales@honda.hmsi.in